

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ


46

ಫೆಬ್ರವರಿ 25 ಬುಧವಾರ 2026

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 46 | ಸಂಚಿಕೆ: 306 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4



ಮುಂಬರುವ ಸಮ್ಮಿಶ್ರ ಸರ್ಕಾರದಲ್ಲಿ
ಕುಮಾರಸ್ವಾಮಿ ಮತ್ತೊಮ್ಮೆ ಸಿಎಂ

- ಜೆಡಿಎಸ್ ಯುವ ನಾಯಕ ನಿಖಿಲ್ ಕುಮಾರಸ್ವಾಮಿ ಘೋಷಣೆ
- ಬನ್ನೂರಲ್ಲಿ ಜನರೊಂದಿಗೆ ಜಾತ್ಯಾತೀತ ಜನತಾದಳ

ತಿ.ನರಸೀಪುರ, ಫೆ.24(ಎಸ್‌ಕೆ)– ನಮ್ಮ ಪಕ್ಷ ಒಂದು ಜಾತಿ, ಧರ್ಮಕ್ಕೆ ಸೀಮಿತವಾಗದೇ ಎಲ್ಲಾ ಜಾತಿ, ಧರ್ಮಗಳನ್ನು ಪ್ರೀತಿಸುವ ಏಕೈಕ ಪಕ್ಷವಾಗಿದ್ದು, ಮುಂಬರುವ 2028ರ ವಿಧಾನ ಸಭಾ ಚುನಾವಣೆಯಲ್ಲಿ ರಾಜ್ಯದಲ್ಲಿ ಅತ್ಯಧಿಕ ಸ್ಥಾನಗಳನ್ನು ಗೆಲ್ಲುವ ಮೂಲಕ ಹೆಚ್.ಡಿ.ಕುಮಾರ ಸ್ವಾಮಿ ಅವರು ಮತ್ತೊಮ್ಮೆ ರಾಜ್ಯದಲ್ಲಿ ಸಮ್ಮಿಶ್ರ ಸರ್ಕಾರದ ಮುಖ್ಯಮಂತ್ರಿಯಾಗಲಿದ್ದಾರೆ ಎಂದು ಜೆಡಿಎಸ್ ಯುವ ಘಟಕದ ರಾಜ್ಯಾಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಘೋಷಿಸಿದರು.

ತಾಲೂಕಿನ ಬನ್ನೂರು ಪಟ್ಟಣದ ಡೇರಿ ಆವರಣ




ಬನ್ನೂರಿನ ಕಾವೇರಿ ಸರ್ಕಲ್‌ನಲ್ಲಿ ನಿಖಿಲ್ ಕುಮಾರಸ್ವಾಮಿ ಅವರಿಗೆ ಹೂ ಮಳೆಗೈದು ಮೆರವಣಿಗೆಯಲ್ಲಿ ಕರೆ ತರಲಾಯಿತು.

ದಲ್ಲಿ ಮಂಗಳವಾರ ಸಂಜೆ ನಡೆದ 'ಜನರೊಂದಿಗೆ ಜಾತ್ಯಾತೀತ ಜನತಾದಳ' ಹಾಗೂ ಸದಸ್ಯತ್ವ ನೋಂದಣಿ ಅಭಿಯಾನದಲ್ಲಿ ನೆರೆದಿದ್ದ ಅಪಾರ ಜನಸ್ತೋಮ ಉದ್ದೇಶಿಸಿ ಮಾತನಾಡಿದ ಅವರು, ಈ ಹಿಂದೆ ಕುಮಾರಸ್ವಾಮಿ ಅವರು ಮುಖ್ಯಮಂತ್ರಿಯಾಗಿದ್ದ ವೇಳೆ ರಾಜ್ಯದ ರೈತರ ಸಾವಿರಾರು ಕೋಟಿ ಸಾಲ ಮನ್ನಾ ಮಾಡಿ ರೈತರ ಹಿತ ಕಾಪಾಡುವ ಕೆಲಸ ಮಾಡಿದ್ದರು. ಅಂತಹ ಕುಮಾರಸ್ವಾಮಿ ಬೇಕೋ ಅಥವಾ ಪ್ರತಿ ಕುಟುಂಬದ ಮೇಲೆ 4 ಲಕ್ಷ ಸಾಲ ಹೊರಿಸಿರುವ ಸಿದ್ದರಾಮಯ್ಯ ಸರ್ಕಾರ ಬೇಕೋ ಎಂಬುದನ್ನು ನೀವೇ ನಿರ್ಧರಿಸಿ ಎಂದರು.

ಜಾತ್ಯಾತೀತ ತತ್ವ, ಸಿದ್ಧಾಂತದ ಮೇಲೆ ಜೆಡಿಎಸ್ ವರಿಷ್ಠ, ಮಾಜಿ ಪ್ರಧಾನಿ ಹೆಚ್.ಡಿ. ದೇವೇಗೌಡರು ಅಪಾರ ನಂಬಿಕೆಯನ್ನಿಟ್ಟು ಪಕ್ಷ ಕಟ್ಟಿ ಬೆಳೆಸಿದ್ದಾರೆ. ಅವರ ನೆರಳಿನಲ್ಲಿ ಕಾರ್ಯಕರ್ತರು ಶ್ರಮ ಹಾಕಿ ▸ 6ನೇ ಪುಟಕ್ಕೆ

ಸ್ವಯಂಚಾಲಿತ ಮ್ಯೂಟೇಷನ್ ಜಾರಿ
ನಿಮ್ಮ ಆಸ್ತಿ ಸುರಕ್ಷೆಗೆ ಪಹಣಿಗೆ ಆಧಾರ್ ಜೋಡಣೆ ಮಾಡಿ

ಬೆಂಗಳೂರು, ಫೆ.24(ಕೆಎಂಶಿ)– ಪಹಣಿಗೆ ಆಧಾರ್ ಜೋಡಣೆ ಮಾಡುವ ಮೂಲಕ ನಿಮ್ಮ ಆಸ್ತಿ ಮಾಲೀಕತ್ವವನ್ನು ಸುಭದ್ರಗೊಳಿಸಿಕೊಳ್ಳಿ ಎಂದು ಕಂದಾಯ ಸಚಿವ ಕೃಷ್ಣಬೈರೇಗೌಡ ಇಂದಿಲ್ಲಿ ಕರೆ ನೀಡಿದ್ದಾರೆ.



ತಮ್ಮ ಆಸ್ತಿಯನ್ನು ಭದ್ರ ಮಾಡಿಕೊಳ್ಳುವ ಜವಾಬ್ದಾರಿ ಪ್ರತಿಯೊಬ್ಬರಿಗೂ ಇದೆ. ಕೂಡಲೇ ಆಸ್ತಿ ಜೊತೆ ಆಧಾರ್ ಲಿಂಕ್ ಮಾಡಿಕೊಳ್ಳಿ. ಇಲಾಖೆಯಲ್ಲಿ ಭ್ರಷ್ಟಾಚಾರ ಮತ್ತು ವಿಳಂಬ ಧೋರಣೆ ತಪ್ಪಿಸಲು ಆಡಳಿತ ಸುಧಾರಣೆಯಲ್ಲಿ ಮಹತ್ವದ ಹೆಜ್ಜೆ ಇಟ್ಟಿದ್ದೇವೆ, ಸಾರ್ವಜನಿಕರು ಕಚೇರಿಗೆ ಆಗಮಿಸುವ ಅಗತ್ಯವಿಲ್ಲ. ಮನೆಯಲ್ಲೇ ಕುಳಿತು ಖಾತೆ ಬದಲಾವಣೆ ಮಾಡಿಕೊಳ್ಳಬಹುದಾಗಿದೆ.

ಸ್ವಯಂ ಚಾಲಿತ ಮ್ಯೂಟೇಶನ್‌ನಿಂದ ಸ್ವೇಚ್ಛಾಚಾರ, ಜನರ ಶೋಷಣೆ, ಮಧ್ಯವರ್ತಿಗಳ ಕಿರುಕುಳ, ಅವ್ಯವಸ್ಥೆ ಸೇರಿದಂತೆ ▸ 6ನೇ ಪುಟಕ್ಕೆ

ಹಾಲು ಪ್ರೋತ್ಸಾಹ ಧನ ರೂ. 2 ಏರಿಕೆ ಸಾಧ್ಯತೆ
ಸಿದ್ದರಾಮಯ್ಯ ಬಜೆಟ್‌ನಲ್ಲಿ ನಿರೀಕ್ಷೆ

ಬೆಂಗಳೂರು: ಹಾಲು ಉತ್ಪಾದಕರಿಗೆ ಕರ್ನಾಟಕ ಸರ್ಕಾರ ನೀಡುತ್ತಿರುವ ಪ್ರೋತ್ಸಾಹಧನವನ್ನು ಪ್ರತಿ ಲೀಟರ್‌ಗೆ 5 ರಿಂದ 7 ರೂ.ಗೆ ಏರಿಸುವ ಕುರಿತು ಈ ಬಾರಿಯ ಬಜೆಟ್‌ನಲ್ಲಿ ಪ್ರಕಟಿಸುವ ನಿರೀಕ್ಷೆಯಿದೆ.



ಎರಡು ತಿಂಗಳ ಹಿಂದೆಯೇ ಬೆಳಗಾವಿಯಲ್ಲಿ ನಡೆದ ಅಧಿವೇಶನದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಪ್ರೋತ್ಸಾಹಧನ ಏರಿಸುವುದಾಗಿ ಘೋಷಿಸಿದ್ದರೂ ಅದು ಜಾರಿಯಾಗಿಲ್ಲ. ಅಧಿಕೃತವಾಗಿ ಬಜೆಟ್ ಮೂಲಕವೇ ಪ್ರಕಟಿಸಿ ಜಾರಿಗೊಳಿಸುವ ಸಾಧ್ಯತೆಯಿದೆ.

ಕರ್ನಾಟಕದಲ್ಲಿ ಹಾಲಿನ ಉತ್ಪಾದನೆ ಪ್ರಮಾಣ ಗಣನೀಯವಾಗಿ ಏರಿಕೆಯಾಗಿದ್ದು, ಪ್ರತಿನಿತ್ಯ 1 ಕೋಟಿ ಲೀಟರ್ ಹಾಲನ್ನು ಕೆಎಂಎಫ್ ಸಂಗ್ರಹ ಮಾಡುತ್ತಿದೆ. ಪ್ರೋತ್ಸಾಹಧನ ಏರಿಕೆಯಿಂದ ಹಾಲಿನ ಉತ್ಪಾದನೆ ▸ 6ನೇ ಪುಟಕ್ಕೆ

ಖಾಲಿ ಹುದ್ದೆಗಳ ಭರ್ತಿಗೆ ಆಗ್ರಹಿಸಿ ಬೀದಿಗಿಳಿದ ಉದ್ಯೋಗಾಕಾಂಕ್ಷಿಗಳು

● ಕಾಂಗ್ರೆಸ್ ಸರ್ಕಾರದ ವಿರುದ್ಧ ಆಕ್ರೋಶ ● ನಿರುದ್ಯೋಗದ ಕರಾಳತೆಯಲ್ಲಿ ನಲುಗಿದವರ ಹಿಡಿಶಾಪ

ಧಾರವಾಡ, ಫೆ.24– ರಾಜ್ಯ ಸರ್ಕಾರದ ವಿವಿಧ ಇಲಾಖೆಗಳಲ್ಲಿ ಖಾಲಿ ಇರುವ 2.7 ಲಕ್ಷ ಹುದ್ದೆಗಳ ಭರ್ತಿಗೆ ಆಗ್ರಹಿಸಿ ಅಖಿಲ ಕರ್ನಾಟಕ ರಾಜ್ಯ ವಿದ್ಯಾರ್ಥಿ ಸಂಘಟನೆ ನೇತೃತ್ವದಲ್ಲಿ ಸಾವಿರಾರು ಉದ್ಯೋಗಾಕಾಂಕ್ಷಿಗಳು ಮಂಗಳವಾರ ಭಾರೀ ಪ್ರತಿಭಟನೆ ನಡೆಸಿದರು.

ಇಲ್ಲಿನ ಶ್ರೀನಗರ ವೃತ್ತದಲ್ಲಿ ಜಮಾಯಿಸಿದ ಉದ್ಯೋಗಾಕಾಂಕ್ಷಿಗಳು, ಡಿಸಿ ಕಚೇರಿಯತ್ತ ಪ್ರತಿಭಟನಾ ಮೆರವಣಿಗೆ ಹೊರಟಾಗ ಅವರನ್ನು ನಿಯಂತ್ರಿಸಲು ಪೊಲೀಸರು ಹರಸಾಹಸಪಟ್ಟರು. ಈ ವೇಳೆ, ಪೊಲೀಸ್ ಆಯುಕ್ತ ಎನ್.ಶಶಿಕುಮಾರ್ ಹಾಗೂ ಹೋರಾಟದ ನೇತೃತ್ವ ವಹಿಸಿದ್ದ ವಿದ್ಯಾರ್ಥಿ ಮುಖಂಡ ಕಾಂತಕುಮಾರ್ ನಡುವೆ ಮಾತಿನ ಚಕಮಕಿ ನಡೆಯಿತು. ▸ 6ನೇ ಪುಟಕ್ಕೆ



ಖಾಲಿ ಹುದ್ದೆಗಳನ್ನು ಭರ್ತಿ ಮಾಡುವಂತೆ ಆಗ್ರಹಿಸಿ ನಿರುದ್ಯೋಗಿ ಯುವ ಜನ ಮಂಗಳವಾರ ಧಾರವಾಡದಲ್ಲಿ ಭಾರೀ ಪ್ರತಿಭಟನೆ ಮಾಡಿದರು.

ಉದ್ಯೋಗಾಕಾಂಕ್ಷಿಗಳಿಗೆ ಸರ್ಕಾರದಿಂದ ಗುಡ್ ನ್ಯೂಸ್

ಬೆಂಗಳೂರು, ಫೆ.24– ಧಾರವಾಡದಲ್ಲಿ ಸಾವಿರಾರು ಉದ್ಯೋಗಾಕಾಂಕ್ಷಿಗಳು ಹೋರಾಟಕ್ಕೆ ಧುಮುಕಿದ ಬೆನ್ನಲ್ಲೇ ಕರ್ನಾಟಕ ಆರ್ಥಿಕ ಇಲಾಖೆ, 24 ಸಾವಿರ ಹುದ್ದೆಗಳ ನೇಮಕಾತಿಗೆ ನೇಮಕಾತಿಗೆ ಮಂಜೂರಾತಿ ನೀಡಿರುವುದಾಗಿ ತಿಳಿದುಬಂದಿದೆ.

ಕರ್ನಾಟಕದ ವಿವಿಧ ಒಟ್ಟು 32 ಇಲಾಖೆಯಲ್ಲಿ 24,300 ಹುದ್ದೆಗಳ ನೇಮಕಾತಿಗೆ ಆರ್ಥಿಕ ಇಲಾಖೆ ಮಂಜೂರಾತಿ ನೀಡಿದೆ. ಎ ದರ್ಜೆಯ 542, ಬಿ ದರ್ಜೆಯ 619 ಹಾಗೂ ಎಫ್‌ಡಿಸಿ ದರ್ಜೆಯ 23,119 ಹುದ್ದೆಗಳ ಭರ್ತಿಗೆ ಹಣಕಾಸು ಇಲಾಖೆ ಕ್ಲಿಯರೆನ್ಸ್ ನೀಡಿದೆ ಎನ್ನಲಾಗಿದ್ದು, ಇದು ರಾಜ್ಯದಲ್ಲಿ ಉದ್ಯೋಗಕ್ಕಾಗಿ ಕಾಯುತ್ತಿರುವ ನಿರುದ್ಯೋಗಿಗಳಿಗೆ ಸಮಾಧಾನ ತಂದಿದೆ. ರಾಜ್ಯದ ವಿವಿಧ ಇಲಾಖೆಗಳಲ್ಲಿ 2.5 ಲಕ್ಷಕ್ಕೂ ಹೆಚ್ಚು ಹುದ್ದೆಗಳು ಖಾಲಿಯಿದ್ದು ಹಂತ ಹಂತವಾಗಿ ಭರ್ತಿ ಮಾಡುವುದಾಗಿ ಈ ಹಿಂದೆ ಸ್ವತಃ ಮುಖ್ಯಮಂತ್ರಿ ಸಿದ್ದರಾಮಯ್ಯನವರೇ ಹೇಳಿದ್ದರು.



ಬೇಕಾಗಿದ್ದಾರೆ
ಮೈಸೂರಿನ ಖಾಸಗಿ ಕಂಪನಿಗೆ,
Fortuner ಮತ್ತು Automatic
ಕಾರು ಓಡಿಸುವ ಡ್ರೈವರ್‌ಗಳು ಬೇಕಾಗಿದ್ದಾರೆ.
ಸಂಬಳ: 25,000-30,000
ಮತ್ತು ಟೆಲಿಕಾಲಿಂಗ್ ಕಛೇರಿಯ ಕೆಲಸ ಮಾಡಲು ಹುಡುಗಿಯರು ಬೇಕಾಗಿದ್ದಾರೆ.
ಉಳಿದುಕೊಳ್ಳಲು PG ವ್ಯವಸ್ಥೆ ಇರುತ್ತದೆ
9187412584 / 9187312582





ಸ್ಮರಿಸಿದವರ ಮನದಲ್ಲಿ ನೆಲೆಸುವ ರಾಯರು



ಲೋಕ ಕಲ್ಯಾಣಾರ್ಥ ನಡೆದ ಪವಮಾನ ಹೋಮದಲ್ಲಿ ಭಾಗಿಯಾದ ಭಕ್ತಾದಿಗಳಿಗೆ ಶಾಸಕ ಕೆ.ಹರೀಶ್ ಗೌಡ ತುಳಸಿ ಗಿಡಗಳನ್ನು ವಿತರಿಸಿದರು.

ಮೈಸೂರು, ಫೆ. 24– ಶ್ರೀ ರಾಘವೇಂದ್ರಸ್ವಾಮಿ ಮಂತ್ರಾಲಯ ದಲ್ಲಷ್ಟೇ ಅಲ್ಲ ಸ್ಮರಿಸಿದವರ ಮನದಲ್ಲಿಯೂ ನೆಲೆಸುತ್ತಾರೆ, ಪಾಪ ಕರ್ಮಗಳನ್ನು ದೂರ ಮಾಡಿ ಪುಣ್ಯದ ಫಲ ನೀಡುತ್ತಾರೆ ಎಂದು ಶಾಸಕ ಕೆ.ಹರೀಶ್‌ಗೌಡ ಅಭಿಪ್ರಾಯ ಪಟ್ಟರು.

ಮೈಸೂರಿನ ನಾರಾಯಣ ಶಾಸ್ತ್ರಿ ರಸ್ತೆಯಲ್ಲಿರುವ ಸುಬ್ಬರಾಯನಕೆರೆಯ ಶ್ರೀ ಗುರು ರಾಘವೇಂದ್ರ ಸ್ವಾಮಿ ಮಠಕ್ಕೆ ಭೇಟಿ ನೀಡಿ ಶ್ರೀ ಗುರು ರಾಘವೇಂದ್ರ ಸ್ವಾಮಿಯ 431ನೇ ವರ್ಧಂತಿ ಮಹೋತ್ಸವ ಧಾರ್ಮಿಕ ಕಾರ್ಯಕ್ರಮದಲ್ಲಿ ಭಾಗಿಯಾಗಿ ರಾಘವೇಂದ್ರ ಸ್ವಾಮಿ ದರ್ಶನ ಪಡೆದರು, ನಂತರ ಲೋಕ ಕಲ್ಯಾಣಾರ್ಥ ನಡೆದ ಪವಮಾನ ಹೋಮದಲ್ಲಿ ಭಾಗಿಯಾಗಿ ಬಂದಂತ ಭಕ್ತಾದಿಗಳಿಗೆ ರಾಯರ ಪ್ರಿಯವಾದ ತುಳಸಿ ಗಿಡಗಳನ್ನು ವಿತರಿಸಿ ಮಾತನಾಡಿದ ಅವರು, ಲೌಕಿಕ ಜೀವನದಲ್ಲಿ ಒತ್ತಡಗಳಿವೆ, ಅದರ ನಡುವೆಯೂ ಭಗವಂತನ ಸ್ಮರಣೆ ಮರೆಯಬಾರದು. ಕರುಣಾಮೂರ್ತಿಗಳಾದ ರಾಯರ ಅನುಗ್ರಹಕ್ಕೆ ಎಲ್ಲರೂ ಪಾತ್ರರಾಗಬೇಕು

ರಾಘವೇಂದ್ರ ಸ್ವಾಮಿ ಭಕ್ತರ ಉದ್ಧಾರಕ್ಕಾಗಿ ಕಲಿಯುಗದಲ್ಲಿ ಅವತರಿಸಿದರು. ರಾಯರು ರಚಿಸಿದ ಕೃತಿಗಳನ್ನು ಭಕ್ತರು ಅಧ್ಯಯನ ಮಾಡಬೇಕು ಎಂದು ಹೇಳಿದರು.

ರಾಘವೇಂದ್ರ ಕುಲಕರ್ಣಿ, ಗುಂಡಾಚಾರ್, ಚಮಾಚಾರ್, ಶ್ರೀನಿವಾಸ್, ಕನಕ ಪತ್ತಿನ ಸಹಕಾರಿ ಸಂಘದ ನಿರ್ದೇಶಕ ರವಿಚಂದ್ರ, ನವೀನ, ಹರೀಶ್ ಗೌಡ, ಎಸ್‌ಎನ್ ರಾಜೇಶ್, ನಂಜುಂಡಿ, ಲೋಕೇಶ್, ವರುಣಮಹಾದೇವ್, ಮಂಗಳ, ಶಾಂತಿ, ನಾಗರಾಜ್, ನಿತಿನ್, ಕಿರಣ್ ಗೌಡ, ಹರ್ಷ, ಮಂಜುನಾಥ್ ಹಾಗೂ ಇನ್ನಿತರರು ಹಾಜರಿದ್ದರು.

ಫೆ.27, 28ಕ್ಕೆ 'ಬಿಜ್‌ಟೆಕ್ ಎಕ್ಸ್‌ಟ್ರಾವಗಂಜಾ' ಅಂತರ ಕಾಲೇಜು ಕೌಶಲ್ಯ ಪ್ರದರ್ಶನ ವೇದಿಕೆ

ಮೈಸೂರು,ಫೆ.24(ಜಿಎ)–ಮೈಸೂರಿನ ವಿದ್ಯಾವರ್ಧಕ ಪ್ರಥಮ ದರ್ಜೆ ಕಾಲೇಜಿನ ವತಿಯಿಂದ ಸ್ನಾತಕ ವಿದ್ಯಾರ್ಥಿಗಳಿಗೆ ವಾಣಿಜ್ಯ, ನಿರ್ವಹಣೆ, ತಾಂತ್ರಿಕ ಮತ್ತು ಕಲಾತ್ಮಕ ಕೌಶಲ್ಯಗಳನ್ನು ವ್ಯಕ್ತಪಡಿಸಲು ಫೆ.27, 28ರಂದು ವಿದ್ವತ್–2026ರ 18 ಸೀಸನ್ ಅಂಗವಾಗಿ ರಾಜ್ಯ ಮಟ್ಟದ ಅಂತರಕಾಲೇಜು 'ಬಿಜ್‌ಟೆಕ್ ಎಕ್ಸ್‌ಟ್ರಾವಗಂಜಾ' ಏರ್ಪಡಿಸಲಾಗಿದೆ ಎಂದು ಕಾಲೇಜು ಪ್ರಾಂಶುಪಾಲ ಡಾ.ಎಸ್.ಮರಿಗೌಡ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನ 'ದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಫೆ.27ರಂದು ಬೆಳಗ್ಗೆ 10 ಗಂಟೆಗೆ ಮೈಸೂರು ವಿವಿ ಕುಲಪತಿ ಪ್ರೊ.ಎನ್. ಕೆ.ಲೋಕನಾಥ್ 'ಬಿಜ್‌ಟೆಕ್ ಎಕ್ಸ್‌ಟ್ರಾವ ಗಂಜಾ'ಗೆ ಚಾಲನೆ ನೀಡಲಿದ್ದಾರೆ. ಮುಖ್ಯ ಅತಿಥಿಗಳಾಗಿ ಉದ್ಯಮಿ ಸಿ.ನವೀನ್ ಚಂದ್ರ ಆಗಮಿಸಲಿದ್ದಾರೆ. ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಿದ್ಯಾವರ್ಧಕ ಸಂಘದ ಗೌರವ ಅಧ್ಯಕ್ಷ ಗುಂಡಪ್ಪಗೌಡ ವಹಿಸಲಿದ್ದಾರೆ. ಕಾರ್ಯದರ್ಶಿ ಪಿ.ವಿಶ್ವನಾಥ್, ಖಜಾಂಚಿ ಶ್ರೀಶೈಲ ರಾಮಣ್ಣನವರ್, ಟಿ.ನಾಗರಾಜು ಉಪ ಸ್ಥಿತರಿರಲಿದ್ದಾರೆ. ಅಂದು ಸಂಜೆ 6.30ಕ್ಕೆ ರಾಜ್ಯಮಟ್ಟದ ಅಂತರ ಕಾಲೇಜು ಸಾಂಸ್ಕೃತಿಕ ಸ್ಪರ್ಧೆ ನಡೆಯಲಿದ್ದು, ನಟಿ ಪ್ರೇಮ್ ದೇವರಾಜ್ ಉದ್ಘಾಟಿಸುವರು. ಫೆ.28ರಂದು ಸಂಜೆ 4.30ಕ್ಕೆ ಸಮಾರೋಪ ಸಮಾರಂಭ ನಡೆಯಲಿದೆ ಎಂದರು.

ವಿದ್ಯಾರ್ಥಿಗಳಿಗೆ ನೈಜ ಜಗತ್ತಿನ ವ್ಯವಹಾರಗಳ ಸನ್ನಿವೇಶವನ್ನು ಒದಗಿಸುವ ಉದ್ದೇಶವನ್ನು ಕಾರ್ಯಕ್ರಮ ಹೊಂದಿದೆ. ಕಲಿಕೆ, ವಿನೋದ ಮತ್ತು ವೃತ್ತಿಪರ ಬೆಳವಣಿಗೆಗೆ ಸಂಬಂಧಿಸಿದ ಸ್ಪರ್ಧೆಗಳನ್ನು ಆಯೋಜಿಸಲಾಗಿದೆ. ವಿವಿಧ ಕಾಲೇಜುಗಳ 50ಕ್ಕೂ ಹೆಚ್ಚು ತಂಡಗಳು ಪಾಲ್ಗೊಳ್ಳಲಿವೆ ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಪ್ರಾಧ್ಯಾಪಕರಾದ ಹರ್ಷ, ಹರಿಪ್ರಸಾದ್, ವಿದ್ಯಾಶ್ರೀ, ಗೀತಾ, ಸ್ಮಿತಾ, ಮೇಘನಾ ಉಪಸ್ಥಿತರಿದ್ದರು.

ಕೇಂದ್ರದಿಂದ 14 ವರ್ಷದ ಎಲ್ಲಾ ಬಾಲಕಿಯರಿಗೆ ಹೆಚ್‌ಪಿವಿ ಲಸಿಕೆ ಅಭಿಯಾನ

ನವದೆಹಲಿ: ಕೇಂದ್ರ ಸರ್ಕಾರ ಶೀಘ್ರದಲ್ಲೇ ರಾಷ್ಟ್ರವ್ಯಾಪಿ 14 ವರ್ಷದ ಎಲ್ಲಾ ಬಾಲಕಿಯರಿಗೆ ಹೆಚ್‌ಪಿವಿ (ಹ್ಯೂಮನ್ ಪ್ಯಾಪಿಲೋಮವೈರಸ್) ಲಸಿಕೆ ಅಭಿಯಾನವನ್ನು ಆರಂಭಿಸಲಿದೆ ಎಂದು ಅಧಿಕೃತ ಮೂಲಗಳು ತಿಳಿಸಿವೆ. ಗಾರ್ಡಸಿಲ್ ಇಂಜೆಕ್ಷನ್(ಹೆಚ್‌ಪಿವಿ ಲಸಿಕೆ) ಅನ್ನು ಉಚಿತವಾಗಿ ನೀಡಲಾಗುವುದು ಎಂದು ಅವರು ಹೇಳಿದ್ದಾರೆ.

ಹೆಚ್‌ಪಿವಿ ಲಸಿಕೆ ಗರ್ಭಕಂಠದ ಕ್ಯಾನ್ಸರ್, ಜನನಾಂಗದ ನರಹುಲಿಗಳು ಮತ್ತು ಹೆಚ್‌ಪಿವಿಯಿಂದ ಉಂಟಾಗುವ ಇತರ ಕ್ಯಾನ್ಸರ್‌ಗಳನ್ನು ತಡೆಯುವ ಅತ್ಯಂತ ಪರಿಣಾಮಕಾರಿ ಲಸಿಕೆಯಾಗಿದೆ. ಇದು 9 ರಿಂದ 14 ವರ್ಷದೊಳಗಿನ ಹೆಣ್ಣುಮಕ್ಕಳಿಗೆ ಹೆಚ್ಚು ಪರಿಣಾಮಕಾರಿಯಾಗಿದೆ.

ಶಿಫಾರಸು ಮಾಡಲಾದ ವಯಸ್ಸಿನ ಬಾಲಕಿಯರಿಗೆ ಒಂದೇ ಡೋಸ್ ಲಸಿಕೆ ನೀಡಿದರೆ ಬಲವಾದ ರಕ್ಷಣೆ ನೀಡುತ್ತದೆ ಎಂದು ಜಾಗತಿಕ ಮತ್ತು ಭಾರತೀಯ ವೈಜ್ಞಾನಿಕ ಪುರಾವೆಗಳು ದೃಢಪಡಿಸಿವೆ ಎಂದು ಅಧಿಕೃತ ಮೂಲಗಳು ತಿಳಿಸಿವೆ.

ರಾಷ್ಟ್ರೀಯ ಕಾರ್ಯಕ್ರಮದ ಅಡಿಯಲ್ಲಿ ಈ ಲಸಿಕೆ ಸ್ವಯಂಪ್ರೇರಿತ ಮತ್ತು ಉಚಿತವಾಗಿರುತ್ತದೆ ಎಂದು ಮೂಲಗಳು ತಿಳಿಸಿವೆ.

ವಕೀಲರ ಕಲ್ಯಾಣ ನಿಧಿ, ಆರೋಗ್ಯ ನಿಧಿಗೆ ಬಜೆಟ್‌ನಲ್ಲಿ ತಲಾ 100 ಕೋಟಿ ಮೀಸಲಿರಿಸಲು ಆಗ್ರಹ

ಮೈಸೂರು,ಫೆ.24(ಜಿಎ)–ರಾಜ್ಯ ಬಜೆಟ್‌ನಲ್ಲಿ ಮುಖ್ಯಮಂತ್ರಿ ಸಿದ್ದ ರಾಮಯ್ಯ ಅವರು ವಕೀಲರ ಕಲ್ಯಾಣನಿಧಿ, ಆರೋಗ್ಯ ನಿಧಿಗೆ ತಲಾ 100 ಕೋಟಿ ರೂ. ಹಣ ಮೀಸಲಿಡಬೇಕೆಂದು ಮೈಸೂರು ವಕೀಲರ ಸಂಘದ ಮಾಜಿ ಉಪಾಧ್ಯಕ್ಷ ಪುಟ್ಟಸಿದ್ದೇಗೌಡ ಮನವಿ ಮಾಡಿದರು.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯದಲ್ಲಿ 1.40 ಲಕ್ಷ ವಕೀಲರು ನ್ಯಾಯಾಂಗ ಕ್ಷೇತ್ರದಲ್ಲಿ ಸೇವೆ ಸಲ್ಲಿಸುತ್ತಿದ್ದು, ಅವರಿಗೆ ಸರ್ಕಾರದಿಂದ ಯಾವುದೇ ಸೌಲಭ್ಯವಿಲ್ಲ. ಸರ್ಕಾರವು 100 ಕೋಟಿ ರೂ.ಗಳ ಅನು ದಾನವನ್ನು ಮೀಸಲಿಟ್ಟು ವಕೀಲರು ನಿವೃತ್ತಿಯಾದಾಗ, ಅಪಘಾತ 'ದಿಂದ ಮರಣ ಹೊಂದಿದಾಗ ಪರಿಹಾರ ನೀಡುವ ಮೂಲಕ ನೊಂದ ಕುಟುಂಬಕ್ಕೆ ನೆರವಾಗಬೇಕೆಂದು ಒತ್ತಾಯಿಸಿದರು.

ರಾಜ್ಯದ ಅನೇಕ ವಕೀಲರ ಸಂಘ ಗಳಿಗೆ ಸ್ವಂತ ಕಟ್ಟಡವಿಲ್ಲ. ಅನೇಕ ನ್ಯಾಯಾಲಯಗಳಲ್ಲಿ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲು ಕ್ರಮವಹಿಸಬೇಕು. ವಿಶ್ರಾಂತಿ ಕೊಠಡಿಗಳ ನಿರ್ಮಾಣ ಹಾಗೂ ಮೂಲಸೌಕರ್ಯಕ್ಕೆ ಹೆಚ್ಚಿನ ಅನುದಾನ ನೀಡಬೇಕೆಂದು ಕೋರಿದರು.

ಸಮಾಜದ ಬಗ್ಗೆ ಕಳಕಳಿ ಹೊಂದಿರುವ ವಕೀಲರೂ ಆಗಿದ್ದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ನ್ಯಾಯವಾದಿಗಳ ಕಷ್ಟಸುಖದ ಅರಿವಿದ್ದು, ತಮ್ಮ ಬೇಡಿಕೆಗಳನ್ನು ಈಡೇರಿಸುತ್ತಾರೆಂದು ವಿಶ್ವಾಸ ವ್ಯಕ್ತಪಡಿಸಿದರು.

ಸುದ್ದಿಗೋಷ್ಠಿಯಲ್ಲಿ ವಕೀಲರಾದ ಕೆ.ಲೋಕೇಶ್, ನಂಜುಂಡನಾಯಕ, ಕಾರ್ತಿಕ್, ಕೃಷ್ಣ, ಚಂದನ್ ಉಪಸ್ಥಿತರಿದ್ದರು.

ವಿಶೇಷ ವಾರ್ಷಿಕ ಶಿಬಿರ



ಮೈಸೂರು ಜಿಲ್ಲೆಯ ಹುಣಸೂರು ತಾಲೂಕಿನ ಬಿಳಿಕೆರೆಯ ಹೊಸಪುರ ಗ್ರಾಮದಲ್ಲಿ ಜಯಲಕ್ಷ್ಮೀಪುರಂ ಸಂತ ಜೋಸೆಫರ ಪ್ರಥಮ ದರ್ಜೆ ಕಾಲೇಜಿನ ಎನ್‌ಎಸ್‌ಎಸ್ ಘಟಕವು ಆಯೋಜಿಸಿದ್ದ 2025–26ನೇ ಸಾಲಿನ ವಿಶೇಷ ವಾರ್ಷಿಕ ಶಿಬಿರವನ್ನು ಫಾದರ್ ಎಡ್ವರ್ಡ್ ವಿಲಿಯಂ ಸಲ್ಡಾನ್ಹಾ ಉದ್ಘಾಟಿಸಿದರು. ಫಾದರ್ ನವೀನ್ ಕುಮಾರ್.ಎ., ಗಾಗೇನಹಳ್ಳಿ ಪ್ರೌಢ ಶಾಲೆಯ ಮುಖ್ಯ ಶಿಕ್ಷಕ ಅಣ್ಣ ನಾಯಕ, ಹೊಸಪುರ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯ ಮುಖ್ಯ ಶಿಕ್ಷಕ ವೀರಭದ್ರಪ್ಪ, ಕಾಲೇಜು ಪ್ರಾಂಶುಪಾಲ ಡಾ. ಚಂದ್ರಶೇಖರ ಹೆಚ್.ಎನ್., ಅಧಿಕಾರಿಗಳಾದ ರವಿಕಿರಣ್.ಎನ್. ಹೊಸಪುರ ಗ್ರಾಮಸ್ಥರು, ಕಾಲೇಜಿನ ಬೋಧಕ, ಬೋಧಕೇತರ ಸಿಬ್ಬಂದಿ ಹಾಜರಿದ್ದರು.

ಹಾರ, ತುರಾಯಿ ಬೇಡ: ನೋಟ್ ಪುಸ್ತಕ ಕೊಡಿ !!

● ಅಭಿಮಾನಿಗಳು, ಹಿತೈಷಿಗಳಿಗೆ ಶಾಸಕ ಶ್ರೀವತ್ಸ ಸಲಹೆ ● ಅದರಂತೆ ಹೀಗೆ ಬಂದ 50 ಸಾವಿರ ನೋಟ್ ಬುಕ್ ಇಲ್ಲಿವರೆಗೆ ಮಕ್ಕಳಿಗೆ ವಿತರಣೆ ● ಇತರೆ ಜನ ಪ್ರತಿನಿಧಿಗಳಿಗೆ ಮಾದರಿಯಾಗಿರುವ ಕೃಷ್ಣರಾಜ ಕ್ಷೇತ್ರದ ಶಾಸಕರು

ಮೈಸೂರು,ಫೆ.24(ಜಿಎ)–ಹಾರ ತುರಾಯಿಗೆ ಬ್ರೇಕ್ ಹಾಕಿ, ಬದಲಾಗಿ ಸರ್ಕಾರಿ ಶಾಲೆ ಮಕ್ಕಳಿಗೆ ನೋಟ್ ಪುಸ್ತಕ ನೀಡುವ ಕೃಷ್ಣರಾಜ ಕ್ಷೇತ್ರದ ಶಾಸಕ ಟಿ.ಎಸ್.ಶ್ರೀವತ್ಸ ಪರಿಪಾಠಕ್ಕೆ ಸಾರ್ವಜನಿಕರಿಂದ ಮೆಚ್ಚುಗೆ ವ್ಯಕ್ತವಾಗಿದೆ.

ಕೆ.ಆರ್.ಕ್ಷೇತ್ರದಲ್ಲಿ ಅನೇಕ ಕಾಮಗಾರಿಗಳಿಗೆ ಗುದ್ದಲಿ ಪೂಜೆ ನೆರವೇರಿಸುವ ಸಂದರ್ಭದಲ್ಲಿ ಬೆಂಬಲಿಗರು, ಗುತ್ತಿಗೆದಾರರು ಹಾಕುವ ಹಾರಕ್ಕೆ ಶಾಸಕರು ಬ್ರೇಕ್ ಹಾಕಿದ್ದು, ಅದರ ಬದಲಾಗಿ ನೋಟ್ ಬುಕ್ ನೀಡುವಂತೆ ಸೂಚನೆ ನೀಡಿದ್ದಾರೆ. ಹಾಗಾಗಿ ಈವರೆಗೂ 50 ಸಾವಿರಕ್ಕೂ ಹೆಚ್ಚು ನೋಟ್ ಬುಕ್ ವಿತರಿಸುವ ಮೂಲಕ ಬಡ ವಿದ್ಯಾರ್ಥಿಗಳ ಓದಿಗೆ ನೆರವಾಗಿದ್ದಾರೆ.

ನಾನಾ ಕಾರ್ಯಕ್ರಮಗಳಲ್ಲಿ ಹಾರ ತುರಾಯಿ ಹಾಕುವುದು ಒಂದು ವಾಡಿಕೆಯಾಗಿದ್ದು, ಅದರಲ್ಲಿಯೂ ಜನ ಪ್ರತಿನಿಧಿಗಳ ಹುಟ್ಟುಹಬ್ಬ, ಗುದ್ದಲಿ ಪೂಜೆಗಳಲ್ಲಿ ಅನಾವಶ್ಯಕವಾಗಿ ಹೂವಿನ ಹಾರ ಹಾಕಿ ಇಷ್ಟವಿಲ್ಲದಿದ್ದರೂ ಇರಿಸು ಮುರಿಸು ಉಂಟುಮಾಡುತ್ತಿದ್ದಾರೆ. ಹಾಗೆ ಸರ್ಕಾರಿ ಕಾರ್ಯಕ್ರಮಗಳಲ್ಲಿ ಹೂ ಗುಚ್ಛ ನೀಡುವ ಬದಲು ಪುಸ್ತಕ ನೀಡುವಂತೆ ಆದೇಶವಿದ್ದರೂ, ಈ ಆದೇಶಕ್ಕೂ ಕಿಮ್ಮತ್ತು ಇಲ್ಲ. ಯಾವ ಕಾರ್ಯಕ್ರಮಕ್ಕೂ ಹೋದರೂ ಹಾರಗಳ ರಾಶಿಯೇ ಬಿದ್ದಿರುತ್ತದೆ.



ಇತ್ತೀಚೆಗೆ ಗುಂಡೂರಾವ್ ನಗರದಲ್ಲಿ ಕಾಮಗಾರಿಗೆ ಚಾಲನೆ ನೀಡುವ ಸಂದರ್ಭದಲ್ಲಿ ಶಾಸಕ ಟಿ ಎಸ್ ಶ್ರೀವತ್ಸ ಶಾಲಾ ವಿದ್ಯಾರ್ಥಿಗಳಿಗೆ ನೋಟ್ ಪುಸ್ತಕ, ಬ್ಯಾಗ್ ವಿತರಿಸಿದರು.

ಈ ಹಿಂದೆ ಟಿ.ಎಸ್.ಶ್ರೀವತ್ಸ ಬಿಜೆಪಿ ನಗರಾಧ್ಯಕ್ಷರಾದ ಸಂದರ್ಭದಲ್ಲಿ ಒಮ್ಮೆ ಅವರ ಹುಟ್ಟುಹಬ್ಬದ ವೇಳೆ ಅವರ ಸ್ನೇಹಿತರು, ಹಿತೈಷಿಗಳು, ಪಕ್ಷದ ಕಾರ್ಯಕರ್ತರು, ಹಿರಿಯ ಮುಖಂಡರು ವಿವಿಧ ರೀತಿಯ ಹಾರಗಳನ್ನು ಹಾಕಿ ಶುಭ ಕೋರಿದರು. ಅಂದು ರಾತ್ರಿ ಮನೆಯ ಒಂದು ಮೂಲೆಯಲ್ಲಿ ಹಾರಗಳ ರಾಶಿಯೇ ಬಿದ್ದಿತ್ತು. ಅದನ್ನು ಲೆಕ್ಕಹಾಕಿದಾಗ ಒಂದು ಸಾವಿರಕ್ಕೂ ಹೆಚ್ಚು ಹಾರಗಳು ಇದ್ದವು. ಅಂದೇ ಟಿ.ಎಸ್.ಶ್ರೀವತ್ಸ ನಿರ್ಧರಿಸಿ, ಇನ್ನು ಮುಂದೆ ಯಾರು ನನಗೆ ಹಾರಗಳನ್ನು ಹಾಕಬೇಡಿ ಬದಲಾಗಿ ನೋಟ್ ಪುಸ್ತಕ, ಸ್ಕೂಲ್ ಬ್ಯಾಗ್‌ಗಳನ್ನು ನೀಡಿ ಎಂದು ಸೂಚಿಸಿದ ನಂತರ, ಈಗ ಅವರಿಗೆ ನೋಟ್ ಪುಸ್ತಕಗಳನ್ನು ನೀಡಲು ಆರಂಭಿಸಿದ್ದಾರೆ.

ಶಾಸಕರಾದ ನಂತರ ನೋಟ್ ಪುಸ್ತಕಗಳ ಸಂಖ್ಯೆ ಹೆಚ್ಚಳವಾಗಿದೆ. ಅದನ್ನು ತಮ್ಮ ಕಚೇರಿಯಲ್ಲಿ ಶೇಖರಿಸಿ, ಕೆ.ಆರ್. ಕ್ಷೇತ್ರ ಮಾತ್ರವಲ್ಲದೇ ನಗರದ ವಿವಿಧ ಸರ್ಕಾರಿ ಶಾಲೆಗಳಿಗೆ ಪುಸ್ತಕಗಳನ್ನು ನೀಡುತ್ತಿದ್ದಾರೆ. ಪ್ರತಿ ವರ್ಷ 20 ಸಾವಿರ ನೋಟ್ ಪುಸ್ತಕಗಳನ್ನು ನೀಡಿದ್ದು, ಈವರೆಗೂ 50 ಸಾವಿರ ನೋಟ್ ಪುಸ್ತಕವನ್ನು ಸರ್ಕಾರಿ ಶಾಲೆಯ ವಿದ್ಯಾರ್ಥಿಗಳಿಗೆ ತಲುಪಿಸಿದ್ದಾರೆ. ಜೊತೆಗೆ 600ಕ್ಕೂ ಹೆಚ್ಚು ಸ್ಕೂಲ್ ಬ್ಯಾಗ್‌ಗಳನ್ನು ವಿತರಿಸಿ ಮಾದರಿಯಾಗಿದ್ದಾರೆ.

ಜ್ಞಾನ, ಅನುಭವಗಳನ್ನು ತಲೆಮಾರಿನಿಂದ ತಲೆಮಾರಿಗೆ ಕೊಂಡೊಯ್ಯುವ ಮೌನ ಗುರು ಪುಸ್ತಕ!

ಮೈಸೂರು, ಫೆ. 24– ಜ್ಞಾನ ಮತ್ತು ಅನುಭವಗಳನ್ನು ತಲೆಮಾರಿನಿಂದ ತಲೆಮಾರಿಗೆ ಕೊಂಡೊಯ್ಯುವ ಮೌನ ಗುರು ಪುಸ್ತಕ ಎಂದು ಶರಣು ವಿಶ್ವವಚನ ಫೌಂಡೇಷನ್ ಸಂಸ್ಥಾಪಕ ವಚನ ಕುಮಾರಸ್ವಾಮಿ ಹೇಳಿದರು.

ಕನ್ನಡ ಪುಸ್ತಕ ಪ್ರಾಧಿಕಾರದ ವತಿ ಯಿಂದ ಮೈಸೂರು ನೇತಾಜಿನಗರದ ಡಾ. ಶಿವ ಬಸಪ್ಪ ಹೊರೆಯಾಲ ಅವರ ಬಸವ ಜ್ಯೋತಿ ನಿವಾಸದಲ್ಲಿ ಆಯೋಜಿಸಿದ್ದ ಮನೆಗೊಂದು ಗ್ರಂಥಾಲಯ ಅನುಷ್ಠಾನ ಸಮಾರಂಭದಲ್ಲಿ ಪುಸ್ತಕ ಸಂಸ್ಕೃತಿ ಬಗ್ಗೆ ಮಾತನಾಡಿ ಮಹನೀಯರ ಜೀವನ ಚರಿತ್ರೆ ನಮಗೆ ದಾರಿದೀಪ. ಜೀವನ ಚರಿತ್ರೆ ಓದಿದಾಗ ನಮ್ಮೊಳಗಿನ ನಿದ್ರಿಸಿದ ಕನಸು ಎಚ್ಚರಗೊಳ್ಳುತ್ತದೆ. ಸಾಧನೆ ಸಾಧ್ಯವೆಂಬ ನಂಬಿಕೆ ಅರಳುತ್ತದೆ.



ಮನೆಗೊಂದು ಗ್ರಂಥಾಲಯ ಅನುಷ್ಠಾನ ಸಮಾರಂಭದಲ್ಲಿ ವಚನ ಕುಮಾರಸ್ವಾಮಿ ಮಾತನಾಡಿದರು

ಒಬ್ಬರ ಆತ್ಮಸಾಕ್ಷಿಯ ಧ್ವನಿಯೇ ಆತ್ಮಕಥೆ ತಮ್ಮ ಬದುಕಿನ ಪಾಠಗಳನ್ನು ತಾವೇ ಹೇಳುವಾಗ ಅದು ಓದುಗರ ಹೃದಯದಲ್ಲಿ ಆತ್ಮಪರಿಶೀಲನೆಯ ಬೆಳಕು ಹಚ್ಚುತ್ತದೆ. ಸಂಶೋಧನಾ ಕೃತಿ ಸತ್ಯದ ಅನ್ವೇಷಣೆಯ ಪಥ. ವಿಜ್ಞಾನ, ಸಮಾಜ ಅಥವಾ ಇತಿಹಾಸದ ವಿಷಯಗಳಲ್ಲಿ ಆಳವಾದ ಅಧ್ಯಯನ ಮನಸ್ಸಿಗೆ ವಿಚಾರ ಶೀಲತೆ ನೀಡುತ್ತದೆ ಎಂದು ಅಭಿಪ್ರಾಯಿಸಿದರು.

ಕನ್ನಡ ಪುಸ್ತಕ ಪ್ರಾಧಿಕಾರ ಅಧ್ಯಕ್ಷ ಡಾ. ಮಾನಸ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿ ರಾಜ್ಯಾದ್ಯಂತ ಲಕ್ಷ ಮನೆಗಳಲ್ಲಿ 'ಮನೆಗೊಂದು ಗ್ರಂಥಾಲಯ' ಸ್ಥಾಪಿಸುವ ಮಹತ್ವಾಕಾಂಕ್ಷೆ ಉದ್ದೇಶವನ್ನು ಪ್ರಾಧಿಕಾರ ಹೊಂದಿದ್ದು ಈ ಯೋಜನೆಯ ಭಾಗವಾಗಿ ಸಮಗ್ರ ರೂಪುರೇಷೆ ತಂತಾರಿಸಲಾಗಿದ್ದು, ಪ್ರತಿಯೊಂದು ಮನೆ ಓದಿನ ಮಂದಿರವಾಗಬೇಕು ಎಂಬ ಸಂಕಲ್ಪದೊಂದಿಗೆ ಕಾರ್ಯಾಚರಣೆ ಆರಂಭವಾಗಿದೆ ಎಂದರು.

ಅಧ್ಯಕ್ಷತೆ ವಹಿಸಿದ್ದ ಪುಸ್ತಕ ಪ್ರಾಧಿಕಾರದ ಸಂಚಾಲಕ ಎಂ. ಚಂದ್ರಶೇಖರ್ ಮಾತನಾಡಿ ಪ್ರತಿಯೊಂದು ಮನೆ ಗ್ರಂಥಾಲಯವಾಗಬೇಕು. ಪುಸ್ತಕ ಸಂಸ್ಕೃತಿ ಬೆಳೆದರೆ ಕುಟುಂಬದಲ್ಲಿ ಜ್ಞಾನ ಮತ್ತು ಮೌಲ್ಯಗಳ ವಾತಾವರಣ ನಿರ್ಮಾಣ ವಾಗುತ್ತದೆ. ಮನೆಗೊಂದು ಗ್ರಂಥಾಲಯ ಅಭಿಯಾನಕ್ಕೆ ಎಲ್ಲರೂ ಕೈಜೋಡಿಸಬೇಕೆಂದು ಮನವಿ ಮಾಡಿದರು.

ಶಿಕ್ಷ ಪದವಿಪೂರ್ವ ಕಾಲೇಜು ಪ್ರಾಂಶುಪಾಲರಾದ ಚಿಕ್ಕಹಳ್ಳಿ ದೇವರಾಜು ಪ್ರಾಸ್ತಾವಿಕ ನುಡಿ ನುಡಿದು ಮನೆಗೊಂದು ಗ್ರಂಥಾಲಯ ರಾಜ್ಯದಲ್ಲಿ ಮೊದಲಿಗೆ ಮುಖ್ಯಮಂತ್ರಿಗಳಾದ ಸಿದ್ಧರಾಮಯ್ಯನವರ ಮನೆಯಲ್ಲಿ, ಮೈಸೂರು ಜಿಲ್ಲೆಯಲ್ಲಿ ಉಸ್ತುವಾರಿ ಮಂತ್ರಿಗಳಾದ ಡಾ. ಎಚ್.ಸಿ ಮಹದೇವಪ್ಪ ಅವರ ಮನೆಯಲ್ಲಿ ಉದ್ಘಾಟನೆ ಆಗಿ ರಾಜ್ಯಾದ್ಯಂತ ಪುಸ್ತಕ ಸಂಸ್ಕೃತಿಯ ಮಹತ್ವವನ್ನು ಪ್ರಚುರಪಡಿಸಲಾಗುತ್ತಿದೆ ಎಂದರು.

ಸಾಹಿತಿ ಡಾ. ಶಿವಬಸಪ್ಪ ಹೊರೆಯಾಲ ಅವರು ಮಾತನಾಡಿ ಅನೇಕರ ಕೃತಿಗಳು ಪ್ರಕಟವಾಗದೇ ಬೆಳಕಿಗೆ ಬರುತ್ತಿಲ್ಲ. ಕವಿತೆ ರಚಿಸುವ ಕವಿಗಳು ಮತ್ತು ಕೃತಿಗಳನ್ನು ರಚಿಸುವ ಲೇಖಕರಿಗೆ ರಾಜ್ಯದಲ್ಲಿ ಉತ್ತಮ ವಾತಾವರಣ ನಿರ್ಮಾಣವಾಗಬೇಕು ಎಂದರು.

ಕಾರ್ಯಕ್ರಮದಲ್ಲಿ ಪುಸ್ತಕ ಪ್ರಾಧಿಕಾರ ಸಂಚಾಲಕ ಎಂ. ಮಹೇಶ್ ಚಿಕ್ಕಲ್ಲೂರು, ಅನೇಕ ಪುಸ್ತಕ ಪ್ರೇಮಿಗಳು ಉಪಸ್ಥಿತರಿದ್ದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

25.2.2026 ಬುಧವಾರ, ಮಳೆ ನಕ್ಷತ್ರ: ಶತಭಿಷ 19.02.2026 ರಿಂದ 03.03.2026
ವಿಶ್ವಾವಸು ನಾಮ ಸಂವತ್ಸರ, ಉತ್ತರಾಯಣ, ಶಿಶಿರ ಋತು, ಫಾಲ್ಗುಣ ಮಾಸ, ಶುಕ್ಲ ಪಕ್ಷ,
ತಿಥಿ: ನವಮಿ, ನಕ್ಷತ್ರ: ರೋಹಿಣಿ, ರಾಹುಕಾಲ: ಮಧ್ಯಾಹ್ನ 12 ರಿಂದ 1.30 ರವರೆಗೆ

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ:** ಕೊಲೆಸ್ಟ್ರಾಲ್, ಪಾರ್ಕಿನ್ ಸನ್ಸ್, ಮೈಗ್ರೇನ್ ಹಾಗೂ ಕಣ್ಣು–ಮೂಗಿನ ಅಲರ್ಜಿ ಕುರಿತು ಚಿಕಿತ್ಸಾ ಶಿಬಿರ, ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ, ಲಲಿತಾದ್ರಿಪುರ ರಸ್ತೆ, ಆಲನಹಳ್ಳಿ, ಬೆಳಗ್ಗೆ 9 ರಿಂದ.

■ **ಕಾವೇರಿ ಆಯುರ್ವೇದ ಆಸ್ಪತ್ರೆ:** ಬಿಳಿಮುಟ್ಟು, ಯಾವುದೇ ವಿಧವಾದ ತ್ವಚೆಯ ಸಮಸ್ಯೆ ಬಗ್ಗೆ ತಪಾಸಣೆ ಮತ್ತು ಚಿಕಿತ್ಸಾ ಶಿಬಿರ, ಸ್ಥಳ: ಕಾವೇರಿ ಆಯುರ್ವೇದ ಆಸ್ಪತ್ರೆ, ದೇವೇಗೌಡ ಸರ್ಕಲ್ ಹತ್ತಿರ, ಕೆಬಿಎಲ್ ಲೇಔಟ್, ಬೆಳಗ್ಗೆ 10 ಗಂಟೆಗೆ

■ **ಸರ್ಕಾರಿ ಆಯುರ್ವೇದ ಸಂಶೋಧನಾ ಕೇಂದ್ರ, ಸರ್ಕಾರಿ ಆಯುರ್ವೇದ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆ :** ಈಶನಾ–2026, ಸಂಶೋಧನಾ ವಿಧಾನ ಮತ್ತು ಜೈವಿಕ ಅಂಕಿ ಅಂಶಗಳು ಕುರಿತು ರಾಷ್ಟ್ರೀಯ ವಿಚಾರ ಸಂಕಿರಣ, ಉದ್ಘಾಟನೆ : ಆಯುಷ್ ಕಮಿಷನರ್ ಡಾ. ಸುನಿಲ್ ಪನ್ವಾರ್, ಗೌರವ ಅತಿಥಿಗಳು : ಜಯದೇವ ಹೃದ್ರೋಗ ಸಂಸ್ಥೆ ವೈದ್ಯಕೀಯ ಅಧೀಕ್ಷಕ ಡಾ. ಕೆ.ಎಸ್. ಸದಾನಂದ, ಡಾ. ವಿಜಯಲಕ್ಷ್ಮಿ ಬಾಳೆಕುಂದ್ರಿ, ಆದಿಚುಂಚನಗಿರಿ ವಿವಿ ವಿಶ್ರಾಂತ ಕುಲಪತಿ ಡಾ. ಎಂ.ಎ. ಶೇಖರ್, ಹಿರಿಯ ಪತ್ರಕರ್ತ ಅಂಶಿಪ್ರಸನ್ನಕುಮಾರ್, ಆಯುಷ್ ವಿಶ್ರಾಂತ ಜಂಟಿ ನಿರ್ದೇಶಕ ಡಾ. ಎಸ್.ಜಿ. ಮಂಗಳಜಿ, ಅಧ್ಯಕ್ಷತೆ: ಪ್ರಿನ್ಸಿಪಾಲ್ ಡಾ. ಶ್ರೀವತ್ಸ, ಸ್ಥಳ: ಸೆಮಿನಾರ್ ಹಾಲ್, ಸರ್ಕಾರಿ ಆಯುರ್ವೇದ ಸಂಶೋಧನಾ ಕೇಂದ್ರ, ಬೆಳಗ್ಗೆ 10 ರಿಂದ.

■ **ಸ್ಕೂಲ್ ಆಫ್ ಪ್ಲಾನಿಂಗ್ ಅಂಡ್ ಆರ್ಕಿಟೆಕ್ಚರ್ :** ಸಸ್ಟೈನಬಲ್ ಅಂಡ್ ಕ್ಲೈಮೇಟ್ ರಿಸೈಲೆಂಟ್ ಅರ್ಬನ್ ಡೆವಲಪ್‌ಮೆಂಟ್ ಕುರಿತು ಕಾರ್ಯಾಗಾರ, ಉದ್ಘಾಟನೆ : ಮೈಸೂರು ವಿವಿ ಕುಲಪತಿ ಪ್ರೊ. ಎನ್.ಕೆ. ಲೋಕನಾಥ್, ಪ್ರಾಸ್ತಾವಿಕ ಭಾಷಣ : ನಿಧಿ ಭಟ್ನಾಗರ್, ಸ್ಥಳ: ಪ್ರೊ. ಕೆ.ಎಸ್. ರಂಗಪ್ಪ ಸಭಾಂಗಣ, ಬೆಳಗ್ಗೆ 10ಕ್ಕೆ.

■ **ಮೈಸೂರು ವಿವಿ ಭೂಗೋಳಶಾಸ್ತ್ರ ಅಧ್ಯಯನ ವಿಭಾಗ, ಭೂಮಾಹಿತಿ ತಂತ್ರಜ್ಞಾನ ಕೇಂದ್ರ :** ಯುವ ಜನತೆ ಮತ್ತು ರಾಷ್ಟ್ರೀಯ ಏಕೀಕರಣ ಕುರಿತು ವಿಚಾರ ಸಂಕಿರಣ, ಉದ್ಘಾಟನೆ : ಮೈಸೂರು ವಿವಿ ಕುಲಪತಿ ಪ್ರೊ. ಎನ್.ಕೆ. ಲೋಕನಾಥ್, ಪ್ರಾಸ್ತಾವಿಕ ಭಾಷಣ : ವಿಶ್ರಾಂತ ಕುಲಪತಿ ಪ್ರೊ. ಸೈಯದ್ ಅಕೀಲ್ ಅಹಮದ್, ಮುಖ್ಯ ಅತಿಥಿಗಳು : ಮೈಸೂರು ವಿವಿ ಕುಲಸಚಿವರಾದ ಶ್ರೀಮತಿ ಎಂ.ಕೆ. ಸವಿತಾ, ಹೆಚ್.ಆರ್. ಕೇಶವ್, ಅಧ್ಯಕ್ಷತೆ : ಪ್ರೊ.ಬಿ. ಚಂದ್ರಶೇಖರ, ಸ್ಥಳ:ವಿಜ್ಞಾನ ಭವನ, ಬೆಳಗ್ಗೆ 10.30ಕ್ಕೆ.

■ **ಶಾರದಾ ವಿಲಾಸ ಫಾರ್ಮಸಿ ಕಾಲೇಜು :** ಧಾತ್ರ (ಡೋನಾಟಿಂಗ್ ಹ್ಯುಮಾನಿಟಿ ಅಂಡ್ ಟ್ರಾನ್ಸ್‌ಪ್ಲಾಂಟಿಂಗ್ ಹೋಪ್ ಫ್ರಮ್ ರಾಜೀವ್ ಗಾಂಧಿ ಯೂನಿವರ್ಸಿಟಿ ಆಫ್ ಹೆಲ್ತ್ ಸೈನ್ಸಸ್) ಕಾರ್ಯಕ್ರಮ, ಉದ್ಘಾಟನೆ : ಶಾರದಾ ವಿಲಾಸ ಶಿಕ್ಷಣ ಸಂಸ್ಥೆ ಅಧ್ಯಕ್ಷ ಡಾ. ಬಿ.ಎಂ. ಸುಬ್ರಾಯ, ಮುಖ್ಯ ಅತಿಥಿಗಳು : ಫಾರೂಖ್ ಅಕಾಡೆಮಿ ಆಫ್ ಮೆಡಿಕಲ್ ಎಜುಕೇಷನ್ ಆಸ್ಪತ್ರೆ ಪ್ರಿನ್ಸಿಪಾಲ್ ಡಾ. ಕಿರಣ್ ಎಂ. ನಾಯಕ್, ಗೌರವ ಕಾರ್ಯದರ್ಶಿ ಆರ್. ದಿನೇಶ್, ಡಾ. ರಾಜಾಪುರ ಪರಶುರಾಮ್, ಅಧ್ಯಕ್ಷತೆ : ಕಾಲೇಜು ಪ್ರಿನ್ಸಿಪಾಲ್ ಡಾ. ಹನುಮಂತಾಚಾರ್ ಜೋಶಿ, ಸ್ಥಳ: ಪ್ರೊ. ಎಸ್. ಚಿನ್ನಸ್ವಾಮಿ ಶೆಟ್ಟಿ ಸಭಾಂಗಣ, ಬೆಳಗ್ಗೆ 11ಕ್ಕೆ.

■ **ಶ್ರೀ ಪ್ರಸನ್ನ ನಂಜುಂಡೇಶ್ವರಸ್ವಾಮಿ ದೇವಸ್ಥಾನ, ಧಾರ್ಮಿಕ ದತ್ತಿ ಇಲಾಖೆ :** ಶ್ರೀ ಪ್ರಸನ್ನ ನಂಜುಂಡೇಶ್ವರ ಸ್ವಾಮಿಯವರ ಬ್ರಹ್ಮೋತ್ಸವ, ಶ್ರೀ ಮದ್ದಿವ್ಯ ರಥಾರೋಹಣ ಮಹೋತ್ಸವ, ರಾತ್ರಿ ಚಂದ್ರ ಮಂಡಲಾರೋಹಣ, ಸ್ಥಳ: ಶ್ರೀ ಪ್ರಸನ್ನ ನಂಜುಂಡೇಶ್ವರಸ್ವಾಮಿ ದೇವಸ್ಥಾನ, ಹಳೇ ಸಂತೇಪೇಟೆ.

■ **ಎಂಎಂಕೆ ಮತ್ತು ಎಸ್‌ಡಿಎಂ ಮಹಿಳಾ ಮಹಾವಿದ್ಯಾಲಯ :** ಎಂ.ಕಾಂ. ಪದವೀಧರರ ದಿನಾಚರಣೆ, ಅಧ್ಯಕ್ಷತೆ : ಕಾರ್ಯದರ್ಶಿ ಡಾ. ಎಸ್. ಸತೀಶ್‌ಚಂದ್ರ, ಮುಖ್ಯ ಅತಿಥಿಗಳು : ಮೈಸೂರು ವಿವಿ ಕುಲಸಚಿವ ಪ್ರೊ. ಎನ್. ನಾಗರಾಜ, ವಿದುಷಿ ಸೌಮ್ಯ ಶ್ರೀಧರ್ ಜೈನ್, ಪ್ರಿನ್ಸಿಪಾಲ್ ಪ್ರೊ. ನಯನಕುಮಾರಿ, ಪ್ರಿನ್ಸಿಪಾಲ್ ಪ್ರೊ. ಎನ್. ಭಾರತಿ, ಸ್ಥಳ: ಕಾಲೇಜು ಆವರಣ, ಮಧ್ಯಾಹ್ನ 2.30ಕ್ಕೆ.

■ **ಜೆಎಸ್‌ಎಸ್ ಮಹಿಳಾ ಕಾಲೇಜು:** ರಾಜ್ಯಮಟ್ಟದ ಸೈನ್ಸ್ ಫೆಸ್ಟ್, ಸೈನ್ಸ್ ರೆಸ್ಟೋರಮ್, ವಿಸ್ತಾರ–2026 ಸಮಾರೋಪ ಸಮಾರಂಭ, ಸಮಾರೋಪ ಭಾಷಣ : ಜಿಪಂ ಸಿಇಓ ಶ್ರೀಮತಿ ಕೆ.ಆರ್. ನಂದಿನಿ, ಅಧ್ಯಕ್ಷತೆ : ಕಾಲೇಜು ಅಭಿವೃದ್ಧಿ ಮಂಡಳಿ ನಿರ್ದೇಶಕ ಡಾ. ಕೆ. ಮಂಟೇಲಿಂಗು, ಬಹುಮಾನ ವಿತರಣೆ : ಸಹಾಯಕ ನಿರ್ದೇಶಕ ಬಿ. ನಿರಂಜನಮೂರ್ತಿ, ಉಪಸ್ಥಿತರು : ಕಾಲೇಜು ಪ್ರಿನ್ಸಿಪಾಲ್ ಡಾ. ರೇಚಣ್ಣ, ಸ್ಥಳ: ಕಾಲೇಜು ಆವರಣ, ಸಂಜೆ 4ಕ್ಕೆ.

■ **ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು ಮೈಸೂರು ನಗರ ಘಟಕ :** ಲಿಂಗೈಕ್ಯ ಕೆ.ಎಸ್. ನಾಗರತ್ನಮ್ಮನವರ ಸ್ಮರಣಾರ್ಥ ದತ್ತಿ ಕಾರ್ಯಕ್ರಮ, ಉದ್ಘಾಟನೆ : ಸಾಹಿತಿ ಡಾ. ಎಂ.ಎಸ್. ಶಶಿಕಲಾಗೌಡ, ಅಧ್ಯಕ್ಷತೆ : ಪರಿಷತ್ ಅಧ್ಯಕ್ಷ ಡಾ. ಜಯಪ್ಪ ಹೊನ್ನಾಳಿ, ಬಹುಮಾನ ವಿತರಣೆ : ಸಾಹುಕಾರ್ ಕಬ್ಬಳ್ಳಿ ಚನ್ನಬಸಪ್ಪ ವೀರಶೈವ ಆಶ್ರಮದ ಅಧ್ಯಕ್ಷ ಎಚ್.ಜಿ. ಗುರುಪ್ರಸಾದ್, ಸನ್ಮಾನಿತರು : ಶ್ರೀಮತಿ ಮಂಗಳಾ ಮುದ್ದುಮಾದಪ್ಪ, ನಗರ್ಲೆ ಶಿವಕುಮಾರ್, ಸ್ಥಳ: ಸಾಹುಕಾರ್ ಕಬ್ಬಳ್ಳಿ ಚನ್ನಬಸಪ್ಪ ವೀರಶೈವ ಆಶ್ರಮ, ಜೆಎಲ್‌ಬಿ ರಸ್ತೆ, ಸಂಜೆ 6ಕ್ಕೆ.

■ **ಜಗನ್ನಾಥ ಸೆಂಟರ್ ಫಾರ್ ಆರ್ಟ್ ಅಂಡ್ ಕಲ್ಚರ್ :** ಕಲಾ ಸಪ್ತಮಿ ವಾರದ ಸಾಂಸ್ಕೃತಿಕ ಕಾರ್ಯಕ್ರಮ, ದಿನೇಶ್ ಭಟ್, ನಾರಾಯಣ್ ಹೆಬ್ಬಾರ್, ಗ.ನಾ. ಭಟ್ ಡಾ. ಜಿ.ಎಲ್. ಹೆಗ್ಡೆ ಮತ್ತು ಪ್ರಶಾಂತ್ ಬೆಂಕಟ್‌ವಲ್ಲಿ ಅವರಿಂದ ತಾಳ ಮದ್ದಳೆ ಭಕ್ತ ಶಿರೋಮಣಿ ಸುಧನ್ವಾ, ಸ್ಥಳ: ಜಗನ್ನಾಥ ಸೆಂಟರ್ ಫಾರ್ ಆರ್ಟ್ ಅಂಡ್ ಕಲ್ಚರ್, ವಿಜಯನಗರ, ಸಂಜೆ 6 ರಿಂದ.

■ **ರೋಟರಿ ಮೈಸೂರು ಮಿಡ್‌ಟೌನ್, ಶ್ರೀಸೈನಿಕ್ ಫೌಂಡೇಷನ್ :** ರೋಟರಿ ಮಿಡ್‌ಟೌನ್ ಸೈನಿಕ್ ದೇಶ್ ರತ್ನ ಪ್ರಶಸ್ತಿ ಪ್ರದಾನ ಸಮಾರಂಭ, ಮುಖ್ಯ ಅತಿಥಿಗಳು : ಏರ್ ಕಮೋಡೋರ್ (ನಿವೃತ್ತ) ಆರ್.ಎನ್. ಜಯಸಿಂಹ, ಪ್ರಶಸ್ತಿ ಪುರಸ್ಕೃತರು : ಮೇಜರ್ ಭರತ್ ಯೋಗೇಂದ್ರ, ಉಪಸ್ಥಿತರು : ಅಧ್ಯಕ್ಷ ಕೆ.ಎಲ್. ರಾಕೇಶ್ ಬಾಬು, ಕಾರ್ಯದರ್ಶಿ ಕೆ.ವಿ. ಭಾಸ್ಕರ್ ಸೈನಿಕ್, ಶ್ರೀಸೈನಿಕ್ ಫೌಂಡೇಷನ್ ಜಿ. ಮಧುರಾ, ಸ್ಥಳ: ಆರ್‌ಸಿಎಲ್ ಸಭಾಂಗಣ, ಜೆಎಲ್‌ಬಿ ರಸ್ತೆ, ಸಂಜೆ 6.30ಕ್ಕೆ.

■ **ಅಭಿಯಂತರರು :** ರಾಷ್ಟ್ರೀಯ ರಂಗ ಉತ್ಸವ, ಸಂಜೆ 6.30ಕ್ಕೆ ಉದ್ಘಾಟನೆ : ಕರ್ನಾಟಕ ಜಾನಪದ ಪರಿಷತ್ ಅಧ್ಯಕ್ಷ ಡಾ. ಹಿ.ಚಿ. ಬೋರಲಿಂಗಯ್ಯ, ಮುಖ್ಯ ಅತಿಥಿಗಳು : ರಂಗ ಸಮಾಜ ಸದಸ್ಯ ಶಶಿಧರ್ ಬರಿಗಣ್, ಕನ್ನಡ ಮತ್ತು ಸಂಸ್ಕೃತಿ ಜಂಟಿ ನಿರ್ದೇಶಕ ವಿ.ಎನ್. ಮಲ್ಲಿಕಾರ್ಜುನಸ್ವಾಮಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಡಾ. ಎಂ.ಡಿ. ಸುದರ್ಶನ್, ಸಂಜೆ 7ಕ್ಕೆ ಕರಾವಳಿಯ ನಿರ್ದಿಗಂತ ತಂಡದಿಂದ ಲೋಹಿಯಾ ಅವರ ಲೇಖನಗಳ ಆಧಾರಿತ ರಾಮ ಕೃಷ್ಣ ಶಿವ (ಕನ್ನಡ) ನಾಟಕ ಪ್ರದರ್ಶನ, ನಿರ್ದೇಶನ : ಗಣೇಶ್ ಮಂದಾರ್ತಿ, ಸ್ಥಳ: ಕಿರು ರಂಗಮಂದಿರ.

ನಂಜನಗೂಡಿನಲ್ಲಿಂದು

■ ಶ್ರೀ ಕಳಲೆ ಕೈವಲ್ಯಾದೇವಿ ಅಮ್ಮನವರ ದೇವಸ್ಥಾನ : ಶತಮಾನೋತ್ಸವ ಮಡೆ ಉತ್ಸವ, ಪೂಜಾ ಕೈಂಕರ್ಯಗಳು, ಶ್ರೀ ಅಮ್ಮನವರಿಗೆ ಸಂಜೆ 5.30ರ ನಂತರ ಅಭಿಷೇಕ, ಮೈಸೂರಿನ ವಿದ್ವಾನ್ ವಿ. ಪ್ರಕಾಶ್ ಮತ್ತು ವೃಂದದವರಿಂದ ನಾದಸ್ವರ ವಾದನ, ಶ್ರೀ ಅಮ್ಮನವರ ಉತ್ಸವ, ಶತಮಾನೋತ್ಸವದ ಮಡೆ ಸೇವೆ ಆಚರಣೆ, ಸ್ಥಳ: ಶ್ರೀ ಕಳಲೆ ಕೈವಲ್ಯಾದೇವಿ ಅಮ್ಮನವರ ದೇವಸ್ಥಾನ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ಅಂಚೆ ದನಿ ಪಾರಿವಾಳದಿಂದ ಡ್ರೋನ್ ವರೆಗೆ ಅಂಚೆ ಪಯಣ – ಬಾನುಲಿ ಸರಣಿ, ಪ್ರಸ್ತುತಿ–ಡಾ. ಅಮ್ಮ ಸಂದ್ರ ಸುರೇಶ್, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ–ಪಿ. ಸುರಭಿ ಹಾಗೂ ಡಿ. ಪುರುಷೋತ್ತಮ್, ವ್ಯಾಖ್ಯಾನ–ಕೆ.ಎಲ್. ಪದ್ಮಿನಿ ಹೆಗಡೆ, 6.50 ರೈತರಿಗೆ ಸಲಹೆ, 7.15 ಪ್ರಾಯೋಜಿತ ಕಾರ್ಯಕ್ರಮ ಲಿಡ್ಕರ್ ನಂಬಿಕೆ ನಿರಂತರ, ಪ್ರಾಯೋಜಕರು–ಡಾ. ಬಾಬು ಜಗಜೀವನ್ ರಾಮ್ ಚರ್ಮೋದ್ಯಮಗಳ ಅಭಿವೃದ್ಧಿ ನಿಗಮ ನಿಯಮಿತ, ಬೆಂಗಳೂರು, 9.05 ಕ್ಯಾನ್ಸರ್ ಕುರಿತ ಮಿಥ್ಯೆಗಳು. ಪ್ರಾಯೋಜಕರು–ಇಂಡಿಯನ್ ಕ್ಯಾನ್ಸರ್ ಸೊಸೈಟಿ, ಕರ್ನಾಟಕ ಛಾಪ್ಟರ್, 9.10 ಯುವವಾಣಿ : ಪರೀಕ್ಷೆಗೆ ಸಿದ್ಧರಾಗೋಣ ಬನ್ನಿ ದ್ವಿತೀಯ ಪಿ.ಯು.ಸಿ ಪರೀಕ್ಷಾ ಸಿದ್ಧತೆ ಕುರಿತು ಬಾನುಲಿ ಸರಣಿ ಕಾರ್ಯಕ್ರಮ. ವಿಷಯ–ಗಣಿತ, ಭಾಗವಹಿಸುತ್ತಾರೆ–ಮೈಸೂರಿನ ರಾಮಕೃಷ್ಣ ವಿದ್ಯಾಶಾಲೆಯ ಉಪನ್ಯಾಸಕರಾದ ಮಹದೇವ ಪ್ರಭು.ಪಿ.ಎಸ್, ಪ್ರಸ್ತುತಿ–ದಿಗ್ವಿಜಯ್.ಬಿ., 10.00 ಹಿಂದೂಸ್ಥಾನಿ ಶಾಸ್ತ್ರೀಯ ಸಂಗೀತ–ರವೀಂದ್ರ ಸುರ್ಗಾವಿ – ಹಾಡುಗಾರಿಕೆ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ ಹಾಗೂ ಪತ್ರೋತ್ತರ

ಮಧ್ಯಾಹ್ನ: 12.05 ವನಿತಾ ವಿಹಾರ, 12.35 ದೇವರನಾಮ, 12.45 ಜನಪದ ಸಂಗೀತ, 1.00 ಪ್ರಗತಿ ಪಥ – ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಕುರಿತು ಸರಣಿ, 1.20 ಭಾವಗೀತೆಗಳು, 2.40 ಚಿತ್ರಗೀತೆಗಳು, 3.00 ಕರ್ನಾಟಕ ಶಾಸ್ತ್ರೀಯ ಸಂಗೀತ, ಹೆಚ್.ಎಸ್. ರಮೇಶ್–ವೀಣಾ ವಾದನ, 4.00 ಮಹಿಳಾರಂಗ–ನಾಟಕ, 4.30 ಹಿಂದಿ ಚಿತ್ರಗೀತೆಗಳು, 4.45 ಹಿಂದಿ ಪಾಠ, ಪ್ರಸ್ತುತಿ–ಶಾಂತಾ ಕಿಣಿ, 5.00 ಕಟ್ಟೋಣ ಬನ್ನಿ ನಿರ್ಮಾಣ ತಾಂತ್ರಿಕತೆಗಳನ್ನು ಕುರಿತ ಪ್ರಾಯೋಜಿತ ಬಾನುಲಿ ಸರಣಿ. ಪ್ರಾಯೋಜಕರು–ಅಸೋಸಿಯೇಷನ್ ಆಫ್ ಕನ್ಸಲ್ಟಿಂಗ್ ಸಿವಿಲ್ ಇಂಜಿನಿಯರ್ಸ್ ಇಂಡಿಯಾ, ಮೈಸೂರು ಛಾಪ್ಟರ್, ವಿಷಯ–ಮನೆಗೆ ಬಣ್ಣ ಹೊಡೆಯುವ ವಿವಿಧ ನಮೂನೆಗಳು ಬಳಸುವ ವಿಧಾನ ಹಾಗೂ ಅದರ ಪ್ರಾಮುಖ್ಯತೆ ಭಾಗವಹಿಸುತ್ತಾರೆ ಬಣ್ಣಗಳ ವಿಚಾರ ಕುರಿತ ತಾಂತ್ರಿಕ ಸಲಹೆಗಾರರಾದ ಪ್ರವೀಣ್ ಪಾಲ್ ಹಾಗೂ ಅನುಭವಿ ಕಟ್ಟಡ ನಿರ್ಮಾಣಕಾರ ಶಶಿರಾಜ್. ಪ್ರಸ್ತುತಿ–ಎನ್.ಕೇಶವಮೂರ್ತಿ, 5.30 ಚಿತ್ರಗೀತೆಗಳು, 6.50 ಕೃಷಿರಂಗ–ಕೃಷಿಯಲ್ಲಿ ಕೃತಕ ಬುದ್ಧಿಮತ್ತೆ ಬಳಕೆ ಹಾಗೂ ಕೃಷಿ ನವೋದ್ಯಮಗಳನ್ನು ಕುರಿತು ಮಾತನಾಡುತ್ತಾರೆ ಮಂಡ್ಯದ ಕೃಷಿ ವಿಜ್ಞಾನಗಳ ವಿಶ್ವವಿದ್ಯಾನಿಲಯದ ವಿಶೇಷ ಅಧಿಕಾರಿ ಡಾ. ಕೆ.ಎಂ. ಹರಿಣಿಕುಮಾರ್, 7.45 ನಕ್ಷತ್ರ ಲೋಕ–ಸಿನಿ ಸೆಲೆಬ್ರಿಟಿಗಳೊಂದಿಗೆ ಮಾತುಕತೆ, 8.00 ಮಕ್ಕಳ ಮಂಟಪ ಪರೀಕ್ಷೆಗೆ ಸಿದ್ಧರಾಗೋಣ ಬನ್ನಿ ಎಸ್.ಎಸ್.ಎಲ್.ಸಿ ಪರೀಕ್ಷಾ ಸಿದ್ಧತೆ ಕುರಿತು ಬಾನುಲಿ ಸರಣಿ ಕಾರ್ಯಕ್ರಮ, ವಿಷಯ–ಜೀವಶಾಸ್ತ್ರ, ಭಾಗವಹಿಸುವವರು ಡಿ.ಎಂ.ಜಿ. ಹಳ್ಳಿಯ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಶಿಕ್ಷಕರಾದ ಸೌಮ್ಯರಾಧ್ಯ ಇವರೊಂದಿಗೆ ಭಾಗವಹಿಸುತ್ತಾರೆ–ದಿಗ್ವಿಜಯ್.ಬಿ., 9.30 ಕ್ರೀಡಾ ಲೋಕ, 10.00 ಆಕಾಶವಾಣಿ ಸಂಗೀತ ಸಮ್ಮೇಳನ – ಭೈಗುರ್ಮಿತ್ ಸಿಂಗ್–ಶಾಬಾದ್ ಕೀರ್ತನ, ಎಂ.ಎಸ್. ಗ್ಲೋರಿ ಭಾವ– ಜನಪದ ಸಂಗೀತ

ಮೈಸೂರು ಮಿತ್ರ


ತಿ.ನರಸೀಪುರದ ಕೆಎಸ್‌ಐಸಿ ಆವರಣದಲ್ಲಿ ಕ್ರೀಡಾಂಗಣ ನಿರ್ಮಾಣಕ್ಕೆ ವ್ಯಾಪಕ ವಿರೋಧ

ಕ್ರೀಡಾಂಗಣ ಯೋಜನೆ ಕೈಬಿಡದಿದ್ದರೆ ಎಂಜಿಪಿಯಿಂದ ಕಾನೂನು ಹೋರಾಟದ ಎಚ್ಚರಿಕೆ

- ಮೊದಲು ಸಿಎಂ, ಡಿಸಿಎಂ ಭೇಟಿ ಮಾಡಿ ವಸ್ತುಸ್ಥಿತಿ ಮನವರಿಕೆ
- ಕ್ರೀಡಾಂಗಣ ನಿರ್ಮಿಸಿದರೆ ಕೆಎಸ್‌ಐಸಿ ನಾಶವಾಗಿ ಚರಿತ್ರೆ ಪುಟ ಸೇರಲಿದೆ
- ೫೦೦ ಕ್ಕೂ ಹೆಚ್ಚು ಮರ, ಅಪಾರ ಪ್ರಾಣಿ-ಪಕ್ಷಿ ಸಂಕುಲದ ಆಶ್ರಯ ತಾಣ



ಮೈಸೂರಿನ ಪತ್ರಕರ್ತರ ಭವನದಲ್ಲಿ ಮಂಗಳವಾರ ಮೈಸೂರು ಗ್ರಾಹಕ ಪರಿಷತ್ ಸಂಸ್ಥಾಪಕ ಅಧ್ಯಕ್ಷ ಡಾ.ಭಾಮಿ ವಿ.ಶೆಣೈ ಮಾತನಾಡಿದರು. ಪರಿಷತ್ ಕಾರ್ಯಾಧ್ಯಕ್ಷ ಎಸ್.ಕೆ.ದಿನೇಶ್, ಪ್ರಭಾ ನಂದೀಶ್, ಹಿರಿಯ ವಕೀಲ ಅರುಣ್ ಕುಮಾರ್ ಹಾಗೂ ಪ್ರಜ್ಞಾ ಅವರನ್ನು ಚಿತ್ರದಲ್ಲಿ ಕಾಣಬಹುದು.



ಕೆಎಸ್‌ಐಸಿ ಆವರಣದ ಒಂದು ಮರದ ಮೌಲ್ಯ ಒಂದು ಕೋಟಿ

ತಿ.ನರಸೀಪುರದ ಭೈರಾಪುರದ ಕೆಎಸ್‌ಐಸಿ ಆವರಣದಲ್ಲಿ ನೂರಾರು ಮರಗಳಿದ್ದು, ಅಂತರರಾಷ್ಟ್ರೀಯ ವರದಿಗಳ ಪ್ರಕಾರ ಇಲ್ಲಿರುವ ಮರಗಳ ಪರಿಸರ ಪ್ರಯೋಜನವನ್ನು ಪರಿಗಣಿಸುವುದಾದರೆ ನೂರಾರು ಕೋಟಿಯಾಗುತ್ತದೆ ಎಂದು ಮೈಸೂರು ಗ್ರಾಹಕ ಪರಿಷತ್ ಸಂಸ್ಥಾಪಕ ಅಧ್ಯಕ್ಷ ಡಾ.ಭಾಮಿ ವಿ. ಶೆಣೈ ತಿಳಿಸಿದರು.

ಒಂದು ಮರದ ಮೌಲ್ಯ ಎಷ್ಟಾಗಬಹುದೆಂದು ಅರಿಯಲು ಸುಪ್ರೀಂಕೋರ್ಟ್ 2022 ರಲ್ಲಿ ಪರಿಸರ ತಜ್ಞರ ಸಮಿತಿ ರಚನೆ ಮಾಡಿತು. ಸಮಿತಿ ಮರವೊಂದರ ಬಳಕೆ ಸೇರಿದಂತೆ ಪರಿಸರ ಪ್ರಯೋಜನಗಳನ್ನು ಲೆಕ್ಕ ಮಾಡಿ ಒಂದು ಮರಕ್ಕೆ ಒಂದು ಕೋಟಿಯಾಗಲಿದೆ ಎಂದು ನ್ಯಾಯಾಲಯಕ್ಕೆ ವರದಿ ನೀಡಿತು ಎಂದರು.

ಅಂತರರಾಷ್ಟ್ರೀಯ ವರದಿಗಳನ್ನು ಉಲ್ಲೇಖಿಸುವುದಾದರೆ ನೂರು ವರ್ಷಗಳ ಒಂದು ಮರದಿಂದ ಪರಿಸರ ಪ್ರಯೋಜನ ಪರಿಗಣಿಸುವುದಾದರೆ 9 ಕೋಟಿಯಾಗುತ್ತದೆ ಎಂದು ಡಾ.ಭಾಮಿ ವಿ.ಶೆಣೈ ತಿಳಿಸಿದರು. ಕೆಎಸ್‌ಐಸಿ ಆವರಣದಲ್ಲಿ ನೂರಾರು ಮರಗಳಿದ್ದು, ಅದರಿಂದ ಪರಿಸರಕ್ಕೆ ಪೂರಕ ಪ್ರಯೋಜನವಾಗಲಿದೆ. ಸುತ್ತಮುತ್ತಲಿನ ತಾಪಮಾನ ಕಡಿಮೆ ಮಾಡಲಿವೆ. ನೂರಾರು ಪಕ್ಷಿ ಸಂಕುಲಕ್ಕೆ ಆಶ್ರಯ ನೀಡಲಿವೆ. ಇದರ ಸೂಕ್ಷ್ಮತೆಯನ್ನು ಸರ್ಕಾರ ಅರಿತು ಕ್ರೀಡಾಂಗಣ ಯೋಜನೆಯನ್ನು ಕೈ ಬಿಡಬೇಕು ಎಂದು ಆಗ್ರಹಿಸಿದರು.

ಇಲ್ಲಿ ಏನಾದರೂ ಕ್ರೀಡಾಂಗಣ ನಿರ್ಮಾಣ ಮಾಡಿದರೆ ಕೆಎಸ್‌ಐಸಿ ನಾಶವಾಗಿ, ಚರಿತ್ರೆಯ ಪುಟ ಸೇರಲಿದೆ. ಈ ಹಿನ್ನೆಲೆಯಲ್ಲಿ ಇದನ್ನು ಉಳಿಸಿಕೊಳ್ಳುವ ನಿಟ್ಟಿನಲ್ಲಿ ಕಾನೂನು ಹೋರಾಟ ಮಾಡುತ್ತೇವೆ ಎಂದು ಡಾ.ಭಾಮಿ ವಿ.ಶೆಣೈ ಸರ್ಕಾರವನ್ನು ಎಚ್ಚರಿಸಿದರು. ಮೈಸೂರು ಗ್ರಾಹಕ ಪರಿಷತ್ ಕಾರ್ಯದರ್ಶಿ ಪ್ರಭಾ ನಂದೀಶ್, ವಕೀಲೆ ಪ್ರಜ್ಞಾ ಪತ್ರಿಕಾಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

ಕ್ರೀಡಾಂಗಣ ಯೋಜನೆ ಕೈ ಬಿಡದಿದ್ದರೆ ಹೈಕೋರ್ಟ್‌ನಲ್ಲಿ ಪಿಐಎಲ್

ತಿ.ನರಸೀಪುರದ ಭೈರಾಪುರದಲ್ಲಿರುವ ಕೆಎಸ್‌ಐಸಿ ಆವರಣದಲ್ಲಿ ಕ್ರೀಡಾಂಗಣ ನಿರ್ಮಾಣ ಮಾಡಿದರೆ ಹೈಕೋರ್ಟ್‌ನಲ್ಲಿ ಪಿಐಎಲ್ ಸಲ್ಲಿಸಲಾಗುವುದು ಎಂದು ಹಿರಿಯ ವಕೀಲ ಅರುಣ್ ಕುಮಾರ್ ಸರ್ಕಾರವನ್ನು ಎಚ್ಚರಿಸಿದರು. ಮೈಸೂರು ರೇಷ್ಮೆ ಸೀರೆಗೆ ಜಿಐ (ಭೌಗೋಳಿಕ ಸೂಚಕ) ಇದೆ. ಮೈಸೂರು ಮಾತ್ರವಲ್ಲದೆ ಕರ್ನಾಟಕದ ಹೆಸರನ್ನು ವಿಶ್ವ ಮಟ್ಟದಲ್ಲಿ ಸಾರುವಂತಹ ಮೈಸೂರು ರೇಷ್ಮೆ ಸೀರೆ ಉತ್ಪಾದನಾ ಘಟಕವನ್ನು ನಾಶ ಮಾಡುವ ತೀರ್ಮಾನವನ್ನು ಸರ್ಕಾರ ಕೈಗೊಂಡಿದೆ ಎಂದು ಆರೋಪಿಸಿದರು.

ಮೈಸೂರು ರೇಷ್ಮೆ ಸೀರೆ ಉತ್ಪಾದನೆ ಮಾಡುವ ಮೈಸೂರಿನ ಮಾನಂದವಾಡಿ ರಸ್ತೆಯ ಕೆಎಸ್‌ಐಸಿ ಹಾಗೂ ಚನ್ನಪಟ್ಟಣದ ಕೆಎಸ್‌ಐಸಿಗೆ ತಿ.ನರಸೀಪುರದ ಕೆಎಸ್‌ಐಸಿ ಫಿಲೇಚರ್ ಫ್ಯಾಕ್ಟರಿ ತಾಯಿ ಸ್ಥಾನದಲ್ಲಿದೆ. ಇಲ್ಲಿ ಪ್ರತಿ ದಿನ 2,500 ಕೆ.ಜಿ.ರೇಷ್ಮೆ ಗೂಡನ್ನು ಬೇಯಿಸಿ 300 ಕೆ.ಜಿ. ರೇಷ್ಮೆ ನೂಲು ತೆಗೆಯಲಾಗುತ್ತದೆ. ಇದನ್ನು ರೇಷ್ಮೆ ಸೀರೆ ನೇಯ್ಗೆ ಮಾಡುವ ಮೈಸೂರು ಹಾಗೂ ಚೆನ್ನಪಟ್ಟಣದ ಕೆಎಸ್‌ಐಸಿಗೆ ಕಳುಹಿಸಲಾಗುತ್ತಿದೆ ಎಂದರು.

ರೇಷ್ಮೆ ಗೂಡು ಬೇಯಿಸಲು ಪ್ರತಿ ದಿನ 7 ಟನ್ ಕಲ್ಲಿದ್ದಲು ಬಳಕೆ ಮಾಡಲಾಗುತ್ತದೆ. ಕಲ್ಲಿದ್ದಲಿನ ತಾಪಮಾನವನ್ನು ಇಲ್ಲಿರುವ ನೂರಾರು ಮರಗಳು ಹೀರಿಕೊಳ್ಳುತ್ತವೆ. ಇದರಿಂದ ಸುತ್ತಮುತ್ತಲಿನ ಪರಿಸರದ ಮೇಲೆ ಯಾವುದೇ ದುಷ್ಪರಿಣಾಮ ಬೀರುವುದಿಲ್ಲ. ಇಲ್ಲಿನ ಪರಿಸರದ ಮಹತ್ವ ತಿಳಿಯದ ಸರ್ಕಾರ ಮರಗಳಿಗೆ ಕೊಡಲಿ ಪೆಟ್ಟು ನೀಡಲು ಮುಂದಾಗಿದೆ ಎಂದು ಅರುಣ್ ಕುಮಾರ್ ಆಪಾದಿಸಿದರು.

ನೂರಾರು ಮರಗಳ ತಾಣವಾಗಿರುವ ಇದು ಬಫರ್ ಝೋನ್ ಆಗಿದ್ದು, ಇಲ್ಲಿ ಯಾವುದೇ ಅಭಿವೃದ್ಧಿ ಕೈಗೊಳ್ಳುವಂತಿಲ್ಲ. ಸರ್ಕಾರ ಮಾಡಿದ ಈ ನಿರ್ಧಾರವನ್ನು ಸರ್ಕಾರವೇ ಉಲ್ಲಂಘನೆ ಮಾಡುತ್ತಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಇಂತಹ ಅಪರೂಪದ ಪರಿಸರ ತಾಣದ ಸಣ್ಣ ಜಾಗವನ್ನು ಸರ್ಕಾರ ಮುಟ್ಟಬಾರದು. ಈ ಹಿನ್ನೆಲೆಯಲ್ಲಿ ಮೊದಲು ಈ ವಿಚಾರವಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಅಲ್ಲಿನ ಶಾಸಕರೂ ಆದ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಅವರನ್ನು ಭೇಟಿ ಮಾಡಿ ಮನವರಿಕೆ ಮಾಡಿಕೊಡುತ್ತೇವೆ. ಈ ಮೂಲಕ ಕ್ರೀಡಾಂಗಣ ನಿರ್ಮಾಣ ಯೋಜನೆ ಕೈಗೆತ್ತಿಕೊಳ್ಳಬಾರದೆಂದು ಮನವಿ ಮಾಡುತ್ತೇವೆ ಎಂದರು.

ಇಲ್ಲಿ ಕ್ರೀಡಾಂಗಣ ನಿರ್ಮಾಣ, ಟೆಂಡರ್ ಸೇರಿದಂತೆ ಇತರೆ ಸ್ವ ಇಚ್ಛಾಸಕ್ತಿ ಇದೆ. ಆದರೆ, ಇದು ನಮಗೆ ಸಂಬಂಧಿಸದ ವಿಚಾರ, ನಮ್ಮ ಒಕ್ಕೊರಲಿನ ಮನವಿ ಎಂದರೆ ಅಲ್ಲಿ ಕ್ರೀಡಾಂಗಣ ನಿರ್ಮಾಣ ಮಾಡಬಾರದೆಂಬುದು ಮಾತ್ರ ಎಂದು ಹೇಳಿದರು.

ಒಂದು ವೇಳೆ ನಮ್ಮ ಮನವಿಗೆ ಸ್ಪಂದಿಸದೆ ಕ್ರೀಡಾಂಗಣ ನಿರ್ಮಾಣ ಮಾಡಿಯೇ ಸಿದ್ಧ ಎಂದು ಸರ್ಕಾರ ತನ್ನ ನಿಲುವು ಸ್ಪಷ್ಟಪಡಿಸಿದರೆ ಇದರ ವಿರುದ್ಧ ಅನಿವಾರ್ಯವಾಗಿ ನಾವು ಕಾನೂನು ಹೋರಾಟ ರೂಪಿಸುತ್ತೇವೆ. ಸರ್ಕಾರದ ನಿರ್ಧಾರ ಪ್ರಶ್ನಿಸಿ ಹೈಕೋರ್ಟ್‌ನಲ್ಲಿ ಪಿಐಎಲ್ ಸಲ್ಲಿಸುತ್ತೇವೆ. ಈ ಮೂಲಕ ಹೋರಾಟವನ್ನು ತಾರ್ಕಿಕ ಅಂತ್ಯಕ್ಕೆ ಕೊಂಡೊಯ್ದು ಕ್ರೀಡಾಂಗಣ ಯೋಜನೆ ರದ್ದುಕೊಳಿಸುತ್ತೇವೆ ಎಂದು ಅರುಣ್‌ಕುಮಾರ್ ತಿಳಿಸಿದರು.

ಮೈಸೂರು, ಫೆ.24(ಬಿಎಲ್‌ಯು)– ಮೈಸೂರಿನ ತಿ.ನರಸೀಪುರದ ಭೈರಾಪುರದಲ್ಲಿರುವ ಕೆಎಸ್‌ಐಸಿ (ಕರ್ನಾಟಕ ಸಿಲ್ಕ್ ಇಂಡಸ್ಟ್ರೀಸ್ ಕಾರ್ಪೊರೇಷನ್ ಲಿಮಿಟೆಡ್) ಫಿಲೇಚರ್ ಫ್ಯಾಕ್ಟರಿ ಆವರಣದಲ್ಲಿ ಸರ್ಕಾರ ನಿರ್ಮಿಸಲುದ್ದೇಶಿಸಿರುವ ಕ್ರೀಡಾಂಗಣ ಹೊಸ ವಿವಾದ ಹುಟ್ಟು ಹಾಕಿದೆ. ಮರಗಳ ಮಾರಣ ಹೋಮದೊಂದಿಗೆ ಪರಿಸರ ನಾಶ ಮಾಡಿ, ಕ್ರೀಡಾಂಗಣ ನಿರ್ಮಾಣ ಮಾಡಲು ಬಿಡುವುದಿಲ್ಲ ಎಂದು ಗಟ್ಟಿ ಧ್ವನಿ ಮೊಳಗಿಸಿರುವ ಮೈಸೂರು ಗ್ರಾಹಕ ಪರಿಷತ್ (ಎಂಜಿಪಿ), ಇದರ ವಿರುದ್ಧ ಹೈಕೋರ್ಟ್‌ನಲ್ಲಿ ಪಿಐಎಲ್ (ಸಾರ್ವಜನಿಕ ಹಿತಾಸಕ್ತಿ ಮೊಕದ್ದಮೆ) ದಾಖಲಿಸುವುದಾಗಿ ಎಚ್ಚರಿಸಿದೆ.

ಮೈಸೂರಿನ ಪತ್ರಕರ್ತ ಭವನದಲ್ಲಿ ಇಂದು ಈ ಸಂಬಂಧ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಮೈಸೂರು ಗ್ರಾಹಕ ಪರಿಷತ್ ಕಾರ್ಯಾಧ್ಯಕ್ಷ ಎಸ್.ಕೆ.ದಿನೇಶ್, ಕ್ರೀಡಾಂಗಣ ನಿರ್ಮಾಣಕ್ಕೆ ನಮ್ಮ ವಿರೋಧವಿಲ್ಲ. ಆದರೆ ಕೆಎಸ್‌ಐಸಿ ಆವರಣದಲ್ಲಿ ಕ್ರೀಡಾಂಗಣ ನಿರ್ಮಿಸಬಾರದು ಎಂದು ಆಗ್ರಹಿಸಿದರು.

ತಿ.ನರಸೀಪುರದ ಭೈರಾಪುರದಲ್ಲಿ 12 ಎಕರೆ ವಿಶಾಲವಾದ ಪ್ರದೇಶವಿದ್ದು, 500 ಕ್ಕೂ ಹೆಚ್ಚು ಮರಗಳಿವೆ. ಅಪಾರ ಪ್ರಾಣಿ–ಪಕ್ಷಿ ಸಂಕುಲವಿದೆ. ಇಂತಹ ಪರಿಸರದಲ್ಲಿ ಕ್ರೀಡಾಂಗಣ ನಿರ್ಮಾಣ ಮಾಡಿದರೆ ನೂರಾರು ಮರಗಳಿಗೆ ಕೊಡಲಿ ಪೆಟ್ಟು ಬೀಳಲಿದೆ. ಈ ಮೂಲಕ ಇಲ್ಲಿನ ಪರಿಸರವನ್ನೆ ನಾಶ ಮಾಡಿದಂತಾಗುತ್ತದೆ ಎಂದು ದಿನೇಶ್ ಆತಂಕ ವ್ಯಕ್ತಪಡಿಸಿದರು.

ಇಲ್ಲಿ ಕ್ರೀಡಾಂಗಣ ನಿರ್ಮಾಣ ಮಾಡುವ ಸ್ಥಳೀಯರ ಅಭಿಪ್ರಾಯವನ್ನು ಪಡೆಯದೆ ಏಕಪಕ್ಷೀಯವಾಗಿ ಸರ್ಕಾರ ತನ್ನ ನಿರ್ಧಾರ ಪ್ರಕಟಿಸಿದೆ. ಕ್ರೀಡಾಂಗಣ ನಿರ್ಮಾಣ ಮಾಡಿದರೆ ಏನೆಲ್ಲಾ ತೊಂದರೆ ಆಗುತ್ತದೆ ಎಂಬ ಕನಿಷ್ಠ ಆಲೋಚನೆ ಕೂಡ ಮಾಡಿಲ್ಲ. ಆದ ಕಾರಣ ಇಲ್ಲಿ ಕ್ರೀಡಾಂಗಣ ನಿರ್ಮಾಣ ಮಾಡಬಾರದು ಎಂದು ಆಗ್ರಹಿಸಿದರು.

ಮರಗಳಿಲ್ಲದ ಖಾಲಿ ಜಾಗದಲ್ಲಿ ಕಾರ್ಖಾನೆಯನ್ನು ವಿಸ್ತರಣೆ ಮಾಡಬೇಕು. ಈ ಮೂಲಕ ಕನಿಷ್ಠ 500 ಜನರಿಗೆ ಉದ್ಯೋಗ ದೊರೆಯುತ್ತದೆ. ಅಲ್ಲದೆ ಭಾರೀ ಬೇಡಿಕೆ ಇರುವ ಮೈಸೂರು ರೇಷ್ಮೆ ಸೀರೆ ಪೂರೈಸಲು ಇದರಿಂದ ಅನುಕೂಲವಾಗುತ್ತದೆ ಎಂದು ದಿನೇಶ್ ಅಭಿಪ್ರಾಯಪಟ್ಟರು.

ಭುಜಂಗೇಶ್ವರ ಸ್ವಾಮಿ ದೇವಾಲಯ, ಮಹಾದ್ವಾರ ಉದ್ಘಾಟಿಸಿದ ಸುತ್ತೂರು ಶ್ರೀಗಳು



ಶ್ರೀ ಭುಜಂಗೇಶ್ವರ ಸ್ವಾಮಿ ದೇವಾಲಯ ನವೀಕರಿಸಿದ ಜೆಡಿಎಸ್ ಮುಖಂಡ ಕೋಟೆಹುಂಡಿ ಮಹದೇವು, ಸಮಾಜ ಸೇವಕ ಕುಮಾರಸ್ವಾಮಿ ಅವರನ್ನು ಶಾಸಕ ಜಿ.ಟಿ.ದೇವೇಗೌಡ ಸನ್ಮಾನಿಸಿದರು.

ಮೈಸೂರು, ಫೆ.24– ತಾಲೂಕಿನ ಜಯಪುರ ಹೋಬಳಿ ತಳೂರು ಗ್ರಾಮದಲ್ಲಿ ನೂತನವಾಗಿ ನಿರ್ಮಿಸಿರುವ ಭುಜಂಗೇಶ್ವರ ಸ್ವಾಮಿ ದೇವಾಲಯ ಮತ್ತು ಭುಜಂಗೇಶ್ವರ ಸ್ವಾಮಿ ಮಹಾದ್ವಾರವನ್ನು, ಸುತ್ತೂರು ಮಠದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಸೋಮವಾರ ಉದ್ಘಾಟಿಸಿದರು.

ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರದ ಶಾಸಕ ಜಿ.ಟಿ ದೇವೇಗೌಡರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಶಾಸಕ ಜಿ.ಡಿ ಹರೀಶ್‌ಗೌಡರು ಮುಖ್ಯಅತಿಥಿಗಳಾಗಿ ಭಾಗವಹಿಸಿದ್ದರು. ಭಾನುವಾರ ರಾತ್ರಿ ನೂತನ ದೇವಾಲಯದಲ್ಲಿ ಹೋಮ–ಹವನ ನಡೆಸಲಾಯಿತು. ಸೋಮವಾರ ಮುಂಜಾನೆ ಭುಜಂಗೇಶ್ವರ ಸ್ವಾಮಿಗೆ ಮಹಾ ಮಂಗಳಾರತಿ ನೆರವೇರಿಸಲಾಯಿತು.

ಭುಜಂಗೇಶ್ವರ ಸ್ವಾಮಿ ದೇವಾಲಯ ಮತ್ತು ಭುಜಂಗೇಶ್ವರ ಸ್ವಾಮಿ ಮಹಾದ್ವಾರ ನಿರ್ಮಾಣಕ್ಕಾಗಿ ಶ್ರೀನಿಧಿ ಡೆವಲಪರ್ಸ್ ಮಾಲೀಕ, ಎಪಿಎಂಸಿ ಮಾಜಿ ನಿರ್ದೇಶಕ ಹಾಗೂ ಜೆಡಿಎಸ್ ಮುಖಂಡ ಕೋಟೆಹುಂಡಿ ಮಹದೇವು, ವೈಯುಕ್ತಿಕವಾಗಿ 33ಲಕ್ಷ ರೂ.ಗಳನ್ನು ನೀಡಿ, ನೂತನ ದೇವಾಲಯ ನಿರ್ಮಿಸಿದರು. ಅಂತೆಯೇ ವಾಸ್ತವ ಡೆವಲಪರ್ಸ್ ಮಾಲೀಕರಾದ ಕುಮಾರಸ್ವಾಮಿ ಅವರು 25ಲಕ್ಷ ರೂ. ವೆಚ್ಚದಲ್ಲಿ ಸ್ವಂತ ಹಣದಿಂದ ಭುಜಂಗೇಶ್ವರ ಸ್ವಾಮಿ ಮಹಾದ್ವಾರವನ್ನು ನಿರ್ಮಿಸಿಕೊಟ್ಟು ಗ್ರಾಮಸ್ಥರ ಮೆಚ್ಚುಗೆಗೆ ಕಾರಣರಾಗಿದ್ದಾರೆ.

ಈ ಹಿನ್ನಲೆಯಲ್ಲಿ ತಳೂರು ಗ್ರಾಮದ ಮುಖಂಡರು ಕೋಟೆಹುಂಡಿ ಮಹದೇವು ಮತ್ತು ಕುಮಾರಸ್ವಾಮಿ ಅವರನ್ನು ಅದ್ದೂರಿಯಾಗಿ ಸನ್ಮಾನಿಸಿದರು. ಈ ವೇಳೆ ಭಕ್ತರಿಗೆ ಅನ್ನಸಂತರ್ಪಣೆ ನಡೆಸಲಾಯಿತು. ಗ್ರಾಮದಲ್ಲಿ ಭುಜಂಗೇಶ್ವರ ಸ್ವಾಮಿಗೆ ಧಾರ್ಮಿಕ ವಿಧಿ–ವಿಧಾನಗಳು ವಿಜೃಂಭಣೆಯಿಂದ ನೆರವೇರಿದವು. ಮರವಣಿಗೆಯಲ್ಲಿ ಜಾನಪದ ಕಲಾ ತಂಡಗಳು ಸಾಗಿದವು.

ಧಾರ್ಮಿಕ ಕಾರ್ಯಕ್ರಮದಲ್ಲಿ ತುಮಕೂರು ಸಿದ್ದಗಂಗಾ ಮಠದ ಕಿರಿಯ ಶ್ರೀಗಳಾದ ಶಿವಸಿದ್ಧೇಶ್ವರ ಸ್ವಾಮೀಜಿ, ಬರಡನಪುರ ಗುರುಮಹಂತೇಶ್ವರ ಮಠದ ಶ್ರೀ ಪರಶಿವ ಮೂರ್ತಿ ಸ್ವಾಮೀಜಿ, ಕುಂದೂರು ಮಠದ ಡಾ.ಶರಚ್ಚಂದ್ರ ಸ್ವಾಮಿಜಿ ಸೇರಿದಂತೆ ವಿವಿಧ ಪಕ್ಷಗಳ ರಾಜಕೀಯ ಮುಖಂಡರು, ಗ್ರಾಮಸ್ಥರು ಭಾಗವಹಿಸಿದ್ದರು.

ಪಾಲಿಕೆಯಿಂದಲೇ ಫುಟ್‌ಪಾತ್ ಪೂರ್ಣ ಪ್ರಮಾಣದಲ್ಲಿ ಒತ್ತುವರಿ!

- ಪಾದಚಾರಿಗಳ ಪರದಾಟ ; ಓಡಾಡಲು ಒಂಚೂರೂ ಜಾಗ ಇಲ್ಲ
- ಬನ್ನಿಮಂಟಪದ ಹೈವೇ ಸರ್ಕಲ್ ಬಳಿ ಫುಟ್‌ಪಾತ್‌ನಲ್ಲೇ ಒಣ ತ್ಯಾಜ್ಯ ಸಂಗ್ರಹಣಾ ಕೇಂದ್ರ ನಿರ್ಮಾಣ



ಮೈಸೂರಿನ ಬನ್ನಿಮಂಟಪದ ಹೈವೇ ಸರ್ಕಲ್ ಸಮೀಪದ ರಸ್ತೆಯಲ್ಲಿ ಫುಟ್‌ಪಾತ್ ಅನ್ನು ಪೂರ್ಣ ಪ್ರಮಾಣದಲ್ಲಿ (ಅಡ್ಡಲಾಗಿ) ಪಾಲಿಕೆಯಿಂದ ಒಣ ತ್ಯಾಜ್ಯ ಸಂಗ್ರಹ ಕೇಂದ್ರ ಸ್ಥಾಪಿಸಿರುವುದು.

ಮೈಸೂರು,ಫೆ.24(ಪಿಎಂ)– ನಗರ ಪ್ರದೇಶಗಳಲ್ಲಿ ಅತಿಯಾದ ವಾಹನಗಳ ಸಂಚಾರದ ನಡುವೆ ಪಾದಚಾರಿಗಳು ಸುಗಮ ಮತ್ತು ಸುರಕ್ಷಿತವಾಗಿ ಸಂಚರಿಸಲು ವ್ಯವಸ್ಥಿತ ಫುಟ್‌ಪಾತ್ ಸೌಲಭ್ಯ ಅತ್ಯಗತ್ಯ. ಬಹುತೇಕ ಎಲ್ಲಾ ಮಹಾನಗರಗಳಂತೆ ಮೈಸೂರಿನಲ್ಲೂ ಫುಟ್‌ಪಾತ್ ಒತ್ತುವರಿ ದೊಡ್ಡ ತಲೆ ನೋವಾಗಿ ಪರಿಣಮಿಸಿದ್ದು, ಎಚ್ಚರ ತಪ್ಪಿದರೆ ಪಾದಚಾರಿಗಳ ಸುಗಮ ಸಂಚಾರಕ್ಕೆ ಸಂಚಕಾರ ಬಂದೊದಗಲಿದೆ.

ಮೈಸೂರಿನ ಹೃದಯ ಭಾಗದಲ್ಲೇ ಫುಟ್‌ಪಾತ್ ಒತ್ತುವರಿಯು ಪಾದಚಾರಿಗಳ ಓಡಾಟಕ್ಕೆ ತೊಂದರೆಯಾಗಿ ಪರಿಣಮಿಸಿದೆ. ಈ ನಡುವೆ ಸುವ್ಯವಸ್ಥಿತ ಫುಟ್‌ಪಾತ್ ಸೌಲಭ್ಯ ಕಲ್ಪಿಸಬೇಕಾದ ಜವಾಬ್ದಾರಿ ಹೊತ್ತ ಮೈಸೂರು ಮಹಾನಗರ ಪಾಲಿಕೆಯೇ ಒಂದಿಂಚೂ ಜಾಗ ಬಿಡದೇ ಫುಟ್‌ಪಾತ್ ಒತ್ತುವರಿ ಮಾಡಿಕೊಂಡರೆ, ಅದು ಬೇಲಿಯೇ ಎದ್ದು ಹೊಲ ಮೇಯ್ದಂತೆ ಅಲ್ಲವೇ ಎಂಬುದು ನಾಗರಿಕರ ಬೇಸರವಾಗಿದೆ.

ಹೌದು, ಬನ್ನಿಮಂಟಪದ ಹೈವೇ ಸರ್ಕಲ್ ಸಮೀಪದ ರಸ್ತೆಯಲ್ಲಿ ಫುಟ್‌ಪಾತ್ ಅನ್ನು ಪೂರ್ಣ ಪ್ರಮಾಣದಲ್ಲಿ (ಅಡ್ಡಲಾಗಿ) ಪಾಲಿಕೆಯಿಂದ ಒಣ ತ್ಯಾಜ್ಯ ಸಂಗ್ರಹ ಕೇಂದ್ರ ಸ್ಥಾಪಿಸಲಾಗಿದೆ. ವಿವಿಧ ಒಣ ಕಸ ಸಂಗ್ರಹಿಸುವ ಕೇಂದ್ರ ಇದಾಗಿದ್ದು, ಮೆಟಲ್ ರೂಫಿಂಗ್ ಶೀಟ್ ಬಳಿಸಿ ಶೆಡ್ ಮಾದರಿಯಲ್ಲಿ ಈ ಕೇಂದ್ರ ಸ್ಥಾಪಿಸಲಾಗಿದೆ. ಆದರೆ ಪಾದಚಾರಿಗಳು ಓಡಾಡಲು ಒಂದಿಂಚೂ ಜಾಗ ಬಿಟ್ಟಿಲ್ಲ. ಹೀಗಾಗಿ ಪಾದಚಾರಿಗಳು ಈ ಶೆಡ್ ಎದುರಾಗುತ್ತಿದ್ದಂತೆ ರಸ್ತೆಗಿಳಿದು ಸಾಗಬೇಕಾಗಿದೆ. ಆ ಮೂಲಕ ಮೊದಲೇ ಕಿರಿದಾದ ಈ ರಸ್ತೆಯಲ್ಲಿ ಅತ್ಯಂತ ಜಾಗರೂಕರಾಗಿ ಪಾದಚಾರಿಗಳು ಇಲ್ಲಿ ಹೆಜ್ಜೆ ಹಾಕಬೇಕಾಗಿದೆ.

ವಾರ್ಡ್ 17ಕ್ಕೆ ಸಂಬಂಧಿಸಿದಂತೆ ಈ ಕೇಂದ್ರವನ್ನು ಇಲ್ಲಿ ನಿರ್ಮಿಸಲಾಗಿದೆ. ಪುತಲಿ ಉದ್ಯಾನವನಕ್ಕೆ ಹೊಂದಿಕೊಂಡಂತೆ ಇರುವ ಫುಟ್‌ಪಾತ್‌ನಲ್ಲಿ ಈ ಕೇಂದ್ರ ಇದ್ದು, ಇದರ ಪಕ್ಕದಲ್ಲೇ ಪಾಲಿಕೆಯ ಪೌರಕಾರ್ಮಿಕರ ವಿಶ್ರಾಂತಿ ಕೊಠಡಿ ಸಹ ಇದೆ. ಆದರೆ ಈ ಕೊಠಡಿ ಕಟ್ಟಡದ ಮುಂದೆ ಫುಟ್‌ಪಾತ್‌ನಲ್ಲಿ ಪಾದಚಾರಿಗಳು ಸಂಚರಿಸಲು ಸಾಕಷ್ಟು ಸ್ಥಳಾವಕಾಶವಿದೆ. ಅದೇ ಮಾದರಿಯಲ್ಲಿ ಈ ತ್ಯಾಜ್ಯ ಸಂಗ್ರಹಣಾ ಕೇಂದ್ರ ಸಹ ಸ್ಥಾಪಿಸಲು ಅವಕಾಶವಿತ್ತು. ಆದರೆ ಸಂಪೂರ್ಣವಾಗಿ ಫುಟ್‌ಪಾತ್ ಆಕ್ರಮಿಸಿ ಈ ಕೇಂದ್ರ ಸ್ಥಾಪಿಸಲಾಗಿದೆ.

ಇದೇ ರಸ್ತೆಯ ಮತ್ತೊಂದು ಬದಿಯಲ್ಲಂತೂ ಫುಟ್‌ಪಾತ್ ವ್ಯವಸ್ಥೆಯೇ ಇಲ್ಲ. ಒಂದೇ ಬದಿಯಲ್ಲಿರುವ ಫುಟ್‌ಪಾತ್‌ನಲ್ಲಿ ಈ ರೀತಿ ತ್ಯಾಜ್ಯ ಸಂಗ್ರಹಣಾ ಕೇಂದ್ರ ಸ್ಥಾಪಿಸಲಾಗಿದೆ. ಹೀಗಾಗಿ ಪಾದಚಾರಿಗಳು ಇಲ್ಲಿ ಸಂಚರಿಸಲು ಪರದಾಡಬೇಕಾಗಿದೆ. ಇನ್ನಾದರೂ ನಗರ ಪಾಲಿಕೆಯು ಎಚ್ಚೆತ್ತು ಒಂದಿಷ್ಟು ಸ್ಥಳಾವಕಾಶ ಕಲ್ಪಿಸಿ ಪಾದಚಾರಿಗಳಿಗೆ ಅನುಕೂಲ ಕಲ್ಪಿಸುವುದೇ ಕಾದು ನೋಡಬೇಕಿದೆ

ವಿದ್ಯಾರ್ಥಿಗಳಿಂದ ಅಡ್ಡಾದಿಡ್ಡಿ ವಾಹನ ನಿಲುಗಡೆ; ಪ್ರತಿನಿತ್ಯವೂ ಸಾರ್ವಜನಿಕರ ಪರಿಪಾಟಲು



ನೋ ಪಾರ್ಕಿಂಗ್ ಬೋರ್ಡ್ ಮುಂದೆಯೇ ಸಾಲುಗಟ್ಟಿ ನಿಂತಿರುವ ವಾಹನಗಳು.

ಮೈಸೂರು, ಫೆ.24(ವಿವಿಹೆಚ್)– ಮೈಸೂರು ನಗರದಾದ್ಯಂತ ಒಂದು ಕಾಲದಲ್ಲಿ ರಸ್ತೆಗಳೆಲ್ಲಾ ಬಿಕೋ ಎನ್ನುತ್ತಿದ್ದವು. ಈಗ ವಾಹನ ಸಂಚಾರ ದಟ್ಟಣೆಯಿಂದಾಗಿ ಎತ್ತ ನೋಡಿದರತ್ತ ದ್ವಿಚಕ್ರ ವಾಹನ, ಕಾರುಗಳದ್ದೇ ಕಾರುಬಾರಾಗಿದೆ. ಇದರ ನಡುವೆ ರಸ್ತೆಯ ಇಕ್ಕೆಲಗಳಲ್ಲಿ ನಿಲ್ಲಿಸಿರುವ ಬೈಕ್‌ಗಳಿಂದ ಸುಗಮ ಸಂಚಾರಕ್ಕೆ ಕಿರಿಕಿರಿ ಉಂಟಾಗುತ್ತಿದೆ. ಇದು ವಿಜಯನಗರದಲ್ಲಿರುವ ಕನ್ನಡ ಸಾಹಿತ್ಯ ಪರಿಷತ್ ಭವನದ ರಸ್ತೆಯ ಆತಂಕದ ಚಿತ್ರಣ.

ಹೌದು... ನಗರದ ಪ್ರಮುಖ ಕಾಲೇಜುಗಳಲ್ಲಿ ಒಂದಾದ ವಿದ್ಯಾವರ್ಧಕ ಕಾಲೇಜ್ ಆಫ್ ಇಂಜಿನಿಯರಿಂಗ್ ಎದುರು ವಾಹನಗಳು ಸಾಲುಗಟ್ಟಿ ನಿಲ್ಲುವುದರಿಂದ ಸ್ಥಳೀಯರಿಗೆ ದಿನಾಲು ಸುಗಮ ಸಂಚಾರಕ್ಕೆ ಕಿರಿಕಿರಿ ಉಂಟಾಗುತ್ತಿದೆ. ಕಾಲೇಜು ವಿದ್ಯಾರ್ಥಿಗಳೇ ಮನಬಂದಂತೆ ಎಲ್ಲೆಂದರಲ್ಲಿ ತಮ್ಮ ವಾಹನಗಳನ್ನು ನಿಲ್ಲಿಸಿ ಇತರರ ಸಂಚಾರಕ್ಕೆ ಅಡ್ಡಿ ಉಂಟು ಮಾಡುತ್ತಿದ್ದಾರೆ. ಒಂದು ಕಡೆ ಬೈಕ್‌ಗಳನ್ನು ನಿಲ್ಲಿಸಿದರೆ, ಮತ್ತೊಂದು ಕಡೆ ಕಾರುಗಳನ್ನು ಪಾರ್ಕ್ ಮಾಡುತ್ತಾರೆ. ಬೆಳಿಗ್ಗೆ, ಮಧ್ಯಾಹ್ನ ಹಾಗೂ ಕಾಲೇಜು ಬಿಡುವ ವೇಳೆ ಇತರರ ಸಂಚಾರಕ್ಕೆ ತೀವ್ರ ತೊಡಕಾಗುತ್ತಿದೆ.

ವಿದ್ಯಾವರ್ಧಕ ಕಾಲೇಜ್ ಆಫ್ ಇಂಜಿನಿಯರಿಂಗ್‌ನಲ್ಲಿ ವಿಶಾಲವಾದ ಸ್ಥಳಾವಕಾಶವಿದೆ. ವಿದ್ಯಾರ್ಥಿಗಳ ವಾಹನಗಳಿಗಾಗಿ ಪ್ರತ್ಯೇಕ ಪಾರ್ಕಿಂಗ್ ವ್ಯವಸ್ಥೆ ಮಾಡಿದ್ದರೂ ವಿದ್ಯಾರ್ಥಿಗಳು ರಸ್ತೆ ಬದಿಯಲ್ಲಿಯೇ ಅಡ್ಡಾದಿಡ್ಡಿಯಾಗಿ ವಾಹನಗಳನ್ನು ನಿಲ್ಲಿಸುತ್ತಿದ್ದಾರೆ. ಇದನ್ನು ಕಂಡೂ ಕಾಲೇಜು ಆಡಳಿತ ಮಂಡಳಿ ಮೌನವಾಗಿರುವುದಕ್ಕೆ ಸಾರ್ವಜನಿಕರು ಆಕ್ಷೇಪ ವ್ಯಕ್ತಪಡಿಸಿದ್ದಾರೆ.

ಪ್ರತಿದಿನ ಬೆಳಿಗ್ಗೆ ಕಾಲೇಜಿನ ಮುಂಭಾಗದ ರಸ್ತೆಯಲ್ಲಿ ವಾಹನಗಳು ತುಂಬಿ ಹೋಗುತ್ತವೆ. ಇಲ್ಲಿ ನಿಲ್ಲುವ ವಾಹನಗಳು ಹೊರಗಿನವರದ್ದೇನೂ ಅಲ್ಲ. ಇದೇ ಕಾಲೇಜಿನಲ್ಲಿ ವ್ಯಾಸಂಗ ಮಾಡುವ ವಿದ್ಯಾರ್ಥಿಗಳದ್ದು. ಕಾಲೇಜಿಗೆ ಆಗಮಿಸುವ ವಿದ್ಯಾರ್ಥಿಗಳಿಗೆ ವಾಹನಗಳ ನಿಲುಗಡೆ ವ್ಯವಸ್ಥೆ ಮಾಡಿದ್ದರೂ ರಸ್ತೆ ಬದಿಯಲ್ಲೇ ವಾಹನಗಳನ್ನು ನಿಲ್ಲಿಸಿ ವಿದ್ಯಾರ್ಥಿಗಳು ತರಗತಿಗಳಿಗೆ ಹೋಗುತ್ತಿದ್ದಾರೆ. ಇದರಿಂದ ಸಾರ್ವಜನಿಕರ ಓಡಾಡಕ್ಕೆ ತೊಂದರೆಯಾಗುತ್ತದೆ ಎಂಬುದು ಸ್ಥಳೀಯರ ಆರೋಪವಾಗಿದೆ.

ನೋ ಪಾರ್ಕಿಂಗ್ ಬೋರ್ಡ್‌ಗೂ ಕ್ಯಾರೆ ಎನ್ನದ ವಿದ್ಯಾರ್ಥಿಗಳು: ರಸ್ತೆ ಬದಿಯಲ್ಲಿ ನೋ ಪಾರ್ಕಿಂಗ್ ಬೋರ್ಡ್ ಅಳವಡಿಸಿದ್ದರೂ ಇದ್ಯಾವುದಕ್ಕೂ ಕ್ಯಾರೆ ಎನ್ನದ ವಿದ್ಯಾರ್ಥಿಗಳು ರಸ್ತೆಯುದ್ದಕ್ಕೂ ತಮ್ಮ ಸ್ಕೂಟರ್, ಕಾರುಗಳನ್ನು ನಿಲ್ಲಿಸಿ ಹೋಗುತ್ತಿದ್ದಾರೆ. ಇದರಿಂದ ಕಾಲೇಜು ಮುಂಭಾಗ ಟ್ರಾಫಿಕ್ ಸಮಸ್ಯೆ ಉಂಟಾಗುತ್ತಿದೆ ಎಂದು ಸ್ಥಳೀಯರು ದೂರಿದ್ದಾರೆ.

ಪೊಲೀಸರು ನೋ ಪಾರ್ಕಿಂಗ್‌ನಲ್ಲಿ ವಾಹನಗಳನ್ನು ನಿಲ್ಲಿಸಿದರೆ ಫೈನ್ ಹಾಕುವ ಕೆಲಸ ಮಾಡುತ್ತಾರೆ. ಆದರೆ ಒಂದು ಕಾಲೇಜಿನಿಂದ ಪ್ರತಿನಿತ್ಯ ಸಾರ್ವಜನಿಕರ ಸಂಚಾರಕ್ಕೆ ತೊಡಕಾಗುತ್ತಿದ್ದರೂ ಸುಮ್ಮನಿದ್ದಾರೆ. ಟ್ರಾಫಿಕ್, ಫೈನ್, ಕಾನೂನುಗಳ ಬಗ್ಗೆ ವಿದ್ಯಾರ್ಥಿದೆಸೆಯಿಂದಲೇ ಅರಿವು ಮೂಡಿಸಬೇಕಾದ ಕಾಲೇಜು ಕಂಡರೂ ಕಾಣದಂತೆ ವರ್ತಿಸುತ್ತಿದೆ. ಸಂಚಾರ ಪೊಲೀಸರು ಈ ಬಗ್ಗೆ ಗಮನ ಹರಿಸಿ, ರಸ್ತೆ ಬದಿಯಲ್ಲಿ ವಾಹನಗಳು ನಿಲ್ಲದಂತೆ ಕ್ರಮ ಕೈಗೊಳ್ಳಬೇಕು ಎಂದು ಸಾರ್ವಜನಿಕರು ಮನವಿ ಸಲ್ಲಿಸಿದ್ದಾರೆ.

ಪಾಕ್ ಮಣಿಸಿ ಸೆಮಿಸ್‌ಗೆ ಎಂಟ್ರಿಕೊಟ್ಟ ಇಂಗ್ಲೆಂಡ್



ಶ್ರೀಲಂಕಾ, ಫೆ.24(ವಿವಿಹೆಚ್)– ನಾಯಕ ಹ್ಯಾರಿ ಬ್ರೂಕ್ ಅವರ ಆಕರ್ಷಕ ಶತಕದಾಟದ ಬಲದಿಂದ ಪಾಕಿಸ್ತಾನವನ್ನು 2 ವಿಕೆಟ್‌ಗಳಿಂದ ಮಣಿಸಿದ ಇಂಗ್ಲೆಂಡ್ ಸೆಮಿಫೈನಲ್ಸ್‌ಗೆ ಅರ್ಹತೆ ಪಡೆದುಕೊಂಡಿತು.

ಇಲ್ಲಿನ ಪಲ್ಲೆಕೆಲೆ ಕ್ರೀಡಾಂಗಣದಲ್ಲಿ ನಡೆದ ಐಸಿಸಿ ಪುರುಷರ ಟಿ20 ವಿಶ್ವಕಪ್ 2026ರ ಸೂಪರ್–8ರ 5ನೇ ಪಂದ್ಯದಲ್ಲಿ ಟಾಸ್ ಗೆದ್ದು ಮೊದಲು ಬ್ಯಾಟ್ ಮಾಡಿದ ಪಾಕಿಸ್ತಾನ ನಿಗದಿತ 20 ಓವರ್‌ಗಳಲ್ಲಿ 9 ವಿಕೆಟ್ ನಷ್ಟಕ್ಕೆ 162 ರನ್ ಗಳಿಸಿತು. ಈ ಮೊತ್ತ ಬೆನ್ನತ್ತಿದ ಇಂಗ್ಲೆಂಡ್, ನಾಯಕ ಹ್ಯಾರಿ ಬ್ರೂಕ್ ಶತಕದ ನೆರವಿನಿಂದ 19.1 ಓವರ್‌ಗಳಲ್ಲಿ 8 ವಿಕೆಟ್ ನಷ್ಟಕ್ಕೆ 166 ರನ್ ಗಳಿಸಿ ಗೆಲುವಿನ ನಗೆ ಬೀರಿತು.

ಪಾಕ್ ನೀಡಿದ ಸ್ಪರ್ಧಾತ್ಮಕ ಗುರಿ ಬೆನ್ನತ್ತಿದ ಇಂಗ್ಲೆಂಡ್ ತಂಡಕ್ಕೆ ನಾಯಕ ಹ್ಯಾರಿ ಬ್ರೂಕ್ ಆಸರೆಯಾದರು. ಒಂದೆಡೆ ವಿಕೆಟ್ ಬೀಳುತ್ತಿದ್ದರು ಮತ್ತೊಂದೆಡೆ ಒಂಟಿಯಾಗಿ ನಿಂತು 51 ಎಸೆತಗಳಲ್ಲಿ 10 ಬೌಂಡರಿ, 4 ಸಿಕ್ಸರ್ ಸಹಿತ 100 ರನ್ ಗಳಿಸಿ ತಂಡದ ಗೆಲುವಿಗೆ ಸಹಕರಿಸಿದರು. ಇವರಿಗೆ ಸಾಥ್ ನೀಡಿದ ವಿಲ್ ಜಾಕ್ಸ್ 23 ಎಸೆತಗಳಲ್ಲಿ 28 ರನ್ ಗಳಿಸಿದರು. ಸ್ಯಾಮ್ ಕರನ್ 16 ರನ್ ಗಳಿಸಿದ್ದು ಬಿಟ್ಟರೆ ಉಳಿದ ಬ್ಯಾಟರ್‌ಗಳು ಒಂದಂಕಿ ಮೊತ್ತಕ್ಕೆ ಕುಸಿದು ನಿರಾಸೆ ಮೂಡಿಸಿದರು.

ಪಾಕ್ ಪರ ಶಾಹೀನ್ ಶಾ ಅಫ್ರಿದಿ 4 ವಿಕೆಟ್, ಮೊಹಮ್ಮದ್ ನವಾಜ್ ಮತ್ತು ತಾರಿಖ್ ತಲಾ 2 ವಿಕೆಟ್ ಪಡೆದರು.

ಇದಕ್ಕೂ ಮೊದಲು ಬ್ಯಾಟಿಂಗ್ ಮಾಡಿದ ಪಾಕ್ ಪರ ಶಾಹಿಬ್‌ಜಾದಾ ಫರ್ಹಾನ್ 63(45ಎ), ಬಾಬರ್ ಅಜಂ 25, ಫಖರ್ ಜಮಾನ್ 25, ಶದಾಬ್ ಖಾನ್ 23 ರನ್ ಕಲೆಹಾಕಿದರು. ಇವರ ಹೊರತುಪಡಿಸಿ ಮತ್ಯಾರಿಂದಲೂ ನಿರೀಕ್ಷಿತ ಆಟ ಕಂಡುಬರದ ಕಾರಣ 160ರ ಗಡಿ ದಾಟಲು ಪಾಕ್ ತಿಣುಕಾಡಿತು.

ಇಂಗ್ಲೆಂಡ್ ಪರ ಲಿಯಾಡ್ ಡೌಸನ್ 3, ಜೋಫ್ರಾ ಆರ್ಚರ್, ಜೇಮಿ ಓವರ್‌ಟರ್ನ್ ತಲಾ 2 ವಿಕೆಟ್ ಕಿತ್ತರು. ಉತ್ತಮ ಬ್ಯಾಟಿಂಗ್ ಮೂಲಕ ತಂಡವನ್ನು ಗೆಲ್ಲಿಸಿದ ನಾಯಕ ಹ್ಯಾರಿ ಬ್ರೂಕ್ ಪಂದ್ಯಶ್ರೇಷ್ಠ ಪ್ರಶಸ್ತಿ ಪಡೆದುಕೊಂಡರು.

ನಕ್ಕರೆ ಅದೇ ಸ್ವರ್ಗ

ಹೆಂಡತಿ: ರೀ... ಚಪಾತಿ ಜೊತೆ ಜೇನುತುಪ್ಪ ಕೊಡ್ಲಾ?
ಗಂಡ: ಛೀ, ಬೇಡ ಕಣೇ. ಅದು ಜೇನುಹುಳದ ಬಾಯಿಯಿಂದ ಬಂದಿರುತ್ತೆ. ನಾನು ಬಾಯಿಯಿಂದ ಬಂದಿರೋದನ್ನ ತಿನ್ನಲ್ಲ...
ಹೆಂಡತಿ: ಹಾಗಾದ್ರೆ ಮೊಟ್ಟೆ ಕೊಡ್ಲಾ...?!

ಮೈಸೂರು ಮಿತ್ರ

ಬುಧವಾರ, ಫೆಬ್ರವರಿ 25, 2026

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತ ವಾಹಿನಿ.........

ಕೆಲವೊಮ್ಮೆ ಉತ್ತರವನ್ನು ಪದಗಳಿಂದ ನೀಡುವ ಬದಲು ಮೌನದಿಂದ ನೀಡುವುದೇ ಒಳ್ಳೆಯದು.

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಅಡುಗೆ ಮಾಡಿದವಳಿಗಿಂತ... ಬಡಿಸಿದವಳೇ ಮೇಲು!

ನಿಮ್ಮ ಪತ್ರಗಳು

ಅದ್ವಾನಗಳಾಗಿರುವ ಸಿದ್ದಾರ್ಥ ಬಡಾವಣೆಯ ಉದ್ಯಾನವನಗಳು



ಮಾನ್ಯರೆ,

ಮಗು ಎಷ್ಟೇ ಅಳುತ್ತಿದ್ದರೂ ಅಮ್ಮನು ಹಾಲುಣಿಸದೆ ಮೊಬೈಲ್‌ನಲ್ಲಿ ಮುಳುಗಿರುವ ಕಾಲವಿದು. ಆದರೂ ಹಸಿವು ಆದಾಗ ಮಗುವಿಗೆ ಅಳದೆ ವಿಧಿ ಇಲ್ಲ. ಸಿದ್ದಾರ್ಥ ಬಡಾವಣೆ ಹಾಗೂ ಅಕ್ಕಪಕ್ಕದ ಬಡಾವಣೆಗಳ ಪರಿಸ್ಥಿತಿಯು ಇದೇ ಆಗಿದೆ. ಬಡಾವಣೆಗಳ ಒಳಗೆ ನೂರೆಂಟು ಸಮಸ್ಯೆಗಳಿವೆ. ಪರಿಹಾರ ಸಿಗುವುದು ಇರಲಿ, ಇಲ್ಲಿನ ಪಾರ್ಕ್‌ಗಳಲ್ಲಿರುವ ಕೊರತೆಗಳನ್ನು ನೀಗಿಸುವಂತೆ ಹಿರಿಯ ನಾಗರಿಕರು ವಾಟ್ಸಾಪ್ ಮೂಲಕ ಬೇಡಿಕೊಂಡರು, ಪತ್ರಿಕೆಗಳಲ್ಲಿ ತಮ್ಮ ನೋವನ್ನು ಬರೆದುಕೊಂಡರೂ ಬಗೆಹರಿಯಲಿಲ್ಲ. ನಾನೂ ಕೂಡ ಹಲವು ಬಾರಿ ಪತ್ರಿಕೆಗಳಲ್ಲಿ ಸಮಸ್ಯೆಗಳ ಕುರಿತು ಬರೆದೆ ಪ್ರಯೋಜನ ಆಗಲಿಲ್ಲ. ಪಾರಂಪರಿಕ ಕಟ್ಟಡ ಲಲಿತ ಮಹಲ್ ಎದುರಿಗೇ ಇರುವ ಮೂರು ಸಣ್ಣ ಪಾರ್ಕುಗಳು ಕಸದ ತಾಣವಾಗಿವೆ. ನಿರ್ವಹಣೆ ಇಲ್ಲದೆ ಸೊರಗಿವೆ. ಗೇಟುಗಳು ಮುರಿದಿರುವುದರಿಂದ ದನಕರುಗಳು ಹಾಗೂ ನಾಯಿಗಳ ವಾಸಸ್ಥಾನವಾಗಿವೆ. ಇತ್ತೀಚೆಗೆ ಸ್ಕೇಟಿಂಗ್ ರಿಂಕ್ ಪಕ್ಕ ಬಾರೀ ಖರ್ಚು ಮಾಡಿ ನಿರ್ಮಿಸಿದ ಕಟ್ಟಡ ಅನಾಥವಾಗಿದೆ ಹಾಗೂ ಮಕ್ಕಳ ಆಟಿಕೆಗಳು ಮರಳು ಹಾಸಿಲ್ಲದೆ ಬಿದ್ದು ಕೈಕಾಲುಗಳಿಗೆ ಪೆಟ್ಟು ಮಾಡಿಕೊಳ್ಳುತ್ತಿವೆ, ಸ್ಕೇಟಿಂಗ್ ರಿಂಕ್‌ನ ಟೈಲ್ಸ್‌ಗಳು ಕಿತ್ತು ಹೋಗಿವೆ, ಸ್ಥಳದ ಅಭಾವದಿಂದ ಇಲ್ಲಿನ ಅವ್ಯವಸ್ಥೆಗಳನ್ನು ಬರೆಯಲಾಗದು. ದಯಮಾಡಿ ಮಾನ್ಯ ಆಯುಕ್ತರು ಖುದ್ದು ಪರಿಶೀಲಿಸಿದರೆ ಧನ್ಯರಾಗುತ್ತೇವೆ. ಸಮಸ್ಯೆಗಳನ್ನು ಪರಿಹರಿಸಲು ಸಾಧ್ಯವಾಗದಿದ್ದರೆ ಈಗಾಗಲೇ ಕಸದ ತೊಟ್ಟಿ ಆಗಿರುವ ಮೂರು ಪಾರ್ಕುಗಳನ್ನು ನಗರದ ಕಸ ಸುರಿಯಲು ಡಂಪಿಂಗ್ ಯಾರ್ಡ್ ಅಥವಾ ಪ್ರಾಣಿಗಳಿಗೆ ಪಿಂಜ್ರಾಪೋಲ್ ಮಾಡಿಕೊಂಡರೆ ನಗರಪಾಲಿಕೆಗೆ ಉಪಯೋಗ ಆಗಬಹುದು!. ದುರಂತವೆಂದರೆ ಸಮಸ್ಯೆಗಳನ್ನು ಬಗೆಹರಿಸಿಕೊಡುವಂತೆ ಕೇಳುತ್ತಿದ್ದವರಲ್ಲಿ ಅನೇಕ ವೃದ್ದರು ಇಹಲೋಕ ತ್ಯಜಿಸಿದ್ದಾರೆ.

–ಮಿರ್ಲೆ ಚಂದ್ರಶೇಖರ, ಲೇಖಕರು, ಮೈಸೂರು.

ಬಡವಾಯಿತೇ ಬೈಸಿಕಲ್ ರಸ್ತೆ

ಮಾನ್ಯರೇ.

ಮೈಸೂರಿನ ಲಲಿತ ಮಹಲ್ ರಸ್ತೆಯಲ್ಲಿ ಕಾರಂಜಿ ಕೆರೆ ಸಮೀಪದಿಂದ ಪ್ರಾರಂಭವಾಗಿ ಆಡಳಿತ ತರಬೇತಿ ಸಂಸ್ಥೆಯ ಮೂಲಕ ಹಾದು ಜಾಕಿ ಕ್ವಾಟ್ರಸ್ ವೃತ್ತದವರೆಗೆ ಇರುವ ಬೈಸಿಕಲ್ ರಸ್ತೆಯು ಕೇವಲ ಬೈಸಿಕಲ್‌ಗಳು ಸಂಚರಿಸಲು ಮಾತ್ರ ಸೀಮಿತವಾಗಿದೆ. ಆದರೆ, ಸದರಿ ರಸ್ತೆಯಲ್ಲಿ ಈಗ ದ್ವಿಚಕ್ರ, ತ್ರಿಚಕ್ರ, ಹಾಗೂ ನಾಲ್ಕು ಚಕ್ರಗಳ ವಾಹನಗಳು ಸಂಚರಿಸುತ್ತಿದ್ದು, ಇದು ಬೈಸಿಕಲ್ ಸವಾರರಿಗೆ ಬಾರೀ ಕಿರಿಕಿರಿಯಾಗುತ್ತಿದೆ. ಅದಾಗ್ಯೂ ಬೈಸಿಕಲ್ ಸವಾರರು ಪಕ್ಕದ ಮುಖ್ಯ ರಸ್ತೆಯಲ್ಲಿ ಸಂಚರಿಸಲು ತೀರ್ಮಾನಿಸಿದರೆ ಅದೂ ಕೂಡ ವಾಹನ ದಟ್ಟಣೆಯಿಂದ ಕೂಡಿರುತ್ತದೆ. ಹಾಗಾಗಿ ಸದರಿ ರಸ್ತೆಯಲ್ಲಿ ಉದ್ದ ಕಂಬಗಳನ್ನು ನಿಲ್ಲಿಸಿ ಕೇವಲ ಬೈಸಿಕಲ್ ಸವಾರರು ಮಾತ್ರ ಸಂಚರಿಸಲು ಅನುವು ಮಾಡಿಕೊಡಬೇಕೆಂದು ಹಾಗೂ ರಸ್ತೆಯನ್ನು ಮರು ಡಾಂಬರೀಕರಣ ಮಾಡಿ ಅಭಿವೃದ್ಧಿ ಪಡಿಸಬೇಕೆಂದು ನಗರ ಪಾಲಿಕೆಯ ಹಿರಿಯ ಅಧಿಕಾರಿಗಳಿಗೆ ಹಾಗೂ ಆಯುಕ್ತರಲ್ಲಿ ಮನವಿ.

–ಪ್ರದೀಪ್, ಯರಗನಹಳ್ಳಿ, ಮೈಸೂರು.

ಲೋಕಾಯುಕ್ತ ಬಲಪಡಿಸುವುದು ಅನಿವಾರ್ಯ

ಮಾನ್ಯರೆ,

ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರ ಕರ್ನಾಟಕ ಲೋಕಾಯುಕ್ತದ ಅಧಿಕಾರ ಮೊಟಕುಗೊಳಿಸದೆ ಇದ್ದಿದ್ದರೆ ನಮ್ಮ ರಾಜ್ಯದಲ್ಲಿ ಭ್ರಷ್ಟಾಚಾರ ಕಡಿಮೆ ಆಗುತ್ತಿದ್ದುದರಲ್ಲಿ ಸಂಶಯವಿಲ್ಲ. ಈಗ ಲೋಕಾಯುಕ್ತದ ಬಗ್ಗೆ ಅಷ್ಟೇನು ಭಯವಿಲ್ಲದ ಕಾರಣ ಭ್ರಷ್ಟಾಚಾರ ತಾಂಡವವಾಡುತ್ತಿರುವುದು ಸರಿಯಷ್ಟೆ, ಆದರೂ ಇರುವ ಸ್ವಲ್ಪ ಅಧಿಕಾರದಲ್ಲಿ ಬಿಜೆಪಿ ಶಾಸಕ ಡಾ ಚಂದ್ರು ಲಮಾಣಿ ಗುತ್ತಿಗೆದಾರನಿಂದ 5 ಲಕ್ಷ ರೂ ಹಣವನ್ನು ಲಂಚದ ರೂಪದಲ್ಲಿ ಪಡೆಯುತ್ತಿರುವಾಗ ಲೋಕಾಯುಕ್ತ ಅಧಿಕಾರಿಗಳು ತಮ್ಮ ಬಲೆಗೆ ಬೀಳಿಸಿರುವುದು ಪ್ರಶಂಸನೀಯ ಕಾರ್ಯ. ನಮ್ಮಿಂದ ಆಯ್ಕೆಯಾದ ಜನಪ್ರತಿನಿಧಿಗಳೇ ಭ್ರಷ್ಟಾಚಾರದಲ್ಲಿ ಮುಳುಗಿ ಹೋದರೆ ಅಧಿಕಾರಿ ವರ್ಗಕ್ಕೆ ಭಯ ಇರಲು ಸಾಧ್ಯವೇ? ಸಾಮಾನ್ಯ ಜನತೆ ಯಾರೊಂದಿಗೆ ತಮ್ಮ ಅಹವಾಲುಗಳನ್ನು ಹೇಳಿಕೊಳ್ಳಬೇಕು. ಇನ್ನೂ ಕಾಲಮಿಂಚಿಲ್ಲ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಲೋಕಾಯುಕ್ತಕ್ಕೆ ಮೊದಲು ಇದ್ದಂತಹ ಸಂಪೂರ್ಣ ಅಧಿಕಾರ ನೀಡುವತ್ತಾ ಗಮನಹರಿಸಿ ಭ್ರಷ್ಟಾಚಾರಕ್ಕೆ ಸಂಪೂರ್ಣ ಬ್ರೇಕ್ ಹಾಕಬೇಕು.

–ಬೆಸಗರಹಳ್ಳಿ ರವಿ ಪ್ರಸಾದ್, ಮೈಸೂರು.

ಚಾಮುಂಡಿಬೆಟ್ಟ ಕಾಮಗಾರಿ ಸಮಸ್ಯೆ ಬಗೆಹರಿಸಲು ಮನವಿ

ಮಾನ್ಯರೆ,

ವಿಶ್ವ ವಿಖ್ಯಾತಿ ಹೊಂದಿರುವ ಹಿಂದೂ ದೇವಾಲಯಗಳ ಸಾಲಿನಲ್ಲಿ ಚಾಮುಂಡಿ ಬೆಟ್ಟವೂ ಒಂದಾಗಿದೆ. ದೇವಾಲಯದ ದರ್ಶನಕ್ಕೆ ದೇಶದ ನಾನಾ ಭಾಗಗಳಿಂದ ಭಕ್ತರು ಆಗಮಿಸುತ್ತಾರೆ. ಅಲ್ಲದೆ ವಿದೇಶಿಗರು ಸಹ ಹೆಚ್ಚಿನ ಸಂಖ್ಯೆಯಲ್ಲಿ ಬಂದು ತಾಯಿ ಚಾಮುಂಡೇಶ್ವರಿ ದರ್ಶನ ಪಡೆಯುತ್ತಾರೆ. ಅಲ್ಲದೆ ಐತಿಹಾಸಿಕ ಹಿನ್ನೆಲೆ ಹೊಂದಿರುವ ಕಾರಣದಿಂದ ಸರ್ಕಾರಿ ಮತ್ತು ರಜೆ ದಿನಗಳಲ್ಲಿ ಪ್ರವಾಸಿಗರು ಅಧಿಕ ಸಂಖ್ಯೆಯಲ್ಲಿ ದೇವಾಲಯಕ್ಕೆ ಭೇಟಿ ನೀಡುವುದರಿಂದ ಈ ದೇವಾಲಯ ಸಾಂಪ್ರದಾಯಿಕವಾಗಿ ಎಂದಿನ ಪಾವಿತ್ರ್ಯತೆ ಕಾಯ್ದುಕೊಂಡಿದೆ. ಆದರೆ ಕೆಲವು ದಿನಗಳ ಹಿಂದೆ ದೇವಾಲಯದ ಹತ್ತಿರದಲ್ಲೇ ಕೇಂದ್ರದ ಪ್ರಸಾದ ಯೋಜನೆಯಡಿ ನಾನಾ ಅಭಿವೃದ್ಧಿ ಕಾಮಗಾರಿ ಕೈಗೊಂಡಿರುವುದರಿಂದ ಜನರು ಗೊಂದಲಕ್ಕೆ ಒಳಗಾಗಿದ್ದಾರೆ ನಿರ್ಮಾಣ ಮಾಡುತ್ತಿರುವ ಕಟ್ಟಡದಿಂದ ದೇವಾಲಯದ ಗೋಪುರ ಕಾಣದಂತೆ ಮರೆಯಾಗುತ್ತಿದೆ ಎಂಬ ನಾನಾ ರೀತಿಯ ಚರ್ಚೆಗಳು ನಡೆಯುತ್ತಿವೆ. ಸಂಬಂಧಪಟ್ಟವರು ಈ ವಿಷಯದ ಬಗ್ಗೆ ಗಮನಹರಿಸಿ ಸೂಕ್ತ ಕ್ರಮ ಕೈಗೊಳ್ಳಬೇಕಾಗಿ ಮನವಿ.

–ಸಾಯಿ ಸಂದೇಶ್ ಬಿ.ಎಸ್., ಮೈಸೂರು



ಡಾ. ಹೆಚ್.ವಿ. ನಾಗರಾಜ ರಾವ್
ಮೈಸೂರು.

ಸಂಸ್ಕೃತಿ ಚಿಂತನಾ

ವೇದಾಂತ ದೇಶಿಕ ವಿರಚಿತ ಪಾದುಕಾ ಸಹಸ್ರ

ಕ್ರೈಸ್ತಶಕ ಹದಿಮೂರನೆಯ ಶತಮಾನದಲ್ಲಿ ದಕ್ಷಿಣ ಭಾರತದಲ್ಲಿ ಸನಾತನ ಧರ್ಮವನ್ನು ಉಳಿಸಲು ಬೆಳೆಸಲು ಅವತರಿಸಿದ ಮಹಾನುಭಾವರು. ಭಗವದ್‌ಭಕ್ತಿಯ ಸಂದೇಶವನ್ನು ಸಾರಿದ ಭಕ್ತೋತ್ತಮರು, ನಾನಾ ಭಾಷೆಗಳಲ್ಲಿ ಅದ್ಭುತ ಕಾವ್ಯಗಳನ್ನು ರಚಿಸಿದ ಕವಿಸಾರ್ವಭೌಮರು, ಪ್ರಖರವಾದ ಬುದ್ಧಿಶಕ್ತಿಯಿಂದ ತರ್ಕಶಾಸ್ತ್ರಾನುಸಾರವಾಗಿ ವಾದಗಳನ್ನು ಮಾಡಿ ಪ್ರತಿವಾದಿಗಳ ಸೊಲ್ಲನ್ನು ಅಡಗಿಸಿದ ಧೀಮಂತರು **ಶ್ರೀ ವೇದಾಂತ ದೇಶಿಕರು**. ಇವರು ಜನಿಸಿದ್ದು ಕ್ರಿ.ಶ. 1268 ನೆಯ ವರ್ಷದಲ್ಲಿ ಕಾಂಚೀನಗರದ ತೊಪ್ಪುಳ್ ಅಗ್ರಹಾರದಲ್ಲಿ. ಇವರ ತಂದೆ ಅನಂತಸೂರಿ, ತಾಯಿ ತೋತಾರಾಂಬಾ. ಚಿಕ್ಕಂದಿನಿಂದಲೇ ವೇದ ಶಾಸ್ತ್ರಗಳನ್ನೆಲ್ಲ ಕಲಿತು 'ವಿಶ್ರುತ ನನಾ ವಿಧವಿದ್ಯ' ಎನಿಸಿಕೊಂಡರು. ತಮಿಳು, ಸಂಸ್ಕೃತ ಮತ್ತು ಪ್ರಾಕೃತ ಭಾಷೆಗಳು ಇವರಿಗೆ ಕರತಲಾಮಲಕವಾಗಿದ್ದುವು. 1369ರವರೆಗೆ ಬಾಳಿ ಭಗವಂತನ ಕೈಂಕರ್ಯವನ್ನು ನಡೆಸಿ ಮುಕ್ತರಾದರು. ಭಗವದ್ರಾಮಾನುಜರ ಸಿದ್ಧಾಂತವಾದ ವಿಶಿಷ್ಟಾದ್ವೈತ ಸಿದ್ಧಾಂತವನ್ನು ಸ್ಥಿರವಾದ ಅಡಿಪಾಯದ ಮೇಲೆ ನಿಲ್ಲಿಸಲು ಇವರು ಶ್ರೇಷ್ಠ ಗ್ರಂಥಗಳನ್ನು ರಚಿಸಿದರು. ತತ್ತ್ವಮುಕ್ತಾಕಲಾಪ, ಅಧಿಕರಣ ಸಾರಾವಳೀ ಎಂಬ ದಾರ್ಶನಿಕ ಗ್ರಂಥಗಳು ಸಂಪೂರ್ಣವಾಗಿ ಸ್ರಗ್ಧರಾಛಂದಸ್ಸಿನಲ್ಲಿ ರಚಿತವಾಗಿವೆ ಎಂದರೆ ಅವರ ಪಾಂಡಿತ್ಯ-ಕವಿತ್ವಗಳನ್ನು ಊಹಿಸಿಕೊಳ್ಳಬಹುದು. ಇದರಿಂದ ಅವರು ವೇದಾಂತ ಶಾಸ್ತ್ರದ ದೊಡ್ಡ ಭವನವನ್ನೇ ನಿರ್ಮಿಸಿದರೆಂದು ಹೇಳಬೇಕು. ಅವರಿಗೆ–

ಪ್ರತಿಷ್ಠಾಪಿತ ವೇದಾಂತಃ ಪ್ರತಿಕ್ಷಿಪ್ತೆಬಹಿರ್ಮತಃ।
ಭೂಯಾಸ್ತ್ರೈವಿದ್ಯಮಾನ್ಯಸ್ತ್ವಂ ಭೂರಿ ಕಲ್ಯಾಣಭಾಜನಮ್ ॥

(ನೀನು ವೇದಾಂತ ಮತವನ್ನು ಪ್ರತಿಷ್ಠಾಪಿಸಿ, ವಿರೋಧಿ ಮತಗಳನ್ನು ಕಿತ್ತೆಸೆದು ತ್ರೈವಿದ್ಯರಿಗೆ ಮಾನ್ಯನಾಗಿ ಹೆಚ್ಚು ಹೆಚ್ಚು ಕಲ್ಯಾಣಗಳಿಗೆ ಪಾತ್ರನಾಗು) ಎಂದು ಗುರುಗಳು ಮಾಡಿದ್ದ ಆಶೀರ್ವಾದವು ಸತ್ಯವಾಯಿತು. ಕಾವ್ಯ, ನಾಟಕ, ಸ್ತೋತ್ರಶಾಸ್ತ್ರ ಎಂದು ನಾನಾ ಪ್ರಕಾರಗಳಲ್ಲಿ ಗ್ರಂಥ ರಚನೆಯನ್ನು ವೇದಾಂತ ದೇಶಿಕರು ಮಾಡಿ ಸಂಸ್ಕೃತಕ್ಕೆ ಮಾಡಿದ ಸೇವೆ ಅನನ್ಯಸಾಧ್ಯ ಎನಿಸಿಕೊಂಡಿತು. ಅವರಿಗೆ ತಂದೆ ಇಟ್ಟ ಹೆಸರು ವೇಂಕಟನಾಥ. ಅವರು ಪ್ರಸಿದ್ಧರಾಗಿರುವುದು ವೇದಾಂತ ದೇಶಿಕ, ವೇದಾಂತ ಗುರು, ವೇದಾಂತಾಚಾರ್ಯ ಎಂದು. ಕವಿತ್ವದಲ್ಲೂ, ತರ್ಕದಲ್ಲೂ ಅವರು ಅಸಮಾನ ಪಾಂಡಿತ್ಯವನ್ನು ಹೊಂದಿದ್ದುದರಿಂದ ಅವರಿಗೆ ಕವಿತಾರ್ಕಿಕ ಕೇಸರಿ ಎಂಬ ಬಿರುದೂ ಇತ್ತು. ಆದ್ದರಿಂದಲೇ–

ಶ್ರೀಮಾನ್ ವೇಂಕಟನಾಥಾರ್ಯಃ ಕವಿತಾರ್ಕಿಕ ಕೇಸರೀ।
ವೇದಾಂತಾಚಾರ್ಯವರ್ಯೋ ಮೇ ಸಂವಿಧತ್ತಾಂ ಸದಾ ಹೃದಿ॥

ಎಂಬ ಮಂಗಳ ಶ್ಲೋಕವು ಲೋಕಪ್ರಸಿದ್ಧವಾಗಿದೆ.

ಪಾದುಕಾ ಸಹಸ್ರ: ಇದೊಂದು ಸ್ತೋತ್ರಕಾವ್ಯ. ಅನೇಕ ಸ್ತೋತ್ರಗಳಲ್ಲಿ ಕೇವಲ ಸ್ತುತಿ ಇದ್ದು ಕಾವ್ಯದ ಅಂಶವು ಇರುವುದಿಲ್ಲ. ಆದರೆ ವೇದಾಂತ ದೇಶಿಕರು ರಚಿಸಿರುವ ಸ್ತೋತ್ರಗಳಲ್ಲಿ ಕಾವ್ಯದ ಗುಣಗಳು ತುಂಬಿರುತ್ತವೆ. ಒಂದು ಪದ್ಯವೂ ವ್ಯರ್ಥವೆನಿಸುವುದಿಲ್ಲ. ಮೂವತ್ತಕ್ಕಿಂತ ಹೆಚ್ಚು ಸ್ತೋತ್ರಗಳನ್ನು ಅವರು ರಚಿಸಿದ್ದಾರೆ. ಅವುಗಳಲ್ಲಿ ಪಾದುಕಾ ಸಹಸ್ರವು ಅತ್ಯಂತ ವಿಶಿಷ್ಟವಾಗಿದೆ. ಏಕೆಂದರೆ ಭಗವಂತನ ಪಾದುಕೆಗಳ ಮಹಿಮೆಯನ್ನು ಕುರಿತು ಸಾವಿರದೆಂಟು ಪದ್ಯಗಳನ್ನು ರಚಿಸುವುದೆಂದರೆ ಸಾಮಾನ್ಯವೇ? ಅದರಲ್ಲಿರುವ ಒಂದು ಪದ್ಯಕ್ಕೆ ಸಮಾನವಾದ ಪದ್ಯವನ್ನು ರಚಿಸುವುದೂ ಇಂದಿನ ಕವಿಗಳಿಗೆ ಕಷ್ಟ. ಒಂದು ಐತಿಹ್ಯದ ಪ್ರಕಾರ ಒಂದೇ ರಾತ್ರಿಯಲ್ಲಿ ಒಂದೇ ವಿಷಯದಲ್ಲಿ ಸಾವಿರ ಶ್ಲೋಕಗಳನ್ನು ರಚಿಸಬೇಕೆಂಬ ಸ್ಪರ್ಧೆಯಲ್ಲಿ ವೇದಾಂತ ದೇಶಿಕರು ಪಾದುಕಾ ಸಹಸ್ರವನ್ನು ರಚಿಸಿದರು. ಸ್ಪರ್ಧೆಯಲ್ಲಿದ್ದ ಇನ್ನೊಬ್ಬ ಕವಿ ಕೆಲವೇ ಶ್ಲೋಕಗಳನ್ನು ರಚಿಸಿದ್ದರೂ ಅವರನ್ನೂ ದೇಶಿಕರು ವಿಶಾಲ ಹೃದಯದಿಂದ ಹೊಗಳಿದರಂತೆ.

ಸೂತೇ ಸೂಕರ ಯುವತಿಃ
ಸುತಶತಮತ್ಯೆಂತ ದುರ್ಭಗಂ ಝಟಿತಿ।

> ಮೈಸೂರಿನ 'ಪರಂಪರೆ' ಎಂಬ ಸಂಸ್ಥೆಯು ಸುಧರ್ಮಾ ಸಂಸ್ಕೃತ ದಿನಪತ್ರಿಕೆಯ ಸಹಕಾರದೊಂದಿಗೆ ಕೃಷ್ಣಮೂರ್ತಿಪುರಂನಲ್ಲಿರುವ ಬಿಎಸ್ಎಸ್ ವಿದ್ಯೋದಯ ಕಾಲೇಜಿನ ಸಭಾಂಗಣದಲ್ಲಿ ದಿನಾಂಕ 2.3.2026 ರಿಂದ 8.3.2026ರವರೆಗೆ (ಏಳು ದಿನ) ಪಾದುಕಾ ಸಹಸ್ರ ಪ್ರವಚನವನ್ನು ಏರ್ಪಡಿಸಿದೆ. ಸಾಯಂಕಾಲ ಆರು ಗಂಟೆಯಿಂದ ಆರೂವರೆಯವರೆಗೆ ಪಾದುಕಾ ಸಹಸ್ರ ಪದ್ಯಗಳ ಗಾನ. 6.30 ರಿಂದ 8 ರವರೆಗೆ ಪ್ರವಚನ. ಪ್ರವಚನಕಾರರು : ಡಾ. ಎಚ್.ವಿ. ನಾಗರಾಜರಾವ್. ಸರ್ವರಿಗೂ ಸುಸ್ವಾಗತ.

ಕರಿಣೀ ಚಿರಾಯ ಸೂತೇ
ಸಕಲ ಮಹೀಪಾಲಲಾಲಿತಂ ಕಲಭಮ್॥

(ಹೆಣ್ಣು ಹಂದಿಯು ಸರಸರನೆ ಕುರೂಪದ ನೂರು ಮರಿಗಳನ್ನು ಹೆರುತ್ತದೆ. ಹೆಣ್ಣಾನೆಯಾದರೋ ದೀರ್ಘ ಕಾಲದಲ್ಲೊಮ್ಮೆ ಒಂದೇ ಮರಿಯನ್ನು ಈಯುತ್ತದೆ ಆ ಆನೆಮರಿಯನ್ನು ಎಲ್ಲ ರಾಜರೂ ಲಾಲಿಸಿ ಪಾಲಿಸುತ್ತಾರೆ) ಎಂಬುದು ಆಗ ದೇಶಿಕರು ಆಡಿದ ಮಾತು ಎನ್ನುತ್ತಾರೆ ಅವರ ಭಕ್ತರು.

ಭಗವಂತನ, ಅವನ ಪಾದಗಳ, ಅವುಗಳ ಪಾದುಕೆಗಳ ಪ್ರಭಾವ ಅನಂತವಾದುದು. ಅದಕ್ಕೆ ಕೊನೆಯೇ ಇಲ್ಲ ಎಂದು ದೇಶಿಕರು ಅಪ್ಪಣೆ ಕೊಡಿಸಿದ್ದಾರೆ.

ನಿಶ್ಶೇಷಮಂಬರತಲಂ ಯದಿ ಪತ್ರಿಕಾ ಸ್ಯಾತ್
ಸಪ್ತಾರ್ಣವೀ ಯದಿ ಸಮೇತ್ಯ ಮಕ್ಷಿ ಭವಿತ್ರೀ।
ವಕ್ತಾ ಸಹಸ್ರವದನಃ ಪುರುಷಃ ಸ್ವಯಂಚೇತ್
ಲಿಖ್ಯೇತ ರಂಗಪತಿಪಾದುಕಯೋಃ ಪ್ರಭಾವಃ॥

(ಸಮಸ್ತವಾದ ಆಕಾಶವು ಕಾಗದವಾದರೆ, ಏಳು ಸಮುದ್ರಗಳ ನೀರೆಲ್ಲ ಮಸಿಯಾದರೆ, ಸಾವಿರ ಮುಖಗಳನ್ನೂ (ಎರಡು ಸಾವಿರ ಕೈಗಳನ್ನೂ) ಹೊಂದಿರುವ ಪುರುಷನು ಸತತವಾಗಿ ಬರೆಯುತ್ತಿದ್ದರೆ ಭಗವಂತನ ಪಾದುಕೆಗಳ ಪ್ರಭಾವವನ್ನು ಹೇಳಲು ಸಾಧ್ಯವಾಗಬಹುದೇನೋ!)

ಮನುಷ್ಯನ ಪ್ರಯತ್ನ ಎಷ್ಟು ದೊಡ್ಡದಾದರೂ ವಿಶ್ವರೂಪನಾದ ವಿಷ್ಣುವಿನ ಮಹಿಮೆ ಅದಕ್ಕೆ ಎಂದೂ ಪೂರ್ಣವಾಗಿ ಗೋಚರ ಆಗದು. ಏಕೆಂದರೆ ಅದು ಅನಂತ. ಇದನ್ನು ದೇಶಿಕರು ಒಂದು ಪದ್ಯದಲ್ಲಿ ತಿಳಿಸುತ್ತಾನೆ.

ಅಂಬುನ್ಯಂಬುನಿಧೇರನನ್ಯಗತಿಭಿರ್ಮೀನೈಃ ಕಿಯದ್ಗಮ್ಯತೇ
ಕ್ಲೇಶೇನಾಪಿ ಕಿಯದ್ ವ್ಯಲಂಘಿ ರಭಸೋತ್ತುಂಗೈಃ ಪ್ಲವಂಗೇಶ್ವರೈಃ।
ವಿಜ್ಞಾತಾ ಕಿಯತೀ ಪುನಃ ಕ್ಷಿತಿಭೃತಾ ಮಂಥೇನ ಗಂಭೀರತಾ
ಕಿಂ ತೈಃ ಕೇಶವ ಪಾದುಕಾ ಗುಣಮಹಾಂಭೋಧೇಸ್ತಟಸ್ಥಾ ವಯಮ್ ।

ಸಮುದ್ರದ ನೀರಿನಲ್ಲಿ ಮೀನುಗಳು ಎಷ್ಟು ದೂರ ಸಾಗಬಲ್ಲವು? ಎಷ್ಟೊ ಕ್ಲೇಶವನ್ನು ಸಹಿಸಿದರೂ ಕಪಿವೀರರು ಎಷ್ಟು ದೂರ ಹಾರಿ ದಾಟಿದರು? ಕಡಲನ್ನು ಕಡೆಯಲು ಬಳಸಲಾಗಿದ್ದ ಮಂದರಪರ್ವತವು ಕಡಲಿನ ಎಷ್ಟು ಆಳವನ್ನು ಕಂಡಿತು? ಅವುಗಳ ವಿಷಯ ಅರಿತಿರಲಿ. ಭಗವಂತನ ಪಾದುಕೆಗಳ ಮಹಿಮೆಯ ಸಮುದ್ರವನ್ನು ದಡದಲ್ಲಿ ನಿಂತು ನೋಡುವ ನಾವು ಎಷ್ಟು ತಿಳಿಯಬಲ್ಲೆವು?

ಈ ಪದ್ಯದಲ್ಲಿ ವೇದಾಂತ ದೇಶಿಕರ ವಿನಿಯಾತಿಶಯ ವ್ಯಕ್ತವಾಗಿದೆ. ಅವರು ಸರ್ವತಂತ್ರ ಸ್ವತಂತ್ರ ಎಂಬ ಬಿರುದನ್ನು ಹೊಂದಿದ್ದರು. ಆದರೂ ನಾನು ಕೇವಲ ತಟಸ್ಥ ಎಂಬ ಭಾವನೆಯನ್ನು ತೋರಿಸಿದ್ದಾರೆ.

ಭಗವಂತನ ಪಾದುಕೆಗಳ ಮಹಿಮೆಯನ್ನು ಮೊದಲು ಅರಿತಿದ್ದ ಮಹಾವ್ಯಕ್ತಿ ಎಂದರೆ ಭರತ. ರಾಮನ ಪಾದುಕೆಗಳನ್ನು ತಲೆಯ ಮೇಲೆ ಹೊತ್ತು ಅಯೋಧ್ಯೆಯವರೆಗೂ ತಂದು ಸಿಂಹಾಸನದ ಮೇಲಿರಿಸಿ ಪಾದುಕಾ ಪಟ್ಟಾಭಿಷೇಕವನ್ನು ನೆರವೇರಿಸಿದ ಭರತನಿಗೆ ಸಮಾನರು ಯಾರು? ಪಾದುಕ ಸಹಸ್ರದಲ್ಲಿ ಅವನಿಗೇ ಪ್ರಥಮ ನಮಸ್ಕಾರವನ್ನು ಸಲ್ಲಿಸಿದ್ದಾರೆ.

ಭರತಾಯ ಪರಂ ನಮೋಽಸ್ತು ತಸ್ಮೈ
ಪ್ರಥಮೋದಾಹರಣಾಯ ಭಕ್ತಿಭಾಜಾಮ್।
ಯದುಪಜ್ಞಮಶೇಷತಃ ಪೃಥಿವ್ಯಾಂ
ಪ್ರಥಿತೋ ರಾಘವಪಾದುಕಾಪ್ರಭಾವಃ॥

ಭಗವತ್ಪಾದುಗಳ ಪ್ರಭಾವವನ್ನು ಪ್ರಪಂಚದಲ್ಲಿ ಹರಡಿದವರಲ್ಲಿ ಮೊದಲನೆಯ ಮಾನವನಾದ ಭರತನಿಗೆ ನಮಸ್ಕಾರ ಎಂದು ಈ ಕಾವ್ಯದ ಪ್ರಾರಂಭ. ಭಗವಂತನ ಪಾದುಕೆಗಳೇ ಕಲಿಯುಗದಲ್ಲಿ ಭಕ್ತಿ ಪಾರಮ್ಯವನ್ನೂ ಪ್ರಪತ್ತಿ ಭಕ್ತರ ಉದ್ಧಾರವನ್ನು ಮಾಡಿದುವು ಎಂದು ಆಸ್ತಿಕರ ನಂಬಿಕೆ. ಆದ್ದರಿಂದ ಪಾದುಕಾಸಹಸ್ರದಲ್ಲಿ ನಮ್ಮಾಳ್ವಾರರಿಗೆ ವಿಶೇಷ ಪ್ರಾಧಾನ್ಯ. ಅವರನ್ನು ಸಂಸ್ಕೃತದಲ್ಲಿ ಶಠಾರಿ, ಶಠಕೋಪಮುನಿ ಎಂದು ಕರೆಯುತ್ತಾರೆ. ಅವರು ರಚಿಸಿದ, ತಮಿಳು ಭಾಷೆಯಲ್ಲಿರುವ ಪ್ರಬಂಧಗಳನ್ನು ವೇದಾಂತ ದೇಶಿಕರು **ದ್ರಮಿಡೋಪನಿಷತ್** ಎಂದೇ ಕರೆದಿದ್ದಾರೆ.

ದ್ರಮಿಡೋಪನಿಷನ್ನಿವೇಧ ಶೂನ್ಯಾನ್
ಅಪಿ ಲಕ್ಷ್ಮೀರಮಣಾಯ ರೋಚಯಿಷ್ಯನ್ ।
ಧ್ರುವಮಾವಿಶತಿ ಸ್ವಪಾದುಕಾತ್ಮಾ
ಶಠಕೋಪಃ ಸ್ವಯಮೇವ ಮಾನನೀಯಃ॥

ಎಂಬುದು ಅವರ ಮಾತು.

ಪಾದುಕಾ ಸಹಸ್ರದಲ್ಲಿ ವೇದಾಂತ ದೇಶಿಕರ ಕವಿತಾ ಪ್ರತಿಭೆ ಮೇರು ಶಿಖರವನ್ನು ಮುಟ್ಟಿದೆ. ಅಲಂಕಾರ, ಗುಣ, ರಸ, ಭಾವ, ಧ್ವನಿ, ಔಚಿತ್ಯ ಮುಂತಾದ ಎಲ್ಲಾ ಅಂಶಗಳೂ ಇದರಲ್ಲಿ ಶೋಭಿಸಿವೆ. ಪ್ರಸ್ತಾವ, ಸಮಾಖ್ಯಾ, ಪ್ರಭಾವ, ಸಮರ್ಪಣ, ಪ್ರತಿಪ್ರಸ್ಥಾನ, ಅಭಿಷೇಕ, ನಿರ್ಯಾತನಾ, ವಂದಿವೈತಾಲಿಕ, ಶೃಂಗಾರ, ಸಂಚಾರ, ಪುಷ್ಪ, ಪರಾಗ, ನಾದ, ರತ್ನ ಸಾಮಾನ್ಯ, ಬಹುರತ್ನ, ಪದ್ಮರಾಗ, ಮುಕ್ತಾ, ಮರಕತ, ಇಂದ್ರನೀಲ, ಬಿಂಬಪ್ರತಿಬಿಂಬ, ಕಾಂಚನ, ಶೇಷ, ದ್ವಂದ್ವ ಸನ್ನಿವೇಶ, ಯಂತ್ರಿಕಾ, ರೇಖಾ, ಸುಭಾಷಿತ, ಪ್ರಕೀರ್ಣಕ, ಚಿತ್ರ, ನಿರ್ವೇದ, ಫಲ ಎಂಬ ಮೂವತ್ತೆರಡು ಪದ್ಧತಿ (ಅಧ್ಯಾಯ)ಗಳಲ್ಲಿ ಶ್ಲೋಕಗಳನ್ನು ರಚಿಸಲಾಗಿದೆ. ಚಿತ್ರಪದ್ಧತಿಯಲ್ಲಿ ಪದ್ಮಬಂಧ, ಗೋಮೂತ್ರಿಕಾಬಂಧ ಮುಂತಾದ ಬುದ್ಧಿಗೆ ಸವಾಲಾಗುವ ಚಿತ್ರಕಾವ್ಯವಿದೆ. ಅದರಲ್ಲಿರುವ ಚತುರಂಗತುರಂಗಬಂಧವಂತೂ ಮಾನವ ಬುದ್ಧಿಶಕ್ತಿಯ ಪರಾಕಾಷ್ಠೆಯನ್ನು ತೋರಿಸುತ್ತದೆ.

ಗ್ರಂಥದ ಕೊನೆಯಲ್ಲಿ ವೇದಾಂತ ದೇಶಿಕರು ಹೇಳುತ್ತಾರೆ–

ಯದಿ ಸ್ಥಿತಾ ಭಕ್ತಿಃ ಪ್ರಣಯಮುಖವಾಣೀಪರಿಪಣಂ
ಪದತ್ರಾಣಸ್ತೋತ್ರಂ ಹೃದಿಬಿಭೃತ ರಂಗಕ್ಷಿತಿಭೃತಃ॥
ನಿರುನ್ಮಾದೋ ಯದ್ವಾ ನಿರವಧಿ ಸುಧಾನಿರ್ಝರಮುಚಃ
ವಚೋಭಂಗೀರೇತಾಃ ನ ಕಥಮನುರುಂಧೇ ಸಹೃದಯಃ॥

(ನಿಮ್ಮಲ್ಲಿ ದೃಢವಾಗಿ ಬೆಳೆದ ಭಕ್ತಿ ಇರುವುದಾದರೆ ಸ್ನೇಹ ಪೂರ್ವಕ ಮಾತುಗಳಿಂದ ತುಂಬಿದ ರಂಗನಾಥನ ಪಾದುಕೆಯ ಈ ಸ್ತೋತ್ರವನ್ನು ಹೃದಯದಲ್ಲಿ ತುಂಬಿಕೊಳ್ಳಿರಿ. ಉನ್ಮಾದವಿಲ್ಲದ ಯಾವನೇ ಸಹೃದಯನು ಅವಧಿಯೇ ಇಲ್ಲದ ಅಮೃತದ ಹೊನಲುಗಳನ್ನು ಸುರಿಸುವ ಈ ಮಾತುಗಳ ವಿನ್ಯಾಸಗಳನ್ನು ಇಷ್ಟಪಡದಿರುವುದು ಹೇಗೆ ಸಾಧ್ಯ?)

ವೇದಾಂತ ದೇಶಿಕರ ಪಾದುಕಾಸಹಸ್ರದಿಂದ ಪ್ರೇರಿತನಾದ ಕವಿ ವೆಂಕಟಾಧ್ವರಿಯು ಹದಿನೇಳನೆಯ ಶತಮಾನದಲ್ಲಿ ಲಕ್ಷ್ಮೀಸಹಸ್ರವೆಂಬ ಶ್ರೇಷ್ಠಕಾವ್ಯವನ್ನು ರಚಿಸಿದನು. ವಾಸಿಷ್ಠ ಗಣಪತಿಮುನಿಗಳು ಅನಂತರ ಉಮಾಸಹಸ್ರವನ್ನು ಸೃಜಿಸಿದರು. ಸಂಸ್ಕೃತ ಭಾಷಾ ಜ್ಯೋತಿಯು ಹೀಗೆ ಎಲ್ಲ ಶತಮಾನಗಳಲ್ಲಿ ಬೆಳಗುತ್ತಿದೆ.

ಮೈಸೂರಲ್ಲಿ ತಡರಾತ್ರಿ ಸುರಿದ ಭಾರೀ ಮಳೆ

ಮಾ.1ರವರೆಗೆ ಮಳೆ ಸಾಧ್ಯತೆ

ಭಾರತೀಯ ಹವಾಮಾನ ಇಲಾಖೆಯ ಮುನ್ಸೂಚನೆಯಂತೆ ಮಾ.1ರವರೆಗೆ ಮೈಸೂರು, ಕೊಡಗು, ಮಂಡ್ಯ ಹಾಗೂ ಚಾಮರಾಜನಗರ ಜಿಲ್ಲೆಗಳಲ್ಲಿ ಹಗುರ ಮಳೆ ಬರುವ ಸಾಧ್ಯತೆ ಇದೆ ಎಂದು ನಾಗನಹಳ್ಳಿಯ ಕೃಷಿ ಹವಾಮಾನ ಕ್ಷೇತ್ರ ವಿಭಾಗದ ಪ್ರಕಟಣೆ ತಿಳಿಸಿದೆ.

ಮೈಸೂರು,ಫೆ.24(ಪಿಎಂ)– ಮೈಸೂರು ನಗರದ ವಿವಿಧೆಡೆ ಹಾಗೂ ಸುತ್ತಮುತ್ತಲ ಪ್ರದೇಶದಲ್ಲಿ ಮಂಗಳವಾರ ತಡರಾತ್ರಿ ಧಾರಾಕಾರ ಮಳೆ ಸುರಿಯಿತು.

ನಗರದಲ್ಲಿ ಇಂದು ಬೆಳಗ್ಗೆಯಿಂದ ಸಂಜೆಯವರೆಗೆ ಬಿಸಿಲಿನ ತಾಪ ಜೋರಾಗಿಯೇ ಇತ್ತು. ಆ ಮೂಲಕ ಸಂಜೆ ಇಲ್ಲವೇ ರಾತ್ರಿ ವೇಳೆಗೆ ಧಾರಾಕಾರ ಮಳೆಯಾಗುವ ಮುನ್ಸೂಚನೆ ನೀಡಿತ್ತು. ಅಂತೆಯೇ ಸಂಜೆ ವೇಳೆಗೆ ಮೋಡ ಕವಿದ ವಾತಾವರಣ ಉಂಟಾಗಿತ್ತಾದರೂ ಮಳೆ ಬಂದಿರಲಿಲ್ಲ. ಆದರೆ ತಡರಾತ್ರಿ ವೇಳೆಗೆ ಮಳೆ ಸುರಿಯಿತು.

ಕೆಆರ್ ವೃತ್ತ, ಚಾಮರಾಜ ಒಡೆಯರ್ ವೃತ್ತ ಸೇರಿದಂತೆ ನಗರದ ಹೃದಯ ಭಾಗದ ವೃತ್ತಗಳು ಹಾಗೂ ರಸ್ತೆಗಳು ಜಲಾವೃತಗೊಂಡಿದ್ದವು. ತಡರಾತ್ರಿ ಮಳೆಯಾದ ಕಾರಣ ಜನಜೀವನಕ್ಕೆ ಯಾವುದೇ ತೊಂದರೆ ಉಂಟಾಗಲಿಲ್ಲ. ಆದರೆ ರಾತ್ರಿ ಪಾಳಿಯಲ್ಲಿ ಕೆಲಸ ಮಾಡುವ ವಿವಿಧ ಕ್ಷೇತ್ರದ ಉದ್ಯೋಗಸ್ಥರು ತಮ್ಮ ಕೆಲಸದ ಸ್ಥಳಕ್ಕೆ ತೆರಳಲು ತೊಂದರೆ ಅನುಭವಿಸಿದರು. ಅಲ್ಲದೆ, ಮೈಸೂರು ನಗರದ ತಗ್ಗು ಪ್ರದೇಶಗಳಲ್ಲಿ ಮಳೆ ನೀರು ನಿಂತು ಅವಾಂತರ ಸೃಷ್ಟಿಯಾಗಿತ್ತು. ಹಲವು ಮನೆ ಆವರಣಕ್ಕೆ ನೀರು ನುಗ್ಗಿದ ಪರಿಣಾಮ ನಿವಾಸಿಗಳು ಕಿರಿಕಿರಿ ಅನುಭವಿಸಬೇಕಾಯಿತು.

ಅಭಿನಂದನೆ



ಮೈಸೂರು ಚಾಮರಾಜ ಕ್ಷೇತ್ರದ ಇಂದಿರಾಗಾಂಧಿ ಬ್ಲಾಕ್ ಕಾಂಗ್ರೆಸ್ ಉಪಾಧ್ಯಕ್ಷರಾಗಿ ನೇಮಕವಾದ ಲಕ್ಷ್ಮೀಕಾಂತನಗರದ ಶಾಂತಕುಮಾರ್ ಅವರನ್ನು ಇಂದಿರಾಗಾಂಧಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ರವಿ ಮಂಚೇಗೌಡ ಹಾಗೂ ಇತರ ಪದಾಧಿಕಾರಿಗಳು ಅಭಿನಂದಿಸಿದರು. ಕಾರ್ಯದರ್ಶಿ ರಾಮಚಂದ್ರ, ಒಂದನೇ ವಾರ್ಡ್ ಅಧ್ಯಕ್ಷ ಜಗದೀಶ್, ರಮೇಶ್ ಮತ್ತಿತರರು ಚಿತ್ರದಲ್ಲಿದ್ದಾರೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಬದಲಾವಣೆ ಸುಳಿವು ಸಚಿವ ಮಹದೇವಪ್ಪರಿಗೆ ಇರಬಹುದು...!

● ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಟಾಂಗ್
● ಅವರೇ ನಮ್ಮ ಹೈಕಮಾಂಡ್; ಹಾಗಾಗಿ ಮಾಹಿತಿ ಇರುತ್ತೆ!!

ಬೆಂಗಳೂರು, ಫೆ.24(ಕೆಎಂಶಿ)– ಮುಖ್ಯಮಂತ್ರಿ ಸಿದ್ದರಾಮಯ್ಯ ನಾಯಕತ್ವ ಬದಲಾವಣೆ ಕುರಿತಂತೆ ಸಮಾಜ ಕಲ್ಯಾಣ ಸಚಿವ ಡಾ. ಎಚ್.ಸಿ.ಮಹದೇವಪ್ಪ ಅವರಿಗೆ ವರಿಷ್ಠರಿಂದ ಸುಳಿವು ಸಿಕ್ಕಿರಬಹುದು ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಇಂದಿಲ್ಲಿ ತಿಳಿಸಿದ್ದಾರೆ.

ಮಹದೇವಪ್ಪ ಕೂಡ ನಮ್ಮ ಹೈಕಮಾಂಡ್ ಆಗಿರುವುದರಿಂದ ರಾಜ್ಯದಲ್ಲಿ ನಾಯಕತ್ವ ಬದಲಾವಣೆ ವಿಚಾರ, ಮಾಹಿತಿ ಅವರಿಗೆ ತಿಳಿದಿರಬೇಕು ಆದ್ದರಿಂದ ದಲಿತ ಮುಖ್ಯಮಂತ್ರಿ ವಿಷಯ ಮಾತನಾಡುತ್ತಿದ್ದಾರೆ.

ಮಹದೇವಪ್ಪ ಅವರ ಹೇಳಿಕೆ ನೋಡಿದೆ. ಅದರ ಹೊರತಾಗಿ ಬೇರೆ ಯಾವುದೇ ಚರ್ಚೆ ಇಲ್ಲ. ಅವರಿಗೆ ಮುಖ್ಯಮಂತ್ರಿ ಬದಲಾವಣೆ ಮಾಹಿತಿ ಇರಬಹುದು. ಆದರೆ, ಆ ವಿಚಾರವಾಗಿ ನನಗೆ ಯಾವುದೇ ಮಾಹಿತಿ ಇಲ್ಲ ಎಂದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ನನಗಂತೂ ಈ ಬಗ್ಗೆ ಯಾವುದೇ ಮಾಹಿತಿ ಇಲ್ಲ. ಹೈಕಮಾಂಡ್‌ನಿಂದಲೂ ನನಗೆ ಯಾವುದೇ ಕರೆ ಬಂದಿಲ್ಲ. ನನ್ನನ್ನು ವರಿಷ್ಠರು ದೆಹಲಿಗೆ ಬರುವಂತೆಯೂ ಸೂಚಿಸಿಲ್ಲ. ಸದ್ಯಕ್ಕೆ ನಾನು ಇಲ್ಲಿ ಕುಮಾರಕೃಪಾದಲ್ಲಿ ಇದ್ದೇನೆ ಎಂದು ಸ್ಪಷ್ಟಪಡಿಸಿದರು.



ಆದರೆ, ನಾನು ಇಲಾಖಾ ಕೆಲಸ–ಕಾರ್ಯಗಳ ಮೇಲೆ ದೆಹಲಿಗೆ ಹೋಗಬೇಕಿದೆ. ಕೇಂದ್ರ ನಗರಾಭಿವೃದ್ಧಿ ಇಲಾಖೆ ನಗರಗಳ ಅಭಿವೃದ್ಧಿಗಾಗಿ ಒಂದು ಲಕ್ಷ ಕೋಟಿ ರೂ. ನೀಡುತ್ತಿದೆ. ಇದರಲ್ಲಿ ನನ್ನ ಇಲಾಖೆ ವ್ಯಾಪ್ತಿಗೆ ಬರುವ ಬೆಂಗಳೂರು ಅಭಿವೃದ್ಧಿಗೆ ಒಂದಷ್ಟು ಹಣ ಪಡೆಯಲು ಕೇಂದ್ರಕ್ಕೆ ಪ್ರಸ್ತಾವನೆ ಸಲ್ಲಿಸಲು ತೆರಳಲಿದ್ದೇನೆ. ಉಳಿದ ವಿಚಾರ ನನಗೆ ಗೊತ್ತಿಲ್ಲ.

ರಾಜಣ್ಣ ದೊಡ್ಡವರು: ಡಾ. ಪರಮೇಶ್ವರ್ ಅವರಿಗೆ ಮೊದಲು ಕೂಲಿ ಕೊಡಲಿ ಎಂಬ ಮಾಜಿ ಸಚಿವ ಕೆ.ಎನ್.ರಾಜಣ್ಣ ಹೇಳಿಕೆಗೆ 'ಅವರು ದೊಡ್ಡವರು' ಎಂದರು.

ನಾನು, ಸತೀಶ್ ಜಾರಕಿಹೊಳಿ ಸಮಾನ ಮನಸ್ಕರು, ಪಕ್ಷದ ವಿಚಾರವಾಗಿ ವಾರಕ್ಕೊಮ್ಮೆ ಚರ್ಚೆ ಮಾಡುತ್ತೇವೆ. ಅವರು ನಮ್ಮ ಹಿರಿಯ ನಾಯಕರು. ನನ್ನ ಜತೆ ಕಾರ್ಯಾಧ್ಯಕ್ಷರಾಗಿ ಕೆಲಸ ಮಾಡಿದ್ದಾರೆ. ಅವರಿಗೂ ಪಕ್ಷದ ಬಗ್ಗೆ ಅಪಾರವಾದ ಚಿಂತನೆ ಇದೆ. ನಮ್ಮ ಸರ್ಕಾರವನ್ನು ಮತ್ತೆ ಅಧಿಕಾರಕ್ಕೆ ತರಲು ನಾವೆಲ್ಲ ಯೋಜನೆ ತಯಾರು ಮಾಡುತ್ತಿದ್ದೇವೆ. ಸತೀಶ್ ಜಾರಕಿಹೊಳಿ ಅವರು ಗೊಂದಲ ಬಗೆಹರಿಯುವಂತೆ ಕಾಣುತ್ತಿದೆ ಎಂದಿರುವ ಬಗ್ಗೆ ನಾನು ಪತ್ರಿಕೆಯಲ್ಲಿ ನೋಡಿದೆ. ಇದರ ಹೊರತಾಗಿ ನನಗೆ ಹೆಚ್ಚಿನ ಮಾಹಿತಿ ಇಲ್ಲ ಎಂದರು.

ನೂತನ ಶಾಸಕರ ಬೇಡಿಕೆ ಸರಿ ಇದೆ: ನೂತನ ಶಾಸಕರು ಕನಿಷ್ಠ ಐದು ಮಂತ್ರಿ ಸ್ಥಾನ ಹೊಸಬರಿಗೆ ನೀಡಬೇಕು ಎಂದು ಹೈಕಮಾಂಡ್‌ಗೆ ಬರೆದಿರುವ ಪತ್ರದ ಬಗ್ಗೆ ಪ್ರತಿಕ್ರಿಯಿಸಿ, ಹೊಸ ಪೀಳಿಗೆ, ಹೊಸ ಆಲೋಚನೆ ಬರಬೇಕು. ನಾವು ಎಷ್ಟು ದಿನ ಗೂಟ ಹೊಡೆದುಕೊಂಡಿರಲು ಸಾಧ್ಯ. ಈ ಬಗ್ಗೆ ಪತ್ರಿಕೆಗಳಲ್ಲಿ ಓದಿದ್ದೇನೆ. ನನಗೆ ಅವರ ಪತ್ರ ತಲುಪಿಲ್ಲ.

ಎಲ್ಲರಿಗೂ ಮಂತ್ರಿಯಾಗುವ ಆಸೆ ಇರುತ್ತದೆ. ಪ್ರಧಾನಿ ನರೇಂದ್ರ ಮೋದಿ ಅವರು ಶಾಸಕರಾಗದೇ ಮುಖ್ಯಮಂತ್ರಿ ಆಗಲಿಲ್ಲವೇ, ಶಾಸಕರು ಕೇಳುವುದರಲ್ಲಿ ತಪ್ಪೇನಿಲ್ಲ, ಮೊದಲ ಬಾರಿಗೆ ಶಾಸಕರಾದಾಗ ಮಂತ್ರಿಯಾದವರಲ್ಲಿ ನಾನೂ ಒಬ್ಬ.

ನಾನು ಸಚಿವನಾಗಿ 36 ವರ್ಷವಾಗಿದೆ. ಹೊಸಬರು ಸಂಪುಟಕ್ಕೆ ಬರಬೇಕು ಎಂದು ಬೆಂಬಲಿಸುವವರಲ್ಲಿ ನಾನೂ ಇದ್ದೇನೆ. ಹೊಸಬರನ್ನು ನಾವು ತಯಾರು ಮಾಡಬೇಕಲ್ಲ. ಈ ಬಗ್ಗೆ ಪಕ್ಷ ತೀರ್ಮಾನ ಮಾಡುತ್ತದೆ ಎಂದರು.

ನಾನು ಮಂತ್ರಿಮಂಡಲ ಮಾಡುತ್ತೇನೆ ಎಂದು ಹೇಳಿಲ್ಲ. ಸಚಿವ ಸಂಪುಟ ವಿಸ್ತರಣೆ ಮಾಡುತ್ತೇನೆ ಎಂದು ಮುಖ್ಯಮಂತ್ರಿಗಳು ಹೇಳಿದ್ದಾರೆ. ಅವರು ಸಂಚಿವ ಸಂಪುಟ ವಿಸ್ತರಣೆ ಮಾಡುವ ಕಾರಣಕ್ಕೆ ಕೆಲವರು ಪತ್ರ ಬರೆಯುತ್ತಾರೆ. ದೆಹಲಿಗೆ ಹೋಗುತ್ತಾರೆ, ಹೊರಗಡೆ ಹೋಗುತ್ತಾರೆ. ಅವರಿಗೂ ಆಸೆ ಇರುತ್ತದೆ.

ಸಚಿವರು ಸಿಎಂ ಕಡಿವಾಣ ಹಾಕಬೇಕು: ನಾಯಕತ್ವ ಬದಲಾವಣೆ ಸೇರಿದಂತೆ ಕೆಲವು ರಾಜಕೀಯ ವಿಷಯಗಳ ಬಗ್ಗೆ ಸಚಿವರುಗಳು ಪದೇ ಪದೇ ಪ್ರಸ್ತಾಪ ಮಾಡುತ್ತಿರುವುದಕ್ಕೆ ಕಡಿವಾಣ ಹಾಕಲು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರೇ ಕ್ರಮ ಕೈಗೊಳ್ಳಬೇಕು.

ಪಕ್ಷದ ರಾಜ್ಯಾಧ್ಯಕ್ಷನಾಗಿ ವರಿಷ್ಠರಿಗೆ ಎಲ್ಲಾ ಮಾಹಿತಿಗಳನ್ನು ಕಾಲಾನುಕಾಲಕ್ಕೆ ಕೊಡುವುದಷ್ಟೇ ನನ್ನ ಕೆಲಸ. ಸಚಿವರ ಬಾಯಿಗೆ ಬೀಗ ಹಾಕಿಸುವ ಅಧಿಕಾರ ನನಗಿಲ್ಲ. ಅದು ಇರುವುದು ಮುಖ್ಯಮಂತ್ರಿ ಅವರಿಗೆ ಮಾತ್ರ.

ಕೆಲವು ಶಾಸಕರು ಅಧಿಕಾರ ಹಸ್ತಾಂತರ ಆಗುತ್ತದೆ. ಶಿವಕುಮಾರ್ ಮುಖ್ಯಮಂತ್ರಿ ಆಗುತ್ತಾರೆ. ಅವರನ್ನು ವರಿಷ್ಠರು ದೆಹಲಿಗೆ ಕರೆದಿದ್ದಾರೆ ಎಂದೆಲ್ಲಾ ಸಾರ್ವಜನಿಕವಾಗೇ ಹೇಳಿಕೆ ನೀಡುತ್ತಿದ್ದಾರಲ್ಲ ಎಂಬ ಪ್ರಶ್ನೆಗೆ ಏನನ್ನೂ ಉತ್ತರಿಸದೆ ತೆರಳಿದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಮೈಸೂರು ಮಿತ್ರ

ಏಕಲವ್ಯ ನಗರದಲ್ಲಿ 22 ಫಲಾನುಭವಿಗಳಿಗೆ ಲಾಟರಿ ಮೂಲಕ ಮನೆ ವಿತರಣೆ

ಫಲಾನುಭವಿಗಳೇ ವಾಸಿಸುವಂತೆ ಶಾಸಕ ಹರೀಶ್‌ಗೌಡರು ತಾಕೀತು



ಮೈಸೂರಿನ ಏಕಲವ್ಯನಗರದಲ್ಲಿ ಜೆಎನ್ ನರ್ಮ್-ಬಿಎಸ್‌ಯುಪಿ ಯೋಜನೆಯಡಿ ನಿರ್ಮಿಸಿರುವ ಜಿ+3 ಮಾದರಿ ವಸತಿ ಸಮುಚ್ಚಯದಲ್ಲಿ 22 ಮಂದಿ ಫಲಾನುಭವಿಗಳಿಗೆ ಲಾಟರಿ ಮೂಲಕ ಶಾಸಕ ಕೆ.ಹರೀಶ್‌ಗೌಡ ಮಂಗಳವಾರ ಮನೆಗಳನ್ನು ಹಂಚಿಕೆ ಮಾಡಿದರು.

ಮೈಸೂರು, ಫೆ.24(ಎಂಕೆ)- ಮೈಸೂರಿನ ಏಕಲವ್ಯ ನಗರದಲ್ಲಿ ಜೆಎನ್ ನರ್ಮ್-ಬಿಎಸ್‌ಯುಪಿ ಯೋಜನೆಯಡಿ ನಿರ್ಮಿಸಿರುವ ಜಿ+3 ಮಾದರಿ ವಸತಿ ಸಮುಚ್ಚಯದಲ್ಲಿ 22 ಮಂದಿ ಫಲಾನುಭವಿಗಳಿಗೆ ಲಾಟರಿ ಮೂಲಕ ಶಾಸಕ ಕೆ.ಹರೀಶ್‌ಗೌಡ ಮನೆಗಳನ್ನು ಹಂಚಿಕೆ ಮಾಡಿದರು.

ಮೈಸೂರಿನ ಬನ್ನಿಮಂಟಪದಲ್ಲಿರುವ ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿಯ ಕಚೇರಿ ಆವರಣದಲ್ಲಿ ಮಂಗಳವಾರ ನಡೆದ ಮನೆಗಳ ಹಂಚಿಕೆ ಕಾರ್ಯಕ್ರಮದಲ್ಲಿ ವಿವಿಧ ಕೊಳಗೇರಿ ನಿವಾಸಿಗಳಲ್ಲಿ ಲಾಟರಿ ಮೂಲಕ ಆಯ್ಕೆಯಾದ ಫಲಾನುಭವಿಗಳಿಗೆ ಮನೆಗಳನ್ನು ಹಂಚಿಕೆ ಮಾಡಲಾಯಿತು.

ಬಳಿಕ ಮಾತನಾಡಿದ ಅವರು, ಏಕಲವ್ಯನಗರದಲ್ಲಿ ಜೆಎನ್ ನರ್ಮ್-ಬಿಎಸ್‌ಯುಪಿ ಯೋಜನೆಯಡಿ ನಿರ್ಮಿಸಿರುವ ಜಿ+3 ಮಾದರಿ ವಸತಿ ಸಮುಚ್ಚಯದಲ್ಲಿ ನಿಯಮಾನುಸಾರ ಫಲಾನುಭವಿಗಳ ಪಟ್ಟಿ ಮಾಡಿ 22 ಮಂದಿಗೆ ಮನೆಗಳನ್ನು ಹಂಚಿಕೆ ಮಾಡಿದ್ದು, ಬಾಕಿ ಇರುವ ಮನೆಗಳನ್ನು ಮುಂದಿನ ದಿನದಲ್ಲಿ ಹಂಚಿಕೆ ಮಾಡಲು ಸೂಕ್ತ ಕ್ರಮವಹಿಸುವಂತೆ ಅಧಿಕಾರಿಗಳಿಗೆ ಸೂಚಿಸಿದರು.

ಮನೆಗಳನ್ನು ಪಡೆದುಕೊಂಡಿರುವ ಫಲಾನುಭವಿಗಳು ಹಂಚಿಕೆಯಾಗಿರುವ ಮನೆಗಳಿಗೆ ನಿಗದಿಪಡಿಸಿದ ಹಣವನ್ನು ಪಾವತಿಸಿ, ಎಲ್ಲಾ ದಾಖಲೆಗಳನ್ನು ಪಡೆದುಕೊಂಡು, ಹಂಚಿಕೆಯಾಗಿರುವ ಮನೆಗಳಲ್ಲಿಯೇ ವಾಸಿಸಬೇಕು. ಮನೆಗಳನ್ನು ಇನ್ನೊಬ್ಬರಿಗೆ ಬಾಡಿಗೆ ಅಥವಾ ಭೋಗ್ಯಕ್ಕೆ ನೀಡಿ, ಪುನಃ ಕೊಳಗೇರಿಗಳಲ್ಲಿ ವಾಸಿಸಬಾರದೆಂದು ತಾಕೀತು ಮಾಡಿದರು. ದೇವರಾಜ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಡಿ.ನಾಗಭೂಷಣ್, ಇಂದಿರಾ ಗಾಂಧಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ರವಿ ಮಂಚೇಗೌಡನ ಕೊಪ್ಪಲು, ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿಯ ಕಾರ್ಯಪಾಲಕ ಇಂಜಿನಿಯರ್ ಮಹಮ್ಮದ್ ಜಫ್ರುಲ್ಲಾ, ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಜಿ.ಎಸ್.ರಾಮಚಂದ್ರ ಸಹಾಯಕ ಇಂಜಿನಿಯರ್ ಜೆ.ಝಾನ್ಸಿ ರಾಯ್, ಮುಖಂಡರಾದ ಷಣ್ಮುಗಂ, ಕುಮಾರ್ ಮತ್ತಿತರರು ಉಪಸ್ಥಿತರಿದ್ದರು.

ಸ್ನಾತಕೋತ್ತರ ಪದವಿ ಪಡೆದರು ಕೌಶಲ್ಯ, ಸಂವಹನ ಕೊರತೆಯಿಂದ ಉದ್ಯೋಗ ಲಭಿಸುತ್ತಿಲ್ಲ

● ಮೈಸೂರು ವಿವಿ ಪರೀಕ್ಷಾಂಗ ಕುಲಸಚಿವ ಪ್ರೊ. ಎನ್.ನಾಗರಾಜು ವಿಷಾದ ● ಕಂಪ್ಯೂಟರ್ ಬಂದಾಗ ಉದ್ಯೋಗ ಕಿತ್ತುಕೊಳ್ಳುತ್ತೆ ಎಂದರು; ಆದರೆ ಉದ್ಯೋಗ ಸೃಷ್ಟಿಯಾದವು ● ಈಗ ಎಐ ಭೀತಿ ಎದುರಾಗಿದೆ

ಮೈಸೂರು, ಫೆ.24(ಎಂಟಿವೈ)- ಸ್ನಾತಕೋತ್ತರ ಪದವಿ ಪಡೆದ ವಿದ್ಯಾರ್ಥಿಗಳು ಕೌಶಲ್ಯ ಮತ್ತು ಸಂವಹನದ ಕೊರತೆಯಿಂದಾಗಿ ಉದ್ಯೋಗ ಗಿಟ್ಟಿಸಿಕೊಳ್ಳಲು ಸಾಧ್ಯವಾಗದೆ ಪರಿತಪಿಸುವಂತಾಗಿದೆ ಎಂದು ಮೈಸೂರು ವಿಶ್ವವಿದ್ಯಾನಿಲಯದ ಪರೀಕ್ಷಾಂಗ ಕುಲಸಚಿವ ಪ್ರೊ.ಎನ್.ನಾಗರಾಜು ವಿಷಾದಿಸಿದ್ದಾರೆ.

ಮೈಸೂರು ವಿಶ್ವವಿದ್ಯಾನಿಲಯದ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ಬಿಎಂಶ್ರೀ ಸಭಾಂಗಣದಲ್ಲಿ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ಆಯೋಜಿಸಿದ್ದ 'ಕೌಶಲ್ಯ, ಅಭಿವ್ಯಕ್ತಿ ಮತ್ತು ಸಂವಹನ'ದ ರಾಷ್ಟ್ರೀಯ ತರಬೇತಿ ಕಾರ್ಯಾಗಾರವನ್ನು ಉದ್ಘಾಟಿಸಿ ಮಾತನಾಡಿದ ಅವರು, ವಿದ್ಯಾರ್ಥಿಗಳು ಅಧ್ಯಯನ ಶೀಲತೆಯೊಂದಿಗೆ ಪ್ರಸ್ತುತ ಕಾಲಮಾನದಲ್ಲಿ ಸಂವಹನ ಮತ್ತು ಕೌಶಲ್ಯವನ್ನು ರೂಢಿಸಿಕೊಳ್ಳಬೇಕು. ಪಠ್ಯಕ್ರಮದಲ್ಲಿ ಕೌಶಲ್ಯ ಮತ್ತು ಸಂವಹನದ ಬಗ್ಗೆ ಹೇಳಿಕೊಡುವುದಿಲ್ಲ. ಆದರೆ, ವಿದ್ಯಾರ್ಥಿಗಳು ಉತ್ತಮ ಸಂವಹನದೊಂದಿಗೆ ಕೌಶಲ್ಯ ಕರಗತ ಮಾಡಿಕೊಳ್ಳಲು ಮುಂದಾಗ ಬೇಕು. ಕೌಶಲ್ಯಾಭಿವೃದ್ಧಿಗೆ ಕೇಂದ್ರ ಸರ್ಕಾರದ ಅನುದಾನದಡಿ ಮೈಸೂರು ವಿವಿ ವಿಭಾಗಗಳಲ್ಲಿ ಕಾರ್ಯಾಗಾರ ನಡೆಸಲಾಗುತ್ತಿದೆ ಎಂದು ಹೇಳಿದರು.



ಮೈಸೂರು ವಿಶ್ವವಿದ್ಯಾನಿಲಯದ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ಬಿಎಂಶ್ರೀ ಸಭಾಂಗಣದಲ್ಲಿ ನಡೆದ 'ಕೌಶಲ್ಯ, ಅಭಿವ್ಯಕ್ತಿ ಮತ್ತು ಸಂವಹನ'ದ ರಾಷ್ಟ್ರೀಯ ತರಬೇತಿ ಕಾರ್ಯಾಗಾರದಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಪರೀಕ್ಷಾಂಗ ಕುಲಸಚಿವ ಪ್ರೊ.ಎನ್.ನಾಗರಾಜು ಮಾತನಾಡಿದರು.

ಸ್ನಾತಕೋತ್ತರ ಪದವಿ, ಪಿಹೆಚ್‌ಡಿ ಪದವಿ ಪಡೆದು ಉದ್ಯೋಗವಿಲ್ಲದೆ ಪರದಾಡುತ್ತಿದ್ದಾರೆ. ಪಿಹೆಚ್‌ಡಿ ಅಧ್ಯಯನವೂ ಸಹಾಯಕ ಪ್ರಾಧ್ಯಾಪಕರಾಗಲು ಅರ್ಹತೆ ನೀಡಬಹುದು. ಆದರೆ, ಇದಕ್ಕಿಂತ ಸಂವಹನದ ಕೌಶಲ್ಯ ಮುಖ್ಯ. ಉದ್ಯೋಗ ಮಾಡಲು ಬೇಕಾಗುವ ಕೌಶಲ್ಯಗಳು ಇರಬೇಕು. ವಿದ್ಯಾರ್ಹತೆಗೆ ತಕ್ಕಂತೆ ಇಂದು ಉದ್ಯೋಗಗಳು ಸಿಗುತ್ತಿಲ್ಲ. ಇದಕ್ಕೆ ವಿದ್ಯಾರ್ಥಿಗಳು ಹತಾಶೆಗೆ ಒಳಗಾಗಬಾರದು. ಕಾರ್ಪೊರೇಟ್ ವಲಯ, ಬ್ಯಾಂಕಿಂಗ್, ಸಾಫ್ಟ್‌ವೇರ್ ವಲಯದಲ್ಲಿ ದೊರೆಯುವ ಉದ್ಯೋಗಗಳಿಗೆ ತಕ್ಕಂತೆ ಕೌಶಲ್ಯ ಹೊಂದಬೇಕು. ಹಳೆಯ ವಿದ್ಯಾರ್ಥಿಗಳು ಮಾಡಿದ ತಪ್ಪುಗಳನ್ನು ಇಂದಿನ ವಿದ್ಯಾರ್ಥಿಗಳು ಮಾಡಬಾರದು. ಕನ್ನಡ ಎಂಎ ಮಾಡಿದ ವಿದ್ಯಾರ್ಥಿಗಳಿಗೆ ಸರಿಯಾಗಿ ಕನ್ನಡ ಬರೆಯಲು ಬರುತ್ತಿಲ್ಲ. ಇಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ವಿದ್ಯಾರ್ಥಿಗಳು ಉದ್ಯೋಗ ಹುಡುಕುವ ಬದಲು ಉದ್ಯೋಗದಾತರಾಗಬೇಕು. ಸರ್ಕಾರದ ಸೌಲಭ್ಯಗಳನ್ನು ಬಳಸಿಕೊಂಡು ಬಂಡವಾಳ ಹಾಕಿ ಬದುಕು ಕಟ್ಟಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಕನ್ನಡ ಅಧ್ಯಯನ ಸಂಸ್ಥೆಯ ನಿರ್ದೇಶಕರಾದ ಪ್ರೊ.ಎನ್.ಕೆ.ಲೋಲಾಕ್ಷಿ ಮಾತನಾಡಿ, ಡಿಜಿಟಲ್ ಯುಗದಲ್ಲಿ ಕನ್ನಡವನ್ನು ಸಜ್ಜುಗೊಳಿಸುವ ತುರ್ತು ಪರಿಸ್ಥಿತಿ ನಿರ್ಮಾಣವಾಗಿದೆ. ಆದರೆ, ಕನ್ನಡದ ವಿದ್ಯಾರ್ಥಿಗಳು ಇದಕ್ಕೆ ಧೃತಿಗೆಡುವ ಅವಶ್ಯಕತೆ ಇಲ್ಲ. ನವದೆಹಲಿಯಲ್ಲಿ ನಡೆದ ಎಐ ತಂತ್ರಜ್ಞಾನದ ಸಮಾವೇಶದ ನಂತರ ಐಟಿ-ಬಿಟಿ ಕಂಪನಿಗಳು ಮಕಾಡೆ ಮಲಗಲಾರಂಭಿಸಿವೆ. ಭಾರೀ ಜನ ಕೆಲಸ ಕಳೆದುಕೊಳ್ಳುತ್ತಾರೆ ಎಂಬ ಚರ್ಚೆಗಳು ಮುನ್ನಲೆಗೆ ಬಂದಿವೆ. ಕಂಪ್ಯೂಟರ್ ಬಂದಾಗಲು ಇದೆ ರೀತಿಯ ಚರ್ಚೆ ಆರಂಭವಾಗಿತ್ತು ಆದರೆ, ಉದ್ಯೋಗಗಳು ಸೃಷ್ಟಿಯಾದವು. ಈಗ ಎಐ ಕೂಡ ಎಲ್ಲಾ ಉದ್ಯೋಗಗಳನ್ನು ಕಿತ್ತುಕೊಳ್ಳುವುದಿಲ್ಲ. ಅದರಲ್ಲಿಯೂ ಕನ್ನಡ ಸಾಹಿತ್ಯದ ವಿದ್ಯಾರ್ಥಿಗಳಿಗೆ ಉದ್ಯೋಗಾವಕಾಶ ಹೆಚ್ಚಾಗಲಿವೆ ಎಂದರು.

ಕನ್ನಡ ಸಾಹಿತ್ಯದ ಭಾಷೆಯ ಕೆಲಸವನ್ನು ಎಐ ಮಾಡುವುದಿಲ್ಲ. ಎಐ ಮಾಹಿತಿಯನ್ನು ಕ್ರೂಢೀಕರಿಸುವ ಕೆಲಸ ಮಾಡಲಿದೆ. ಆದರೆ, ಇಂದಿನ ಸಮಸ್ಯೆಗೆ ಭಾವನಾತ್ಮಕವಾಗಿ ಸ್ಪಂದಿಸಿ ಸಮಸ್ಯೆಯನ್ನು ಬಗೆಹರಿಸಿಕೊಳ್ಳಲು ಮತ್ತು ಮನುಷ್ಯತ್ವ ತೋರಿಸುವುದು ಕೃತಕ ಬುದ್ಧಿಮತ್ತೆಯಿಂದ ಸಾಧ್ಯವಿಲ್ಲ. ನೈಜ ಬುದ್ಧಿಮತ್ತೆ ಮಾತ್ರ ಸಾಧ್ಯ. ಹೀಗಾಗಿ ಕನ್ನಡ ಸಾಹಿತ್ಯದ ವಿದ್ಯಾರ್ಥಿಗಳಿಗೆ ಉದ್ಯೋಗಗಳು ತೆರೆದುಕೊಳ್ಳಲಿವೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ವೃತ್ತಿ ಕೇಂದ್ರದ ಸಂಯೋಜಕ ಪ್ರೊ.ಆರ್.ಮಹೇಶ್, ಪ್ರೊ.ಎಸ್.ಡಿ.ಶಶಿಕಲಾ, ಸಂಪನ್ಮೂಲ ವ್ಯಕ್ತಿ ರಾಘವೇಂದ್ರ ಪತ್ತಾರ್ ಉಪಸ್ಥಿತರಿದ್ದರು.

ಗುತ್ತಿಗೆ ಆಧಾರದಲ್ಲಿ ಕೆಲಸ ಮಾಡುತ್ತಿರುವ 6800 ಪೌರಕಾರ್ಮಿಕರ ಕಾಯಂಗೆ ಆಗ್ರಹ

ಇನ್ನಿತರ ಸಮಸ್ಯೆಗೂ ಬಜೆಟ್‌ನಲ್ಲಿ ಪರಿಹಾರ ಘೋಷಿಸುವಂತೆ ಒತ್ತಾಯ



ಮಾಜಿ ಮೇಯರ್ ನಾರಾಯಣ ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು.

ಮೈಸೂರು,ಫೆ.24(ಎಂಟಿವೈ)- ರಾಜ್ಯದ ವಿವಿಧ ಸ್ಥಳೀಯ ಸಂಸ್ಥೆಗಳಲ್ಲಿ ಗುತ್ತಿಗೆ ಆಧಾರದಲ್ಲಿ ಕೆಲಸ ಮಾಡುತ್ತಿರುವ 6800 ಪೌರಕಾರ್ಮಿಕರನ್ನು ಕಾಯಂ ಮಾಡಿ, ಈ ಸಾಲಿನ ಬಜೆಟ್‌ನಲ್ಲಿ ಪೌರಕಾರ್ಮಿಕರ ವಿವಿಧ ಬೇಡಿಕೆ ಈಡೇರಿಸಲು ಘೋಷಿಸಬೇಕು ಎಂದು ಮಾಜಿ ಮೇಯರ್ ಹಾಗೂ ಕರ್ನಾಟಕ ರಾಜ್ಯ ನಗರ ಪಾಲಿಕೆ, ನಗರಸಭೆ, ಪುರಸಭೆಗಳ ಪೌರ ಕಾರ್ಮಿಕರ ಮಹಾ ಸಂಘದ ರಾಜ್ಯಾಧ್ಯಕ್ಷ ನಾರಾಯಣ ಒತ್ತಾಯಿಸಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸಮಾಜದ ಆರೋಗ್ಯ, ಸ್ವಚ್ಛತೆ ಕಾಪಾಡುವ ನಿಟ್ಟಿನಲ್ಲಿ ಪೌರಕಾರ್ಮಿಕರ ಪಾತ್ರ ಬಹುಮುಖ್ಯವಾಗಿದೆ. ಅವರು ಹಲವು ಸಮಸ್ಯೆ ಎದುರಿಸುತ್ತಿದ್ದು, ಅವುಗಳನ್ನು ಬಗೆಹರಿಸುವಂತೆ ಈಗಾಗಲೇ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಭೇಟಿ ಮಾಡಿ ಚರ್ಚಿಸಲಾಗಿದೆ. ಅಲ್ಲದೆ, ಪೌರಕಾರ್ಮಿಕರ ಬೇಡಿಕೆ ಈಡೇರಿಸುವಂತೆ ಮನವಿ ಸಲ್ಲಿಸಲಾಗಿದೆ ಎಂದರು.

ರಾಜ್ಯ ಬಹುತೇಕ ಎಲ್ಲಾ ಸ್ಥಳೀಯ ಸಂಸ್ಥೆಗಳಲ್ಲಿ 35,400 ಮಂದಿ ನೇರ ಪಾವತಿಯಲ್ಲಿ ಕೆಲಸ ಮಾಡುತ್ತಿದ್ದು, ಇವರಲ್ಲಿ 29 ಸಾವಿರ ಮಂದಿಯನ್ನು ಖಾಯಂ ಮಾಡಲಾಗಿದೆ. ಇನ್ನು 6,800 ಮಂದಿ ಪೌರಕಾರ್ಮಿಕರನ್ನು ಖಾಯಂ ಮಾಡಬೇಕಾಗಿದೆ. ಘನತ್ಯಾಜ್ಯ ಸ್ವಚ್ಛತಾ ವಾಹನ ಚಾಲಕರು, ಲೋಡರ್ಸ್, ಕ್ಲೀನರ್‌ಗಳನ್ನು ಗುತ್ತಿಗೆ ಪದ್ಧತಿಯಿಂದ ವಿಮುಕ್ತಿಗೊಳಿಸಿ ನೇರ ವೇತನ ಪಾವತಿ ವ್ಯವಸ್ಥೆಗೆ ತರಬೇಕು. 10 ಮಹಾನಗರ ಪಾಲಿಕೆಗಳಲ್ಲಿರುವ 6700 ಕಾರ್ಮಿಕರು ಒಳಚರಂಡಿ ವಿಭಾಗದಲ್ಲಿ ಗುತ್ತಿಗೆ ಆಧಾರದಲ್ಲಿ ಕೆಲಸ ಮಾಡುತ್ತಿದ್ದಾರೆ. ಈಗಾಗಲೇ ಹಣಕಾಸು ಇಲಾಖೆ 592 ಒಳಚರಂಡಿ ಪೌರ ಕಾರ್ಮಿಕರನ್ನು ಖಾಯಂ ಮಾಡಲು ಅನುಮತಿ ನೀಡಿದೆ. ಅದರಲ್ಲಿ 472 ಜನ ಕಾರ್ಮಿಕರನ್ನು ಖಾಯಂ ಮಾಡಲು ಸರ್ಕಾರ ತೀರ್ಮಾನಿಸಿದ್ದು, ಸಚಿವ ಸಂಪುಟದಲ್ಲಿ ಪ್ರಸ್ತಾವನೆ ಸಲ್ಲಿಸಲು ಮುಂದಾಗಿದೆ. ಈ ಆದೇಶವನ್ನು ಶೀಘ್ರದಲ್ಲಿ ಮಾಡುವಂತೆ ಮನವಿ ಸಲ್ಲಿಸಲಾಗಿದೆ ಎಂದರು.

ಸುದ್ದಿಗೋಷ್ಠಿಯಲ್ಲಿ ಕರ್ನಾಟಕ ರಾಜ್ಯ ನಗರಪಾಲಿಕೆ, ನಗರಸಭೆ, ಪುರಸಭೆಗಳ ಪೌರಕಾರ್ಮಿಕರ ಮಹಾ ಸಂಘದ ಪದಾಧಿಕಾರಿಗಳಾದ ಆರ್.ಶಿವಣ್ಣ, ಯತಿರಾಜ್, ಆರ್.ದಾಸು, ಎಸ್.ನಾಗರಾಜ್, ಶ್ರೀನಿವಾಸ ಉಪಸ್ಥಿತರಿದ್ದರು.

ಫೆ.28 ರಂದು ಉಚಿತ ಆರೋಗ್ಯ ತಪಾಸಣಾ ಶಿಬಿರ

ಮೈಸೂರು, ಫೆ24- ಮೈಸೂರಿನ ಆರೋಗ್ಯ ಭಾರತಿ, ಬೃಂದಾವನ ಆಸ್ಪತ್ರೆ ವತಿಯಿಂದ ಉಚಿತ ಆರೋಗ್ಯ ತಪಾಸಣಾ ಶಿಬಿರವನ್ನು, ಫೆ.28 ರಂದು ಬೆಳಗ್ಗೆ 9 ರಿಂದ ಮಧ್ಯಾಹ್ನ 2 ಗಂಟೆಯವರೆಗೆ ಜಯನಗರ, #136, 2ನೇ ಮುಖ್ಯರಸ್ತೆ, 11ನೇ ಕ್ರಾಸ್‌ನಲ್ಲಿರುವ ಆರೋಗ್ಯ ಭಾರತಿ ಕಾರ್ಯಾಲಯದಲ್ಲಿ ಏರ್ಪಡಿಸಲಾಗಿದೆ.

ಶಿಬಿರದಲ್ಲಿ ಬಿಪಿ, ಶುಗರ್ ತಪಾಸಣೆ, ಮೂಳೆ ಹಾಗೂ ಕೀಲು, ನರರೋಗ ತಪಾಸಣೆ, ಸ್ತ್ರೀರೋಗ ತಪಾಸಣೆ, ಕಿಡ್ನಿ, ಮೂತ್ರದ ಗುಣಮಟ್ಟದ ತಪಾಸಣೆ, ಹೃದಯ ತಪಾಸಣೆ, ಕಿವಿ,ಮೂಗು,ಗಂಟಲು ತಪಾಸಣೆ, ಬಿಳಿಮಚ್ಚೆ, ಕೂದಲು ಉದುರುವಿಕೆ, ತಲೆಹೊಟ್ಟು, ಹುಳುಕಡ್ಡಿ, ಚರ್ಮದ ಸಮಸ್ಯೆಗಳು ಸೇರಿದಂತೆ ಲೈಂಗಿಕ ತೊಂದರೆಗಳಿಗೆ ನುರಿತ ವೈದ್ಯರ ತಂಡದಿಂದ ತಪಾಸಣೆ ನಡೆಸಲಿದೆ. ಹೆಚ್ಚಿನ ಮಾಹಿತಿಗೆ ದೂರವಾಣಿ- 8867259815.9880913461, 9742634110 ಮೂಲಕ ಸಂಪರ್ಕಿಸುವಂತೆ ಶಿಬಿರದ ಆಯೋಜಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕೆಎಸ್‌ಓಯು ಅಕ್ರಮ ಪ್ರಕರಣ ; ಮುಂದುವರೆದ ತನಿಖೆ

ಇಂದು ಸತ್ಯ ಶೋಧನಾ ಸಮಿತಿ ಅಧ್ಯಕ್ಷ ನಿವೃತ್ತ ನ್ಯಾ.ಬಿ.ಎ.ಪಾಟೀಲ್ ವಿವಿಗೆ ಭೇಟಿ

ಪೂರಕ ದಾಖಲೆಗಳೊಂದಿಗೆ ಹೇಳಿಕೆ ದಾಖಲಿಸಲು ವಿವಿ ಸಿಬ್ಬಂದಿಗೆ ಅವಕಾಶ

ಮೈಸೂರು,ಫೆ.24(ಪಿಎಂ)- ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿ (ಕೆಎಸ್ ಓಯು) ನಡೆದಿದೆ ಎನ್ನಲಾದ ಅಕ್ರಮಗಳ ಸಂಬಂಧ ಮುಂದುವರೆದ ತನಿಖೆಗಾಗಿ ರಾಜ್ಯಪಾಲರು ರಚಿಸಿರುವ ಏಕವ್ಯಕ್ತಿ ಸತ್ಯಶೋಧನಾ ಸಮಿತಿಯ ಅಧ್ಯಕ್ಷರೂ ಆದ ಕರ್ನಾಟಕ ಹೈಕೋರ್ಟ್ ನಿವೃತ್ತ ನ್ಯಾಯ ಮೂರ್ತಿ ಬಿ.ಎ.ಪಾಟೀಲ್ ಅವರು ಫೆ.25ರಂದು ಮೈಸೂರಿನ ಹುಣಸೂರು ರಸ್ತೆಯಲ್ಲಿರುವ ಕೆಎಸ್‌ಓಯುಗೆ ಭೇಟಿ ನೀಡಲಿದ್ದಾರೆ.



ನಗರದ ಹುಣಸೂರು ರಸ್ತೆಯ ಮುಕ್ತ ಗಂಗೋತ್ರಿ ಆವರಣದಲ್ಲಿರುವ ವಿವಿಯ ಅತಿಥಿಗೃಹಕ್ಕೆ ಅಂದು ಬೆಳಗ್ಗೆ 11ಕ್ಕೆ ನಿವೃತ್ತ ನ್ಯಾ.ಬಿ.ಎ.ಪಾಟೀಲ್ ಆಗಮಿಸಲಿದ್ದಾರೆ. ಮಂಜೂರಾದ ಹುದ್ದೆಗಳಿಗಿಂತ ಹೆಚ್ಚಿನ ತಾತ್ಕಾಲಿಕ ಬೋಧಕ ಮತ್ತು ಬೋಧಕೇತರ ಸಿಬ್ಬಂದಿ ನೇಮಕಾತಿ ಮತ್ತು ಪದನಾಮಗಳ ಬದಲಾವಣೆ ಸೇರಿದಂತೆ ಅನೇಕ ಅಕ್ರಮಗಳು ನಡೆದಿರುವ ಆರೋಪ ಸಂಬಂಧ ನಿವೃತ್ತ ನ್ಯಾ.ಬಿ.ಎ.ಪಾಟೀಲ್ ಅಧ್ಯಕ್ಷತೆಯಲ್ಲಿ ಸದರಿ ಸಮಿತಿ ರಚಿಸಿ ತಿಂಗಳೊಳಗೆ ವರದಿ ನೀಡುವಂತೆ ಕೆಎಸ್‌ಓಯು ಕುಲಾಧಿಪತಿಗಳೂ ಆದ ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್ ಅವರು ಜ.30 ರಂದು ಅಧಿಸೂಚನೆ ಹೊರಡಿಸಿ ಆದೇಶಿಸಿದ್ದರು.



ಬಿ.ಎ.ಪಾಟೀಲ್

ಅನಗತ್ಯವಾಗಿ ಪ್ರಾದೇಶಿಕ ಕೇಂದ್ರಗಳನ್ನು ತೆರೆದಿರುವುದು ಮತ್ತು ಈ ಕೇಂದ್ರಗಳಿಗೆ ತಾತ್ಕಾಲಿಕ ನಿರ್ದೇಶಕರ ನೇಮಕಾತಿ ಮಾಡಿರುವುದು, ರಾಜ್ಯ ಸರ್ಕಾರ ಮತ್ತು ಕೆಎಸ್‌ಓಯು ವ್ಯವಸ್ಥಾಪನಾ ಮಂಡಳಿಯ ಅನುಮೋದನೆ ಇಲ್ಲದೆ ಹುದ್ದೆಗಳ ಸೃಷ್ಟಿಸಿರುವುದು, ನಿಯಮ ಬಾಹಿರವಾಗಿ ಖಾಸಗಿ ಅಧ್ಯಯನ ಕೇಂದ್ರಗಳನ್ನು ತೆರೆಯಲು ಅನುಮತಿ ನೀಡಿರುವುದು ಹಾಗೂ ನವದೆಹಲಿಯ ವರ್ಚುವಲ್ ಎಜುಕೇಷನ್ ಟ್ರಸ್ಟ್‌ಗೆ ನಿಯಮಬಾಹಿರವಾಗಿ 1.71 ಕೋಟಿ ರೂ. ಪಾವತಿ ಮಾಡಿರುವ ಆರೋಪ ಸಂಬಂಧವೂ ತನಿಖೆ ಆರಂಭಿಸಲಾಗಿದೆ.

ಫೆ.18ರ ಬುಧವಾರ ನ್ಯಾ.ಬಿ.ಎ. ಪಾಟೀಲ್ ಕೆಎಸ್‌ಓಯುಗೆ ಭೇಟಿ ನೀಡಿ ತನಿಖೆ ಆರಂಭಿಸಿದ್ದರು. ಇದೀಗ ಮುಂದುವರೆದ ತನಿಖೆಗೆ ಮತ್ತೆ ಆಗಮಿಸುತ್ತಿದ್ದಾರೆ. ಅವರಲ್ಲಿ ಹೇಳಿಕೆಗಳನ್ನು ದಾಖಲಿಸಲು ವಿವಿ ಸಿಬ್ಬಂದಿಗೆ ಅವಕಾಶ ಕಲ್ಪಿಸಲಾಗಿದೆ. ಈ ಸಂಬಂಧ ಮುಕ್ತ ವಿಶ್ವವಿದ್ಯಾನಿಲಯದ ಆಡಳಿತ ವಿಭಾಗದ ಕುಲಸಚಿವರು ಸುತ್ತೋಲೆ ಹೊರಡಿಸಿದ್ದು, ಹೇಳಿಕೆಯನ್ನು ನೀಡಲು ಇಚ್ಛಿಸುವ ಸಿಬ್ಬಂದಿ ಪೂರಕ ದಾಖಲೆಗಳೊಂದಿಗೆ ಖುದ್ದು ಹಾಜರಾಗಬಹುದೆಂದು ಅವರು ಸುತ್ತೋಲೆಯಲ್ಲಿ ತಿಳಿಸಿದ್ದಾರೆ.

ಬಾಯಿ ಕ್ಯಾನ್ಸರ್ ಜಾಗೃತಿ ಸಂಬಂಧ ಡಾ. ಬೃಂದಾ ಸುಹಾಸ್ ಗೋಧಿಗೆ ಸನ್ಮಾನ



ಕಾಶ್ಮೀರದಿಂದ ಕನ್ಯಾಕುಮಾರಿವರೆಗೆ ಸೈಕಲ್ ಯಾತ್ರೆ ಮೂಲಕ ಬಾಯಿ ಕ್ಯಾನ್ಸರ್ ಕುರಿತು ಜಾಗೃತಿ ಮೂಡಿಸಿದ ಜೆಎಸ್‌ಎಸ್ ಡೆಂಟಲ್ ಕಾಲೇಜು, ಆಸ್ಪತ್ರೆಯ ಮಕ್ಕಳ ದಂತ ಚಿಕಿತ್ಸಾ ವಿಭಾಗದ ಅಸೋಸಿಯೇಟ್ ಪ್ರೊಫೆಸರ್ ಡಾ.ಬೃಂದಾ ಸುಹಾಸ್ ಗೋಧಿ ಅವರನ್ನು ಮಂಗಳೂರಿನಲ್ಲಿ ನಡೆದ 76ನೇ ಭಾರತೀಯ ದಂತ ಸಮ್ಮೇಳನದಲ್ಲಿ ಸನ್ಮಾನಿಸಲಾಯಿತು. ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ. ಸುಧಾಕರ್, ಮಂಗಳೂರು ಉತ್ತರ ಶಾಸಕ ಡಾ.ವೈ.ಭರತ್ ಶೆಟ್ಟಿ, ಐಡಿಎ ಪ್ರಧಾನ ಕಚೇರಿಯ ಅಧ್ಯಕ್ಷ ಡಾ.ಸುಬ್ರ ನಂದಿ, ಐಡಿಎ ಪ್ರಧಾನ ಕಚೇರಿಯ ಎಚ್‌ಎಸ್‌ಜಿ ಡಾ.ಅಶೋಕ್ ಧೋಬ್ಳೆ, ಸಂಘಟನಾ ಅಧ್ಯಕ್ಷ ಡಾ. ಶಿವಶರಣ್ ಶೆಟ್ಟಿ ಉಪಸ್ಥಿತರಿದ್ದರು.

ಫೆ.28ರಿಂದ ಎರಡು ದಿನಗಳ ಉಚಿತ ಜ್ಯೋತಿಷ್ಯ ಮಾರ್ಗದರ್ಶನ ಶಿಬಿರ

ಮೈಸೂರು, ಫೆ.24-ಮೈಸೂರಿನ ಜ್ಯೋತಿಷಿ ಮೋನಿಕಾ ಹರಿರಾಮಾಣಿ ಅವರ ನೇತೃತ್ವದಲ್ಲಿ ' ಫ್ರೀ ಕನ್ಸಲ್ಟನ್ಸಿ ಫ್ರಮ್ ಒಕಲ್ಟ್ ಬಿಲೀವರ್- ಸೀಸನ್ 4 ಎಂಬ ಕಾರ್ಯಕ್ರಮವನ್ನು ಫೆ.28 ಹಾಗೂ ಮಾ.1 ರ ಮಧ್ಯಾಹ್ನ 2.30 ರಿಂದ 5.30 ರವರೆಗೆ ನಗರದ ಹೋಟೆಲ್ ಲಿ ರುಚಿಯಲ್ಲಿ ಆಯೋಜಿಸಲಾಗಿದೆ. ಶಿಬಿರದಲ್ಲಿ ದೇಶದ ವಿವಿಧ ಭಾಗಗಳ 25 ರಿಂದ 40 ವರ್ಷಗಳ ಅನುಭವವುಳ್ಳ 150ಕ್ಕೂ ಹೆಚ್ಚು ಜ್ಯೋತಿಷಿಗಳು ಭಾಗವಹಿಸಲಿದ್ದಾರೆ. ವೇದ ಜೋತಿಷ್ಯ, ಸಂಖ್ಯಾಶಾಸ್ತ್ರ, ಹಸ್ತರೇಖೆ, ಟಾರೋ ಕಾರ್ಡ್ ಹಾಗೂ ವಾಸ್ತು ಕುರಿತು ಸಾರ್ವಜನಿಕರಿಗೆ ಉಚಿತ ಮಾರ್ಗದರ್ಶನ ನೀಡಲಿದ್ದಾರೆ ಎಂದು ಮೋನಿಕಾ ಹರಿರಾಮಾಣಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸಾವಿರಾರು ಭಕ್ತರ ಸಮ್ಮುಖದಲ್ಲಿ ಜೇಡಿಕಟ್ಟೆ ಮಹದೇಶ್ವರಸ್ವಾಮಿ ಕೊಂಡೋತ್ಸವ

ಮೈಸೂರು, ಫೆ24- ತಾಲೂಕಿನ ಜಯಪುರ ಗ್ರಾಮದ ಜೇಡಿಕಟ್ಟೆ ಮಹದೇಶ್ವರಸ್ವಾಮಿ ಕೊಂಡೋತ್ಸವ ಸಾವಿರಾರು ಭಕ್ತರ ಸಮ್ಮುಖದಲ್ಲಿ ಮಂಗಳವಾರ ಸೂರ್ಯೋದಯಕ್ಕೂ ಮುನ್ನ ವಿಜೃಂಭಣೆಯಿಂದ ಜರುಗಿತು.

ಶ್ರೀ ವೀರಭದ್ರೇಶ್ವರಸ್ವಾಮಿ, ಶ್ರೀ ಮಹದೇಶ್ವರಸ್ವಾಮಿ, ಬಿರುದು ಬಾವಲಿಗಳು, ಛತ್ರಿಚಾಮರಗಳನ್ನು ಹೊತ್ತ ಗುಡ್ಡಪ್ಪಂದಿರು ಕೊಂಡ ಹಾಯ್ದರು. ಮಾವಿನಹಳ್ಳಿ ಗ್ರಾಮಸ್ಥರು ದೇವಾಲಯದ ಸುತ್ತ ಹುಲಿವಾಹನ ಉತ್ಸವ ಮೂರ್ತಿಯನ್ನು ಪ್ರದಕ್ಷಿಣೆ ಹಾಕಿಸಿದರು. ಜಾನುವಾರುಗಳ ಪಂಜಿನಸೇವೆ ನಡೆಯಿತು. ಭಕ್ತರು ಕೊಂಡಕ್ಕೆ ಪೂಜೆ ಸಲ್ಲಿಸಿ, ದವಸ-ಧಾನ್ಯ ಮತ್ತು ಕೊಬ್ಬರಿ ಕಾಯಿ ಗಳನ್ನು ಸಮರ್ಪಿಸಿದರು. ದೇವರಿಗೆ ಧೂಪ ಹಾಕಿ ಈಡುಗಾಯಿ ಒಡೆದರು. ಸರತಿ ಸಾಲಿನಲ್ಲಿ ದೇವರ ದರ್ಶನ ಪಡೆದು, ಪುನೀತರಾದರು.

ಸೋಮವಾರ ರಾತ್ರಿ ಮಾವಿನಹಳ್ಳಿ ಗ್ರಾಮದಿಂದ 101 ಹಾಲರವಿ ಉತ್ಸವ, ಮಹದೇಶ್ವರ ಸ್ವಾಮಿ ಸರ್ಪದ ವಾಹನ ಮೂರ್ತಿ ಮೆರವಣಿಗೆ ಬರಡನಪುರ ಗ್ರಾಮಕ್ಕೆ ಆಗಮಿಸಿತು. ವಿಶೇಷ ಪೂಜೆ ಸಲ್ಲಿಸಿದ ಬಳಿಕ ಜಯಪುರ ಗಂಗಾಸ್ಥಾನ ಕೆಗ್ಗೆರೆ ಬಳಿಗೆ ಉತ್ಸವ ಮೂರ್ತಿಗಳು, ವೀರಭದ್ರೇಶ್ವರಸ್ವಾಮಿ ಹಲಗೆ ಆಗಮಿಸಿದವು. ಈ ವೇಳೆ ಪೂಜಾ ಕೈಂಕರ್ಯಗಳು ಜರುಗಿದವು. ಹರಕೆ ಹೊತ್ತ ಭಕ್ತರು ಬಾಯಿಬೀಗ ಹಾಕಿಸಿಕೊಂಡು ಹರಕೆ ತೀರಿಸಿದರು. ಮೆರವಣಿಗೆಯಲ್ಲಿ ತಮಟೆ, ಬ್ಯಾಂಡ್ ಸೆಟ್ ಮತ್ತು ಮಂಗಳವಾದ್ಯ ಸದ್ದಿಗೆ ಯುವಕರು ನಂದಿಧ್ವಜ ಕಂಬ ಹೊತ್ತು ಕುಣಿದರು. ಜಯಪುರ ವೃತ್ತದಲ್ಲಿ ಮಧ್ಯರಾತ್ರಿ ಮದ್ದುಗುಂಡುಗಳನ್ನು ಸಿಡಿಸಲಾಯಿತು. ಮೆರವಣಿಗೆ ಜೇಡಿಕಟ್ಟೆ ಮಹದೇಶ್ವರ ಸ್ವಾಮಿ ದೇವಸ್ಥಾನ ತಲುಪಿದ ಬಳಿಕ ಕೊಂಡಕ್ಕೆ ಕರ್ಪೂರ ಹಚ್ಚಲಾಯಿತು. ಕೊಂಡೋತ್ಸವದ ಬಳಿಕ ಸುಮಾರು ಸಾವಿರಾರು ಜನ, ಅನ್ನಪ್ರಸಾದ ಸ್ವೀಕರಿಸಿದರು. ಮಂಗಳವಾರ ಹುಲಿವಾಹನ ಉತ್ಸವ ಮೂರ್ತಿ ಮತ್ತು ಮಹದೇಶ್ವರ ಸ್ವಾಮಿ ಸರ್ಪದ ವಾಹನ ಮೂರ್ತಿಗಳು ಮೆರವಣಿಗೆ ಮೂಲಕ ಸ್ವಸ್ಥಾನ ಬರಡನಪುರಕ್ಕೆ ತಲುಪಿದವು. ಜನರು ದಾರಿಯುದ್ದಕ್ಕೂ ಪೂಜೆ ಸಲ್ಲಿಸಿದರು. ಮಂಗಳವಾರ ರಾತ್ರಿ ಬರಡನಪುರ ಗ್ರಾಮದಲ್ಲಿ ಉತ್ಸವ ಮೂರ್ತಿಗಳನ್ನು, ಮೆರವಣಿಗೆ ಮಾಡುವ ಮೂಲಕ, ಬಾಳೆಹಣ್ಣು ತುಪ್ಪದ ಕಜ್ಜಾಯ ಸೇವೆಯೊಂದಿಗೆ ಜೇಡಿಕಟ್ಟೆ ಮಹದೇಶ್ವರ ಸ್ವಾಮಿ ಜಾತ್ರಾ ಮಹೋತ್ಸವಕ್ಕೆ ತೆರೆ ಬಿದ್ದಿತು.



ಮೈಸೂರು ತಾಲೂಕು ಜಯಪುರ ಗ್ರಾಮದಲ್ಲಿ ದೇವರ ಉತ್ಸವ ವಿಜೃಂಭಣೆಯಿಂದ ಜರುಗಿತು.

ಅಗ್ನಿಶಾಮಕ ಸಿಬ್ಬಂದಿಗೆ ಮುಖ್ಯಮಂತ್ರಿಗಳ ಪದಕ ಪ್ರದಾನ

40 ಹೊಸ ಅಗ್ನಿಶಾಮಕ ಜಲವಾಹನ ಹಸ್ತಾಂತರಿಸಿದ ಗೃಹ ಸಚಿವ ಡಾ. ಪರಮೇಶ್ವರ್

ಬೆಂಗಳೂರು, ಫೆ.24(ಕೆಎಂಶಿ)-ಕರ್ನಾಟಕ ರಾಜ್ಯ ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ಇಲಾಖೆ ಉತ್ತಮ ಕೆಲಸದ ಮೂಲಕ ರಾಷ್ಟ್ರಮಟ್ಟದಲ್ಲಿ ಜನಮನ್ನಣೆ ಪಡೆದಿದೆ ಎಂದು ಗೃಹ ಸಚಿವ ಡಾ.ಜಿ. ಪರಮೇಶ್ವರ್ ಇಂದಿಲ್ಲಿ ತಿಳಿಸಿದ್ದಾರೆ.

'ಮುಖ್ಯಮಂತ್ರಿಗಳ ಪದಕ' ಪ್ರದಾನ ಹಾಗೂ 40 ಹೊಸ ಅಗ್ನಿಶಾಮಕ ಜಲವಾಹನ ಹಸ್ತಾಂತರಿಸಿ ಮಾತನಾಡಿದ ಅವರು, ಇಲಾಖೆ ರಾಷ್ಟ್ರಮಟ್ಟದಲ್ಲಿ ಹೆಸರು ಗಳಿಸಿ, ರಾಜ್ಯಕ್ಕೆ ಗೌರವ ತಂದಿರುವುದನ್ನು ಸರ್ಕಾರ ಮತ್ತು ಜನಸಮುದಾಯ ಗಮನಿಸಿದೆ.

ಅಗ್ನಿಶಾಮಕ ಮತ್ತು ತುರ್ತು ಸೇವಾ ಇಲಾಖೆ ಅಧಿಕಾರಿ ಮತ್ತು ಸಿಬ್ಬಂದಿ ಶಿಸ್ತಿನ ಸಿಪಾಯಿಗಳು, ಪೊಲೀಸ್ ಇಲಾಖೆ ಜೊತೆ ಜೊತೆಗೆ ಶಿಸ್ತನ್ನು ಕಾಪಾಡಿಕೊಂಡು ಬಂದಿದ್ದೀರಿ. ವಿಪತ್ತಿನ ಸಂದರ್ಭದಲ್ಲಿ ಸ್ವಯಂ ಸ್ಫೂರ್ತಿಯಿಂದ ಕೆಲಸ ಮಾಡಿದ್ದೀರಿ. ಇದನ್ನು ಸಮಾಜ ಗುರುತಿಸಿದೆ. ದೇಶದಲ್ಲಿ ಕರ್ನಾಟಕ ಅಗ್ನಿಶಾಮಕ ಮತ್ತು ಇತರೆ ಇಲಾಖೆಗಳು ಮಾದರಿಯಾಗಿದೆ. ಪ್ರತಿದಿನ ಹಲವು ದುರಂತಗಳನ್ನು ನೋಡುತ್ತೇವೆ. ನಗರ ಪ್ರದೇಶಗಳಲ್ಲಿ ಹೆಚ್ಚಿನ ಅವಘಡಗಳು ಸಂಭವಿಸುತ್ತವೆ. ತುರ್ತು ಸಂದರ್ಭದಲ್ಲಿ ಪ್ರಾಣ ಒತ್ತೆ ಇಟ್ಟು, ಸಾರ್ವಜನಿಕರ ಆಸ್ತಿ ಮತ್ತು ನಾಗರಿಕರ ಪ್ರಾಣ ರಕ್ಷಣೆ ಮಾಡುವ ಕೆಲಸ ಮಾಡಿದ್ದೀರಿ. ಪ್ರವಾಹಗಳ ಸಂದರ್ಭದಲ್ಲಿ ಜೀವದ ಹಂಗು ತೊರೆದು ಜನರನ್ನು ಕಾಪಾಡಿರುವುದನ್ನು ನೆನೆಯುತ್ತೇನೆ.

ಕೊಡಗು ಜಿಲ್ಲೆಯಲ್ಲಿ ಪ್ರವಾಹದ ವೇಳೆ ಮನೆಗಳಲ್ಲಿದ್ದ ಜನರ ರಕ್ಷಣೆಗೆ ತೆಗೆದುಕೊಂಡ ನಿರ್ಧಾರ ಮತ್ತು ಪ್ರಯತ್ನ ಅತ್ಯಂತ ಶ್ಲಾಘನೀಯ. ನಿಮ್ಮ ಕೆಲಸ ಸುಲಭ ಎನ್ನಲಾಗದು. ದೇಶದ ದಕ್ಷಿಣದ ರಾಜ್ಯಗಳಲ್ಲಿ ಕರ್ನಾಟಕ ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ಇಲಾಖೆ ಅತ್ಯಂತ ಯಶಸ್ವಿಯಾಗಿ ಕಾರ್ಯನಿರ್ವಹಿಸುತ್ತಿದೆ.

ಹೊಸ 15 ತಾಲೂಕುಗಳಲ್ಲಿ ಅಗ್ನಿಶಾಮಕ ಠಾಣೆಗಳ ಸ್ಥಾಪನೆಗೆ ಮುಖ್ಯಮಂತ್ರಿ ಅವರನ್ನು ಕೋರಿದ್ದೇನೆ, ಪೊಲೀಸ್ ಗೃಹ ಯೋಜನೆಯಡಿ 40 ಸಾವಿರ ಮನೆ ಕಟ್ಟಿದ್ದೇವೆ. ಅದೇ ಮಾದರಿಯಲ್ಲಿ ಅಗ್ನಿಶಾಮಕ ಸಿಬ್ಬಂದಿಗಳಿಗೆ ವಸತಿಗೃಹ ಕಲ್ಪಿಸುವ ತೀರ್ಮಾನ ಮಾಡಲಾಗಿದೆ ಇದಕ್ಕೆ ಹಣ ಒದಗಿಸಲಾಗುವುದು ಎಂದರು.

ಬೆಂಗಳೂರಿನಲ್ಲಿ ಬಹುಮಹಡಿ ಕಟ್ಟಡಗಳು ಹೆಚ್ಚಾಗುತ್ತಿವೆ. ಅಗ್ನಿ ಅವಘಡಗಳು ಸಂಭವಿಸಿದ ಸಂದರ್ಭದಲ್ಲಿ ನಿಯಂತ್ರಿಸಲು ಆಧುನಿಕ ಮತ್ತು ಸುಸಜ್ಜಿತ ಸಲಕರಣೆ, ವಾಹನಗಳನ್ನು ಒದಗಿಸಲಾಗಿದೆ. ಪ್ರಥಮ ಬಾರಿಗೆ 90 ಮೀಟರ್ ಎತ್ತರ ತಲುಪಬಲ್ಲ ಏರಿಯಲ್ ಲ್ಯಾಡರ್ ಪ್ಲಾಟ್‌ಫಾರ್ಮ್ ವಾಹನ ಮಾದರಿ ಅಗ್ನಿಶಾಮಕ ವಾಹನವಾಗಿದೆ.

15ನೇ ಹಣಕಾಸು ಯೋಜನೆಯಡಿ 329 ಕೋಟಿ ರೂ. ಒದಗಿಸಲಾಗಿತ್ತು. 21 ಅಗ್ನಿಶಾಮಕ ಠಾಣೆ ನಿರ್ಮಿಸಲು 98 ಕೋಟಿ ರೂ ಖರ್ಚು ಮಾಡಲಾಗಿದೆ ಆಧುನಿಕ ಉಪಕರಣಗಳ ಖರೀದಿ, ತರಬೇತಿ ಕೇಂದ್ರದ ಉನ್ನತೀಕರಣಕ್ಕೆ ಕ್ರಮ ವಹಿಸಲಾಗಿದೆ.

ಅಗ್ನಿಶಾಮಕ ಮತ್ತು ತುರ್ತುಸೇವೆಗಳ ಇಲಾಖೆಯಲ್ಲಿ 1,600ಕ್ಕೂ ಹೆಚ್ಚು ವಿವಿಧ ಹುದ್ದೆಗಳಿಗೆ ನೇಮಕಾತಿ ಆಗಬೇಕಿದ್ದು, ಈ ಬಗ್ಗೆ ಮುಖ್ಯಮಂತ್ರಿ ಅವರಿಗೆ ಪ್ರಸ್ತಾವನೆ ಸಲ್ಲಿಸಲಾಗಿದೆ ಎಂದರು.



ಗೃಹ ಸಚಿವ ಡಾ. ಪರಮೇಶ್ವರ್, ಅಗ್ನಿಶಾಮಕ ಸಿಬ್ಬಂದಿಗೆ ಮುಖ್ಯಮಂತ್ರಿ ಪದಕ ಪ್ರದಾನ ಮಾಡಿದರು.

ಕಂಚಿನ ಪದಕ



ಬೆಂಗಳೂರಿನ ಸಾಬಾ ಅಸೋಸಿಯೇಷನ್ ಆಯೋಜಿಸಿದ್ದ ರಾಷ್ಟ್ರಮಟ್ಟದ ದೇಹದಾರ್ಢ್ಯ ಸ್ಪರ್ಧೆಯಲ್ಲಿ ಮೈಸೂರಿನ ಪಡುವಾರಹಳ್ಳಿ ನಿವಾಸಿ ವಿ.ಪವನ್‌ಕುಮಾರ್ ಕಂಚಿನ ಪದಕ ಪಡೆದುಕೊಂಡರು.

ಮೈಸೂರು ಮಿತ್ರ ಬುಧವಾರ 25 ಫೆಬ್ರವರಿ 2026

ಬೆಳಗೊಳ ನಾಡಕಚೇರಿ ಮೇಲೆ ಲೋಕಾಯುಕ್ತ ದಾಳಿ





ಬೆಳಗೊಳ ನಾಡ ಕಚೇರಿಗೆ ಲೋಕಾಯುಕ್ತ ದಾಳಿ ನಡೆಸಿ ದಾಖಲೆಗಳನ್ನು ಪರಿಶೀಲನೆ ನಡೆಸಿತು.
ಬಲ ಚಿತ್ರ: ಗ್ರಾಮ ಸಹಾಯಕ ಬಸವಯ್ಯನವರ ಮನೆಯಲ್ಲಿ ದಾಳಿ ನಡೆಸಿರುವುದು.

ಶ್ರೀರಂಗಪಟ್ಟಣ, ಫೆ.24–ಲೋಕಾಯುಕ್ತ ಅಧಿಕಾರಿಗಳು ಏಕಕಾಲದಲ್ಲಿ ಬೆಳಗೊಳ ನಾಡ ಕಛೇರಿ ಹಾಗೂ ಗ್ರಾಮ ಸಹಾಯಕ ಮನೆ ಹಾಗೂ ತಾಲೂಕು ಕಚೇರಿ ಮೇಲೆ ದಾಳಿ ನಡೆಸಿ ಅಗತ್ಯ ದಾಖಲೆಗಳನ್ನ ಪರಿಶೀಲಿಸಿ ಮಾಹಿತಿ ಸಂಗ್ರಹಿಸಿದರು.

ಬೆಳಗೊಳ ಗ್ರಾಮದಲ್ಲಿನ 25ಕ್ಕಿಂತ ಹೆಚ್ಚು ಎಕರೆಯನ್ನೊಂದಿರುವ ಸರ್ವೆ ನಂ 101 ಜಮೀನನ್ನು ಪಕ್ಕದಲ್ಲಿರುವ ಖಾಸಗಿ ಸಂಸ್ಥೆಯೊಂದಕ್ಕೆ ಅಕ್ರಮವಾಗಿ ಖಾತೆ ಮಾಡಿಕೊಟ್ಟಿದ್ದಾರೆ ಎಂದು ಗ್ರಾಮಸ್ಥರೊಬ್ಬರು ನೀಡಿದ ದೂರಿನ ಮೇರೆಗೆ ಲೋಕಾಯುಕ್ತ ಅಧಿಕಾರಿಗಳು ಮಂಗಳವಾರ ದಾಳಿ ನಡೆಸಿದರು ಎನ್ನಲಾಗಿದೆ.

ಭೂದಾಖಲೆಗಳ ಅಕ್ರಮ ಖಾತೆ ಸಂಬಂಧದ ದೂರಿನ ಮೇರೆಗೆ ಲೋಕಾಯುಕ್ತ ಸಿ.ಪಿ.ಐ ಶಶಿಕುಮಾರ ನೇತೃತ್ವದಲ್ಲಿ ಅಧಿಕಾರಿಗಳು ಪ್ರತ್ಯೇಕ ಸ್ಥಳಗಳಲ್ಲಿ ದಾಳಿ ನಡೆಸಿ ದಾಖಲೆಗಳ ಪರಿಶೀಲನೆ ನಡೆಸಿದರು.

ಬೆಳಗ್ಗೆ 10 ಗಂಟೆಗೆ ಗ್ರಾಮ ಸಹಾಯಕ ಬಸವಯ್ಯ ಅವರ ಹೊಲದ ಬಳಿ ಇರುವ ಮನೆಗೆ ಧಾವಿಸಿದ ಅಧಿಕಾರಿಗಳು ಸುಮಾರು 3 ಗಂಟೆಗಳ ಕಾಲ ತಪಾಸಣೆ ನಡೆಸಿ ಕೆಲ ಅಮೂಲ್ಯ ದಾಖಲೆಗಳನ್ನು ವಶಕ್ಕೆ ಪಡೆದುಕೊಂಡರು.

ನಂತರ ಮಜ್ಜಿಗೆಪುರ ರಸ್ತೆಯಲ್ಲಿರುವ ನಾಡ ಕಛೇರಿಗೂ ಭೇಟಿ ನೀಡಿ, ಕಚೇರಿಯಲ್ಲಿ ಕೆಲವು ದಾಖಲೆಗಳನ್ನು ಪರಿಶೀಲಿಸಿ ದೃಢೀಕೃತಿ ಪ್ರತಿಗಳನ್ನು ಪಡೆದು ಉಪತಹಸೀಲ್ದಾರ್ ವರುಣರವರಿಂದ ಮಾಹಿತಿ ಸಂಗ್ರಹಿಸಿದರು.

ತಾಲೂಕು ಕಚೇರಿಯಲ್ಲಿ ಬೆಳಗ್ಗಿನಿಂದಲೇ ಕಡತಗಳ ಶೋಧ ಕಾರ್ಯ ನಡೆಸಿದ ಅಧಿಕಾರಿಗಳು, ಸಂಜೆವರೆವಿಗೂ ಮುಂದುವರಿಸಿ ಸ್ಥಳೀಯ ಅಧಿಕಾರಿಗಳಿಂದ ಮಾಹಿತಿ ಪಡೆದುಕೊಂಡರು.

ಮಂತ್ರಿ ಸ್ಥಾನಕ್ಕಾಗಿ ಹೈಕಮಾಂಡ್‌ಗೆ ಪತ್ರ ಬರೆದಿರುವುದು ನಿಜ

ಮದ್ದೂರು ಶಾಸಕ ಕೆ.ಎಂ.ಉದಯ್ ಉವಾಚ



ಮದ್ದೂರು, ಫೆ.24–ಹೊಸದಾಗಿ ಶಾಸಕರಾಗಿ ಆಯ್ಕೆಯಾಗಿರುವವರಿಗೆ ಮಂತ್ರಿ ಸ್ಥಾನವನ್ನು ನೀಡಿ ಎಂದು ಹೈಕಮಾಂಡ್‌ಗೆ ಪತ್ರ ಬರೆದಿದ್ದೇವೆ ಎಂದು ಶಾಸಕ ಕೆ.ಎಂ.ಉದಯ್ ಹೇಳಿದ್ದಾರೆ

ಕಳೆದ ವಿಧಾನಸಭಾ ಚುನಾವಣೆ ಯಲ್ಲಿ ಅತಿ ಹೆಚ್ಚು ಯುವ ಶಾಸಕರನ್ನು ರಾಜ್ಯದ ಜನತೆ ಆಯ್ಕೆ ಮಾಡಿದ್ದಾರೆ, ಹೊಸಬರು, ಆಸಕ್ತಿ ಇರುವವರು ಹಾಗೂ ಯುವಕರು ಬರಬೇಕೆಂದು ಜನರ ನಿರೀಕ್ಷೆ ಹಾಗೂ ಬೇಡಿಕೆ ಇತ್ತು. ನಮ್ಮಂತ ಉದ್ಯಮಿಗಳು ಎಲ್ಲವನ್ನೂ ಬಿಟ್ಟು ಜನ ಸೇವೆಯಲ್ಲಿ ತೊಡಗಿಸಿ ಕೊಂಡಿ ದ್ದೇವೆ, ಎಂದ ಅವರು ಹೊಸಬರಿಗೆ, ಯುವಕರಿಗೆ ಅವಕಾಶ ಕೊಟ್ಟರೆ ವೇಗವಾಗಿ ಆಸಕ್ತಿಯಿಂದ ಕೆಲಸ ಮಾಡ್ತಾರೆ ಇದರಿಂದ ಪಕ್ಷ ಸಂಘಟನೆಗೆ ಅನುಕೂಲವಾಗುತ್ತದೆ ಎಂದು ಅಭಿಪ್ರಾಯಪಟ್ಟರು.

ಕಳೆದ ಬಾರಿ ನಾವು ದೆಹಲಿಗೆ ಹೋಗಿದ್ದು ಇದೇ ವಿಚಾರಕ್ಕೆ. ವಿಶೇಷ ಅಧಿ ವೇಶನದ ವೇಳೆ ನಾವು ಹೈಕಮಾಂಡ್‌ಗೆ ಪತ್ರ ಕಳಿಸಿದ್ದೇವೆ. ವರಿಷ್ಠರು ಇದರ ಬಗ್ಗೆ ಇನ್ನೂ ಚರ್ಚೆ ಮಾಡಿಲ್ಲ, ಎಂದರು. ಪತ್ರ ಬರೆದಿರುವ ವಿಚಾರ ಎಲ್ಲರ ಗಮನಕ್ಕೂ ಬಂದಿದೆ, ನಾವು ಇಂತವರಿಗೆ ಸಚಿವ ಸ್ಥಾನ ಕೊಡಿ ಎಂದು ಕೇಳಲ್ಲ ಅದನ್ನು ಹೈಕಮಾಂಡ್ ತೀರ್ಮಾನ ಮಾಡುತ್ತೆ, ಜಿಲ್ಲಾವಾರು, ಜಾತಿವಾರು ಅವಕಾಶ ಕೊಡಬೇಕಿದೆ, ಅದನ್ನು ಅಳೆದು ತೂಗಿ ತೀರ್ಮಾನ ಮಾಡುತ್ತಾರೆ ಎಂಬ ಭರವಸೆ ಇದೆ. ಕೆಲವು ಹಿರಿಯ ಸಚಿವರು ಸರಿಯಾಗಿ ಕೆಲಸ ಮಾಡ್ತಿಲ್ಲ ಅನ್ನೋ ಅಸಮಾಧಾನ ಇದೆ. ಅಷ್ಟೇ ಅಲ್ಲದೇ ಕೆಲ ಸಚಿವರು ಶಾಸಕ ರೊಂದಿಗೆ ಸರಿಯಾಗಿ ಸ್ಪಂದಿಸುತ್ತಿಲ್ಲ ಎಂಬ ಅಸಮಾಧಾನವೂ ಇದೆ ಎಂದು ಹೇಳಿದರು

ದಲಿತರನ್ನು ಸಿಎಂ ಮಾಡಬೇಡಿ ಎಂದು ಯಾರು ಹೇಳಿಲ್ಲ, ಅದಕ್ಕೆ ಯಾರ ವಿರೋಧವೂ ಇಲ್ಲ. ಎಲ್ಲ ನಿರ್ಣಯ ಮಾಡೋದು ಹೈಕಮಾಂಡ್ ಅದರಿಂದ ಆ ವಿಷಯದಲ್ಲಿ ನಮ್ಮದೇನೂ ತಕರಾರಿಲ್ಲ ಎಂದರು

ಮತ್ತೆ ಹೈಕಮಾಂಡ್ ಮೊರೆ ಹೋಗ್ತೇವೆ

ಹೈಕಮಾಂಡ್ ಸಿದ್ದರಾಮಯ್ಯರನ್ನ ಸಿಎಂ ಆಗಿ ಕಂಟಿನ್ಯೂ ಮಾಡ್ತಾರಾ ಮಾಡಲಿ. ಇಲ್ಲವೆ ಬದಲಾವಣೆ ಯಾವಾಗ ಮಾಡ್ತಾರೆ ಎಂದು ಹೇಳುವ ಮೂಲಕ ಗೊಂದಲವನ್ನು ಬಗೆಹರಿಸಲಿ ಎಂದ ಉದಯ್ ಮುಂದಿನ ಏಳೆಂಟು ದಿನಗಳಲ್ಲಿ ಮತ್ತೆ ದೆಹಲಿಗೆ ಹೋಗಿ ಹೈಕಮಾಂಡ್‌ನ್ನು ಭೇಟಿ ಮಾಡ್ತೇವೆ ಎಂದು ಪ್ರಕಟಿಸಿದರು. ಸಿಎಂ ಬದಲಾವಣೆ ವಿಚಾರವನ್ನ ವಿರೋಧ ಪಕ್ಷದವರು ಅಸ್ತ್ರ ಮಾಡಿಕೊಂಡಿದ್ದಾರೆ. ಆದಷ್ಟು ಬೇಗ ಹೈಕಮಾಂಡ್ ಇದರ ಬಗ್ಗೆ ತೀರ್ಮಾನ ಮಾಡಬೇಕು. ಇಲ್ಲದಿದ್ದರೆ ಪಕ್ಷದ ಮೇಲೆ ಡ್ಯಾಮೇಜ್ ಆಗುತ್ತದೆ ಇದಕ್ಕಾಗಿ ಗೊಂದಲ ಬಗೆಹರಿಸಬೇಕೆಂದು ಒತ್ತಾಯಿಸುತ್ತೇವೆ. ಆದರೆ, ಅಂತಿಮವಾಗಿ ಹೈಕಮಾಂಡ್ ಏನು ತೀರ್ಮಾನ ತೆಗೆದುಕೊಳ್ಳುತ್ತದೆಯೋ ಅದಕ್ಕೆ ನಾವು ಬದ್ಧ ಎಂದರು.

ಪ್ರತಿ ಬೂತ್‌ನಲ್ಲೂ ಮತಪಟ್ಟಿ ಪರಿಷ್ಕರಣೆ ಆಗಬೇಕಿದೆ



ಜೆಡಿಎಸ್ ಸದಸ್ಯತ್ವ ಫಾರಂ ಅನ್ನು ಪಕ್ಷದ ನಾಯಕರು ಬಿಡುಗಡೆ ಮಾಡಿದರು.

ಮಂಡ್ಯ, ಫೆ.24–ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಬರುವ ಪ್ರತಿಯೊಂದು ಬೂತ್‌ಗಳಲ್ಲಿ ಮತಪಟ್ಟಿ ಪರಿಷ್ಕರಣೆ ಆಗಬೇಕೆಂದು ಜಾ.ದಳ ಮುಖಂಡ ಬಿ.ಆರ್.ರಾಮಚಂದ್ರ ತಿಳಿಸಿದ್ದಾರೆ.

ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ ಸಂಬಂಧ ಬೂತ್ ಏಜೆಂಟ್‌ಗಳ ಕಾರ್ಯಾಗಾರವನ್ನು ಉದ್ಘಾಟಿಸಿ, ಕ್ಷೇತ್ರದ ಪ್ರತಿಯೊಂದು ಬೂತ್‌ಗಳಲ್ಲಿ ಬಿಎಲ್‌ಎಗಳು ಪರಿಷ್ಕರಣೆಗಾಗಿ ಹೋದಾಗ ಜೆಡಿಎಸ್ ಕಾರ್ಯಕರ್ತರು ಜೊತೆಯಲ್ಲಿದ್ದುಕೊಂಡು ಸಹಕಾರ ನೀಡಬೇಕು. ಮೃತರಾದವರು, ಗ್ರಾಮ, ಪಟ್ಟಣ ಬಿಟ್ಟು ಹೋಗಿರುವವರನ್ನು ಗುರುತಿಸಬೇಕು ಮತ್ತು ಎರಡು ಕಡೆಗಳಲ್ಲಿ ಬರುವ ಹೆಸರನ್ನು ತೆಗೆದು ಹಾಕುವ ಕೆಲಸ ಮಾಡಬೇಕು. 18 ವರ್ಷ ತುಂಬಿದವರನ್ನು ಹೊಸ ಮತದಾರರ ಪಟ್ಟಿಗೆ ಸೇರಿಸುವ ಕೆಲಸ ಮಾಡಬೇಕು ಎಂದು ಮುಂಬರುವ ಸ್ಥಳೀಯ ಸಂಸ್ಥೆಗಳ ಚುನಾವಣೆಗಳಿಗೆ ಅರ್ಹ ಮತದಾರರು ಮಾತ್ರ ಮತದಾನ ಮಾಡುವಂತೆ ನೋಡಿಕೊಳ್ಳುವ ಜವಾಬ್ದಾರಿ ಪ್ರತಿಯೊಬ್ಬ ಬೂತ್ ಏಜೆಂಟರದ್ದಾಗಿರುತ್ತದೆ. ಆದ್ದರಿಂದ ಈ ಬಗ್ಗೆ ಸಮರ್ಪಕವಾಗಿ ಕಾರ್ಯ ನಿರ್ವಹಿಸಬೇಕೆಂದು ತಿಳಿಸಿದರು.

ಮುಂಬರುವ ಜಿಪಂ ತಾಪಂ ಹಾಗೂ ಗ್ರಾಪಂ, ನಗರಸಭೆ ಚುನಾವಣೆಗೆ ಪಕ್ಷವನ್ನು ಸದೃಢಗೊಳಿಸಬೇಕು. ಇದು ಕಾರ್ಯಕರ್ತರ ಚುನಾ ವಣೆ ಆಗಿರುವುದರಿಂದ ಸಣ್ಣಪುಟ್ಟ ತಪ್ಪುಗಳಿದ್ದರೆ ಸರಿಪಡಿಸಿಕೊಂಡು ಜೆಡಿಎಸ್ ಪಕ್ಷದಿಂದ ಯಾರೇ ಅಭ್ಯರ್ಥಿಗಳಾದರೂ ಎಲ್ಲರೂ ಒಗ್ಗಟ್ಟಾಗಿ ಶ್ರಮಿಸಿ ಅಭ್ಯರ್ಥಿಗಳ ಗೆಲುವಿಗೆ ಕೆಲಸ ಮಾಡಬೇಕು ಎಂದರು.

ರಾಜ್ಯ ಯುವ ಘಟಕದ ಅಧ್ಯಕ್ಷ ನಿಖಿಲ್ ಕುಮಾರಸ್ವಾಮಿ ರಾಜ್ಯಾದ್ಯಂತ ಪ್ರವಾಸ ಮಾಡಿ ಸದಸ್ಯತ್ವ ನೋಂದಣಿಗೆ ಪಕ್ಷ ಸಂಘಟನೆ ಮಾಡುತ್ತಿದ್ದಾರೆ. ಇಲ್ಲಿ ಸದಸ್ಯತ್ವ ನೋಂದಣಿಯಲ್ಲಿ 8,000 ದಾಟಿದ್ದರೆ, ಬೇರೆ ವಿಧಾನಸಭಾ ಕ್ಷೇತ್ರಗಳಲ್ಲಿ 20ಸಾವಿರದಷ್ಟಾಗಿದೆ. ಆದ್ದರಿಂದ ಮುಂಬರುವ ಯುಗಾದಿಯೊಳಗೆ ಕ್ಷೇತ್ರದಲ್ಲಿ 20 ಸಾವಿರ ಜೆಡಿಎಸ್ ಸದಸ್ಯತ್ವವನ್ನು ಮಾಡಬೇಕು ಎಂದು ಸೂಚಿಸಿದರು. ಸಂಪನ್ಮೂಲ ವ್ಯಕ್ತಿ ಪ್ರದೀಪ್ ಉಪನ್ಯಾಸ ನೀಡಿದರು.

ಮಾಜಿ ಶಾಸಕ ಜಿ.ಬಿ.ಶಿವಕುಮಾರ್, ಮೈಷುಗರ್ ಮಾಜಿ ಅಧ್ಯಕ್ಷ ಸಿದ್ದರಾಮೇಗೌಡ, ನಗರಸಭೆ ಮಾಜಿ ಅಧ್ಯಕ್ಷ ನಾಗೇಶ್, ನಾಗಮ್ಮ, ಮಾಜಿ ಸದಸ್ಯರಾದ ಮಧುಶ್ರೀ, ಪದ್ಮಾವತಿ, ಶಿವರತ್ನ, ಜಯಶೀಲಮ್ಮ, ಪರಿಶಿಷ್ಟ ಜಾತಿ ವಿಭಾಗದ ಅಧ್ಯಕ್ಷ ಸಾತನೂರು ಜಯರಾಮ್, ನವೀನ್ ಕುಮಾರ್, ಬೋರೇಗೌಡ ಮತ್ತಿತರರು ಭಾಗವಹಿಸಿದ್ದರು.

ಫೆ.28, ಪಾಲಹಳ್ಳಿಯಲ್ಲಿ ಸಮುದಾಯ ಭವನ ಉದ್ಘಾಟನೆ



ಶ್ರೀರಂಗಪಟ್ಟಣ, ಫೆ.24–ಪಾಲಹಳ್ಳಿಯಲ್ಲಿ ಫೆ.28ರಂದು ನಡೆಯಲಿರುವ ಶ್ರೀ ತಿರುಮಲ ವೆಂಕಟರಮಣ ಸ್ವಾಮಿ ದೇವಸ್ಥಾನದ ಸಮುದಾಯ ಭವನ ಉದ್ಘಾಟನಾ ಸಮಾರಂಭದಲ್ಲಿ ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ವಿಪಕ್ಷ ನಾಯಕ ಆರ್ ಅಶೋಕ್, ಸಂಸದ ಯದುವೀರ್ ಭಾಗವಹಿಸುವರು ಎಂದು ಸಮುದಾಯ ಭವನದ ಅಧ್ಯಕ್ಷ ಪಿ.ಹೆಚ್.ಚಂದ್ರಶೇಖರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ವಿಜೃಂಭಣೆಯ ಶ್ರೀ ಲಕ್ಷ್ಮೀನಾರಾಯಣಸ್ವಾಮಿ ಬ್ರಹ್ಮ ರಥೋತ್ಸವ



ಶ್ರೀಲಕ್ಷ್ಮೀ ನಾರಾಯಣಸ್ವಾಮಿಯವರ ಬ್ರಹ್ಮರಥೋತ್ಸವವು ವಿಜೃಂಭಣೆಯಿಂದ ನಡೆಯಿತು.

ಕೆ.ಆರ್.ಪೇಟೆ,ಫೆ.24– ಬೇಲೂರು–ಹಳೆಬೀಡು ಮಾದರಿಯಲ್ಲಿ ಹೊಯ್ಸಳರ ಶಿಲ್ಪಕಲೆಯನ್ನು ಹೊಂದಿರುವ ತಾಲೂಕಿನ ಹೊಸಹೊಳಲು ಗ್ರಾಮದ ಶ್ರೀಲಕ್ಷ್ಮೀ ನಾರಾಯಣಸ್ವಾಮಿಯವರ ಬ್ರಹ್ಮರಥೋತ್ಸವವು ವಿಜೃಂಭಣೆಯಿಂದ ನಡೆಯಿತು.

ಶಾಸಕ ಹೆಚ್.ಟಿ.ಮಂಜು ಅವರು ಸಾಂಪ್ರದಾಯಿಕ ಪೂಜೆ ಸಲ್ಲಿಸಿ ರಥೋತ್ಸವಕ್ಕೆ ಚಾಲನೆ ನೀಡಿದರು. ನಾಡಿನ ವಿವಿಧ ಭಾಗಳಿಂದ ಆಗಮಿಸಿದ್ದ ಸಹಸ್ರಾರು ಭಕ್ತಾದಿಗಳು ಶ್ರೀ ಲಕ್ಷ್ಮೀನಾರಾಯಣ ಸ್ವಾಮಿಗೆ ಉಘೇ..ಉಘೇ..ಶ್ರೀನಿವಾಸ ಗೋವಿಂದ ಗೋವಿಂದ.. ಉಘೇ.. ಉಘೇ.. ವೆಂಕಟರಮಣ ಸ್ವಾಮಿಗೆ ಉಘೇ.. ಉಘೇ... ಎಂಬ ಜಯಘೋಷಗಳನ್ನು ಕೂಗುತ್ತಾ ರಥವನ್ನು ಎಳೆದು ಹಣ್ಣುಜವನ ಅರ್ಪಿಸಿ ಕೃತಾರ್ಥರಾದರು. ರಥೋತ್ಸವದ ಸಂದರ್ಭದಲ್ಲಿ ಕುರುಹಿನಶೆಟ್ಟಿ ಸಮಾಜದ ಬಂಧುಗಳು ನೆರೆದಿದ್ದ ಸಾವಿರಾರು ಭಕ್ತಾದಿಗಳಿಗೆ ಮಜ್ಜಿಗೆ, ಪಾನಕ ಹಾಗೂ ಪ್ರಸಾದವನ್ನು ವಿತರಣೆ ಮಾಡಿದರು.

ತಹಸೀಲ್ದಾರ್ ಲೋಕೇಶ್, ಸಮಾಜ ಸೇವಕ ಆರ್‌ಟಿಓ ಮಲ್ಲಿಕಾರ್ಜುನ್ ಹಾಗೂ ಧರ್ಮದರ್ಶಿಗಳಾದ ರಾಮಚಂದ್ರು, ಡಾ.ಶ್ರೀನಿವಾಸಶೆಟ್ಟಿ, ನಂದಕುಮಾರ್, ಹೆಚ್.ಆರ್.ಲೋಕೇಶ್, ಸೋಮಶೇಖರ್, ಮಾಸ್ಟರ್ ಶಿವಣ್ಣ ನಂಜುಂಡಸ್ವಾಮಿ, ರಾಮೇಗೌಡ, ಅರವಟ್ಟಿಗೆ ಸೇವಾರ್ಥದಾರ ಡಾ. ಮಂಜುನಾಥ್ ಶಾಸಕರೊಂದಿಗೆ ಕೈಜೋಡಿಸಿ ರಥೋತ್ಸವದ ರಂಗನ್ನು ಹೆಚ್ಚಿಸಿದರು.

ಹಬ್ಬ ಹರಿದಿನಗಳು ಜಾತ್ರೆ–ರಥೋತ್ಸವಗಳು ನಮ್ಮ ಸಂಸ್ಕೃತಿಯ ಪ್ರತಿಬಿಂಬವಾಗಿದೆ ರಥೋತ್ಸವದ ಸಂಭ್ರಮದಲ್ಲಿ ಎಲ್ಲಾ ಜಾತಿ ವರ್ಗಗಳ ಜನರು ಒಂದಾಗಿ ಭಗವಂತನ ನಾಮ ಸ್ಮರಣೆ ಮಾಡಿದಾಗ ಸಾಮಾಜಿಕ ಅಸಮಾನತೆ ದೂರಾಗಿ ಪರಸ್ಪರ ಪ್ರೀತಿ ವಿಶ್ವಾಸ ಸ್ನೇಹ ಸೌಹಾರ್ದತೆ ಮೂಡಲಿದೆ ಎಂದು ಶಾಸಕ ಹೆಚ್.ಟಿ.ಮಂಜು ತಿಳಿಸಿದರು.

ಹೊಸಹೊಳಲು ಉತ್ಸವ: ಬೂದನೂರು ಉತ್ಸವದ ಮಾದರಿಯಲ್ಲಿಯೇ ಹೊಸಹೊಳಲು ಗ್ರಾಮದಲ್ಲಿಯೂ ಪ್ರತಿ ವರ್ಷ ಹೊಸಹೊಳಲು ಹೊಯ್ಸಳ ಉತ್ಸವ ನಡೆಸುವಂತೆ ಸರ್ಕಾರದ ಗಮನ ಸೆಳೆಯುವುದಾಗಿ ಹೇಳಿದರು

ರಾಜಮ್ಮಣ್ಣಿ ನಿಧನ



ಮದ್ದೂರು, ಫೆ.24– ತಾಲೂಕು ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಎಂ.ಆರ್.ಚಕ್ರಪಾಣಿ ಅವರ ತಾಯಿ ರಾಜಮ್ಮಣ್ಣಿ (75) ಸೋಮವಾರ ಅನಾರೋಗ್ಯದಿಂದ ನಿಧನರಾದರು.

ಮೃತರಿಗೆ ಇಬ್ಬರು ಪುತ್ರರು, ಇಬ್ಬರು ಪುತ್ರಿಯರು ಇದ್ದಾರೆ. ನಗರದ ರುದ್ರಭೂಮಿಯಲ್ಲಿ ಮೃತರ ಅಂತ್ಯಕ್ರಿಯೆ ಮಂಗಳವಾರ ಮಧ್ಯಾಹ್ನ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಒಂದನೇ ಪುಟದಿಂದ

ಕುಮಾರಸ್ವಾಮಿ ಮತ್ತೊಮ್ಮೆ ಸಿಎಂ



ಬನ್ನೂರು ಪಟ್ಟಣದ ಡೈರಿ ಆವರಣದಲ್ಲಿ ನಡೆದ ಜನರೊಂದಿಗೆ ಜನತಾದಳ ಕಾರ್ಯಕ್ರಮದಲ್ಲಿ ಮುಖಂಡರು ಒಗ್ಗಟ್ಟು ಪ್ರದರ್ಶಿಸಿದರು.

ಪಕ್ಷ ಸದೃಢಗೊಳಿಸುವ ಕೆಲಸ ಮಾಡುತ್ತಿದ್ದು, ಮುಂಬರುವ ಚುನಾವಣೆಯಲ್ಲಿ ಜೆಡಿಎಸ್ 150ಕ್ಕಿಂತ ಹೆಚ್ಚಿನ ಸ್ಥಾನಗಳಿಸುವ ಮೂಲಕ ಎನ್‌ಡಿಎ ಜೊತೆಗೂಡಿ ಸರ್ಕಾರ ರಚಿಸಲಿದ್ದು, ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಅವರು ಮುಖ್ಯಮಂತ್ರಿಯಾಗುವುದನ್ನು ಯಾರಿಂದಲೂ ತಡೆಯಲು ಸಾಧ್ಯವಿಲ್ಲ ಎಂದರು.

ಹಾಲಿ ಕೇಂದ್ರ ಸಚಿವರಾಗಿರುವ ಹೆಚ್.ಡಿ.ಕುಮಾರಸ್ವಾಮಿ ಅವರು ಮುಖ್ಯಮಂತ್ರಿಯಾಗಿದ್ದ ವೇಳೆ 26 ಸಾವಿರ ಕೋಟಿ ಸಾಲ ಮನ್ನಾ ಮಾಡಿ ರಾಜ್ಯದ 16 ಸಾವಿರ ರೈತ ಕುಟುಂಬಕ್ಕೆ ಆಸರೆಯಾಗಿದ್ದರು. ಕುಮಾರಣ್ಣ ಸಾಲ ಮನ್ನಾ ಮಾಡುವ ವೇಳೆ ಜಾತಿ, ಧರ್ಮ ನೋಡದೇ ಎಲ್ಲಾ ರೈತರೂ ನಮ್ಮವರೇ ಎಂಬ ದೃಷ್ಟಿಯಿಂದ ಸಾಲ ಮನ್ನಾ ಮಾಡಿದರು. ಮೈಸೂರು ಜಿಲ್ಲೆಯೊಂದರಲ್ಲಿಯೇ 450 ಕೋಟಿ, ನರಸೀಪುರದಲ್ಲಿ 100 ಕೋಟಿ ರೂ.ಗಳಿಂತಲೂ ಹೆಚ್ಚು ಸಾಲ ಮನ್ನಾ ಮಾಡಿದ್ದರು. ಕ್ಷೇತ್ರದ ಜನತೆ ಈ ಹಿಂದೆ ಮಾಜಿ ಶಾಸಕ ಅಶ್ವಿನ್ ಕುಮಾರ್ ಅವರಿಗೆ 2 ಬಾರಿ ಸಚಿವ, 4 ಬಾರಿ ಶಾಸಕರಾಗಿದ್ದ ಪ್ರಭಾವಿ ರಾಜಕಾರಣಿ ಮಹದೇವಪ್ಪ ವಿರುದ್ಧ ದಾಖಲೆಯ ಗೆಲುವು ತಂದು ಕೊಟ್ಟಿದ್ದೀರಾ. ಗೆದ್ದ ಅಶ್ವಿನ್ ಕುಮಾರ್ ಕೂಡ ಕ್ಷೇತ್ರದ ಜನತೆಗೆ ಮೋಸ ಮಾಡದೇ ಹಗಲು ರಾತ್ರಿ ಶ್ರಮಿಸಿ, ಗೆಲುವಿಗೆ ನ್ಯಾಯ ಕಲ್ಪಿಸಿದ್ದಾರೆ. ಹೀಗಾಗಿ ಮುಂಬರುವ ಚುನಾವಣೆಯಲ್ಲಿ ಕಳೆದ ಬಾರಿಗಿಂತ ಲಕ್ಷ ಮತಗಳ ಅಂತರದಿಂದ ಅಶ್ವಿನ್ ಕುಮಾರ್ ಅವರನ್ನು ಗೆಲ್ಲಿಸುವ ಮೂಲಕ ಕುಮಾರಸ್ವಾಮಿ ಹಾಗೂ ನಿಖಿಲ್ ಅವರ ಕೈ ಬಲ ಪಡಿಸಬೇಕು.

-ಜಿ.ಡಿ.ಹರೀಶ್‌ಗೌಡ, ಶಾಸಕ.

ಎಲ್ಲರ ಹಣ ಗ್ಯಾರಂಟಿಗೆ: ಕಳೆದ 3 ವರ್ಷಗಳ ಹಿಂದೆ ಅಧಿಕಾರಕ್ಕೆ ಬಂದ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರ ಪ.ಜಾತಿ, ಪಂಗಡದ ಅಭಿವೃದ್ಧಿಗೆ ಮೀಸಲಿಟ್ಟ ಎಸ್‌ಸಿಪಿ, ಟಿಎಸ್‌ಪಿ ಹಣವನ್ನು ಆ ವರ್ಗಕ್ಕೆ ಮೀಸಲಿಡದೇ ಗ್ಯಾರಂಟಿ ಯೋಜನೆಗೆ ಬಳಸಿಕೊಂಡಿದೆ ಎಂದು ಸರ್ಕಾರವೇ ಒಪ್ಪಿಕೊಂಡಿದೆ. ಮೊದಲ ವರ್ಷ 11.50 ಸಾವಿರ ಕೋಟಿ, ಎರಡನೇ ವರ್ಷ 14.5 ಸಾವಿರ ಕೋಟಿ ಹಾಗೂ ಮೂರನೇ ವರ್ಷ 12.25 ಸಾವಿರ ಕೋಟಿ ರೂ. ಸೇರಿದಂತೆ ಒಟ್ಟಾರೆ 37,500 ಕೋಟಿ ರೂ.ಗಳನ್ನು ಗ್ಯಾರಂಟಿ ಯೋಜನೆಗೆ ಬಳಸಿಕೊಂಡಿದೆ ಎಂದು ಆರೋಪಿಸಿದರು.

ಜೆಡಿಎಸ್ ಬೆಳ್ಳಿಹಬ್ಬ ಆಚರಣೆ: ಜೆಡಿಎಸ್‌ಗೆ ಭವಿಷ್ಯವಿಲ್ಲ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳುತ್ತಾರೆ. ಆದರೆ ಪಕ್ಷದಲ್ಲಿ ದೊಡ್ಡ ದೊಡ್ಡ ನಾಯಕರಿದ್ದಾಗ 58 ಕ್ಷೇತ್ರದಲ್ಲಿ ಜೆಡಿಎಸ್ ಗೆದ್ದಿತ್ತು. ಹೀಗಾಗಿ ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ನೇತೃತ್ವದಲ್ಲಿ ಚಿನ್ನದಂತಹ ಕಾರ್ಯಕರ್ತರ ಶ್ರಮದೊಂದಿಗೆ ಮುಂಬರುವ 2 ವರ್ಷಗಳ ಕಾಲ ರಾಜ್ಯಾದ್ಯಂತ ಪ್ರವಾಸ ಮಾಡಿ ಕಾಂಗ್ರೆಸ್ ದುರಾಡಳಿತದ ಬಗ್ಗೆ ಜನತೆಗೆ ತಿಳಿಸಿ ಯಾವ ಪಕ್ಷ ಅಸ್ತಿತ್ವದಲ್ಲಿದೆ ಎಂಬುದನ್ನು ಮುಂಬರುವ ಚುನಾವಣೆಯಲ್ಲಿ ಕಾಂಗ್ರೆಸ್‌ನವರಿಗೆ ಅರಿವು ಮೂಡಿಸುತ್ತೇವೆ. ಬೆಳ್ಳಿ ಹಬ್ಬ ಆಚರಣೆ ಮಾಡಿದ ಪಕ್ಷ ನಮ್ಮದಾಗಿದೆ ಎಂದರು.

ಮುಖ್ಯಮಂತ್ರಿ ಹೇಳಿಕೆ ಸರಿಯಲ್ಲ: ತಮ್ಮ ರಾಜಕೀಯ ಜೀವನದ 40 ವರ್ಷಗಳ ಕಾಲ ಶಾಸಕ, ಸಚಿವ, ಉಪ ಮುಖ್ಯಮಂತ್ರಿ ಹಾಗೂ ಮುಖ್ಯಮಂತ್ರಿಯಾಗಿ ಕೆಲಸ ಮಾಡಿದ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಸಾಮಾಜಿಕ ಜಾಲತಾಣ ತಮ್ಮ ಎಕ್ಸ್ ಖಾತೆಯಲ್ಲಿ ಕುರಿ ಕಾಯುವ ಜನಾಂಗಕ್ಕೆ ಸೇರಿದ ನಾನು 2 ಬಾರಿ ಮುಖ್ಯಮಂತ್ರಿಯಾಗಿದ್ದನ್ನು ಸಹಿಸದೇ ವಿರೋಧ ಪಕ್ಷದವರು ಟೀಕೆ ಮಾಡುತ್ತಿದ್ದಾರೆ ಎಂದು ಬರೆದುಕೊಂಡಿದ್ದಾರೆ. ಪ್ರಬುದ್ಧ ಮುಖ್ಯಮಂತ್ರಿ ಇಂತಹ ಹೇಳಿಕೆ ನೀಡುವುದು ಸರಿಯೇ ಎಂದು ಪ್ರಶ್ನಿಸಿದರು.

ದಾಖಲೆ ಅಂತರದಲ್ಲಿ ಗೆಲ್ಲಿಸುವ ವಿಶ್ವಾಸ: ಜೆಡಿಎಸ್ ಜಿಲ್ಲಾಧ್ಯಕ್ಷ, ಮಾಜಿ ಶಾಸಕ ಎಂ.ಅಶ್ವಿನ್ ಕುಮಾರ್ ಮಾತನಾಡಿ, ಕಳೆದ ಬಾರಿ ಚುನಾವಣೆಯಲ್ಲಿ ಪ್ರಭಾವಿ ಸಚಿವರ ವಿರುದ್ಧ 28 ಸಾವಿರ ಮತಗಳ ಅಂತರದ ಗೆಲುವು ತಂದು ಕೊಟ್ಟಿದ್ದೀರಾ, ಸಚಿವರೂ ಕೂಡ ಹೋದ ಬಂದ ಕಡೆ ಸಭೆ–ಸಮಾರಂಭಗಳಲ್ಲಿ ಅದನ್ನೇ ಹೇಳುತ್ತಾ ನನ್ನನ್ನು 28 ಸಾವಿರ ಮತಗಳಿಂದ ಸೋಲಿಸಿದರು ಎಂದು ಹೇಳಿಕೊಳ್ಳುತ್ತಿದ್ದಾರೆ. ಮೊನ್ನೆ ಕೂಡ ಅದನ್ನೇ ಸಮಾರಂಭದಲ್ಲಿ ಹೇಳಿಕೊಂಡಿದ್ದಾರೆ. ಮುಂಬರುವ 2028ರ ಚುನಾವಣೆಯಲ್ಲಿ ಕೂಡ ಮತ್ತೆ ಗೆಲ್ಲಿಸುತ್ತೀರಾ ಎಂಬ ವಿಶ್ವಾಸವಿದ್ದು, ಮತ್ತೆ ಮಹದೇವಪ್ಪ ವೇದಿಕೆ ಭಾಷಣಗಳಲ್ಲಿ ಅದನ್ನೇ ಕನವರಿಸುವಂತೆ ಮಾಡುತ್ತೀರಾ ಎಂಬ ನಂಬಿಕೆ ನನಗಿದೆ ಎಂದು ನುಡಿದರು.

ಈ ವೇಳೆ ಮಾಜಿ ಸಚಿವ ಸಾ.ರಾ. ಮಹೇಶ್, ಮಾಜಿ ಶಾಸಕ ಮಹದೇವ್, ಎಂಎಲ್‌ಸಿ ಸಿ.ಎನ್.ಮಂಜೇಗೌಡ ಮಾತನಾಡಿದರು. ವಿಧಾನ ಪರಿಷತ್ ಸದಸ್ಯ ವಿವೇಕಾನಂದ, ಮೈಮುಲ್ ಮಾಜಿ ಅಧ್ಯಕ್ಷ ಪ್ರಸನ್ನ, ಕ್ಷೇತ್ರ ಅಧ್ಯಕ್ಷ ಚಿನ್ನಸ್ವಾಮಿ, ಕೊಡಗಳ್ಳಿ ಚಿಕ್ಕ ಜವರಪ್ಪ, ತಾಲೂಕು ಒಕ್ಕಲಿಗರ ಸಂಘದ ಅಧ್ಯಕ್ಷ ವೈ.ಎಸ್.ರಾಮಸ್ವಾಮಿ, ಗುತ್ತಿಗೆದಾರ ಶ್ರೀರಂಗರಾಜಪುರ ಸಿದ್ದರಾಜು, ಅತ್ತಹಳ್ಳಿ ರವಿ, ಪುರಸಭಾ ಮಾಜಿ ಅಧ್ಯಕ್ಷ ಕೃಷ್ಣೆಗೌಡ, ಸದಸ್ಯ ಆನಂದ್, ಹೆಚ್.ಡಿ. ಕೋಟೆ ಕೃಷ್ಣನಾಯಕ, ಕೊಳ್ಳೇಗಾಲ ಪುಟ್ಟಸ್ವಾಮಿ, ವಕೀಲರ ಸಂಘದ ಅಧ್ಯಕ್ಷ ತೊಟ್ಟವಾಡಿ ಮಹದೇವಸ್ವಾಮಿ, ಪುರಸಭೆ ಮಾಜಿ ಅಧ್ಯಕ್ಷ ವೀರೇಶ್, ಗುರುಪ್ರಸಾದ್, ಮೈಸೂರು ನಗರ ಜೆಡಿಎಸ್ ಅಧ್ಯಕ್ಷ ಎಸ್‌ಬಿಎಂ ಮಂಜು, ಅಡುಗೆ ಸುರೇಶ್, ಬೀಡನಹಳ್ಳಿ ಸತೀಶ್‌ಗೌಡ, ಕುಂತನಹಳ್ಳಿ ದೇವರಾಜ್, ತುರಗನೂರು ನಾಗರಾಜ್, ಮೇಗಳಕೊಪ್ಪಲು ಜಯರಾವ್, ತುರಗನೂರು ಬಿ.ಆರ್.ಮಂಜುನಾಥ್, ಚೆಲುವರಾಜ್, ಸೋಸಲೆ ರಾಜಣ್ಣ, ಮಾವಿನಹಳ್ಳಿ ರಾಜೇಶ್ ಮತ್ತಿತರರಿದ್ದರು.

ಸ್ವಯಂಚಾಲಿತ ಮ್ಯೂಟೇಷನ್ ಜಾರಿ

ಎಲ್ಲವನ್ನೂ ತಡೆಯಬಹುದಾಗಿದೆ ಎಂದರು. ನಗರದಲ್ಲಿಂದು ಸ್ವಯಂ ಚಾಲಿತ ಮ್ಯೂಟೇ ಶನ್ ವ್ಯವಸ್ಥೆ ಆರಂಭಿಸಿ ಮಾತನಾಡಿದ ಅವರು, ನೋಟಿಸ್ ಅವಧಿಯೊಳಗೆ ಕಂದಾಯ ನಿರೀಕ್ಷಕರು ಅಥವಾ ಸಾರ್ವಜನಿಕರು ಯಾವುದೇ ತಕರಾರು ನೀಡಿದಲ್ಲಿ, ಮ್ಯೂಟೇಶನ್ ಪೂರ್ಣಗೊಳಿಸದೆ, ಆರ್‌ಸಿಸಿಎಂಎಸ್ ತಂತ್ರಾಂಶ ತಹಸೀಲ್ದಾರರ ನ್ಯಾಯಾಲಯಕ್ಕೆ ಪ್ರಕರಣವನ್ನು ವರ್ಗಾಯಿಸಲಾಗುತ್ತದೆ. ನ್ಯಾಯಾಲಯ ದಾಖಲೆ ಪರಿಶೀಲಿಸಿ ನಂತರ ತೆಗೆದುಕೊಳ್ಳುವ ನಿರ್ಧಾರದಂತೆ ಸರ್ಕಾರ ಕ್ರಮ ಕೈಗೊಳ್ಳಲಿದೆ.

ಈ ಹಿಂದೆ ಮ್ಯೂಟೇಶನ್‌ಗಳಿಗೆ ಆಕ್ಷೇಪಣೆ ಇದ್ದಲ್ಲಿ ಅಥವಾ ಅನುಮೋದನೆ ನೀಡಬೇಕಾದಲ್ಲಿ ರಾಜಸ್ವ ನಿರೀಕ್ಷಕರು ತಾಲೂಕು ಕಚೇರಿಗಳಿಗೆ ಬಂದು ವರದಿ ಸಲ್ಲಿಸಬೇಕಾಗಿತ್ತು. ಆದರೆ, ಅವರು ಇನ್ನು ಮುಂದೆ ಕುಳಿತಲ್ಲೇ ದಾಖಲೆಗಳನ್ನು ಲಾಗಿನ್ ಮಾಡಬಹುದಾಗಿದೆ ಎಂದರು. ಭೂಮಿ ತಂತ್ರಾಂಶದಲ್ಲಿ ಸರ್ಕಾರಿ ಜಮೀನುಗಳು, ಸರ್ಕಾರಿ ನಿಬಂಧನೆ ಇರುವ ಜಮೀನುಗಳು ಹಾಗೂ ಪಿಟಿಸಿಎಲ್ ವ್ಯಾಪ್ತಿಗೆ ಬರುವ ಜಮೀನುಗಳ ಫ್ಲ್ಯಾಗ್ ಮಾಡಲಾಗಿರುತ್ತದೆ. ಇಂತಹ ಜಮೀನುಗಳನ್ನು ನೋಂದಣಿ ಮಾಡಲು ಸಾಧ್ಯವಾಗುವುದಿಲ್ಲ. ಆದುದರಿಂದ ಇಂತಹ ಜಮೀನುಗಳು ಸ್ವಯಂ ಚಾಲಿತ ಮ್ಯೂಟೇಶನ್ ವ್ಯಾಪ್ತಿಗೆ ಬರುವುದಿಲ್ಲ ಎಂದರು. ಮ್ಯೂಟೇಶನ್ ಪೂರ್ಣಗೊಂಡ ನಂತರ ಸಂಬಂಧಪಟ್ಟವರಿಗೆ ಎಸ್‌ಎಂಎಸ್ ಮೂಲಕ ಮಾಹಿತಿ ನೀಡಲಾಗುತ್ತದೆ. ಜೊತೆಗೆ ಅವರು ಸರ್ಕಾರದ ಇ–ಚಾವಡಿ ತಂತ್ರಾಂಶದಲ್ಲಿ ನೋಡಿಕೊಳ್ಳಬಹುದಾಗಿದೆ ಎಂದರು.

ಹಾಲು ಪ್ರೋತ್ಸಾಹ ಧನ ರೂ. 2 ಏರಿಕೆ ಸಾಧ್ಯತೆ

ಪ್ರಮಾಣವನ್ನು ಇನ್ನಷ್ಟು ಹೆಚ್ಚಿಸುವ ಗುರಿಯನ್ನು ಮಹಾಮಂಡಳಿ ಇಟ್ಟುಕೊಂಡಿದೆ.

ರೂ. 730 ಕೋಟಿ ನೆರವು: ನಮ್ಮ ಸರ್ಕಾರ ಪ್ರತಿ ಲೀಟರ್ ಹಾಲಿಗೆ ರೂ. 3 ಏರಿಕೆ ಮಾಡಿದ್ದೂ ಅಲ್ಲದೇ ರೂ. 400 ಸಹಾಯಧನ ಹೆಚ್ಚಳ ಮಾಡಿತ್ತು. ಈ ಮೊತ್ತವನ್ನು ನೇರವಾಗಿ ರೈತರ ಖಾತೆಗೆ ವರ್ಗ ಮಾಡುತ್ತಿದ್ದೇವೆ. ಮೇವಿನ ದರ, ಪಶು ಆಹಾರ ಸಹಿತ ಇತರೆ ಉತ್ಪನ್ನಗಳ ದರ ಏರಿಕೆ ಕಾರಣದಿಂದ ಪ್ರೋತ್ಸಾಹಧನ ಹೆಚ್ಚಿಸುವ ಬೇಡಿಕೆ ಇದೆ. ಈ ಹಿಂದೆ ನಾವೇ ಚುನಾವಣೆ ಪ್ರಣಾಳಿಕೆಯಲ್ಲಿ ಘೋಷಿಸಿದಂತೆ ಪ್ರೋತ್ಸಾಹ ಧನ ರೂ. 7ಗೆ ಹೆಚ್ಚಳ ಮಾಡುತ್ತೇವೆ ಎಂದು ಸಿದ್ದರಾಮಯ್ಯ ಹೇಳಿದ್ದರು.

ಕರ್ನಾಟಕದಲ್ಲಿ ಸದ್ಯ 16 ಹಾಲು ಒಕ್ಕೂಟಗಳ ವ್ಯಾಪ್ತಿಯ 9 ಲಕ್ಷ ರೈತರು ನಿತ್ಯ ಹಾಲು ಪ್ರೋತ್ಸಾಹಧನದ ಲಾಭ ಪಡೆಯುತ್ತಿದ್ದಾರೆ. ಪ್ರತಿ ವರ್ಷ ರೂ. 1900 ಕೋಟಿಯನ್ನು ರೈತರ ನೇರ ಖಾತೆಗೆ ವರ್ಗಾಯಿಸಲಾಗುತ್ತಿದೆ. ಪ್ರತಿನಿತ್ಯ 2 ರೂ.ಗೆ ಏರಿಕೆಯಾದರೆ ವರ್ಷಕ್ಕೆ 730 ಪ್ರೋತ್ಸಾಹಧನ ಏರಿಕೆಯಾಗಲಿದೆ. ಸದ್ಯ ರೈತರಿಗೆ ಪ್ರತಿ ಲೀಟರ್‌ಗೆ 38ವರೆಗೂ ದರ ಸಿಗುತ್ತಿದೆ. ಈಗಾಗಲೇ ಬಜೆಟ್ ಪೂರ್ವಭಾವಿ ಸಭೆಯಲ್ಲಿ ಕರ್ನಾಟಕ ಹಾಲು ಮಹಾಮಂಡಳಿ (ಕೆಎಂಎಫ್)ಯಿಂದಲೂ ಪ್ರೋತ್ಸಾಹಧನ ಏರಿಕೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿದೆ. ಇದಕ್ಕೆ ಪೂರಕವಾಗಿ ಸ್ಪಂದನೆಯೂ ಸಿಕ್ಕಿದೆ ಎಂದು ಮಹಾಮಂಡಳಿ ವ್ಯವಸ್ಥಾಪಕ ನಿರ್ದೇಶಕ ಬಿ.ಶಿವಸ್ವಾಮಿ ತಿಳಿಸಿದರು.

18 ವರ್ಷದ ಹಿಂದೆ ಆರಂಭ: ಹಾಲು ಉತ್ಪಾದಕರಿಗೆ ಉತ್ತೇಜನ ನೀಡುವ ಉದ್ದೇಶದಿಂದಲೇ 2008ರಲ್ಲಿ ಆಗಿನ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಪ್ರತಿ ಲೀಟರ್ ಹಾಲಿಗೆ ರೂ. 2 ಪ್ರೋತ್ಸಾಹ ಧನ ನೀಡುವ ಯೋಜನೆಗೆ ಚಾಲನೆ ನೀಡಿದರು. 2013ರಲ್ಲಿ ಮುಖ್ಯಮಂತ್ರಿಯಾದ ಸಿದ್ದರಾಮಯ್ಯ ಅವರು ಪ್ರೋತ್ಸಾಹ ಧನವನ್ನು 4 ರೂ.ಗೆ ಏರಿಸಿದರು. 2016ರಲ್ಲಿ ಇದನ್ನು 5 ರೂ.ಗೆ ಏರಿಕೆ ಮಾಡಲಾಗಿತ್ತು. ಅಲ್ಲಿಂದ ದರ ಹೆಚ್ಚಿಸುವ ಬೇಡಿಕೆಯಿದ್ದರೂ ಹೆಚ್ಚಳ ಆಗಿಲ್ಲ.

ಖಾಲಿ ಹುದ್ದೆಗಳ ಭರ್ತಿಗೆ ಆಗ್ರಹಿಸಿ ಬೀದಿಗಿಳಿದ ಉದ್ಯೋಗಾಕಾಂಕ್ಷಿಗಳು

ಪ್ರತಿ ಅರ್ಹ ವ್ಯಕ್ತಿಗೆ ಸೂಕ್ತ ಉದ್ಯೋಗ ಖಚಿತಪಡಿಸಲು ಬದ್ಧ: ಸಿಎಂ

ಧಾರವಾಡದಲ್ಲಿ ಸರ್ಕಾರಿ ಉದ್ಯೋಗಾಕಾಂಕ್ಷಿಗಳು ನಡೆಸುತ್ತಿರುವ ಪ್ರತಿಭಟನೆಯನ್ನು ನಾನು ಗಂಭೀರವಾಗಿ ಪರಿಗಣಿಸಿದ್ದೇನೆ. ಸರ್ಕಾರಿ ಉದ್ಯೋಗಾಕಾಂಕ್ಷಿಗಳು ಅನುಭವಿಸುತ್ತಿರುವ ಆತಂಕ, ನಿರಾಶೆ ಮತ್ತು ಅನಿಶ್ಚಿತತೆಯನ್ನು ನಾನು ಅರ್ಥಮಾಡಿಕೊಳ್ಳಬಲ್ಲೆ. ಉದ್ಯೋಗಕ್ಕಾಗಿ ಸಲ್ಲಿಸುವ ಪ್ರತಿ ಅರ್ಜಿಯ ಹಿಂದೆ ಒಂದು ಕನಸಿರುತ್ತದೆ, ಕುಟುಂಬದ ನಿರೀಕ್ಷೆ, ವರ್ಷಗಳ ಕಠಿಣ ಪರಿಶ್ರಮ ಮತ್ತು ನಾಡಿಗಾಗಿ ಸೇವೆ ಸಲ್ಲಿಸುವ ಆಕಾಂಕ್ಷೆ ಇರುತ್ತದೆ. ಯುವಜನರ ಆತಂಕ–ಅಹವಾಲುಗಳು ನನ್ನನ್ನು ತಲುಪಿದೆ. ಅವರ ಭವಿಷ್ಯ ನಮಗೂ ಅತ್ಯಂತ ಮಹತ್ವದ್ದಾಗಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಎಕ್ಸ್‌ನಲ್ಲಿ ಪೋಸ್ಟ್ ಮಾಡಿದ್ದಾರೆ.



ಪ್ರತಿಭಟನಾಕಾರರನ್ನು ಶ್ರೀನಗರ ವೃತ್ತದಲ್ಲೇ ಪೊಲೀಸರು ತಡೆದು ನಿಲ್ಲಿಸಿದ್ದರಿಂದ ಸ್ಥಳದಲ್ಲಿ ಬಿಗುವಿನ ವಾತಾವರಣ ನಿರ್ಮಾಣವಾಗಿತ್ತು. ಮತ್ತೊಂದೆಡೆ ಜುಬಿಲಿ ವೃತ್ತದಲ್ಲಿ ಕೂಡ ಸಾವಿರಾರು ವಿದ್ಯಾರ್ಥಿಗಳು ಹೋರಾಟಕ್ಕಿಳಿದಿದ್ದರಿಂದ ನಗರದಲ್ಲಿ ಸಂಚಾರ ಅಸ್ತವ್ಯಸ್ತಗೊಂಡಿತು. ರಾಜ್ಯ ಸರ್ಕಾರದ ವಿರುದ್ಧ ಆಕ್ರೋಶ ಹೊರಹಾಕಿದ ಪ್ರತಿಭಟನಾಕಾರರು, ಕಾಂಗ್ರೆಸ್ ನಾಯಕರ ಭಾವಚಿತ್ರಗಳನ್ನು ಸುಟ್ಟು, ಸರ್ಕಾರದ ವಿರುದ್ಧ ಧಿಕ್ಕಾರದ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು. ಒಬ್ಬರು ಪರೀಕ್ಷೆಗಳಿಗಾಗಿ ಕುಟುಂಬವನ್ನೇ ಬಿಟ್ಟು ಓದಿದ್ದೇನೆ. ಆದರೆ, ಪರೀಕ್ಷೆಗಳೇ ನಡೆದಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು. ಇದೇ ವೇಳೆ ಹಲವರು ತಮ್ಮ ವೈಯಕ್ತಿಕ ಸಂಕಷ್ಟಗಳನ್ನು ಹಂಚಿಕೊಂಡು ಕಣ್ಣೀರು ಹಾಕಿದರು.

ಅಖಿಲ ಕರ್ನಾಟಕ ವಿದ್ಯಾರ್ಥಿ ಸಂಘಟನೆ ಪ್ರತಿಭಟನೆಗೆ ಪೊಲೀಸರು ಅನುಮತಿ ನಿರಾಕರಿಸಿದ್ದರು. ಈ ಹಿನ್ನೆಲೆಯಲ್ಲಿ ಸಂಘಟನೆ ಹೈಕೋರ್ಟ್ ಮೊರೆ ಹೋಗಿದ್ದು, ಕೋರ್ಟ್ ಪೊಲೀಸರೊಂದಿಗೆ ಈ ಬಗ್ಗೆ ಚರ್ಚಿಸಿ ಎಂದು ತಿಳಿಸಿ ವಿಚಾರಣೆಯನ್ನು ಮಾರ್ಚ್ 3ಕ್ಕೆ ಮುಂದೂಡಿತ್ತು. ಈ ನಡುವೆ ಇಂದು ಬಿಜೆಪಿ ಹೋರಾಟಕ್ಕೆ ಪೊಲೀಸರು ಅನುಮತಿ ನೀಡಿದ್ದರಿಂದ ವಿದ್ಯಾರ್ಥಿ ಸಂಘಟನೆಯೂ ಬೀದಿಗಿಳಿದು ಹೋರಾಟ ನಡೆಸಿತು.

ಉದ್ಯೋಗಾಕಾಂಕ್ಷಿಗಳ ಪ್ರತಿಭಟನೆಗೆ ವಿಪಕ್ಷ ನಾಯಕ ಆರ್.ಅಶೋಕ್, ಪರಿಷತ್ ವಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ, ಶಾಸಕ ಅರವಿಂದ್ ಬೆಲ್ಲದ್ ಸೇರಿದಂತೆ ಅನೇಕ ಬಿಜೆಪಿ ಮುಖಂಡರು ಸಾಥ್ ನೀಡಿದರು.

ಯುವ ಸಮುದಾಯ ಸಿಡಿದೆದ್ದಿದೆ: ಈ ವೇಳೆ ಆರ್.ಅಶೋಕ್, ನೇಮಕಾತಿ ಆರಂಭಿಸದ ಭ್ರಷ್ಟ ಕಾಂಗ್ರೆಸ್ ಸರ್ಕಾರದ ವಿರುದ್ಧ ನಾಡಿನ ಯುವ ಸಮುದಾಯ ಸಿಡಿದೆದ್ದಿದೆ. ಧಾರವಾಡದಲ್ಲಿ ಆರಂಭಗೊಂಡಿರುವ ಉದ್ಯೋಗಾಕಾಂಕ್ಷಿಗಳ ಪ್ರತಿಭಟನೆಯ ಜ್ವಾಲೆ ನಿಷ್ಕ್ರಿಯಗೊಂಡಿರುವ ಕಾಂಗ್ರೆಸ್ ಸರ್ಕಾರವನ್ನು ದಹಿಸುವುದರಲ್ಲಿ ಯಾವ ಅನುಮಾನವಿಲ್ಲ. ಭ್ರಷ್ಟ ಮುಖ್ಯಮಂತ್ರಿ ಸಿದ್ದರಾಮಯ್ಯನವರೇ, ಯುವಕರ ಕಿಚ್ಚು ನಾಡಿನೆಲ್ಲೆಡೆ ಹರಡುವ ಮುನ್ನ ನೇಮಕಾತಿ ಆರಂಭಿಸಿ, ಇಲ್ಲವೇ ಅಧಿಕಾರ ಬಿಟ್ಟು ತೊಲಗಿ ಎಂದು ಆಗ್ರಹಿಸಿದರು.


ಬಿಜೆಪಿಗೆ ಸಿಎಂ ಎದಿರೇಟು: ನಾವು ಅಧಿಕಾರಕ್ಕೆ ಬಂದಾಗ, 2.64 ಲಕ್ಷಕ್ಕೂ ಹೆಚ್ಚು ಸರ್ಕಾರಿ ಹುದ್ದೆಗಳು ಖಾಲಿಯಿದ್ದವು. ಇದು ಒಂದೆರಡು ದಿನಗಳಲ್ಲಿ ಸೃಷ್ಟಿಯಾದುದಲ್ಲ; ಹಿಂದಿನ ಬಿಜೆಪಿ ಸರ್ಕಾರದ ಅವಧಿಯಲ್ಲಿ ಸಕಾಲದಲ್ಲಿ ನೇಮಕಾತಿಗಳನ್ನು ಆರಂಭಿಸದಿರುವುದು ಮತ್ತು ಖಾಲಿ ಹುದ್ದೆಗಳನ್ನು ಭರ್ತಿ ಮಾಡಲು ಯಾವುದೇ ಸೂಕ್ತ ಯೋಜನೆಯನ್ನು ರೂಪಿಸದಿರುವುದರಿಂದ ಇಷ್ಟು ದೊಡ್ಡ ಸಂಖ್ಯೆಯ ಸರ್ಕಾರಿ ಹುದ್ದೆಗಳು ಖಾಲಿಯಿದ್ದವು. ವಿರೋಧ ಪಕ್ಷದ ನಾಯಕರು ನಿರಪರಾಧಿ ವಿದ್ಯಾರ್ಥಿಗಳಿಗೆ ತಪ್ಪು ಮಾರ್ಗದರ್ಶನ ಮಾಡಿ ತಮ್ಮ ರಾಜಕೀಯ ಸ್ವಾರ್ಥದ ಈಡೇರಿಕೆಗಾಗಿ ಬಳಸಿಕೊಳ್ಳುತ್ತಿರುವುದು ವಿಷಾದನೀಯ. ಉದ್ಯೋಗದ ನಿರೀಕ್ಷೆಯಲ್ಲಿರುವ ಯುವ ಜನರನ್ನು ಉಜ್ವಲ ಭವಿಷ್ಯದ ಕಡೆ ಯೋಚಿಸಲು ಪ್ರೇರೇಪಿಸುವ ಬದಲು, ಅವರ ಮೂಲಕ ಅಶಾಂತಿಯನ್ನು ಉಂಟುಮಾಡಲು ಹೊರಟಿರುವ ವಿಪಕ್ಷ ನಾಯಕರ ನಡೆ ಖಂಡನೀಯ.

ನಿಮ್ಮ ಶಿಕ್ಷಣ, ಕೌಶಲ್ಯ ಮತ್ತು ಪೂರ್ವತಯಾರಿಯ ಮೇಲೆ ಆತ್ಮವಿಶ್ವಾಸ ಮತ್ತು ಭರವಸೆ ಯನ್ನಿಡಿ. ನಾಡಿನ ಯುವಜನರೇ ನಮ್ಮ ಭವಿಷ್ಯದ ವಾಸ್ತುಶಿಲ್ಪಿ ಗಳು. ನಮ್ಮ ಸರ್ಕಾರ ನಿಮ್ಮೊಂದಿಗೆ ದೃಢವಾಗಿ ನಿಂತಿದೆ, ಮುಂದೆಯೂ ನಿಲ್ಲಲಿದೆ. ಇದು ಬರೀ ಬಾಯಿಮಾತಲ್ಲ, ನಮ್ಮ ನಡೆಯಲ್ಲಿಯೂ ಇದನ್ನು ಪಾಲಿಸುತ್ತಿದ್ದೇವೆ. ಸರ್ಕಾರಿ ಉದ್ಯೋಗ ಪಡೆಯಬೇಕು, ನೆಮ್ಮದಿಯ ಬದುಕು ಕಟ್ಟಿಕೊಳ್ಳಬೇಕು ಮತ್ತು ಸಮಾಜಕ್ಕಾಗಿ ಸೇವೆ ಸಲ್ಲಿಸಬೇಕು ಎಂಬ ಕನಸು ಹೊತ್ತಿರುವ ಪ್ರತಿಯೊಬ್ಬ ಉದ್ಯೋಗಾಕಾಂಕ್ಷಿಯ ಆಸೆ–ಆಕಾಂಕ್ಷೆಯನ್ನು ರಕ್ಷಿಸಿ, ಪ್ರತಿ ಅರ್ಹ ವ್ಯಕ್ತಿಗೆ ಸೂಕ್ತ ಉದ್ಯೋಗವನ್ನು ಖಚಿತಪಡಿಸಲು ನಾವು ಬದ್ಧರಿದ್ದೇವೆ ಎಂದು ಸಿಎಂ ಸಿದ್ದರಾಮಯ್ಯ ಸ್ಪಷ್ಟಪಡಿಸಿದ್ದಾರೆ.

ಲಕ್ಷಾಂತರ ಜನ ಕುಡಿಯುವ ನೀರು ಸಂಗ್ರಹಾಗಾರಕ್ಕೆ ಸೂಕ್ತ ಸುರಕ್ಷತೆಯೇ ಇಲ್ಲ!; ಯಾರು ಬೇಕಾದರೂ ಹೋಗಬಹುದು... ಏನು ಬೇಕಾದರೂ ಮಾಡಬಹುದು!!

ನಮ್ಮ ಅಧಿಕಾರಿ ವರ್ಗಕ್ಕೆ 'ಅನಾಹುತ' ಆದಾಗಲೇ ಎಚ್ಚರವಾಗುವುದು


ಗೇಟ್‌ವಾಲ್ವ್ ಬಳಿ ಸುರಕ್ಷತೆ ಇಲ್ಲದಿರುವುದು.


ನೀರಿನ ಟ್ಯಾಂಕ್ ಗೋಡೆ ಮೇಲಿನ ರಂಧ್ರದಲ್ಲಿ ಪಾರಿವಾಳ ತೂರುತ್ತಿರುವುದು.


ಮೈಸೂರಿನ ಯಾದವಗಿರಿಯಲ್ಲಿರುವ ನೀರು ಸಂಗ್ರಹಾಗಾರಕ್ಕೆ ಕಾಂಪೌಂಡ್ ಭದ್ರತೆ ಇಲ್ಲ.


ಮೈಸೂರು, ಫೆ.24(ಎಂಟಿವೈ)– ನೀರು ಉಕ್ಕಿ ಅವಾಂತರ ಸೃಷ್ಟಿಸಿದ್ದ ಮೈಸೂರಿನ ಯಾದವಗಿರಿಯಲ್ಲಿರುವ ವಾಣಿ ವಿಲಾಸ ವಾಟರ್ ವರ್ಕ್ಸ್‌ನ (ವಿವಿಡಬ್ಲ್ಯುಡಬ್ಲ್ಯು) ಹೈಲೆವೆಲ್ ಜಲಸಂಗ್ರಹಾಗಾರದ ಸುರಕ್ಷತೆ ಹಾಗೂ ಭವಿಷ್ಯದಲ್ಲಿ ಉದ್ಭವಿಸಬಹುದಾದ ಸಮಸ್ಯೆಯ ಬಗ್ಗೆ ಸ್ಥಳೀಯರು ಆತಂಕ ವ್ಯಕ್ತಪಡಿಸಿದ್ದು, ಜಲ ಸಂಗ್ರಹಾಗಾರದ ಸುರಕ್ಷತೆಗೆ ಆದ್ಯತೆ ನೀಡುವಂತೆ ಆಗ್ರಹಿಸಿದ್ದಾರೆ.

ಯಾದವಗಿರಿಯಲ್ಲಿರುವ ಹೈಲೆವೆಲ್ ಜಲಸಂಗ್ರಹಾಗಾರದಲ್ಲಿ ಒಂದು ಲಕ್ಷ ಲೀಟರ್ ನೀರು ಸಂಗ್ರಹಿಸುವ ಸಾಮರ್ಥ್ಯವುಳ್ಳ ಐದು ನೀರಿನ ಟ್ಯಾಂಕ್‌ಗಳಿದ್ದು, ಅವುಗಳಲ್ಲಿ ಎರಡು ಜಲಸಂಗ್ರಹಾಗಾರಗಳ ದುರಸ್ತಿ ಕಾಮಗಾರಿ ನಡೆಯುತ್ತಿದೆ. ಉಳಿದ ಮೂರು ಟ್ಯಾಂಕ್‌ಗಳಲ್ಲಿ ನೀರು ಸಂಗ್ರಹಿಸಿ, ಮೈಸೂರಿನ ಶೇ.30ರಷ್ಟು ಬಡಾವಣೆಗಳಿಗೆ ನೀರು ಸರಬರಾಜು ಮಾಡಲಾಗುತ್ತಿದೆ. ಇಲ್ಲಿನ ನೀರು ಸಂಗ್ರಹಾಗಾರಕ್ಕೆ ಅಭದ್ರತೆ ಕಾಡುತ್ತಿರುವ ಬಗ್ಗೆ ಸ್ಥಳೀಯರು ಮಾತ್ರವಲ್ಲದೆ, ಮೈಸೂರು ಗ್ರಾಹಕ ಪರಿಷತ್ ಹಾಗೂ ಯಾದವಗಿರಿ ನಿವಾಸಿಗಳ ಸಂಘ ತೀವ್ರ ಸ್ವರೂಪದಲ್ಲಿ ಆತಂಕ ವ್ಯಕ್ತಪಡಿಸಿದೆ.

ಸುರಕ್ಷತೆಗೆ ಕ್ರಮ ಕೈಗೊಳ್ಳಿ: ಮೈಸೂರಿನ ಯಾದವಗಿರಿಯಲ್ಲಿರುವ ಹೈಲೆವೆಲ್ ಜಲ ಸಂಗ್ರಹಾಗಾರದ ಪ್ರದೇಶ ನಿರ್ಬಂಧಿತ ಪ್ರದೇಶವಾಗಿದ್ದು, ಅಲ್ಲಿನ ಸಿಬ್ಬಂದಿಯನ್ನು ಹೊರತುಪಡಿಸಿ ಬೇರೆ ಯಾರು ಅತಿಕ್ರಮ ಪ್ರವೇಶ ಮಾಡಬಾರದು. ಆದರೆ, ಜಲಸಂಗ್ರಹಗಾರದ ಪ್ರದೇಶಕ್ಕೆ ಸೂಕ್ತ ಕಾಂಪೌಂಡ್ ವ್ಯವಸ್ಥೆಯಿಲ್ಲದೆ, ಅಭದ್ರತೆ ಕಾಡಲಾರಂಭಿಸಿದೆ. ಜಲಸಂಗ್ರಹಗಾರದ ಎರಡೂ ದಿಕ್ಕಿನ ರಸ್ತೆಯಲ್ಲೂ ಭದ್ರತೆಗಾಗಿ ಕಾಂಪೌಂಡ್ ಇಲ್ಲದೆ, ಯಾರು ಬೇಕಾದರೂ ಒಳಗೆ ಹೋಗಿ ಬರಬಹುದಾಗಿದೆ. ಇದರಿಂದ ಜಲಸಂಗ್ರಹಗಾರದಲ್ಲಿರುವ ಕುಡಿಯುವ ನೀರು ಎಷ್ಟರ ಮಟ್ಟಿಗೆ ಸುರಕ್ಷಿತ ಎಂಬ ಪ್ರಶ್ನೆ ಸ್ಥಳೀಯರಲ್ಲಿ ಮೂಡಿದೆ. ಈ ಹಿನ್ನೆಲೆಯಲ್ಲಿ ಕೂಡಲೇ ಜಲಸಂಗ್ರಹಾರದ ಸುತ್ತಲೂ ಕಟ್ಟುನಿಟ್ಟಾಗಿ ಕಾಂಪೌಂಡ್ ನಿರ್ಮಿಸಿ, ಸೂಕ್ತ ಭದ್ರತಾ ಸಿಬ್ಬಂದಿ ಹಾಗೂ ಸಿಸಿ ಕ್ಯಾಮರಾ ಕಣ್ಗಾವಲು ಹಾಕುವಂತೆ ಸ್ಥಳೀಯರು ಆಗ್ರಹಿಸಿದ್ದಾರೆ.

ಹಲವು ವರ್ಷಗಳಿಂದಲೂ ನಿರ್ಲಕ್ಷ್ಯ: ಯಾದವಗಿರಿಯಲ್ಲಿರುವ ಜಲಸಂಗ್ರಹಗಾರದಲ್ಲಿನ ನಿರ್ಲಕ್ಷ್ಯ ಹಲವು ವರ್ಷಗಳಿಂದಲೂ ಇದ್ದದ್ದೆ. ಒಂಟಿಕೊಪ್ಪಲು ದೇವಾಲಯದ ಸಿಗ್ನಲ್‌ನಿಂದ ರಾಮಕೃಷ್ಣ ಆಶ್ರಮದ ಮುಂಭಾಗದ ರಸ್ತೆಯಲ್ಲಿ ಯಾದವಗಿರಿ ಮಾರ್ಗವಾಗಿ ಸಂಚರಿಸುವವರ ಸಂಖ್ಯೆ ಹೆಚ್ಚಾಗಿದೆ. ಈ ಭಾಗದಲ್ಲಿ ಕಳೆದ ಕೆಲವು ವರ್ಷಗಳ ಹಿಂದೆ ಹೊಸದಾಗಿ ನಿರ್ಮಿಸಲಾದ ನೀರಿನ ಟ್ಯಾಂಕ್ ಸೇರಿದಂತೆ ಇನ್ನು ನಾಲ್ಕು ಹೈ–ಲೆವೆಲ್ ನೀರಿನ ಟ್ಯಾಂಕ್‌ಗಳಿವೆ. ಕುಡಿಯುವ ನೀರು ಪೂರೈಸುವ ಈ ಜಲ ಸಂಗ್ರಹಾಗಾರದ ಪ್ರದೇಶವನ್ನು ಸೂಕ್ಷ್ಮ ಪ್ರದೇಶವೆಂದು ತಿಳಿದು ಕಾಂಪೌಂಡ್ ವ್ಯವಸ್ಥೆಯನ್ನು ಹಲವು ವರ್ಷಗಳ ಹಿಂದೆಯೇ ಮಾಡಬೇಕಾಗಿತ್ತು. ಆದರೆ, ಇದುವರೆಗೂ ನಿರ್ಲಕ್ಷ್ಯ ಮಾಡುತ್ತಾ ಬಂದಿದ್ದಾರೆ. ಅದನ್ನು ಇನ್ನು ಮುಂದುವರೆಸದೆ ಭದ್ರತೆಗೆ ಕ್ರಮ ಕೈಗೊಳ್ಳಬೇಕು ಎಂದು ಸ್ಥಳೀಯರು ಒತ್ತಾಯಿಸಿದ್ದಾರೆ.

ಟೆಂಡರ್ ಆಗಿದೆ ಎನ್ನುತ್ತಾರೆ



ಇದುವರೆಗೆ ನಾಲ್ಕು ಜನಸ್ಪಂದನ ಸಭೆಯಲ್ಲಿ ಯಾದವಗಿರಿ ಜಲ ಸಂಗ್ರಹಾಗಾರಕ್ಕೆ ಭದ್ರತೆ ಒದಗಿಸುವಂತೆ ಮನವಿ ಮಾಡಲಾಗಿದೆ. ಬರವಣಿಗೆ ರೂಪದಲ್ಲಿ ಪ್ರಾದೇಶಿಕ ಆಯುಕ್ತ ನಿತೇಶ್ ಪಾಟೀಲ್ ಅವರಿಗೆ ಸಲ್ಲಿಸಲಾಗಿದೆ. ಈ ಜಲ ಸಂಗ್ರಹಾಗಾರಕ್ಕೆ ಭದ್ರತೆ ಒದಗಿಸುವ ಸಂಬಂಧ ಕೈಗೊಳ್ಳಬೇಕಾದ ತುರ್ತು ಕ್ರಮ ಅಧಿಕಾರಿಗಳಿಗೆ ಅರ್ಥವಾಗುತ್ತಿಲ್ಲ. ಕೇಳಿದಾಗಲೆಲ್ಲಾ ಟೆಂಡರ್ ಆಗಿದೆ ಎನ್ನುತ್ತಾರೆ. ಒಂದು ವಾರದೊಳಗೆ ಕ್ರಮ ಕೈಗೊಳ್ಳದಿದ್ದರೆ, ಯಾದವಗಿರಿ ನಿವಾಸಿಗಳು ಧನ ಸಹಾಯ ಮಾಡಿ ನಾವೇ ಕಾಮಗಾರಿ ಆರಂಭಿಸಬೇಕಾಗುತ್ತದೆ.

– ಭಾಮಿ ಶೆಣೈ,
ಎಂಜಿಪಿ ಸಂಸ್ಥಾಪಕ ಸದಸ್ಯ

ಅನಾಹುತಕ್ಕೆ ಮುನ್ನ ಎಚ್ಚರ: ಈ ಜಲ ಸಂಗ್ರಹಾಗಾರ ಪ್ರದೇಶಕ್ಕೆ ಕಿಡಿಗೇಡಿಗಳು ಪ್ರವೇಶಿಸಿ ಏನಾದರೂ ದುಷ್ಕೃತ್ಯ ಎಸಗಿದರೆ ಹೊಣೆ ಯಾರು? ಅಧಿಕಾರಿಗಳ ನಿರ್ಲಕ್ಷ್ಯ ಅನಾಹುತಕ್ಕೆ ಕಾರಣವಾಗಬಹುದು. ಈ ಹಿನ್ನೆಲೆಯಲ್ಲಿ ಕೂಡಲೆ ಜಲಸಂಗ್ರಹಗಾರದ ರಕ್ಷಣೆಗೆ ಕ್ರಮ ಕೈಗೊಳ್ಳಬೇಕು ಎಂದು ಮೈಸೂರು ಗ್ರಾಹಕ ಪರಿಷತ್(ಎಂಜಿಪಿ) ಕಾರ್ಯಾಧ್ಯಕ್ಷ ಎಸ್.ಕೆ.ದಿನೇಶ್ ಮನವಿ ಮಾಡಿದ್ದಾರೆ.

ತಂತ್ರಜ್ಞಾನ ಬಳಸಿ: ಯಾದವಗಿರಿ ಜಲ ಸಂಗ್ರಹಾಗಾರದ ಟ್ಯಾಂಕ್‌ವೊಂದು ಉಕ್ಕಿ ಹರಿದ ಪರಿಣಾಮ ಬಡಾವಣೆಯ ಹಲವು ಮನೆ ಹಾಗೂ ಹೋಟೆಲ್‌ಗೆ ನೀರು ನುಗ್ಗಿ ಅವಾಂತರ ಸೃಷ್ಟಿಸಿತ್ತು. ಅಪಾರ ಪ್ರಮಾಣದ ನೀರು ಬಡಾವಣೆಗೆ ನುಗ್ಗಲು ಪೈಪ್ ದೋಷ ಪೂರಿತ ವಾಲ್ವ್ ಕಾರಣ ಎಂದು ಅಧಿಕಾರಿಗಳು ತಿಳಿಸಿದ್ದರು. ಆದರೆ, ಪ್ರಾದೇಶಿಕ ಆಯುಕ್ತರ ನೇತೃತ್ವದಲ್ಲಿ ನಡೆದ ಜನಸ್ಪಂದನ ಸಭೆಯಲ್ಲಿ ಅಂದು ಕಾರ್ಯನಿರ್ವಹಿಸುತ್ತಿದ್ದ ಸಿಬ್ಬಂದಿ ನಿದ್ರೆಗೆ ಜಾರಿದ್ದರಿಂದ ಗೇಟ್‌ವಾಲ್ವ್ ಆಫ್ ಮಾಡದ ಕಾರಣ ಟ್ಯಾಂಕ್ ಉಕ್ಕಿ ನೀರು ಹರಿದಿದೆ. ಇದು ಮಾನವ ಸಹಜ ತಪ್ಪಿನಿಂದ ಆದ ಕೃತ್ಯ ಎಂದು ಸಭೆಯಲ್ಲಿ ಅಧಿಕಾರಿಗಳೇ ತಿಳಿಸಿದ್ದಾರೆ. ಆದರೆ, ತಂತ್ರಜ್ಞಾನ ಬಳಕೆಗೆ ಇದುವರೆಗೂ ಯಾವುದೇ ಕ್ರಮ ಕೈಗೊಳ್ಳದೇ ಇರುವುದು ಆಶ್ಚರ್ಯವನ್ನುಂಟು ಮಾಡಿದೆ. ಬೇರೆ ಬೇರೆ ರಾಜ್ಯ, ವಿದೇಶಗಳಲ್ಲೂ ದೊಡ್ಡ ದೊಡ್ಡ ಪ್ರಮಾಣದ ನೀರಿನ ಟ್ಯಾಂಕ್‌ಗಳಿದ್ದು, ನಿಗದಿತ ಪ್ರಮಾಣದಲ್ಲಿ ನೀರು ಸಂಗ್ರಹವಾಗುತ್ತಿದ್ದಂತೆ ಸ್ವಯಂ ಚಾಲಿತವಾಗಿ ನೀರು ಸರಬರಾಜು ಸ್ಥಗಿತಗೊಳ್ಳುವ ವ್ಯವಸ್ಥೆ ಜಾರಿಯಲ್ಲಿದೆ. ಅಂತಹ ವ್ಯವಸ್ಥೆಯನ್ನು ಮೈಸೂರಲ್ಲಿ ಯಾಕೆ ಇನ್ನು ಜಾರಿಗೊಳಿಸಿಲ್ಲ ಎಂದು ಅವರು ಪ್ರಶ್ನಿಸಿದರು.

ಸುರಕ್ಷತೆ ಮುಖ್ಯ



ಇಂದು ದೇಶದ ವಿವಿಧೆಡೆ ನಡೆಯುತ್ತಿರುವ ವಿದ್ಯಮಾನಗಳನ್ನು ಗಮನಿಸಿದರೆ ಭಯವಾಗುತ್ತದೆ. ಐದು ವರ್ಷಗಳಿಂದ ಯಾದವಗಿರಿ ಜಲ ಸಂಗ್ರಹಾಗಾರಕ್ಕೆ ಭದ್ರತೆ ಒದಗಿಸಿ ಎಂದು ಹೇಳುತ್ತಾ ಬಂದಿದ್ದೇವೆ. ಆದರೂ, ಯಾವುದೇ ಕ್ರಮ ಕೈಗೊಂಡಿಲ್ಲ. ಎರಡು ಕಡೆಯಿಂದಲೂ ಯಾರು ಬೇಕಾದರೂ ಜಲ ಸಂಗ್ರಹಾಗಾರದ ಒಳಗೆ ಹೋಗಿ ಬರಬಹುದಾಗಿದೆ. ಭದ್ರತಾ ಸಿಬ್ಬಂದಿಯೂ ಇಲ್ಲ. ಗೇಟ್ ಕೂಡ ಹಾಕಿಲ್ಲ. ಇನ್ನಾದರೂ ಲಕ್ಷಾಂತರ ಜನ ಕುಡಿಯುವ ನೀರಿನ ಸಂಗ್ರಹಗಾರಕ್ಕೆ ಸೂಕ್ತ ಭದ್ರತೆ ಒದಗಿಸಬೇಕು.

–ಎಸ್.ಕೆ.ದಿನೇಶ್, ಕಾರ್ಯಾಧ್ಯಕ್ಷ,
ಮೈಸೂರು ಗ್ರಾಹಕ ಪರಿಷತ್

ಪ್ರಾಣಿ–ಪಕ್ಷಿಗಳ ಮೇಲೆ ನಿಗಾ ಇರಲಿ: ಯಾದವಗಿರಿ ನೀರಿನ ಟ್ಯಾಂಕ್ ಇರುವ ಆವರಣದಲ್ಲಿ ಐದಾರು ಬೀದಿ ನಾಯಿಗಳು ನಿತ್ಯವೂ ಓಡಾಡುತ್ತವೆ. ಅಲ್ಲದೆ, ಟ್ಯಾಂಕ್ ಗೋಡೆ ಮೇಲೆ ಪಾರಿವಾಳಗಳು ಗೂಡು ಕಟ್ಟಿಕೊಂಡಿವೆ. ಆಕಸ್ಮಿಕವಾಗಿ ನಾಯಿ ಅಥವಾ ಪಕ್ಷಿಗಳು ನೀರಿನ ಟ್ಯಾಂಕ್‌ಗೆ ಬಿದ್ದರೆ ನೀರು ಕಲುಷಿತವಾಗುತ್ತದೆ. ಈ ಹಿನ್ನೆಲೆಯಲ್ಲಿ ನೀರು ಸಂಗ್ರಹಾಗಾರದ ಬಳಿ ಓಡಾಡುವ ಪ್ರಾಣಿ, ಪಕ್ಷಿಗಳ ಮೇಲೆ ನಿಗಾ ಇಡಬೇಕು. ನೀರಿನ ಟ್ಯಾಂಕ್ ಗೋಡೆ ಮೇಲೆ ಗಾಳಿಯಾಡಲು (ಏರ್‌ಜೆಟ್) ಮಾಡಿರುವ ರಂಧ್ರಗಳಿಗೆ ಮೆಶ್(ಪರದೆ) ಅಳವಡಿಸಬೇಕು ಎಂದು ಮನವಿ ಮಾಡಿದರು.

ಸ್ವಚ್ಛತೆಗೆ ಆದ್ಯತೆ ನೀಡಿ: ಜಲ ಸಂಗ್ರಹಾಗಾರದ ಆವರಣದಲ್ಲಿ ಗಿಡಗಂಟೆ ಬೆಳೆದುಕೊಂಡಿದ್ದು, ಅದನ್ನು ತೆರವುಗೊಳಿಸಿ ಸ್ವಚ್ಛತೆ ಕಾಪಾಡಬೇಕು. ಗಿಡ ಹೆಚ್ಚಾಗಿ ಬೆಳೆದಿರುವ ಹಿನ್ನೆಲೆಯಲ್ಲಿ ಹಾವುಗಳು ಹೆಚ್ಚಾಗಬಹುದು. ಈ ಹಿನ್ನೆಲೆಯಲ್ಲಿ ಜಲ ಸಂಗ್ರಹಗಾರದ ಸ್ವಚ್ಛತೆಗೆ ಆದ್ಯತೆ ನೀಡಬೇಕು. ಅಲ್ಲದೆ, ಟ್ಯಾಂಕ್‌ಗಳನ್ನು ಕಾಲ ಕಾಲಕ್ಕೆ ಸ್ವಚ್ಛತೆ ಮಾಡಬೇಕು. ಮನೆಯಲ್ಲಿರುವ ಚಿಕ್ಕ ಟ್ಯಾಂಕ್ ಅಥವಾ ಸಂಪ್ ಅನ್ನು ಕಾಲ ಕಾಲಕ್ಕೆ ಸ್ವಚ್ಛತೆ ಮಾಡಿಕೊಳ್ಳುತ್ತೇವೆ. ಅದೇ ಮಾದರಿಯಲ್ಲಿ ನೀರಿನ ಟ್ಯಾಂಕ್ ಸ್ವಚ್ಛ ಮಾಡಲು ವಾಣಿ ವಿಲಾಸ ನೀರು ಸರಬರಾಜು ಮಂಡಳಿ ಕ್ರಮ ಕೈಗೊಳ್ಳಬೇಕು ಎಂದು ಅವರು ಆಗ್ರಹಿಸಿದರು.

ಕೇರಳ ಈಗ 'ಕೇರಳಂ'
ಕೇಂದ್ರ ಸಂಪುಟದ ಅನುಮೋದನೆ



ನವದೆಹಲಿ: ಕೇರಳ ರಾಜ್ಯದ ಹೆಸರನ್ನು ಬದಲಾವಣೆ ಮಾಡುವ ಕೇರಳ ಸರ್ಕಾರದ ಪ್ರಸ್ತಾವನೆಗೆ ಕೇಂದ್ರ ಸಚಿವ ಸಂಪುಟ ಅನುಮೋದನೆ ನೀಡಿದೆ. ಕೇಂದ್ರದ ಅನುಮೋದನೆ ನಂತರ ಕೇರಳ ರಾಜ್ಯದ ಹೆಸರು 'ಕೇರಳಂ' ಆಗಿ ಬದಲಾವಣೆಯಾಗಿದೆ

ಈ ಬೆಳವಣಿಗೆಯು ಏಪ್ರಿಲ್–ಮೇ ತಿಂಗಳಲ್ಲಿ ನಡೆಯಲಿರುವ ಕೇರಳ ವಿಧಾನ ಸಭಾ ಚುನಾವಣೆಗೆ ಮುನ್ನ ನಡೆದಿದ್ದು, ರಾಜಕೀಯ ಚರ್ಚೆಗೆ ಕಾರಣವಾಗಿದೆ.

ರಾಜ್ಯಕ್ಕೆ ಮರುನಾಮಕರಣ ಮಾಡುವ ಪ್ರಸ್ತಾವನೆಯನ್ನು ಕೇರಳ ವಿಧಾನಸಭೆ 2024ರ ಜೂನ್ 24 ರಂದು ಸರ್ವಾನುಮತದಿಂದ ನಿರ್ಣಯ ಅಂಗೀಕರಿಸಿ, ಹೆಸರನ್ನು ಅಧಿಕೃತವಾಗಿ 'ಕೇರಳಂ' ಎಂದು ಬದಲಾಯಿಸುವಂತೆ ಕೇಂದ್ರ ಸರ್ಕಾರವನ್ನು ಒತ್ತಾಯಿಸಿತ್ತು. ಈಗ ಕೊನೆಗೂ ಕೇಂದ್ರ ಸಚಿವ ಸಂಪುಟ ಅನಮೋದನೆ ನೀಡಿದೆ.

ಕೇಂದ್ರ ಗೃಹ ಸಚಿವಾಲಯ ಕೆಲವು ತಾಂತ್ರಿಕ ಬದಲಾವಣೆಗಳನ್ನು ಸೂಚಿಸಿತ್ತು. ಇದರ ನಂತರ ವಿಧಾನಸಭೆ ಎರಡನೇ ಬಾರಿಗೆ ನಿರ್ಣಯ ಅಂಗೀಕರಿಸಿತ್ತು. ಮಂಗಳವಾರ ನಡೆದ ಕೇಂದ್ರ ಸಚಿವ ಸಂಪುಟ ಸಭೆಯಲ್ಲಿ ಈ ಪ್ರಸ್ತಾವನೆಗೆ ಅನುಮೋದನೆ ನೀಡಲಾಗಿದೆ ಎಂದು ಮೂಲಗಳು ತಿಳಿಸಿವೆ.

ಕೇರಳ ಸರ್ಕಾರದ ಈ ಬೇಡಿಕೆಯ ಹಿನ್ನೆಲೆಯಲ್ಲಿ ರಾಜ್ಯದಲ್ಲಿ ಭಾಷಾ ಮತ್ತು ಸಾಂಸ್ಕೃತಿಕ ಗುರುತಿನ ಬಗ್ಗೆ ಚರ್ಚೆ ನಡೆದಿದೆ. ಮಲಯಾಳಂನಲ್ಲಿ 'ಕೇರಳಂ' ಎಂದು ಕರೆಯುವುದು ಸಾಮಾನ್ಯವಾಗಿದ್ದು, ಇದನ್ನು ಅಧಿಕೃತವಾಗಿ ಬದಲಾಯಿಸುವುದು ಸಂವಿಧಾನದ ಎಂಟನೇ ಶೆಡ್ಯೂಲ್ ನಲ್ಲಿ ಎಲ್ಲಾ ಭಾಷೆಗಳಲ್ಲಿ ಸಮಾನವಾಗಿ ಉಲ್ಲೇಖಿಸುವ ಉದ್ದೇಶವನ್ನು ಹೊಂದಿದೆ. ಆಗಸ್ಟ್ 2023ರಲ್ಲಿ ಸದನ ಇದೇ ರೀತಿಯ ನಿರ್ಣಯ ಅಂಗೀಕರಿಸಿ ಕೇಂದ್ರಕ್ಕೆ ಸಲ್ಲಿಸಿತ್ತು. ಆದರೆ ಗೃಹ ಸಚಿವಾಲಯ ಕೆಲವು ತಾಂತ್ರಿಕ ಬದಲಾವಣೆಗಳನ್ನು ಸೂಚಿಸಿತ್ತು. ಇದರ ನಂತರ ಎರಡನೇ ಬಾರಿಗೆ ನಿರ್ಣಯ ಅಂಗೀಕರಿಸಲಾಗಿದೆ.


ಕೇಂದ್ರ ಸಚಿವ ಸಂಪುಟದ ಅನುಮೋದನೆಯ ನಂತರ ಈ ಬದಲಾವಣೆಯನ್ನು ಸಂವಿಧಾನದಲ್ಲಿ ತರುವ ಕ್ರಮಗಳು ಆರಂಭವಾಗಲಿವೆ.

ಮಹನೀಯರ ಹೆಸರಿನ ಕಾರ್ಯಕ್ರಮಗಳಿಗೆ ರಾಯಲ್ಟಿ ಬೇಡಿಕೆಗೆ ತೀವ್ರ ಆಕ್ಷೇಪ

ಮೈಸೂರು, ಫೆ.24(ಎಸ್‌ಪಿಎನ್)– ಪ್ರಮುಖ ಕವಿ, ಸಾಹಿತಿ, ಗಾಯಕರ ಹೆಸರಿನಲ್ಲಿ ಕಾರ್ಯಕ್ರಮ ಆಯೋಜಿಸುವ ಸಣ್ಣಪುಟ್ಟ ಸಂಘಟಕರಿಗೆ ಐಪಿಆರ್‌ಎಸ್ ಸಂಸ್ಥೆಯು ಬೌದ್ಧಿಕ ಹಕ್ಕು ಸ್ವಾಮ್ಯ ಕಾಯ್ದೆ ಪ್ರಕಾರ ರಾಯಲ್ಟಿ ನೀಡಿ, ಬಳಿಕ ಕಾರ್ಯಕ್ರಮ ನಡೆಸಿ ಎಂಬ ತಗಾದೆ ಇತ್ತೀಚೆಗೆ ಆರಂಭಿಸಿರುವುದಕ್ಕೆ ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಡಾ.ಎಂ.ಡಿ. ಸುದರ್ಶನ್ ಆಕ್ಷೇಪ ವ್ಯಕ್ತಪಡಿಸಿದರು.

ಮೈಸೂರು ಜೆಎಲ್‌ಬಿ ರಸ್ತೆಯ ನಾದಬ್ರಹ್ಮ ಸಭಾಂಗಣದಲ್ಲಿ ಕರ್ನಾಟಕ ಸುಗಮ ಸಂಗೀತ ಪರಿಷತ್ತು ಜಿಲ್ಲಾ ಘಟಕ, ಶ್ರೀ ಅನಂತೇಶ್ವರ ಟ್ರಸ್ಟ್ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಂಯುಕ್ತ ಆಶ್ರಯದಲ್ಲಿ ಏರ್ಪಡಿಸಿದ್ದ 'ಮರೆಯಲಾಗದ ಮಹನೀಯರು' ಸುಗಮ ಸಂಗೀತ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದ ಅವರು, ಈ ಸಮಸ್ಯೆಯನ್ನು ಶಾಶ್ವತವಾಗಿ ಬಗೆಹರಿಸುವ ಕುರಿತು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವರ ಗಮನಕ್ಕೆ ತರಲಾಗುವುದು ಎಂದು ಭರವಸೆ ನೀಡಿದರು.

ಕಳೆದ ಹಲವು ವರ್ಷಗಳಿಂದ ರಾಜ್ಯದ ವಿವಿಧೆಡೆ ಪ್ರಮುಖ ಸಾಹಿತಿ, ಕವಿ, ಗಾಯಕರ ಹೆಸರಿನಲ್ಲಿ ಸಣ್ಣಪುಟ್ಟ ಕಲಾವಿದರು ಸಂಘ–ಸಂಸ್ಥೆಗಳ ಮೂಲಕ ಮಹನೀಯರ ಹೆಸರಿನಲ್ಲಿ ಕಾರ್ಯಕ್ರಮ ಆಯೋಜಿಸಿದರೆ ರಾಯಲ್ಟಿ ನೀಡಿ, ತಗಾದೆ ಆರಂಭವಾಗಿತ್ತು. ಬಳಿಕ ಅದನ್ನು ನಿಲ್ಲಿಸಲಾಗಿತ್ತು. ರಾಯಲ್ಟಿ ನೀಡುವ ತಗಾದೆ ಇದೀಗ ಮತ್ತೆ ಆರಂಭವಾಗಿದೆ. ಈ ಅಂಶವನ್ನು ಸಚಿವರ ಗಮನಕ್ಕೆ ತಂದು ಶಾಶ್ವತ ಪರಿಹಾರಕ್ಕೆ ಒದಗಿಸಲಾಗುವುದು ಎಂದು ತಿಳಿಸಿದರು.



'ಮರೆಯಲಾಗದ ಮಹನೀಯರು' ಸುಗಮ ಸಂಗೀತ ಕಾರ್ಯಕ್ರಮದಲ್ಲಿ ಎಡಿಸಿ ಡಾ.ಪಿ.ಶಿವರಾಜ್, ಹಿರಿಯ ಪತ್ರಕರ್ತ ಅಂಶಿ ಪ್ರಸನ್ನ ಕುಮಾರ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಡಾ.ಎಂ.ಡಿ.ಸುದರ್ಶನ್, ಜಿಲ್ಲಾ ಸುಗಮ ಸಂಗೀತ ಪರಿಷತ್ ಅಧ್ಯಕ್ಷ ನಾಗರಾಜ ವಿ.ಬೈರಿ ಸೇರಿದಂತೆ ಇತರರನ್ನು ಸನ್ಮಾನಿಸಲಾಯಿತು.

ಬೌದ್ಧಿಕ ಹಕ್ಕು ಸ್ವಾಮ್ಯ ಕಾಯ್ದೆ ಪ್ರಕಾರ ಐಪಿಆರ್‌ಎಸ್ ಸಂಸ್ಥೆ ಕೇಂದ್ರ ಸರ್ಕಾರದಿಂದ ಅನುಮತಿ ಪಡೆದು ಕಾರ್ಯನಿರ್ವಹಿಸುತ್ತಿದೆ. ಈ ಸಂಸ್ಥೆಯು ಸಾಹಿತ್ಯ, ಸಂಗೀತ, ವಿವಿಧ ಕಲಾ ಪ್ರಾಕಾರಗಳಲ್ಲಿ ಸಾಧನೆ ಮಾಡಿರುವ ಸಾಧಕರನ್ನು ಸಾಧನೆಯನ್ನು ಸಂಪೂರ್ಣವಾಗಿ ಯಾವುದೋ ಕಾಲಘಟ್ಟದಲ್ಲಿ ಇಲ್ಲವೇ ಯಾವುದೇ ಸಂದರ್ಭದಲ್ಲಿ ಬೌದ್ಧಿಕ ಹಕ್ಕು ಸ್ವಾಮ್ಯತೆ ಹಕ್ಕು ಪಡೆದಿರುತ್ತದೆ. ಆದರೆ, ಈ ನೀತಿ ಎಲ್ಲಾ ಕಾರ್ಯಕ್ರಮಕ್ಕೂ ಅನ್ವಯಿಸಬಾರದು. ಆಗೊಂದು ವೇಳೆ ಎಲ್ಲಾ ಕಾರ್ಯಕ್ರಮಗಳಿಗೂ ಈ ನೀತಿ ಅನ್ವಯಿಸಿದರೆ, ನಾಡು–ನುಡಿ ಬೆಳವಣಿಗೆಗೆ ಅಡ್ಡಿಯಾಗುತ್ತದೆ ಎಂದು ಆತಂಕ ವ್ಯಕ್ತಪಡಿಸಿದರು.

ಹಾಗಾಗಿ ಬೌದ್ಧಿಕ ಹಕ್ಕು ಸ್ವಾಮ್ಯ ಕಾಯ್ದೆಯ ಇತಿ–ಮಿತಿಗಳ ಕುರಿತು ಸಚಿವರ ಗಮನಕ್ಕೆ ಮುಂದಿನ ಕ್ರಮಕ್ಕೆ ಮನವಿ ಮಾಡಲಾಗುವುದು. ಸಂಘ–ಸಂಸ್ಥೆಗಳು ಆಯೋಜಿಸುವ ಸಣ್ಣಪುಟ್ಟ ಕಾರ್ಯಕ್ರಮಗಳಿಗೂ ರಾಯಲ್ಟಿ ನೀಡುವ ಅನಿವಾರ್ಯತೆ ಬಂದರೆ, ಸಂಘಟಿಕರು ಆರ್ಥಿಕ ಹೊರೆ ನೆಪ ಹೇಳಿ ಕಾರ್ಯಕ್ರಮ ಆಯೋಜನೆಯಿಂದ ದೂರು ಉಳಿಯುತ್ತಾರೆ. ಇದರಿಂದ ಕನ್ನಡ ಭಾಷೆ, ಸಾಹಿತ್ಯ, ಸಂಗೀತಕ್ಕೆ ಹಿನ್ನೆಡೆಯಾಗುತ್ತದೆ ಎಂದು ಸ್ವವಿವರವಾಗಿ ತಿಳಿಸಿದರು.

ಇದಕ್ಕೂ ಮುನ್ನ ಖ್ಯಾತ ಗಾಯಕ ನಿತಿನ್ ರಾಜಾರಾಮ್ ಶಾಸ್ತ್ರಿ ಸಾರಥ್ಯದಲ್ಲಿ, ಗಾಯಕರಾದ ದಿವ್ಯಾ ಸಚ್ಚಿದಾನಂದ, ಶ್ರೀದೇವಿ ಕುಳನೂರು, ಅಮೃತಾ ನಿತಿನ್ ಶಾಸ್ತ್ರಿ, ಋತ್ವಿಕ್ ಸಿ. ರಾಜ್ ಹಾಗೂ ಜಿ.ಆರ್.ಶ್ರೀಕರ ದನಿಯಲ್ಲಿ ಖ್ಯಾತ–ನಾಮ ಕವಿತೆಗಳನ್ನು ಹಾಡಿ, ಸಭಿಕರಿಂದ ಚಪ್ಪಾಳೆ ಗಿಟ್ಟಿಸಿದರು. ವಿ. ಕೀರ್ತನಾ ಕಾರ್ಯಕ್ರಮ ನಿರೂಪಿಸಿದರು. ಪುರುಷೋತ್ತಮ್ (ಕೀಬೋರ್ಡ್), ಭೀಮಾಶಂಕರ್ ಬಿದನೂರು (ತಬಲ), ಬಾಲ ಸುಬ್ರಮಣ್ಯ (ಕೊಳಲು) ಹಾಗೂ ಎಚ್.ಪಿ. ಸುಜಯೇಂದ್ರ (ರಿದಂ ಪ್ಯಾಡ್) ಅವರು ವಾದ್ಯ ಸಹಕಾರ ನೀಡಿದರು. ನಿತಿನ್ ರಾಜಾರಾಂಶಾಸ್ತ್ರಿ ಸಂಗೀತ ಶಾಲೆಯ ವಿದ್ಯಾರ್ಥಿಗಳು ಪ್ರಾರ್ಥಿಸಿದರು.

ಪೋಷಕ ನಟ ಶಂಕರ್ ಅಶ್ವತ್ಥ್ ಮಾತನಾಡಿ, ಭಾವಗೀತೆ ಎಂದರೆ ಸಾಹಿತ್ಯ ಮತ್ತು ಸಂಗೀತದ ಮಿಲನ. ಇದಕ್ಕೆ ಉಪಾಸನ ಚಿತ್ರದ 'ಭಾವವೆಂಬ ಹೂವು ಅರಳಿ' ಹಾಡು ಗಮನಿಸಬೇಕು ಎಂದು ಉದಾಹರಣೆ ನೀಡಿದರು. ವೇದಿಕೆಯಲ್ಲಿ ಅಪರ ಜಿಲ್ಲಾಧಿಕಾರಿ ಡಾ.ಪಿ.ಶಿವರಾಜು, ಹಿರಿಯ ಪತ್ರಕರ್ತ ಅಂಶಿ ಪ್ರಸನ್ನ ಕುಮಾರ್, ಜಿಲ್ಲಾ ಸುಗಮ ಸಂಗೀತ ಪರಿಷತ್ ಅಧ್ಯಕ್ಷ ನಾಗರಾಜ ವಿ.ಬೈರಿ, ವಿಪ್ರ ಮುಖಂಡ ಕೆ. ರಘುರಾಂ ವಾಜಪೇಯಿ, ಅನಂತೇಶ್ವರ ಟ್ರಸ್ಟಿನ ಉಪಾಧ್ಯಕ್ಷ ಮಹಬಲೇಶ್ವರ ಬೈರಿ, ಎನ್. ಬೆಟ್ಟೇಗೌಡ, ರಂಗನಾಥ್ ಮೈಸೂರು ಸೇರಿದಂತೆ ಇತರರಿದ್ದರು.

ಉಚಿತ ಕೀಲು, ಮೂಳೆ ತಪಾಸಣಾ ಶಿಬಿರ

ಮೈಸೂರು, ಫೆ. 24– ಮೈಸೂರಿನ ಸುಯೋಗ್ ಆಸ್ಪತ್ರೆಯ ವತಿಯಿಂದ ಫೆ. 28 ರಂದು ಬೆಳಗ್ಗೆ 10ಗಂಟೆಯಿಂದ ಸಂಜೆ 6ಗಂಟೆವರೆಗೆ ಉಚಿತ ಕೀಲು, ಮೂಳೆ ತಪಾಸಣಾ ಶಿಬಿರವನ್ನು ಏರ್ಪಡಿಸಲಾಗಿದೆ. ಕೀಲು ಮತ್ತು ಮೂಳೆಶಾಸ್ತ್ರ ತಜ್ಞರಾದ ಡಾ.ಮೋಹನ್ ಕುಮಾರ್ ಸಿ.ಆರ್. ನೇತೃತ್ವದಲ್ಲಿ ಈ ಶಿಬಿರ ನಡೆಯಲಿದೆ. ಆಸಕ್ತರು 0821–2566966, 9986399862 ಸಂಪರ್ಕಿಸಿ ತಮ್ಮ ಹೆಸರನ್ನು ನೋಂದಾಯಿಸಿಕೊಳ್ಳಬಹುದಾಗಿದೆ.

ದೇಶ – ವಿದೇಶ

ಸಹೋದರಿಯರ ಕೊಳಕು ಜಾಲ; ಆರು ಮಂದಿ ವಿರುದ್ಧ ಪ್ರಕರಣ

ಭೋಪಾಲ್: ಮಧ್ಯಪ್ರದೇಶದ ರಾಜಧಾನಿ ಭೋಪಾಲ್‌ನಲ್ಲಿ ಬಯಲಾಗಿರುವ ಇಬ್ಬರು ಸಹೋದರಿಯರ ಕೊಳಕು ಜಾಲ, ಇಡೀ ನಾಗರಿಕ ಸಮಾಜವನ್ನು ಬೆಚ್ಚಿಬೀಳಿಸಿದೆ.

ಸಹೋದರಿಯರು ತಮ್ಮ ಸಹಚರರೊಂದಿಗೆ ಸೇರಿ ಉದ್ಯೋಗದ ನೆಪದಲ್ಲಿ ಹಿಂದೂ ಮಹಿಳೆಯರನ್ನು ಆಕರ್ಷಿಸಿ, ನಂತರ ಮನೆಗೆ ಕರೆದುಕೊಂಡು ಹೋಗಿ, ಡ್ರಗ್ಸ್ ನೀಡಿ, ಪ್ರಿಯಕರನಿಂದ ಅತ್ಯಾಚಾರ ಮಾಡಿಸಿ, ವೀಡಿಯೊ ಚಿತ್ರೀಕರಿಸಿಕೊಂಡು ನಂತರ ಸಂತ್ರಸ್ತ ಮಹಿಳೆಯರಿಗೆ ಬುರ್ಖಾ ಧರಿಸುವಂತೆ ಹಾಗೂ ಮತಾಂತರಗೊಳ್ಳುವಂತೆ ಒತ್ತಡ ಬೆದರಿಕೆ ಹಾಕುತ್ತಿದ್ದರು ಎನ್ನಲಾಗಿದೆ.

ಸಂತ್ರಸ್ತೆ ನೀಡಿದ ದೂರಿನನ್ವಯ ಭೋಪಾಲ್ ಪೊಲೀಸರು ಇಬ್ಬರು ಸಹೋದರಿಯರು ಸೇರಿದಂತೆ ಆರು ಜನರ ವಿರುದ್ಧ ಧಾರ್ಮಿಕ ಮತಾಂತರ ಮತ್ತು ಅತ್ಯಾಚಾರ ಪ್ರಕರಣವನ್ನು ದಾಖಲಿಸಿದ್ದಾರೆ. ಸದ್ಯ ಅಫ್ರೀನ್ ಅಲಿಯಾಸ್ ಮಹಿರಾ, ಅಫ್ರೀನ್ ಮತ್ತು ಚಂದನ್ ಯಾದವ್‌ನನ್ನು ಬಂಧಿಸಿದ್ದು, ಬಿಲಾಲ್, ಚಾನು ಮತ್ತು ಯಾಸಿರ್‌ಗಾಗಿ ಹುಡುಕಾಟ ನಡೆಸಿದ್ದಾರೆ. ಜಾಲದ ಮಾಸ್ಟರ್‌ಮೈಂಡ್ ಅಫ್ರೀನ್, ಹಲವು ಯುವತಿಯರನ್ನು ಮೋಸದ ಬಲೆಗೆ ಬೀಳಿಸಿ, ಚಿತ್ರಹಿಂಸೆ ನೀಡಿದ್ದಾಳೆ ಎನ್ನಲಾಗಿದ್ದು, ಪೊಲೀಸರು ಈ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿ ಕೂಲಂಕಷವಾಗಿ ತನಿಖೆ ನಡೆಸುತ್ತಿದ್ದಾರೆ.

ಮಾದಕ ವಸ್ತು ಮುಕ್ತ ಗ್ರಾಮಕ್ಕೆ ಒಕ್ಕೊರಲ ನಿರ್ಣಯ

ಪಂಜಾಬ್: ದೇಶದೆಲ್ಲೆಡೆ ಮಾದಕವಸ್ತುಗಳ ಹಾವಳಿ ಹೆಚ್ಚುತ್ತಿರುವ ಸಂದರ್ಭದಲ್ಲಿ ಪಂಜಾಬ್‌ನ ಗ್ರಾಮವೊಂದರಲ್ಲಿ ಮಾದರಿ ನಿರ್ಧಾರ ಕೈಗೊಂಡಿರುವುದು ಎಲ್ಲರ ಗಮನ ಸೆಳೆದಿದೆ. ಮಾದಕ ವಸ್ತು ಜಾಲ ವ್ಯಾಪಿಸುವುದರೊಂದಿಗೆ ದೇಶದ ಶಕ್ತಿಯಾಗಿರುವ ಯುವಜನತೆ ಈ ವ್ಯಸನಕ್ಕೆ ದಾಸರಾಗುತ್ತಿದ್ದಾರೆ. ಇದರಿಂದ ಎಚ್ಚೆತ್ತಿರುವ ಕೌರಿ ಗ್ರಾಮದ ನಿವಾಸಿಗಳು ತಮ್ಮ ಗ್ರಾಮವನ್ನು ಮಾದಕ ವಸ್ತು ಜಾಲದಿಂದ ಮುಕ್ತಗೊಳಿಸಲು ಒಗ್ಗಟ್ಟಾಗಿ ನಿಂತಿದ್ದಾರೆ.



ಇತ್ತೀಚೆಗೆ ನಡೆದ ಗ್ರಾಮದ ಸಭೆಯಲ್ಲಿ, ಮಾದಕವಸ್ತು ಮಾರಾಟಗಾರರಿಗೆ ಯಾವುದೇ ಕಾರಣಕ್ಕೂ ಜಾಮೀನು ನೀಡದಿರಲು ಕೌರಿ ಗ್ರಾಮಸ್ಥರು ಸರ್ವಾನುಮತದಿಂದ ನಿರ್ಣಯ ಕೈಗೊಂಡಿದ್ದಾರೆ. ಈ ನಿರ್ಧಾರವು ಕೇವಲ ಘೋಷಣೆಗೆ ಸೀಮಿತವಾಗದೆ, ಗ್ರಾಮ ಪಂಚಾಯತ್ ಅಧಿಕೃತ ನಿರ್ಣಯವನ್ನೇ ಅಂಗೀಕರಿಸಿದೆ. ಗ್ರಾಮದ ಯಾವುದೇ ವ್ಯಕ್ತಿ ಡ್ರಗ್ಸ್ ಮಾರಾಟ ಮಾಡಿ ಸಿಕ್ಕಿಬಿದ್ದರೆ, ಜಾಮೀನು ಪಡೆಯಲು ಗ್ರಾಮದ ಕಡೆಯಿಂದ ಯಾವುದೇ ಶಿಫಾರಸು ಅಥವಾ ಸಾಮಾಜಿಕ ಬೆಂಬಲ ನೀಡುವುದಿಲ್ಲ ಎಂದು ಪಂಚಾಯತ್ ಸರ್ವಾನುಮತದಿಂದ ಘೋಷಿಸಿದೆ. ಪಂಚಾಯತ್ ಸದಸ್ಯರಾಗಲೀ ಅಥವಾ ಗ್ರಾಮಸ್ಥರಾಗಲೀ ಈ ನಿರ್ಣಯ ಮೀರಿ ಆರೋಪಿಗಳಿಗೆ ಸಹಾಯ ಮಾಡಿದರೆ, ಅವರಿಗೂ ದಂಡ ಅಥವಾ ಸಾಮಾಜಿಕ ಬಹಿಷ್ಕಾರ ಹಾಕುವ ಎಚ್ಚರಿಕೆ ನೀಡಲಾಗಿದೆ.

ನೀಟ್ ಪಾಸಾಗಲು ಒತ್ತಡ; ತಂದೆಯನ್ನೇ ಭೀಕರವಾಗಿ ಕೊಂದ ಮಗ

ಉತ್ತರಪ್ರದೇಶ: ನೀಟ್ ಪರೀಕ್ಷೆಯಲ್ಲಿ ಉತ್ತೀರ್ಣನಾಗುವಂತೆ ಒತ್ತಡ ಹೇರಿದ್ದಕ್ಕೆ 21 ವರ್ಷದ ಯುವಕನೊಬ್ಬ ತನ್ನ ತಂದೆಯನ್ನೇ ಕೊಂದು, ಮೃತದೇಹವನ್ನು ತುಂಡರಿಸಿದ ಘೋರ ಘಟನೆ ಉತ್ತರ ಪ್ರದೇಶದ ಆಶಿಯಾನಾ ಎಂಬಲ್ಲಿ ನಡೆದಿದೆ.



ಪ್ರತಾಪ್ ಸಿಂಗ್ ಎಂಬ ಯುವಕ ತನ್ನ ತಂದೆ ಮಾನವೇಂದ್ರ ಸಿಂಗ್ ಅವರನ್ನು ಭೀಕರವಾಗಿ ಹತ್ಯೆ ಮಾಡಿದ್ದಾನೆ ಎಂದು ಪೊಲೀಸರು ತಿಳಿಸಿದ್ದಾರೆ.

ಪ್ರತಾಪ್ ಈ ಹಿಂದೆಯೂ ಎರಡು ಬಾರಿ ನೀಟ್ ಪರೀಕ್ಷೆ ಬರೆದಿದ್ದರೂ ಆತ ಉತ್ತೀರ್ಣನಾಗಿರಲಿಲ್ಲ. ಇದೇ ವಿಚಾರವಾಗಿ ತಂದೆ–ಮಗನ ನಡುವೆ ವಾಗ್ವಾದ ನಡೆದಿದೆ. ಈ ವೇಳೆ ಕೋಪದಿಂದ ಮಾನವೇಂದ್ರ ಪ್ರತಾಪ್‌ನ ತಲೆಗೆ ಬಂದೂಕು ಇಟ್ಟು ಬೆದರಿಸಿದ್ದಾರೆ. ಆಗ ತಂದೆಯ ಕೈಯ್ಯಲ್ಲಿದ್ದ ಬಂದೂಕು ಕಸಿದ ಪ್ರತಾಪ್, ಅವರನ್ನೇ ಗುಂಡಿಟ್ಟು ಕೊಂದಿದ್ದಾನೆ. ಘಟನೆ ವೇಳೆ ಮನೆಯ ಬೇರೊಂದು ಕೊಠಡಿಯಲ್ಲಿದ್ದ ಸಹೋದರಿ, ಗುಂಡಿನ ಸದ್ದು ಕೇಳಿ ಹೊರಬಂದಾಗ ಆಕೆಗೂ ಜೀವಬೆದರಿಕೆ ಹಾಕಿ, ನಾಲ್ಕು ದಿನ ಕೊಠಡಿಯಲ್ಲೇ ಬಂಧಿಸಿದ್ದಾನೆ. ಬಳಿಕ ತಂದೆಯ ದೇಹವನ್ನು ತುಂಡುತುಂಡಾಗಿ ಕತ್ತರಿಸಿ ಬೇರೆ ಬೇರೆ ಸ್ಥಳಗಳಲ್ಲಿ ಬಿಸಾಡಿದ್ದಾನೆ. ನಂತರ ತನ್ನ ತಂದೆ ಕಾಣೆಯಾಗಿದ್ದು, ಈ ಬಗ್ಗೆ ಪೊಲೀಸರಿಗೆ ದೂರು ನೀಡಿರುವುದಾಗಿ ಅಕ್ಕಪಕ್ಕದವರಿಗೆ ಹೇಳಿದ್ದ ಪ್ರತಾಪ್, ಬಳಿಕ ಪೊಲೀಸರು ಹಾಗೂ ನೆರೆಯವರ ಪ್ರಶ್ನೆಗಳಿಗೆ ಹೆದರಿ, ಸತ್ಯ ಬಾಯ್ಬಿಟ್ಟಿದ್ದಾನೆ ಎಂದು ತಿಳಿದುಬಂದಿದೆ.

ಡ್ರಗ್ ಲಾರ್ಡ್ ಎಲ್ ಮೆಂಚೋ ಹತ್ಯೆ; ವ್ಯಾಪಿಸಿದ ಹಿಂಸಾಚಾರ

ಮೆಕ್ಸಿಕೋ: ಡ್ರಗ್ ಲಾರ್ಡ್ ಎಲ್ ಮೆಂಚೊ ಎನ್‌ಕೌಂಟರ್ ಇಡೀ ದೇಶದಲ್ಲಿ ಭಾರೀ ಹಿಂಸಾಚಾರಕ್ಕೆ ಕಾರಣವಾಗಿದೆ.



ಮೆಕ್ಸಿಕೋದ ಪ್ರಮುಖ ನಗರಗಳಲ್ಲಿ ಎಲ್ ಮೆಂಚೊ ಬೆಂಬಲಿಗರು ಹಿಂಸಾಚಾರದಲ್ಲಿ ನಿರತರಾಗಿದ್ದು, ದೇಶದಲ್ಲಿ ಅರಾಜಕತೆ ಸೃಷ್ಟಿಗೆ ಕಾರಣರಾಗಿದ್ದಾರೆ. ವಿಮಾನ ನಿಲ್ದಾಣಗಳಿಗೂ ನುಗ್ಗಿ ಪ್ರಯಾಣಿಕ ವಿಮಾನಗಳಿಗೂ ಬೆಂಕಿಹಚ್ಚಿದ್ದಾರೆ. ಈ ಸಂದಿಗ್ಧ ಪರಿಸ್ಥಿತಿಯಲ್ಲಿ ಮೆಕ್ಸಿಕೋದಲ್ಲಿ ಸಿಲುಕಿದ್ದ ತನ್ನ ಉದ್ಯೋಗಿಯನ್ನು, ಅಮೆರಿಕದ ಟೆಕ್ ಕಂಪನಿ ವರ್ಸೆಲ್ ಸುರಕ್ಷಿತವಾಗಿ ಸ್ವದೇಶಕ್ಕೆ ಕರೆತಂದಿದೆ. ಭಾರತೀಯ ನಾಗರಿಕರಿಗಾಗಿ ಮೆಕ್ಸಿಕೋದಲ್ಲಿರುವ ಭಾರತೀಯ ರಾಯಭಾರ ಕಚೇರಿ ಎಚ್ಚರಿಕೆ ಆದೇಶವನ್ನು ಹೊರಡಿಸಿದೆ. ದೇಶಾದ್ಯಂತ ಭುಗಿಲೆದ್ದಿರುವ ಹಿಂಸಾಚಾರವನ್ನು ತಡೆಗಟ್ಟಲು ಮೆಕ್ಸಿಕೋ ಸೇನೆ ಮತ್ತು ಪೊಲೀಸ್ ಬಲ ಹರಸಾಹಸಪಡುತ್ತಿದೆ.

ಡ್ರಗ್ ಕಾರ್ಟೆಲ್ ಜಗತ್ತಿನ ಪ್ರಮುಖ ಸ್ಥಾನದಲ್ಲಿರುವ ದೇಶ ಮೆಕ್ಸಿಕೋ. ಈ ದೇಶದಲ್ಲಿ ಹಲವು ಡ್ರಗ್ ಕಾರ್ಟೆಲ್‌ಗಳನ್ನು ಒಳಗೊಂಡ ಭೂಗತ ಲೋಕವೇ ಇದೆ. ಈ ಮಾದಕ ಲೋಕವನ್ನು ನಿರ್ಮೂಲನೆ ಮಾಡಲು ಮೆಕ್ಸಿಕೋದ ಸೇನೆ ಪಣತೊಟ್ಟಿದ್ದು, ಸರಣಿ ಕಾರ್ಯಾಚರಣೆಗಳ ಭಾಗವಾಗಿ ಭಾನುವಾರ(ಫೆ.22) ಡ್ರಗ್ ಲಾರ್ಡ್ ನೆಮೆಸಿಯೊ ಎಲ್ ಮೆಂಚೊ ಒಸೆಗುರಾನನ್ನು ಎನ್‌ಕೌಂಟರ್ ಮಾಡಿ ಹತಗೊಳಿಸಿದ್ದು, ಭಾರೀ ಸಂಚಲನವನ್ನೇ ಸೃಷ್ಟಿಸಿದೆ.

ಪಾಕಿಸ್ತಾನದಲ್ಲಿ ಪೊಲೀಸರ ಮೇಲೆ ದಾಳಿ; ಆರು ಮಂದಿ ಬಲಿ

ಪೇಶಾವರ್: ಪಾಕಿಸ್ತಾನದ ಅಶಾಂತ ಪೀಡಿತ ಖೈಬರ್ ಪಖ್ತುನ್ಖ್ವಾ ಪ್ರಾಂತ್ಯದಲ್ಲಿ ಮಂಗಳವಾರ ರಕ್ತಪಾತ ನಡೆದಿದೆ.



ಪೊಲೀಸ್ ವಾಹನವನ್ನೇ ಗುರಿಯಾಗಿಸಿಕೊಂಡು ಉಗ್ರರು ನಡೆಸಿದ ಸಂಚಿನ ದಾಳಿಯಲ್ಲಿ ಒಬ್ಬ ಉನ್ನತ ಪೊಲೀಸ್ ಅಧಿಕಾರಿ ಸೇರಿದಂತೆ ಒಟ್ಟು ಆರು ಮಂದಿ ಪೊಲೀಸ್ ಸಿಬ್ಬಂದಿ ಮೃತಪಟ್ಟಿದ್ದಾರೆ ಎನ್ನಲಾಗಿದೆ.

ಸ್ಥಳೀಯ ಪೊಲೀಸ್ ಮೂಲಗಳ ಪ್ರಕಾರ, ಕೊಹತ್ ಜಿಲ್ಲೆಯ ಶಕರ್ಧಾರಾ ರಸ್ತೆಯಲ್ಲಿ ಈ ಘಟನೆ ಸಂಭವಿಸಿದೆ. ಪೊಲೀಸ್ ತಂಡವು ವಾಡಿಕೆಯ ಗಸ್ತಿನಲ್ಲಿದ್ದಾಗ, ಮೊದಲೇ ಹೊಂಚು ಹಾಕಿ ಕುಳಿತಿದ್ದ ಉಗ್ರರ ಗುಂಪು ಪೊಲೀಸ್ ವ್ಯಾನ್ ಮೇಲೆ ಏಕಾಏಕಿ ಗುಂಡಿನ ಮಳೆಗರೆದಿದೆ. ಅತ್ಯಾಧುನಿಕ ಶಸ್ತ್ರಾಸ್ತ್ರಗಳಿಂದ ದಾಳಿ ನಡೆಸಿದ ಉಗ್ರರು, ಪೊಲೀಸರಿಗೆ ಚೇತರಿಸಿಕೊಳ್ಳಲು ಅವಕಾಶವನ್ನೇ ನೀಡಲಿಲ್ಲ ಎಂದು ವರದಿಯಾಗಿದೆ.

ವಾಹನದಲ್ಲಿದ್ದ ಉಪ ಪೊಲೀಸ್ ವರಿಷ್ಠಾಧಿಕಾರಿ ವಾಹಿದ್ ಮೆಹಮೂದ್ ಮತ್ತು ಅವರ ಇಬ್ಬರು ಗನ್ನರ್‌ಗಳು ಸ್ಥಳದಲ್ಲೇ ಸಾವನ್ನಪ್ಪಿದ್ದಾರೆ. ಗಂಭೀರವಾಗಿ ಗಾಯಗೊಂಡಿದ್ದ ಇತರ ನಾಲ್ವರು ಸಿಬ್ಬಂದಿಯನ್ನು ಆಸ್ಪತ್ರೆಗೆ ದಾಖಲಿಸಲಾಯಿತಾದರೂ, ಚಿಕಿತ್ಸೆ ಫಲಕಾರಿಯಾಗದೆ ಮೃತಪಟ್ಟಿದ್ದಾರೆ.

ಹಿಂದುತ್ವದ ಹೆಸರು ಹೇಳುವ ನೈತಿಕತೆಯನ್ನು ಕಾಂಗ್ರೆಸ್ ಕಳೆದುಕೊಂಡಿದೆ



ಬಿಜೆಪಿ ಯುವ ಮೋರ್ಚಾ ಪದಾಧಿಕಾರಿಗಳು ಪತ್ರಿಕಾ ಗೋಷ್ಠಿ ನಡೆಸಿದರು.

ಗೋಣಿಕೊಪ್ಪ, ಫೆ.24– ಹಿಂದೂ ಸಂಗಮದ ಬಂಟಿಂಗ್ಸ್ ಹರಿದು ಹಾಕಿದ್ದಲ್ಲದೆ ಅದನ್ನು ಸಮರ್ಥನೆ ಮಾಡಿಕೊಳ್ಳುತ್ತಿರುವ ಬಿರುನಾಣಿ ಕಾಂಗ್ರೆಸ್ ವಲಯ ಅಧ್ಯಕ್ಷರು ಹಿಂದುತ್ವದ ಹೆಸರು ಹೇಳುವ ನೈತಿಕತೆಯನ್ನು ಕಳೆದುಕೊಂಡಿದ್ದಾರೆ ಎಂದು ವಿರಾಜಪೇಟೆ ಬಿಜೆಪಿ ತಾಲೂಕು ಯುವಮೋರ್ಚಾ ಅಧ್ಯಕ್ಷ ನಾಮೇರ ಮೊಣ್ಣಪ್ಪ ಆರೋಪಿಸಿದ್ದಾರೆ.

ಕಾಂಗ್ರೆಸ್ ಪಕ್ಷದ ಹಿಂದುತ್ವದ ದ್ವೇಷ ಪ್ರತಿಯೊಬ್ಬರಿಗೂ ತಿಳಿದಿದೆ. ಬಿಜೆಪಿಯವರು ಹಿಂದುತ್ವವನ್ನು ಗುತ್ತಿಗೆ ಪಡೆದಿಲ್ಲ ಎಂಬ ಹೇಳಿಕೆಯನ್ನು ನೀಡುವ ಕಾಂಗ್ರೆಸ್ಸಿಗರಿಗೆ ದೇಶದ ಬಗ್ಗೆ ಕಾಳಜಿ ಹಿಂದು ಧರ್ಮದ ಬಗ್ಗೆ ಅಭಿಮಾನವಿದ್ದಲ್ಲಿ ಹಿಂದುತ್ವದ ಬಗ್ಗೆ ಕೆಲಸ ನಿರ್ವಹಿಸಲು ಯಾವುದೇ ಅಡೆತಡೆಮಾಡಲ್ಲ ಎಂದು ಹೇಳಲಿ ನೋಡೋಣ ಎಂದು ಸುದ್ದಿಗೋಷ್ಠಿಯಲ್ಲಿ ಸವಾಲು ಹಾಕಿದರು.

ದೇಶದ ಸಂಸ್ಕೃತಿ ಪರಂಪರೆಗಳನ್ನು, ತತ್ವ ಸಿದ್ಧಾಂತಗಳನ್ನು ಅಳವಡಿಸಿಕೊಂಡು ರಾಷ್ಟ್ರಾಭಿಮಾನವನ್ನು ಬಿತ್ತುವ ಕಾರ್ಯ ಬಿಜೆಪಿ ನಿರಂತರವಾಗಿ ಹಿಂದೂ ರಾಷ್ಟ್ರದ ಮುನ್ನಡೆಗಾಗಿ ನಡೆಸುತ್ತಿದೆ. ಈ ವಿಚಾರವಾಗಿ ಮತ್ತೊಂದು ಪಕ್ಷ ಹಿಂದುತ್ವದ ಉಪದೇಶ ನೀಡುವ ಅನಿವಾರ್ಯತೆ ಇಲ್ಲ. ನಿಜವಾಗಿಯೂ ಹಿಂದೂ ಧರ್ಮದ ಬಗ್ಗೆ ಕಾಳಜಿ ಇದ್ದಲ್ಲಿ ರಾತ್ರಿ ಹೀಗೊಂದು ಕೃತ್ಯ ನಡೆಸಲು ಮನಸು ಮಾಡುತ್ತಿರಲಿಲ್ಲ. ಎಂದರು.

ಘಟನೆಗೆ ಪೂರಕವಾಗಿ ಆರೋಪಿಸುತ್ತಿರುವ ರಾಬಿನ್ ಎಂಬಾತನು ಬಿಜೆಪಿ ಕಾರ್ಯಕರ್ತನಲ್ಲ. ಮೂರು ವರ್ಷಗಳ ಹಿಂದೆಯೇ ಬಿಜೆಪಿಯನ್ನು ತೊರೆದು ಹೋಗಿದ್ದಾರೆ. ಹೀಗೆ ಬಹಳಷ್ಟು ಜನ ಗೆದ್ದೆತ್ತಿನ ಬಾಲ ಹಿಡಿದು ಕಾಂಗ್ರೆಸ್ಸಿನ ಹಿಂದೆ ಹೋಗಿದ್ದಾರೆ. ಅಂತವರು ಹೇಗೆ ಬಿಜೆಪಿ ಕಾರ್ಯಕರ್ತರಾಗುತ್ತಾರೆ ಎಂದು ಪ್ರಶ್ನಿಸಿದರು. ಕಾರ್ಯದರ್ಶಿ ಕಡೇಮಾಡ ಶರತ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಪ್ರಸಾದ್, ತಾಲೂಕು ಪ್ರಧಾನ ಕಾರ್ಯದರ್ಶಿ ಗುಡ್ಡಮಾಡ ಪ್ರವೀಣ್ ಇದ್ದರು.

ಅಬ್ಬರದ ಪ್ರಚಾರವೇ ಕಾಂಗ್ರೆಸ್ ಸರ್ಕಾರದ ಸಾಧನೆ



ಜಿಲ್ಲಾ ಬಿಜೆಪಿ ಅಧ್ಯಕ್ಷ ನಾಪಂಡ ರವಿಕಾಳಪ್ಪ ಪಕ್ಷ ಸಂಘಟನಾತ್ಮಕ ಸಭೆಯಲ್ಲಿ ಮಾತನಾಡಿದರು.

ಗೋಣಿಕೊಪ್ಪ, ಫೆ.24– ಕಾಂಗ್ರೆಸ್ ಸರ್ಕಾರ ಅಭಿವೃದ್ಧಿಯಲ್ಲಿ ಹಿನ್ನಡೆಯನ್ನು ಹೊಂದಿದ್ದು, ಕೇವಲ ಪ್ರಚಾರದಲ್ಲಿ ಮಾತ್ರ ಮುನ್ನಡೆಯನ್ನ ಗಳಿಸಿದೆ ಎಂದು ಜಿಲ್ಲಾ ಬಿಜೆಪಿ ಅಧ್ಯಕ್ಷ ನಾಪಂಡ ರವಿಕಾಳಪ್ಪ, ಮೂದಲಿಸಿದ್ದಾರೆ.

ಗೋಣಿಕೊಪ್ಪ ದುರ್ಗಾಬೋಜಿ ಸಭಾಂಗಣದಲ್ಲಿ ನಡೆದ ವಿರಾಜಪೇಟೆ ಮಂಡಲ ಸಂಘಟನಾತ್ಮಕ ಸಭೆಯಲ್ಲಿ ಮಾತನಾಡಿದ ಅವರು, 20 ವರ್ಷಗಳ ಬಿಜೆಪಿ ಆಡಳಿತದಲ್ಲಿ ಕೊಡಗು ಅಭಿವೃದ್ಧಿಯಲ್ಲಿ ಸಮೃದ್ಧಿಯನ್ನು ಕಂಡಿದೆ. ಗ್ರಾಮೀಣ ಪ್ರದೇಶದ ಕಾಲೋನಿಗಳಿಗೆ ಕಾಂಕ್ರೀಟ್ ರಸ್ತೆಗಳನ್ನು ನಿರ್ಮಿಸಿಕೊಡಲಾಗಿದೆ. ಇಂದು ಶಾಸಕರು ಓಡಾಡುವ ಗ್ರಾಮೀಣ ಭಾಗಗಳ ರಸ್ತೆಗಳನ್ನು ಬಿಜೆಪಿ ಅವಧಿಯಲ್ಲಿ ನಿರ್ಮಿಸಿದ್ದಾಗಿದೆ ಎಂದರು.

ಶೇಕಡ 90ರಷ್ಟು ಭಾಗಾಂಶ ರಸ್ತೆ ಅಭಿವೃದ್ಧಿಗಳು ಕಂಡಿದೆ. ಉಳಿದ ಹತ್ತು ಶೇಕಡವಾರು ಅಭಿವೃದ್ಧಿ ಕಾಮಗಾರಿಗಳನ್ನು ಪೂರ್ಣಗೊಳಿಸುತ್ತಿರುವ ಕಾಂಗ್ರೆಸ್ಸಿನ ಶಾಸಕರು ಪ್ರಚಾರದ ಅಬ್ಬರದಲ್ಲಿ ತೇಲುತ್ತಿದ್ದಾರೆ ಈ ಸರ್ಕಾರದ ವೈಫಲ್ಯವನ್ನು ಜನರಿಗೆ ತಲುಪಿಸುವ ಕಾರ್ಯವನ್ನು ಪಕ್ಷದ ಕಾರ್ಯಕರ್ತರು ನಿಷ್ಠೆಯಿಂದ ನಿರ್ವಹಿಸಬೇಕಾಗಿದೆ. ಬಿಜೆಪಿ ಸರ್ಕಾರವಿದ್ದಾಗ ಅಭಿವೃದ್ಧಿಯೇ ನಡೆದಿಲ್ಲ ಎಂದು ವಿನಾಕಾರಣ ಆರೋಪವನ್ನು ಕಾಂಗ್ರೆಸ್ ಸರ್ಕಾರ ಹೆಗಲೇರಿಸಿಕೊಂಡು ನಡೆಯುತ್ತಿದೆ. ಇದು ಶುದ್ಧ ಸುಳ್ಳಿನ ಪ್ರಚಾರ ಎಂದು ಪ್ರಜ್ಞಾವಂತ ಜನರಿಗೆ ಅರಿವಿನಲ್ಲಿದೆ ಈ ವಿಚಾರವಾಗಿ ಕಾಂಗ್ರೆಸ್ ಪಕ್ಷ ಜನರ ಕಣ್ಣುಗಳಿಗೆ ಹಾಸ್ಯಾಸ್ಪದವಾಗಿ ಕಾಣಿಸಿಕೊಳ್ಳುತ್ತಿದೆಎಂದು ಹೇಳಿದರು.

ಬಹಿರಂಗ ಚರ್ಚೆಗೆ ಆಹ್ವಾನ: ಕಾಂಗ್ರೆಸ್ ಮತ್ತು ಬಿಜೆಪಿ ಸರ್ಕಾರದ ಅವಧಿಯಲ್ಲಿ ಆಗಿರುವ ಅಭಿವೃದ್ಧಿ ಕಾರ್ಯಗಳ ಬಗ್ಗೆ ಬಹಿರಂಗ ಚರ್ಚೆಗೆ ಕಾಂಗ್ರೆಸ್ ನಾಯಕರನ್ನು ಮತ್ತು ಶಾಸಕರನ್ನು ಬಿಜೆಪಿ ಆಹ್ವಾನಿಸುತ್ತಿದೆ. ಸತ್ಯಾಸತ್ಯಗಳನ್ನು ಜನರ ಮುಂದಿಡಲಿ ಎಂದು ಸವಾಲು ಎಸೆದರು. ಈ ಹಿಂದೆಯೂ, ಬಹಿರಂಗವಾಗಿ ಬಿಜೆಪಿ ಚರ್ಚೆಗೆ ಆಹ್ವಾನಿಸಿತು. ಅದರಿಂದ ನುಣುಚಿ ಕೊಳ್ಳುವ ವಿಚಾರಕ್ಕೆ ತಲಕಾವೇರಿಯಲ್ಲಿ ಪ್ರಮಾಣ ಮಾಡುವ ಎಂದು ಶಾಸಕರು ಹೇಳುವ ಮೂಲಕ ವಿಚಾರವನ್ನು ತೇಲಿಸಿ ಬಿಡುವ ಪ್ರಯತ್ನ ಮಾಡುತ್ತಿದ್ದಾರೆ ಎಂದು ಆರೋಪಿಸಿದರು. ಪ್ರಧಾನ ಕಾರ್ಯದರ್ಶಿ ನೆಲ್ಲಿರಾ ಚಲನ್, ವಿರಾಜ ಪೇಟೆ ಮಂಡಳ ಅಧ್ಯಕ್ಷ ಮಾಚಿಮಂಡ ಸುವಿನ್ ಗಣಪತಿ ಮಾತನಾಡಿ ಕಾಂಗ್ರೆಸ್ ಸರ್ಕಾರದ ಸಾಧನೆಯನ್ನು ಲೇವಡಿ ಮಾಡಿದರು.

ಜಿಲ್ಲಾ ಬಿಜೆಪಿ ಉಪಾಧ್ಯಕ್ಷ ಕುಂಞಂಗಡ ಅರುಣ್ ಭೀಮಯ್ಯ, ಸಹಕಾರ ಪ್ರಕೋಷ್ಠ ಜಿಲ್ಲಾ ಸಂಚಾಲಕ ಪಟ್ರಪಂಡ ರಘು ನಾಣಯ್ಯ, ಜಿಲ್ಲಾ ಎಸ್‌ಟಿ ಮೋರ್ಚಾ ಅಧ್ಯಕ್ಷ ಪರಮೇಶ್ವರ, ಮಹಿಳಾ ಮೋರ್ಚಾ ಕಾರ್ಯದರ್ಶಿ ಕಾವ್ಯ ಮಧು, ತಾಲೂಕು ಪ್ರಧಾನ ಕಾರ್ಯದರ್ಶಿ ಕುಟ್ಟಂಡ ರಜಿತ್ ಕರುಬಯ್ಯ, ಪಟ್ಟಡ ರೀನಾ ಪ್ರಕಾಶ್, ದಿಶಾ ಸಮಿತಿ ಸದಸ್ಯೆ ಕಾಂತಿ ಸತೀಶ್, ಶಕ್ತಿ ಕೇಂದ್ರ ಪ್ರಮುಖರು ಹಾಜರಿದ್ದರು.

ಕೊಡಗಿನ ಯುವಕ ಮಿಕ್ಸ್ ಬಾಕ್ಸಿಂಗ್ ಉಪಾಧ್ಯಕ್ಷ



ಮಡಿಕೇರಿ, ಫೆ.24–ದಕ್ಷಿಣ ಭಾರತ ಮಿಕ್ಸ್ ಬಾಕ್ಸಿಂಗ್ ಸಂಸ್ಥೆಯ ಉಪಾಧ್ಯಕ್ಷರಾಗಿ ಮಾದಾಪುರದ ಎನ್.ಸಿ. ಸುದರ್ಶನ್ ಆಯ್ಕೆಯಾಗಿದ್ದಾರೆ. ಕರ್ನಾಟಕ ರಾಜ್ಯ ಮಿಕ್ಸ್ ಬಾಕ್ಸಿಂಗ್ ಸಂಸ್ಥೆಯ ಪ್ರಧಾನ ಕಾರ್ಯದರ್ಶಿಯಾಗಿ ಕಾರ್ಯ ನಿರ್ವಹಿಸುತ್ತಿರುವ ಎನ್.ಸಿ.ಸುದರ್ಶನ್ ಅವರು ಜಿಲ್ಲೆಯ ನೂರಾರು ವಿದ್ಯಾರ್ಥಿಗಳಿಗೆ ಮಿಕ್ಸ್ ಬಾಕ್ಸಿಂಗ್ ತರಬೇತಿಯನ್ನು ನೀಡಿದ್ದಾರೆ. ಅಲ್ಲದೆ ರಾಜ್ಯ ಹಾಗೂ ರಾಷ್ಟ್ರ ಮಟ್ಟದಲ್ಲಿ ಪದಕಗಳನ್ನು ಗೆಲ್ಲಲು ಕಾರಣ ಕರ್ತರಾಗಿದ್ದಾರೆ. ಇಂಡಿಯನ್ ಮಿಕ್ಸ್ ಬಾಕ್ಸಿಂಗ್ ಸಂಸ್ಥೆಯ ಪ್ರಧಾನ ಕಾರ್ಯದರ್ಶಿ ರಾಕೇಶ್ ಎಸ್.ಮಾಸ್ಕರ್ ಅವರು ಎನ್.ಸಿ. ಸುದರ್ಶನ್‌ಗೆ ಆದೇಶ ಪತ್ರ ನೀಡಿದ್ದಾರೆ.

20 ಅಡಿ ಆಳದ ಗದ್ದೆಗೆ ಬಿದ್ದ ಕಾರು: ತಾಯಿ, ಮಗ ಪಾರು



20 ಅಡಿ ಆಳದ ಗದ್ದೆಗೆ ಉರುಳಿ ಬಿದ್ದಿರುವ ಕಾರು

ಮಡಿಕೇರಿ, ಫೆ.24–ಚಾಲಕನ ನಿಯಂತ್ರಣ ತಪ್ಪಿದ ಕಾರೊಂದು ರಸ್ತೆ ಬದಿಯ ಆಳದ ಗದ್ದೆಗೆ ಉರುಳಿ ಬಿದ್ದು ತಾಯಿ, ಮಗ ಪ್ರಾಣಾಪಾಯದಿಂದ ಪಾರಾದ ಘಟನೆ ಬೆಟ್ಟಗೇರಿ–ಮಡಿಕೇರಿ ಮುಖ್ಯ ರಸ್ತೆಯ ಅಪ್ಪಂಗಳ ಎಂಬಲ್ಲಿ ನಡೆದಿದೆ.

ಮಡಿಕೇರಿ ಕಡೆಯಿಂದ ಅಪ್ಪಂಗಳ ನಿವಾಸಿ ಸಾಗರ್ ಎಂಬುವರು ಚಲಾಯಿಸುತ್ತಿದ್ದ ಕಾರು (ಕೆಎ.02 –ಎಂಜಿ.0057) ಬೆಟ್ಟಗೇರಿ ಮಡಿಕೇರಿ ಮುಖ್ಯ ರಸ್ತೆಯ ಅಪ್ಪಂಗಳ ಬಳಿಯ ರಸ್ತೆ ತಿರುವಿನಲ್ಲಿ ನಿಯಂತ್ರಣ ಕಳೆದುಕೊಂಡು, ರಸ್ತೆ ಬದಿಯ 20 ಅಡಿ ಆಳದ ಗದ್ದೆಗೆ ಉರುಳಿ ಬಿದ್ದಿದೆ. ಅಪಘಾತದಿಂದ ಕಾರು ಸಂಪೂರ್ಣ ಜಖಂಗೊಂಡಿದ್ದು, ಕಾರಿನಲ್ಲಿದ್ದ ಚಾಲಕ ಸಾಗರ್ ಹಾಗೂ ಅವರ ತಾಯಿಗೆ ಸಣ್ಣ ಪುಟ್ಟ ಗಾಯಗಳಾಗಿ ಅದೃಷ್ಟವಶಾತ್ ಪ್ರಾಣಾಪಾಯದಿಂದ ಪಾರಾಗಿದ್ದಾರೆ. ಕಾರಿನೊಳಗೆ ಸಿಲುಕಿದ್ದ ತಾಯಿ ಮತ್ತು ಮಗನನ್ನು ಸ್ಥಳೀಯರು ಹೊರತರಲು ಸಹಕರಿಸಿದರು.

ಪ್ರೌಢಶಾಲಾ ವಿದ್ಯಾರ್ಥಿಗಳಿಗೆ ಜಿಲ್ಲಾ ಮಟ್ಟದ ರಸಪ್ರಶ್ನೆ ಸ್ಪರ್ಧೆ



ಜಿಲ್ಲಾ ಮಟ್ಟದ ಪ್ರೌಢಶಾಲಾ ವಿದ್ಯಾರ್ಥಿಗಳಿಗೆ ನಡೆದ ರಸಪ್ರಶ್ನೆ ಸ್ಪರ್ಧೆಯಲ್ಲಿ ಭಾಗವಹಿಸಿದ ವಿದ್ಯಾರ್ಥಿಗಳು ಹಾಗೂ ಗಣ್ಯರು.

ನಾಪೋಕ್ಲು, ಫೆ.24 (ದುಗ್ಗಳ)–ಅರೆಭಾಷೆ ಗೌಡ ವಿಕಾಸ ವೇದಿಕೆ ಮತ್ತು ರೋಟರಿ ಮಿಸ್ಟಿ ಹಿಲ್ಸ್ ಮಡಿಕೇರಿ ಸಂಯುಕ್ತ ಆಶ್ರಯದಲ್ಲಿ ಜಿಲ್ಲಾ ಮಟ್ಟದ ಪ್ರೌಢಶಾಲಾ ವಿದ್ಯಾರ್ಥಿಗಳಿಗೆ ರಸಪ್ರಶ್ನೆ ಸ್ಪರ್ಧೆ ಏರ್ಪಡಿಸಲಾಗಿತ್ತು.

ಅರೆಭಾಷೆ ಗೌಡ ವಿಕಾಸ ವೇದಿಕೆಯ 11ನೇ ಕಾರ್ಯಕ್ರಮದಲ್ಲಿ ಸುಮಾರು 15 ಶಾಲೆಗಳಿಂದ ಭಾಗವಹಿಸಿದ್ದ ಮಕ್ಕಳಿಗೆ ಮೊದಲಿಗೆ ಲಿಖಿತ ಪರೀಕ್ಷೆ, ನಂತರ ಆಯ್ಕೆಯಾದ 4 ಉತ್ತಮ ತಂಡಗಳ ಮಧ್ಯೆ ಅಂತಿಮ ಹಂತದಲ್ಲಿ ಸ್ಟೇಜ್ ಮೇಲೆ ಭಜರ್ ರೌಂಡ್ನಲ್ಲಿ ಮುಖಾಮುಖಿ ಪೈಪೋಟಿ ಭರ್ಜರಿಯಾಗಿ ನಡೆಯಿತು. ಅಧ್ಯಕ್ಷತೆಯನ್ನು ರೋಟರಿ ಅಧ್ಯಕ್ಷ ರತ್ನಾಕರ ರೈ ಮಾತನಾಡಿ ಮಕ್ಕಳಿಗೆ ಸ್ಫೂರ್ತಿ ತುಂಬಿದರು.

ಅರೆಭಾಷೆ ಗೌಡ ವಿಕಾಸ ವೇದಿಕೆಯ ನಿರ್ದೇಶಕ ಪೊಕ್ಕುಳಂಡ್ರ ಪ್ರಹ್ಲಾದ್ ಸೋಶಿಯಲ್ ಮೀಡಿಯಾದಿಂದಾಗುತ್ತಿರುವ ದುಷ್ಪರಿಣಾಮಗಳ ಬಗ್ಗೆ ಮನವರಿಕೆ ಮಾಡಿ, ಮಕ್ಕಳ ಜ್ಞಾನಾಭಿವೃದ್ದಿಗೆ ರಸಪ್ರಶ್ನೆಯಂಥ ಕಾರ್ಯಕ್ರಮಗಳು ತುಂಬಾ ಅತ್ಯವಶ್ಯ ಎಂದರು. ಭಾಗವಹಿಸಿದ ಎಲ್ಲಾ ವಿದ್ಯಾರ್ಥಿಗಳಿಗೆ ಪ್ರಮಾಣ ಪತ್ರ ಹಾಗೂ ವಿಜೇತರಿಗೆ ಕ್ರಮವಾಗಿ 10 ಸಾವಿರ, 6 ಸಾವಿರ, 3 ಸಾವಿರ ರೂ. ಬಹುಮಾನ ಮತ್ತು ಟ್ರೋಫಿ ವಿತರಿಸಿ ಶುಭ ಹಾರೈಸಿದರು.

ಯಶಿಕ ದೇವಯ್ಯ ಪ್ರಾರ್ಥನೆಯೊಂದಿಗೆ ಪ್ರಾರಂಭಗೊಂಡ ಕಾರ್ಯಕ್ರಮವನ್ನು ರೋಟೇರಿಯನ್ ರಶ್ಮಿ ದೀಪ ನಿರೂಪಿಸಿ ರೋಟರಿ ಮಿಸ್ಟಿ ಹಿಲ್ಸ್ ಕಾರ್ಯದರ್ಶಿ ಕಾರ್ಯಪ್ಪ ವಂದಿಸಿದರು.

ವಿಜೇತರು: ಜನರಲ್ ತಿಮ್ಮಯ್ಯ ಪಬ್ಲಿಕ್ ಸ್ಕೂಲ್‌ನ ಕೆಎಸ್ ರಿಷಿತ್ ಮತ್ತು ಎಂಎಂ ಸಂಸ್ಕಾರ್ ಪ್ರಥಮ ಸ್ಥಾನ ಪಡೆದುಕೊಂಡರೆ, ದ್ವಿತೀಯ ಸ್ಥಾನವನ್ನು ಗಾಳಿಬೀಡು ಪಿಎಂ ಶ್ರೀ ಜವಾಹರ್ ನವೋದಯ ವಿದ್ಯಾಲಯದ ದಿವ್ಯಾಂಶಿ ಪಾತಿದಾರ್ ಮತ್ತು ಎಂಟಿ ಮನಿಷಾ, **ಹಾಗೂ** ತೃತೀಯ ಸ್ಥಾನವನ್ನು ಕೊಡಗು ವಿದ್ಯಾಲಯದ ಕಾನಡ್ಕ ಯಶಿಕ ದೇವಯ್ಯ ಮತ್ತು ಕೆಎಂ.ಆದಿತ್ಯ ಗಿಟ್ಟಿಸಿಕೊಂಡರು.

ನೋಟರಿಯಾಗಿ ಇಬ್ಬರು ಆಯ್ಕೆ



ಪೆಮ್ಮಯ್ಯ



ಸುನಿಲ್

ಮಡಿಕೇರಿ, ಫೆ24– ಮಡಿಕೇರಿ ತಾಲೂಕು ನೋಟರಿಗಳಾಗಿ ವಕೀಲರ ಸಂಘದ ಅಚ್ಚಾಂಡಿರ ಪವನ್ ಪೆಮ್ಮಯ್ಯ ಹಾಗೂ ಜೆ.ಸುನಿಲ್ ಕುಮಾರ್ ನೇಮಕಗೊಂಡಿದ್ದಾರೆ. ಜಿಲ್ಲೆಯ ಕಂದಾಯ ತಾಲೂಕಿಗೆ ಹೆಚ್ಚುವರಿಯಾಗಿ ಸೃಷ್ಟಿಸಿರುವ 2 ನೋಟರಿ ಹುದ್ದೆಗಳಿಗೆ ಸರಕಾರ ಇವರನ್ನು ನೇಮಕ ಮಾಡಿದೆ. ಅಚ್ಚಾಂಡಿರ ಪವನ್ ಪೆಮ್ಮಯ್ಯ ಅವರು ವಕೀಲರ ಸಂಘದ ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸುತ್ತಿದ್ದು, ಸಮಾಜ ಸೇವೆಯಲ್ಲೂ ಸಕ್ರಿಯರಾಗಿದ್ದಾರೆ.

ವಿರಾಜಪೇಟೆಗೆ ನೋಟರಿಯಾಗಿ ಆಯ್ಕೆ






ವಿರಾಜಪೇಟೆ ತಾಲೂಕಿನ ಕಂದಾಯ ಇಲಾಖೆಯ ವ್ಯಾಪ್ತಿಗೆ ಹೆಚ್ಚುವರಿ ನೋಟರಿಯಾಗಿ ವಕೀಲರಾದ ಮಾದಂಡ ಎಸ್.ಪೂವಯ್ಯ, ಜಾಯ್ಸ್ ಲವಿನ್ ಕ್ಯಾಸ್ಟ ಲಿನೋ, ಹಾಜೀರಾ ಮತ್ತು ಮೇವಡ ಟಿ.ಚಿಣ್ಣಪ್ಪ ಅವರುಗಳು ನೇಮಕವಾಗಿದ್ದಾರೆ.

ಮಾ. 3ರಿಂದ ವಿದ್ಯುತ್ ಗ್ರಾಹಕರ ಕುಂದುಕೊರತೆ ಸಭೆ

ಮಡಿಕೇರಿ ಫೆ.24–ಜಿಲ್ಲೆಯ ವಿದ್ಯುತ್ ಗ್ರಾಹಕರ ಕುಂದು ಕೊರತೆಗಳನ್ನು ನಿವಾರಿಸಲು ಮಾರ್ಚ್, 3 ರಿಂದ ವಿವಿಧೆಡೆ ವಿದ್ಯುತ್ ಗ್ರಾಹಕರ ಕುಂದು ಕೊರತೆ ಸಭೆ ನಡೆಯಲಿದೆ.

ಮಾ.3ರಂದು ಮಧ್ಯಾಹ್ನ 11.30ರಿಂದ 12.30 ಗಂಟೆವರೆಗೆ ವಿ.ಪೇಟೆ ಉಪವಿಭಾಗ ಕಚೇರಿ ಆವರಣದಲ್ಲಿ ಕಾರ್ಯನಿರ್ವಾಹಕ ಎಂಜಿನಿಯರ್ ಅಧ್ಯಕ್ಷತೆಯಲ್ಲಿ ನಡೆಯಲಿದೆ. ಗೋಣಿಕೊಪ್ಪ ಉಪ ವಿಭಾಗ ವ್ಯಾಪ್ತಿಯ ವಿದ್ಯುತ್ ಗ್ರಾಹಕರ ಕುಂದು ಕೊರತೆಗಳನ್ನು ನಿವಾರಿಸಲು ಸಭೆಯು ಮಾ.3ರಂದು ಮಧ್ಯಾಹ್ನ 2.30 ರಿಂದ 3.30 ಗಂಟೆವರೆಗೆ ಉಪವಿಭಾಗ ಕಚೇರಿಯಲ್ಲಿ ನಡೆಯಲಿದೆ.

ಸೋಮವಾರಪೇಟೆ ಉಪ ವಿಭಾಗ ವ್ಯಾಪ್ತಿಯ ಸಭೆಯು ಮಾ.4ರ ಬೆಳಗ್ಗೆ 11.30 ರಿಂದ 12.30 ರವರೆಗೆ ಉಪವಿಭಾಗ ಕಚೇರಿಯಲ್ಲಿ, ಹಾಗೆಯೇ ಕುಶಾಲನಗರ ಉಪ ವಿಭಾಗ ವ್ಯಾಪ್ತಿಯ ವಿದ್ಯುತ್ ಗ್ರಾಹಕರ ಕುಂದು ಕೊರತೆಗಳನ್ನು ನಿವಾರಿಸಲು ಮಾ. 4ರ ಮಧ್ಯಾಹ್ನ 2.30ರಿಂದ 3.30 ಗಂಟೆವರೆಗೆ ಉಪವಿಭಾಗ ಕಚೇರಿ ಆವರಣದಲ್ಲಿ ನಡೆಯಲಿದೆ.

ಮಾ.5 ರಂದು ಮಧ್ಯಾಹ್ನ 11.30 ಗಂಟೆಯಿಂದ 12.30 ಗಂಟೆವರೆಗೆ ಕುಶಾಲನಗರ ಉಪವಿಭಾಗ ಕಚೇರಿ ಆವರಣದಲ್ಲಿ ನಡೆಯಲಿದೆ. ಈ ಎಲ್ಲಾ ಸಭೆಗಳ ಅಧ್ಯಕ್ಷತೆಯನ್ನು ಮಡಿಕೇರಿ ವಿಭಾಗದ ಕಾರ್ಯನಿರ್ವಾಹಕ ಎಂಜಿನಿಯರ್ ವಹಿಸುವರು ಎಂದು ಸೆಸ್ಕಾಂನ ಪ್ರಕಟಣೆ ತಿಳಿಸಿದೆ.

ಇಂದು ಭೂಮಿ ಪೂಜೆ



ಮಡಿಕೇರಿ ಫೆ.24– ಸಂಸದ ಯದುವೀರ್ ಫೆ. 25ರ ಮಧ್ಯಾಹ್ನ 12.30ಕ್ಕೆ ರಾಷ್ಟ್ರೀಯ ಹೆದ್ದಾರಿ–275 ರ ಆಯ್ದ 21 ಭಾಗಗಳಲ್ಲಿ ನಿರ್ಮಿಸಲು ಉದ್ದೇಶಿಸಿರುವ ರಕ್ಷಣಾ ತಡೆಗೋಡೆಗಳ ಭೂಮಿ ಪೂಜೆ ನೆರವೇರಿಸಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ಒಳ ಮೀಸಲಾತಿಯಿಂದ ಆಗಿರುವ ಅನ್ಯಾಯ ಸರಿಪಡಿಸುವಂತೆ

ಬಲಗೈ ಸಮುದಾಯಗಳ ಒಕ್ಕೂಟದಿಂದ ಬೃಹತ್ ಪ್ರತಿಭಟನೆ



ಒಳ ಮೀಸಲಾತಿ ಅನ್ಯಾಯ ಸರಿಪಡಿಸುವಂತೆ ಪ್ರತಿಭಟನೆ ನಡೆಸಲಾಯಿತು.

ಚಾಮರಾಜನಗರ, ಫೆ.24– ಒಳ ಮೀಸಲಾತಿಯಿಂದ ಬಲಗೈ ಸಮುದಾಯಕ್ಕೆ ಆಗಿರುವ ಅನ್ಯಾಯವನ್ನು ಕೂಡಲೇ ಸರಿಪಡಿಸುವಂತೆ ಆಗ್ರಹಿಸಿ ಗಡಿಕಟ್ಟೆ ಯಜಮಾನರು, ಬಲಗೈ ಸಮುದಾಯಗಳ ಒಕ್ಕೂಟ, ಡಾ.ಬಿ.ಆರ್.ಅಂಬೇಡ್ಕರ್ ಮಹಾಸಭಾ ವತಿಯಿಂದ ನಗರದಲ್ಲಿ ಬೃಹತ್ ಪ್ರತಿಭಟನೆ ನಡೆಸಲಾಯಿತು.

ನಗರದ ಡಾ.ಬಿ.ಆರ್.ಅಂಬೇಡ್ಕರ್ ಭವನದಲ್ಲಿ ಸಮಾವೇಶಗೊಂಡ ಪ್ರತಿಭಟನಾಕಾರರು, ಅಲ್ಲಿಂದ ಮೆರವಣಿಗೆಯಲ್ಲಿ ಸತ್ತಿ ರಸ್ತೆ, ಗುಂಡ್ಲುಪೇಟೆ ವೃತ್ತ, ದೊಡ್ಡಂಗಡಿ, ಚಿಕ್ಕಂಗಡಿ ಬೀದಿ, ಸಂತೇಮರಹಳ್ಳಿ ವೃತ್ತ, ಭುವನೇಶ್ವರಿ ವೃತ್ತ, ಬಿ.ರಾಚಯ್ಯ ಜೋಡಿ ರಸ್ತೆ ಮೂಲಕ ಜಿಲ್ಲಾಡಳಿತ ಭವನಕ್ಕೆ ತೆರಳಿ ಕೆಲಕಾಲ ಪ್ರತಿಭಟನೆ ನಡೆಸಿ, ಎಡಿಸಿ ಜವ ರೇಗೌಡರ ಮೂಲಕ ರಾಜ್ಯಪಾಲರಿಗೆ ಮನವಿ ಸಲ್ಲಿಸಿದರು. ಬಳಿಕ ರಾಜ್ಯ ಸರ್ಕಾರ ಹಾಗೂ ಬಲಗೈ ಸಮುದಾಯದ ಶಾಸಕರ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ಈ ವೇಳೆ ಮಾತನಾಡಿದ ಪ್ರತಿಭಟನಾಕಾರರು, ರಾಜ್ಯ ಸರ್ಕಾರ ಒಳ ಮೀಸಲಾತಿಯನ್ನು ಚುನಾವಣೆ ವೇಳೆ ತನ್ನ ಪಕ್ಷದ ಪ್ರಣಾಳಿಕೆಯಲ್ಲಿ ಜಾರಿಗೊಳಿಸುವುದಾಗಿ ತಿಳಿಸಿರುವ ಕಾರಣಕ್ಕೆ ಜಾರಿಗೊಳಿಸಲು ಮುಂದಾಗಿದೆ. ಆ ಮೂಲಕ ಪರಿಶಿಷ್ಟ ಜಾತಿಯ 101 ಜಾತಿಗೂ ಮಾಡುತ್ತಿರುವ ದ್ರೋಹವಾಗಿದೆ ಎಂದು ಆರೋಪಿಸಿದರು.

ಸಾಮಾಜಿಕ ನ್ಯಾಯದ ಬಗ್ಗೆ ಕಾಳಜಿ ಇರುವ ಸರ್ಕಾರ ಎಂದು ಪರಿಶಿಷ್ಟ ಜಾತಿ ನಂಬಿದ್ದು, ಇದಕ್ಕೆ ವಿರೋಧವಾಗಿ ಸರ್ಕಾರ ನಡೆದುಕೊಳ್ಳುತ್ತಿದೆ. ಪರಿಶಿಷ್ಟ ಜಾತಿಯ ಒಳ ಪಂಗಡದಲ್ಲಿ ದ್ವೇಷ ಹುಟ್ಟುವ ರೀತಿ ತರಾತುರಿಯಲ್ಲಿ ಒಳ ಮಿಸಲಾತಿಯನ್ನು ಜಾರಿಗೊಳಿಸಲು ಹೊರಟಿರುವುದು ಖಂಡನೀಯ ಎಂದರು.

ಕೂಡಲೇ ಅವೈಜ್ಞಾನಿಕವಾಗಿರುವ ಒಳ ಮೀಸಲಾತಿಯನ್ನು ಸರ್ಕಾರವು ಸೂಕ್ಷ್ಮವಾಗಿ ಗಮನಿಸಿ ಪರಿಶೀಲಿಸಬೇಕು. ಆ ಮೂಲಕ ನ್ಯಾಯಮೂರ್ತಿ ನಾಗಮೋಹನ್ ದಾಸ್ ಸಮಿತಿ ನೀಡಿರುವ ಒಳ ಮೀಸಲಾತಿ ರದ್ದುಪಡಿಸಬೇಕು ಎಂದು ಆಗ್ರಹಿಸಿದರು.

ರೋಸ್ಟರ್ ಬಿಂದುವಿನಲ್ಲಿ ಪರಿಶಿಷ್ಟ ಜಾತಿ ಬಲಗೈ ಸಮುದಾಯವು 9ನೇ ಸ್ಥಾನದಲ್ಲಿ ಇರುವುದನ್ನು ಹಿಂಪಡೆಯಬೇಕು. ಪರಿಶಿಷ್ಟ ಜಾತಿಯ ಜಾತಿ ಪ್ರಮಾಣ ಪತ್ರವನ್ನು ಮೊದಲಿನಂತೆ ನೀಡಬೇಕು. ಒಳ ಮೀಸಲಾತಿಯಲ್ಲಿರುವ ವ್ಯತ್ಯಾಸವನ್ನು ಸರಿಪಡಿಸುವ ತನಕ ಯಾವುದೇ ಸರ್ಕಾರಿ ಹುದ್ದೆಗಳ ನೇಮಕವನ್ನು ಮಾಡಬಾರದು ಎಂದು ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಮಹಾಸಭಾ ಅಧ್ಯಕ್ಷ ಉಮೇಶ್ ಕುದರ್, ಕಾರ್ಯಾಧ್ಯಕ್ಷ ಸಿ.ಕೆ.ಮಂಜುನಾಥ್, ಗೌರವಾಧ್ಯಕ್ಷ ಸಿ.ಎಂ.ಕೃಷ್ಣಮೂರ್ತಿ, ಸಾಹಿತಿ ಮಂಜು ಕೋಡಿಉಗನೆ, ಮೂಡ್ನಾಕೂಡು ಪ್ರಕಾಶ್, ಎಸ್.ಪಿ.ಮಹೇಶ್, ವಾಸು, ಬಾಬು, ಮಸಣಾಪುರ ನಾಗರಾಜು, ಭಾನುಪ್ರಕಾಶ್, ಕುಮಾರ್, ನವೀನ್ ಮೌರ್ಯ, ಶಿವಮಲ್ಲು, ಆಣಗಳ್ಳಿ ಬಸವರಾಜು, ಆನಂದ್, ರಾಜೇಂದ್ರ, ರಂಗಸ್ವಾಮಿ, ಸಿದ್ದರಾಜು, ಗಡಿಕಟ್ಟೆ ಯಜಮಾನರು, ಬಲಗೈ ಸಮುದಾಯಗಳ ಒಕ್ಕೂಟದ ಪದಾಧಿಕಾರಿಗಳು, ಡಾ.ಬಿ.ಆರ್.ಅಂಬೇಡ್ಕರ್ ಮಹಾಸಭಾದ ಪದಾಧಿಕಾರಿಗಳು, ಜನಾಂಗದ ಮುಖಂಡರು ಭಾಗವಹಿಸಿದ್ದರು.

ನರೇಗಾ ರದ್ದುಗೊಳಿಸಿ, ವಿಬಿ ಜಿ ರಾಮ್ ಜಿ ಜಾರಿ ಖಂಡನೀಯ

ಪಾದಯಾತ್ರೆಯಲ್ಲಿ ಶಾಸಕ ಹೆಚ್.ಎಂ.ಗಣೇಶ್ ಪ್ರಸಾದ್ ಆಕ್ರೋಶ



ತಾಲೂಕು ಕಚೇರಿ ಎದುರು ಶಾಸಕ ಗಣೇಶ ಪ್ರಸಾದ್ ಮಾತನಾಡಿದರು.

ಗುಂಡ್ಲುಪೇಟೆ, ಫೆ.24– ಕೇಂದ್ರದಲ್ಲಿ ಕಾಂಗ್ರೆಸ್ ಸರ್ಕಾರ ಆಡಳಿತದಲ್ಲಿದ್ದಾಗ ಬಡವರ ಅನುಕೂಲಕ್ಕಾಗಿ ಜಾರಿಗೊಳಿಸಿದ್ದ ನರೇಗಾ ಯೋಜನೆ ರದ್ದುಗೊಳಿಸಿ, ಬಿಜೆಪಿ ಸರ್ಕಾರ 'ವಿಬಿ ಜಿ ರಾಮ್ ಜಿ' ಯೋಜನೆ ಜಾರಿಗೊಳಿಸಲು ಮುಂದಾಗಿರುವುದು ಖಂಡನೀಯ ಎಂದು ಶಾಸಕ ಹೆಚ್.ಎಂ.ಗಣೇಶ್ ಪ್ರಸಾದ್ ಆಕ್ರೋಶ ವ್ಯಕ್ತಪಡಿಸಿದರು.

ಪಟ್ಟಣದ ಹೊರವಲಯದಲ್ಲಿರುವ ಬಸವೇಶ್ವರ ಕಮ್ಯೂನಿಟಿ ಹಾಲ್‌ನಿಂದ ಕಾಂಗ್ರೆಸ್ ಕಾರ್ಯಕರ್ತರೊಂದಿಗೆ ಪಾದಯಾತ್ರೆಯಲ್ಲಿ ತಾಲೂಕು ಕಚೇರಿಗೆ ಆಗಮಿಸಿ ವಿಬಿ ಜಿ ರಾಮ್ ಜಿ ಯೋಜನೆ ಕೈ ಬಿಟ್ಟು ಮನರೇಗಾ ಯೋಜನೆ ಜಾರಿಗೊಳಿಸುವಂತೆ ಒತ್ತಾಯಿಸಿ ತಹಸೀಲ್ದಾರ್ ಮೂಲಕ ರಾಷ್ಟ್ರಪತಿಗಳಿಗೆ ಮನವಿ ಸಲ್ಲಿಸಿ ಮಾತನಾಡಿದ ಅವರು, ಮೋದಿ ನೇತೃತ್ವದ ಕೇಂದ್ರ ಸರ್ಕಾರ ಗ್ರಾಪಂ ಮಟ್ಟದಲ್ಲಿ ಗ್ರಾಮೀಣ ಜನರಿಗೆ ಉದ್ಯೋಗ ಸೃಷ್ಟಿಸಿ ಕಾಂಪೌಂಡ್, ಕೆರೆ, ಕಾಲುವೆ ಸೇರಿದಂತೆ ಅಭಿವೃದ್ಧಿಗೆ ಪೂರಕವಾದ ಮನರೇಗಾ ಯೋಜನೆ ಬದಲಾವಣೆ ಮಾಡಿ ಮಹಾತ್ಮ ಗಾಂಧೀಜಿ ಅವರಿಗೆ ಅವಮಾನ ಮಾಡಲು ಮುಂದಾಗಿದೆ. ಈ ಹಿನ್ನೆಲೆಯಲ್ಲಿ ವಿಬಿ ಜಿ ರಾಮ್ ಜಿ ಯೋಜನೆ ವಿರುದ್ಧ ಕಾಂಗ್ರೆಸ್ ಹೋರಾಟ ಮುಂದುವರೆಯಲಿದೆ ಎಂದರು.

ಈ ವೇಳೆ ಕಾಂಗ್ರೆಸ್ ಜಿಲ್ಲಾಧ್ಯಕ್ಷ ಮರಿಸ್ವಾಮಿ, ಜಿಲ್ಲಾ ಕಾಂಗ್ರೆಸ್ ಉಸ್ತುವಾರಿಗಳಾದ ಸುದರ್ಶನ್, ಎಸ್.ಸಿ.ಬಸವ ರಾಜು, ಚಾಮುಲ್ ನಿರ್ದೇಶಕ ಹೆಚ್. ಎಸ್.ನಂಜುಂಡಪ್ರಸಾದ್, ಜಿಲ್ಲಾ ಪ್ರಚಾರ ಸಮಿತಿ ಅಧ್ಯಕ್ಷ ಮಧುಸೂದನ್, ಮಾಜಿ ಕಾಡಾ ಅಧ್ಯಕ್ಷ ಹೆಚ್.ಎಸ್. ನಂಜಪ್ಪ, ಮಾಜಿ ಜಿಪಂ ಉಪಾಧ್ಯಕ್ಷ ಕೆ.ಎಸ್. ಮಹೇಶ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಪಿ.ಬಿ. ರಾಜಶೇಖರ್, ಟಿಎಪಿಸಿಎಂಎಸ್ ಅಧ್ಯಕ್ಷ ಮಡಿವಾಳಪ್ಪ ಸೇರಿದಂತೆ ಮತ್ತಿತರರಿದ್ದರು.

ಸಮರ್ಪಕ ಕುಡಿಯುವ ನೀರು ಪೂರೈಕೆಗೆ ಕ್ರಮ ವಹಿಸಿ

ಜಿಲ್ಲಾ ಉಸ್ತುವಾರಿ ಸಚಿವರಾದ ಕೆ.ವೆಂಕಟೇಶ್ ಸೂಚನೆ



ಚಾಮರಾಜನಗರ, ಫೆ.24– ಜಿಲ್ಲೆಯ ಯಾವುದೇ ಭಾಗದಲ್ಲಿ ಕುಡಿಯುವ ನೀರಿಗೆ ತೊಂದರೆಯಾಗದಂತೆ ಸಮರ್ಪಕವಾಗಿ ನೀರು ಸರಬರಾಜು ಮಾಡಲು ತುರ್ತು ಕ್ರಮ ಕೈಗೊಳ್ಳುವಂತೆ ಜಿಲ್ಲಾ ಉಸ್ತುವಾರಿ ಸಚಿವ ಕೆ.ವೆಂಕಟೇಶ್ ಅಧಿಕಾರಿಗಳಿಗೆ ಸೂಚಿಸಿದರು.

ಪ್ರಸಿದ್ಧ ಯಾತ್ರಾ ಸ್ಥಳ ಮಲೆ ಮಹದೇಶ್ವರ ಬೆಟ್ಟದ ನಾಗಮಲೆ ಭವನದಲ್ಲಿ ಮಂಗಳವಾರ ಕುಡಿಯುವ ನೀರು, ಜಾನುವಾರುಗಳಿಗೆ ಮೇವಿನ ಲಭ್ಯತೆ ಹಾಗೂ ವಿಪತ್ತು ನಿರ್ವಹಣೆ ಸಂಬಂಧ ನಡೆದ ಸಭೆಯ ಅಧ್ಯಕ್ಷತೆ ವಹಿಸಿ ಕುಡಿಯುವ ನೀರಿನ ಸಮಸ್ಯೆ ಇರುವ ಗ್ರಾಮಗಳ ಕುರಿತು ಮಾಹಿತಿ ಪಡೆದು ಮಾತನಾಡಿದ ಅವರು, ಪ್ರಸ್ತುತ ಬೇಸಿಗೆ ಆರಂಭವಾಗಿದೆ. ಸಮಸ್ಯಾತ್ಮಕ ಗ್ರಾಮಗಳೆಂದು ಗುರುತಿಸಿರುವ ಕಡೆ ಆದ್ಯತೆ ಮೇರೆಗೆ ನೀರು ಒದಗಿಸುವುದು ನಮ್ಮ ಜವಾಬ್ದಾರಿಯಾಗಿದೆ. ಖಾಸಗಿ ಬೋರ್‌ವೆಲ್, ಟ್ಯಾಂಕರ್ ಸೇರಿದಂತೆ ಪರ್ಯಾಯ ವಿಧಾನಗಳ ಮೂಲಕ ಕುಡಿಯುವ ನೀರನ್ನು ಪೂರೈಸಬೇಕು. ಜೊತೆಗೆ ಮನೆಯ ದಿನ ಬಳಕೆಗಾಗಿ ಅಗತ್ಯವಿರುವ ನೀರನ್ನು ಸಹ ಒದಗಿಸಬೇಕು ಎಂದರು.

ಕುಡಿಯುವ ನೀರಿನ ಸಮಸ್ಯೆ ಇರುವ ಕಡೆ ಅಧಿಕಾರಿಗಳು ಹೆಚ್ಚು ಭೇಟಿ ನೀಡಿ ಪರಿಹಾರ ಕ್ರಮಗಳಿಗೆ ಮುಂದಾಗಬೇಕು. ಯಾವ ಗ್ರಾಪಂನಲ್ಲಿ ತೊಂದರೆ ಇದೆ ಎಂದು ಖುದ್ದು ವೀಕ್ಷಿಸಬೇಕು. ಪಿಡಿಓಗಳು ತಮ್ಮ ವ್ಯಾಪ್ತಿಯ ಜನರಿಗೆ ತೊಂದರೆ ಯಾಗದಂತೆ ನೋಡಿಕೊಳ್ಳಬೇಕು. ಬೇಸಿಗೆಯಲ್ಲಿ ವಿಶೇಷ ಗಮನ ಹರಿಸಬೇಕು ಎಂದರು.

ಅಂತರ್ಜಲ ಹೆಚ್ಚಿರುವ ಕಡೆ ಕೊಳವೆ ಬಾವಿಗಳನ್ನು ಇನ್ನಷ್ಟು ಆಳವಾಗಿ ಕೊರೆದು ಸಮಸ್ಯೆ ಬಗೆಹರಿಸಬೇಕು. ಅನುಷ್ಠಾನದಲ್ಲಿರುವ ಕುಡಿಯುವ ನೀರಿನ ಕಾಮಗಾರಿಯನ್ನು ವಿಳಂಬ ಮಾಡದೇ ಪೂರ್ಣಗೊಳಿಸಬೇಕು. ನಗರ, ಪಟ್ಟಣ ಪ್ರದೇಶಗಳಲ್ಲಿಯೂ ಅಗತ್ಯಕ್ಕೆ ಅನುಗುಣವಾಗಿ ನೀರು ಸರಬರಾಜು ಮಾಡಬೇಕು. ಅಮೃತ್–2 ಯೋಜನೆಯಡಿ ಚಾಮರಾಜನಗರ ಪಟ್ಟಣಕ್ಕೆ ನೀರು ಒದಗಿಸುವ ಯೋಜನೆಯ ಪ್ರಗತಿ ವೇಗವಾಗಿ ಆಗಬೇಕು ಎಂದು ನಿರ್ದೇಶನ ನೀಡಿದರು.

ಜಿಲ್ಲಾಧಿಕಾರಿ ಶ್ರೀರೂಪ ಮಾತನಾಡಿ, ಬೇಸಿಗೆ ವೇಳೆ ಕಾಡ್ಗಿಚ್ಚು, ಅಗ್ನಿ ಅನಾಹುತಗಳು ಸಂಭವಿಸದಂತೆ ಅರಣ್ಯ ಇಲಾಖೆ ಮುಂಜಾಗ್ರತಾ ಕ್ರಮಗಳನ್ನು ತೆಗೆದುಕೊಳ್ಳಬೇಕು. ವಿಕೋಪ ಸಂದರ್ಭಗಳಲ್ಲಿ ಅಧಿಕಾರಿ ಸಿಬ್ಬಂದಿ, ಅಗ್ನಿಶಾಮಕ ದಳ ಸನ್ನದ್ಧವಾಗಿರಬೇಕು. ನಗರ ಮತ್ತು ಪಟ್ಟಣ ಪ್ರದೇಶಗಳಲ್ಲಿ ಕುಡಿಯುವ ನೀರಿನ ಬವಣೆ ನೀಗಿಸಲು ಪೂರಕವಾಗಿರುವ ಎಲ್ಲಾ ಕ್ರಮಗಳನ್ನು ಅನುಷ್ಠಾನಗೊಳಿಸಬೇಕು ಎಂದರು.

ಜಿಪಂ ಸಿಇಓ ಮೋನಾ ರೋತ್ ಮಾತನಾಡಿದರು. ಎಡಿಸಿ ಟಿ.ಜವರೇ ಗೌಡ, ಎಸಿ ದಿನೇಶ್ ಕುಮಾರ್ ಮೀನಾ, ತಹಸೀಲ್ದಾರರಾದ ಗಿರಿಜಾ, ಬಸವರಾಜು, ಚೈತ್ರ, ತನ್ಮಯ್, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗದ ಕಾರ್ಯಪಾಲಕ ಇಂಜಿನಿಯರ್ ಇಮ್ಯಾನುವಲ್ ಸಂತೋಷ್, ಲೋಕೋಪಯೋಗಿ ಇಲಾಖೆ ಕಾರ್ಯಪಾಲಕ ಇಂಜಿ ನಿಯರ್ ಕಿರಣ್, ಪಶುಸಂಗೋಪನೆ ಇಲಾಖೆಯ ಉಪನಿರ್ದೇಶಕ ಮಂಜುನಾಥ್, ತೋಟಗಾರಿಕೆ ಇಲಾಖೆ ಉಪನಿರ್ದೇಶಕ ಶಿವಪ್ರಸಾದ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಎಸ್.ಚಿದಂಬರ, ತಾಪಂಗಳ ಇಓ ಗಳು, ಇತರೆ ಇಲಾಖೆಗಳ ಅಧಿಕಾರಿಗಳು ಸಭೆಯಲ್ಲಿದ್ದರು.

> ❝ ಹನೂರು ಭಾಗದಲ್ಲಿ ಕುಡಿಯುವ ನೀರಿನ ಸಮಸ್ಯೆ ತೀವ್ರವಾಗಿದೆ. ಪ್ರಸ್ತುತ 1.90 ಕೋಟಿ ರೂ. ವೆಚ್ಚದ ಕುಡಿಯುವ ನೀರಿನ ಕಾಮಗಾರಿಗೆ ಅನುದಾನ ಅಗತ್ಯವಿದೆ. ಅರಣ್ಯದಂಚಿನ ಗ್ರಾಮಗಳಲ್ಲಿ ಕೈಗೆತ್ತಿಕೊಳ್ಳಲಾಗಿರುವ ವಿದ್ಯುತ್ ಕಾಮಗಾರಿ ಮುಂದುವರೆಸಲು ಅರಣ್ಯ ಇಲಾಖೆಯಿಂದ ಯಾವುದೇ ಅಡಚಣೆಯಾಗಬಾರದು. ಮುಂಬರುವ ದಿನಗಳಲ್ಲಿ ಜಾನುವಾರುಗಳಿಗೆ ಅಗತ್ಯವಿರುವ ಮೇವು ಸಂಗ್ರಹಣೆ ಸಂಬಂಧ ವಿವರ ಪಡೆದ ಸಚಿವರು ಮೇವಿಗೆ ಯಾವುದೇ ಕೊರತೆಯಾಗದಂತೆ ದಾಸ್ತಾನು ಮಾಡಬೇಕು. ರೈತರಿಗೆ ಅವರ ಬೇಡಿಕೆ ಅನುಸಾರ ಅಗತ್ಯವಿರುವ ಪ್ರಮಾಣದಲ್ಲಿ ವಿದ್ಯುತ್ ಒದಗಿಸಬೇಕು. ಗ್ರಾಮೀಣ ಜನರ ಸಮಸ್ಯೆಗಳಿಗೆ ಅಧಿಕಾರಿಗಳು ಸ್ಪಂದಿಸಬೇಕು.
>
> – ಎಂ.ಆರ್.ಮಂಜುನಾಥ್, ಶಾಸಕ.

ಪಟ್ಟಣದ ಸಮಗ್ರ ಅಭಿವೃದ್ಧಿಗೆ ಎಲ್ಲರೂ ಸಹಕರಿಸಿ



ಬಜೆಟ್ ಪೂರ್ವಭಾವಿ ಸಭೆಯಲ್ಲಿ ಮುಖ್ಯಾಧಿಕಾರಿ ಎಂ.ಪಿ.ಮಹೇಶ್‌ಕುಮಾರ್ ಮಾತನಾಡಿದರು.

ಯಳಂದೂರು, ಫೆ.24– ಪಟ್ಟಣದ ಸಮಗ್ರ ಅಭಿವೃದ್ಧಿಗೆ ಎಲ್ಲರೂ ಪಟ್ಟಣ ಪಂಚಾಯಿತಿಯೊಂದಿಗೆ ಸಹಕರಿಸಬೇಕು ಎಂದು ಮುಖ್ಯಾಧಿಕಾರಿ ಎಂ.ಪಿ.ಮಹೇಶ್ ಕುಮಾರ್ ಕರೆ ನೀಡಿದರು.

ಪಟ್ಟಣದ ಪಪಂ ಸಭಾಂಗಣದಲ್ಲಿ ಮಂಗಳವಾರ ಆಡಳಿತಾಧಿಕಾರಿಯೂ ಆದ ತಹಸೀಲ್ದಾರ್ ಎಸ್.ಎಲ್.ನಯನ ಅವರ ನೇತೃತ್ವದಲ್ಲಿ ನಡೆದ ಬಜೆಟ್ ಪೂರ್ವಭಾವಿ ಸಭೆಯಲ್ಲಿ ಮಾತನಾಡಿದ ಅವರು, ನಮ್ಮ ಪಂಚಾಯಿತಿ ಚಿಕ್ಕದಾಗಿದೆ. ಇಲ್ಲಿಗೆ ಆದಾಯದ ಮೂಲಗಳು ಕಡಿಮೆ ಇದೆ. ಇದನ್ನು ಹೆಚ್ಚಿಸುವ ನಿಟ್ಟಿನಲ್ಲಿ ಸದಸ್ಯರು, ಸಾರ್ವಜನಿಕರು ಸೂಕ್ತ ಸಲಹೆ, ಸೂಚನೆಗಳನ್ನು ನೀಡಬೇಕು. ಪಟ್ಟಣದಲ್ಲಿರುವ ಹಳೇ ಕಚೇರಿಯ ಕಟ್ಟಡದಲ್ಲಿ ಹೊಸ ಮಳಿಗೆಗಳ ನಿರ್ಮಾಣ, ಓವರ್ ಹೆಡ್ ಟ್ಯಾಂಕ್ ಇದ್ದ ಕಡೆ ಮಳಿಗೆ ನಿರ್ಮಾಣ, ಮಾರುಕಟ್ಟೆ ಅಭಿವೃದ್ಧಿ, ಸೂಕ್ತ ವಾಹನ ನಿಲುಗಡೆಗೆ ಸ್ಥಳಾವಕಾಶ, ದ್ವಿಪಥ ರಸ್ತೆಯಲ್ಲಿ ವಿದ್ಯುತ್ ಬಲ್ಬ್‌ಗಳ ಅಳವಡಿಕೆ, ಪಾರ್ಕ್ ನಿರ್ಮಾಣ, ಇ–ಸ್ವತ್ತು ಮಾಡಿಸಿಕೊಳ್ಳಲು ಸರ್ಕಾರ ತಂದಿರುವ ಹೊಸ ಮಾರ್ಗಸೂಚಿಗಳನ್ನು ಮನೆ ಮನೆಗಳಿಗೆ ತಲುಪಿಸಿ ಆದಾಯ ಕ್ರೋಢಿಕರಿಸುವುದು, ಪಪಂನಿಂದ ಸುಸಜ್ಜಿತ ನೂತನ ಹೋಟೆಲ್ ಕಟ್ಟಡ ನಿರ್ಮಾಣ ಸೇರಿದಂತೆ ಎಲ್ಲರೂ ಸಲಹೆ ಸೂಚನೆಗಳನ್ನು ನೀಡಿದ್ದಾರೆ. ಇವೆಲ್ಲವನ್ನೂ ಪರಿಗಣಿಸಿ ಸರ್ಕಾರದಿಂದ ನಮಗೆ ಲಭಿಸುವ ಅನುದಾನಗಳ ಲಭ್ಯತೆ, ಅವುಗಳ ವಿನಿಯೋಗ ಹೊಸ ಯೋಜನೆಗಳಿಗೆ ಬೇಕಾಗುವ ಅನುದಾನಗಳ ಅಂದಾಜು ಪಟ್ಟಿ ತಯಾರಿಕೆ, ಪಂಚಾಯಿತಿಗೆ ಬರುವ ಆದಾಯ, ಹೊಸದಾಗಿ ಬರಬಹುದಾದ ಆದಾಯದ ಮೂಲಗಳನ್ನು ಪಟ್ಟಿ ಮಾಡಿ ಬಜೆಟ್ ತಯಾರಿಸಿ ಪಟ್ಟಣದ ಅಭಿವೃದ್ಧಿಗೆ ಪೂರಕವಾಗಿರುವ ಬಜೆಟ್ ಮಂಡಿಸಲಾಗುವುದು ಎಂದರು.

ಆಡಳಿತಾಧಿಕಾರಿ ಎಸ್.ಎಲ್.ನಯನ ಮಾತನಾಡಿ, ಅನೇಕರು ಇಲ್ಲಿನ ಫುಟ್‌ಪಾತ್ ತೆರವು, ವಾಹನ ನಿಲ್ದಾಣಕ್ಕೆ ಸ್ಥಳಾವಕಾಶ, ದ್ವಿಚಕ್ರ ವಾಹನ, ಆಟೋ ನಿಲ್ದಾಣ, ಕಸ ತೆರವುಗೊಳಿಸುವುದು ಸೇರಿದಂತೆ ಇತರೆ ಅನೇಕ ಸಮಸ್ಯೆಗಳ ಬಗ್ಗೆ ಮಾಹಿತಿ ನೀಡಿದ್ದಾರೆ. ಇದನ್ನು ನಾನು ಖುದ್ದು ಪರಿಶೀಲಿಸಿ ಕ್ರಮ ವಹಿಸುವುದಾಗಿ ಭರವಸೆ ನೀಡಿದರು.

ಪಪಂ ಮಾಜಿ ಸದಸ್ಯರಾದ ಮಹೇಶ್, ಭೀಮಪ್ಪ, ಉಮಾಶಂಕರ, ಮುನವರ್ ಬೇಗ್, ಮುಖಂಡರಾದ ಮಹೇಶ್, ರೋಟರಿ ಅಧ್ಯಕ್ಷ ವೈ.ಜಿ.ನಿರಂಜನಸ್ವಾಮಿ, ರಾಜಶೇಖರ್, ಮಲ್ಲು, ಶಂಕರ ಜೆ.ಇ.ನಾಗೇಂದ್ರ, ಆರೋಗ್ಯ ನಿರೀಕ್ಷಕ ರಾಘವೇಂದ್ರ ಜಯಲಕ್ಷ್ಮಿ, ಲಕ್ಷ್ಮಮ್ಮ, ರೇಖಾ, ಮಲ್ಲಿಕಾರ್ಜುನ ಇದ್ದರು.

ಮುಡಾದ ಶೇಕಡ 50:50 ಅನುಪಾತದಡಿ ಅಕ್ರಮ ನಿವೇಶನ ಮಂಜೂರಾತಿ ಬಗ್ಗೆ ಕ್ರಮ

ಎಂಡಿಎ ಅಧ್ಯಕ್ಷರೂ ಆದ ಜಿಲ್ಲಾಧಿಕಾರಿ ಲಕ್ಷ್ಮೀಕಾಂತರೆಡ್ಡಿ ರೆಡ್ಡಿ ಭರವಸೆ



ರಘು ಕೌಟಿಲ್ಯ



ಲಕ್ಷ್ಮೀಕಾಂತರೆಡ್ಡಿ

ಮೈಸೂರು, ಫೆ.24(ಬಿಎಲ್ ಯು)– ಮುಡಾದಲ್ಲಿ ನಡೆದಿದೆ ಎನ್ನಲಾದ ಶೇಕಡ 50:50 ಅನುಪಾತದ ನಿವೇಶನಗಳ ಅಕ್ರಮ ಮಂಜೂರಾತಿಗೆ ಸಂಬಂಧಿಸಿದಂತೆ ಅಗತ್ಯ ಕ್ರಮ ಕೈಗೊಳ್ಳುವುದಾಗಿ ಮೈಸೂರು ಅಭಿವೃದ್ಧಿ ಪ್ರಾಧಿಕಾರ (ಎಂಡಿಎ)ದ ಅಧ್ಯಕ್ಷರೂ ಆದ ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತರೆಡ್ಡಿ ಅವರು ಭರವಸೆ ನೀಡಿದ್ದಾರೆ.

ಬಿಜೆಪಿ ಹಿಂದುಳಿದ ಮೋರ್ಚಾ ರಾಜ್ಯಾಧ್ಯಕ್ಷ ರಘು ಕೌಟಿಲ್ಯ ಅವರು ಬರೆದ ಪತ್ರದ ಬಗ್ಗೆ ಎಂಡಿಎ ಅಧ್ಯಕ್ಷರು ಈ ಭರವಸೆ ನೀಡಿದ್ದಾರೆ. ಶೇಕಡ 50:50 ಅನುಪಾತದಲ್ಲಿ ಲೂಟಿಯಾಗಿರುವ ನಿವೇಶನಗಳನ್ನು ಮುಟ್ಟುಗೋಲು ಹಾಕಿಕೊಳ್ಳುವಂತೆ ರಘು ಕೌಟಿಲ್ಯ ಅವರು ಲಕ್ಷ್ಮೀಕಾಂತರೆಡ್ಡಿ ಅವರಿಗೆ ಮನವಿ ಸಲ್ಲಿಸಿದರು.

ಈ ಸಂಬಂಧ ಪ್ರತಿಕ್ರಿಯೆ ನೀಡಿರುವ ಲಕ್ಷ್ಮಿಕಾಂತ ರೆಡ್ಡಿ ಅವರು, ನೀವು ಕೋರಿರುವ ಅಂಶಗಳ ಬಗ್ಗೆ ಪರಿಶೀಲಿಸಿ, ನಿಯಮಾನುಸಾರ ಅಗತ್ಯ ಕ್ರಮ ಕೈಗೊಳ್ಳಲಾಗುವುದು. ತರುವಾಯ ಕೈಗೊಂಡ ಕ್ರಮದ ಕುರಿತು ನಿಮಗೆ ಮಾಹಿತಿ ನೀಡುವುದಾಗಿ ತಿಳಿಸಿದ್ದಾರೆ. ಅಲ್ಲದೆ ಎಂಡಿಎ ಆಯುಕ್ತರಿಗೂ ಪತ್ರ ಬರೆದು, ಈ ಸಂಬಂಧ ಪರಿಶೀಲಿಸಿ ಕೈಗೊಂಡ ಕ್ರಮದ ಬಗ್ಗೆ ಅರ್ಜಿದಾರರಿಗೆ ತಿಳಿಸುವಂತೆ ಸೂಚಿಸಿದ್ದಾರೆ.

ಹುಸಿ ಭರವಸೆಯಾದರೆ ಪಿಐಎಲ್ ಸಲ್ಲಿಕೆ

ಶೇಕಡ 50:50 ಅನುಪಾತದ ನಿವೇಶನಗಳ ಲೂಟಿ ಬಗ್ಗೆ ಇದೇ ಮೊದಲ ಬಾರಿಗೆ ಎಂಡಿಎನಿಂದ ನಮಗೆ ಕನಿಷ್ಠ ಭರವಸೆ ದೊರೆತಿದೆ ಎಂದು ರಘು ಕೌಟಿಲ್ಯ ತಿಳಿಸಿದರು.

ಇದೂವರೆಗೆ ಜಾಣಮೌನ ತಾಳಿದ್ದ ಪ್ರಾಧಿಕಾರ ಈಗ ಕ್ರಮ ಕೈಗೊಳ್ಳುವ ಭರವಸೆ ನೀಡಿದೆ. ಈ ವಿಚಾರವನ್ನು ಗಂಭೀರವಾಗಿ ಪರಿಗಣಿಸಬೇಕು. ಆಶ್ವಾಸನೆ ನೀಡಿ ಯಾವುದೇ ಕ್ರಮ ಕೈಗೊಳ್ಳದಿದ್ದರೆ ನ್ಯಾಯಾಲಯದಲ್ಲಿ ಪಿಐಎಲ್ (ಸಾರ್ವಜನಿಕ ಹಿತಾಸಕ್ತಿ ಮೊಕದ್ದಮೆ) ಸಲ್ಲಿಸಲಾಗುವುದು ಎಂದು ಎಚ್ಚರಿಸಿದ್ದಾರೆ.

ಮೈಸೂರು ಮಹಾರಾಣಿ ಕಲಾ ಕಾಲೇಜಿಗೆ 10 ತರಗತಿ, 3 ಅಧ್ಯಾಪಕರ ಕೊಠಡಿಗಳು, ಶೌಚಾಲಯ ಹಸ್ತಾಂತರಿಸಿದ ಶಾಸಕ ಹರೀಶ್‌ಗೌಡ

ಹಂತ ಹಂತವಾಗಿ ಶೈಕ್ಷಣಿಕ ಸೌಕರ್ಯ ಕಲ್ಪಿಸುವ ಭರವಸೆ





ಮೈಸೂರಿನ ಮಹಾರಾಣಿ ಮಹಿಳಾ ಕಲಾ ಕಾಲೇಜಿನಲ್ಲಿ ನೂತನವಾಗಿ ಕರ್ನಾಟಕ ಗೃಹ ಮಂಡಳಿ(ಕರ್ನಾಟಕ ಹೌಸಿಂಗ್ ಬೋರ್ಡ್) ವತಿಯಿಂದ ನಿರ್ಮಿಸಿರುವ 10 ತರಗತಿ ಕೊಠಡಿಗಳು, 3 ಅಧ್ಯಾಪಕರ ಕೊಠಡಿಗಳು ಹಾಗೂ ಎರಡು ಶೌಚಾಲಯ ಕೊಠಡಿಗಳನ್ನು ಮಂಗಳವಾರ ಕಾಲೇಜು ಆಡಳಿತಕ್ಕೆ ಶಾಸಕ ಕೆ.ಹರೀಶ್‌ಗೌಡ ಉದ್ಘಾಟಿಸಿ ಹಸ್ತಾಂತರಿಸಿದರು.

ಮೈಸೂರು, ಫೆ.24(ಎಂಕೆ)– ಮೈಸೂರಿನ ಮಹಾರಾಣಿ ಮಹಿಳಾ ಕಲಾ ಕಾಲೇಜಿನಲ್ಲಿ ನೂತನವಾಗಿ ಕರ್ನಾಟಕ ಗೃಹ ಮಂಡಳಿ(ಕರ್ನಾಟಕ ಹೌಸಿಂಗ್ ಬೋರ್ಡ್) ವತಿಯಿಂದ ನಿರ್ಮಿಸಿರುವ 10 ತರಗತಿ ಕೊಠಡಿಗಳು, 3 ಅಧ್ಯಾಪಕರ ಕೊಠಡಿಗಳು ಹಾಗೂ ಎರಡು ಶೌಚಾಲಯಗಳನ್ನು ಮಂಗಳವಾರ ಕಾಲೇಜು ಆಡಳಿತಕ್ಕೆ ಹಸ್ತಾಂತರಿಸಲಾಯಿತು.

ಸುಮಾರು 17.55 ಕೋಟಿ ರೂ.ವೆಚ್ಚದಲ್ಲಿ ಮಹಾರಾಣಿ ಕಲಾ ಕಾಲೇಜಿನ ಹಳೆ ಕಟ್ಟಡದ 2ನೇ ಮಹಡಿ ವಿಸ್ತೀರ್ಣ ಹಾಗೂ ಹೊಸ ಕಟ್ಟಡ ನಿರ್ಮಾಣ ಕಾಮಗಾರಿ ನಡೆಯುತ್ತಿದ್ದು, ಮೊದಲ ಹಂತವಾಗಿ ಹಳೆ ಕಟ್ಟಡದ 2ನೇ ಮಹಡಿಯ ತರಗತಿ ಕೊಠಡಿಗಳನ್ನು ಉದ್ಘಾಟಿಸುವ ಮೂಲಕ ಚಾಮರಾಜ ವಿಧಾನಸಭಾ ಕ್ಷೇತ್ರದ ಶಾಸಕ ಕೆ.ಹರೀಶ್‌ಗೌಡ ಕಾಲೇಜಿಗೆ ಹಸ್ತಾಂತರಿಸಿದರು.

ಹಾಗೆಯೇ ಮಹಾರಾಣಿ ಸ್ನಾತಕೋತ್ತರ ವಿಭಾಗದಲ್ಲಿರುವ ಗ್ರಂಥಾಲಯ ಮತ್ತು ಮಾಹಿತಿ ಕೇಂದ್ರದಲ್ಲಿ ನಗರಪಾಲಿಕೆಯ ವಿಶೇಷಚೇತನ ಸಮುದಾಯದ ಕಾರ್ಯಕ್ರಮಕ್ಕೆ ಮೀಸಲಿಟ್ಟಿರುವ ಶೇ.5ರಷ್ಟು ಅನುದಾನದಲ್ಲಿ ಅಂಧ ವಿದ್ಯಾರ್ಥಿನಿಯರ ಕಲಿಕೆಗಾಗಿ 23 ಕಂಪ್ಯೂಟರ್, ಟೇಬಲ್ ಹಾಗೂ ಕುರ್ಚಿಗಳನ್ನು ಹಸ್ತಾಂತರಿಸಲಾಯಿತು.

ತಿಂಗಳೊಳಗೆ 14 ಕೊಠಡಿಗಳ ಹಸ್ತಾಂತರ: ಬಳಿಕ 'ಮೈಸೂರು ಮಿತ್ರ'ನಿಗೆ ಪ್ರತಿಕ್ರಿಯಿಸಿದ ಶಾಸಕ ಕೆ.ಹರೀಶ್‌ಗೌಡ, ಮಹಾರಾಣಿ ಕಲಾ ಕಾಲೇಜಿನಲ್ಲಿ ತರಗತಿ ಕೊಠಡಿಗಳ ಸಂಖ್ಯೆ ಕಡಿಮೆ ಇದ್ದ ಕಾರಣದಿಂದಾಗಿ ಹೊಸದಾಗಿ ನಿರ್ಮಿಸಿರುವ 13 ಕೊಠಡಿಗಳನ್ನು ಉದ್ಘಾಟಿಸಿದ್ದು, ತಿಂಗಳೊಳಗೆ ಇನ್ನೂ 14 ಕೊಠಡಿಗಳನ್ನು ನೀಡಲಾಗುವುದು ಎಂದರು.

ಹಾಗೆಯೇ ಹೊಸ ಬ್ಲಾಕ್‌ನಲ್ಲಿ 24 ತರಗತಿ ಕೊಠಡಿಗಳು, 4 ಅಧ್ಯಾಪಕರ ಕೊಠಡಿ, 7 ಶೌಚಾಲಯ ಹಾಗೂ 2 ಲಿಫ್ಟ್ ಕಾಮಗಾರಿ ಪ್ರಗತಿಯಲ್ಲಿದ್ದು, ಮುಂದಿನ ಆರೇಳು ತಿಂಗಳಲ್ಲಿ ಕಾಮಗಾರಿ ಪೂರ್ಣಗೊಳ್ಳುವ ಸಾಧ್ಯತೆ ಇದೆ. ಹಾಗೆಯೇ ವಿದ್ಯಾರ್ಥಿನಿಯರ ನಿಲಯ ನಿರ್ಮಾಣ ಕಾಮಗಾರಿಯೂ ನಡೆಯುತ್ತಿದೆ ಎಂದರು.

3 ಸಾವಿರ ವಿದ್ಯಾರ್ಥಿನಿಯರಿಗೆ ಆಶ್ರಯ: ಮಹಾರಾಣಿ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು ಸೇರಿದಂತೆ 3 ಸಾವಿರ ವಿದ್ಯಾರ್ಥಿನಿಯರು ಉಳಿದುಕೊಳ್ಳಲು ಹಾಸ್ಟೆಲ್ ನಿರ್ಮಾಣ ಮಾಡಲಾಗುತ್ತಿದೆ. ವಿದ್ಯಾರ್ಥಿನಿಯರ ವಿದ್ಯಾಭ್ಯಾಸದ ಅನುಕೂಲಕ್ಕಾಗಿ ಹಲವು ಅಭಿವೃದ್ಧಿ ಕಾರ್ಯಗಳು ನಡೆಯುತ್ತಿವೆ ಎಂದು ತಿಳಿಸಿದರು.

ಬೇಡಿಕೆ: ಮಹಾರಾಣಿ ಕಲಾ ಕಾಲೇಜು ಆವರಣದಲ್ಲಿ ಕ್ಯಾಂಟೀನ್ ಮತ್ತು ಶುದ್ಧ ಕುಡಿಯುವ ನೀರಿನ ಘಟಕ ನಿರ್ಮಾಣಕ್ಕೆ ಬೇಡಿಕೆ ಇದ್ದು, ಮುಂದಿನ ದಿನಗಳಲ್ಲಿ ನಿರ್ಮಾಣ ಮಾಡಲಾಗುವುದು ಎಂದು ಭರವಸೆ ನೀಡಿದರು. ಇಂದಿರಾಗಾಂಧಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ರವಿ ಮಂಚೇಗೌಡನಕೊಪ್ಪಲು, ದೇವರಾಜ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ನಾಗಭೂಷಣ್, ನಗರಪಾಲಿಕೆ ಹೆಚ್ಚುವರಿ ಆಯುಕ್ತೆ ಕುಸುಮಾ ಕುಮಾರಿ, ಕಾಲೇಜು ಶಿಕ್ಷಣ ಇಲಾಖೆ ಪ್ರಾದೇಶಿಕ ಜಂಟಿ ನಿರ್ದೇಶಕಿ ಡಾ.ಡಿ.ಎಸ್.ಪ್ರತಿಮಾ, ಕರ್ನಾಟಕ ಗೃಹ ಮಂಡಳಿ ಕಾರ್ಯಪಾಲಕ ಇಂಜಿನಿಯರ್ ಅಶ್ವಿನ್, ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಕೃಷ್ಣಪ್ಪ, ಕಾಲೇಜು ಪ್ರಾಂಶುಪಾಲರಾದ ಡಾ.ಅನಿತಾ, ಡಾ.ಬಾಲಾಜಿ, ಪ್ರೊ.ರಾಜಶೇಖರ ಮೂರ್ತಿ ಮತ್ತಿತರರಿದ್ದರು.

ವಾಲಿಬಾಲ್‌ನಲ್ಲಿ ಪ್ರಥಮ ಸ್ಥಾನ



ಮೈಸೂರಿನ ಊಟಿ ರಸ್ತೆಯಲ್ಲಿರುವ ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜಿನ ವಿದ್ಯಾರ್ಥಿಗಳು 2025–26ನೇ ಸಾಲಿನ ಚಾಮುಂಡಿ ವಲಯದ ಅಂತರ ಕಾಲೇಜುಗಳ ಪುರುಷರ ವಾಲಿಬಾಲ್‌ನಲ್ಲಿ ಪ್ರಥಮ ಸ್ಥಾನ ಪಡೆದಿದ್ದಾರೆ. ಜೊತೆಗೆ ಬಾಲ್ ಬ್ಯಾಡ್ಮಿಂಟನ್, ಟೇಬಲ್ ಟೆನ್ನಿಸ್ ಮತ್ತು ಷಟಲ್ ಬ್ಯಾಡ್ಮಿಂಟನ್ ಪಂದ್ಯಾವಳಿಯಲ್ಲಿ ದ್ವಿತೀಯ ಸ್ಥಾನವನ್ನು ಗಳಿಸಿದ್ದಾರೆ. ವಿಜೇತ ಕಾಲೇಜು ಕ್ರೀಡಾಪಟುಗಳನ್ನು ಕಾಲೇಜಿನ ಮುಖ್ಯ ಕಾರ್ಯನಿರ್ವಾಹಕ ಪ್ರೊ.ಬಿ.ವಿ.ಸಾಂಬಶಿವಯ್ಯ, ಪ್ರಾಂಶುಪಾಲ ಡಾ.ಎಂ.ಪ್ರಭು, ದೈಹಿಕ ಶಿಕ್ಷಣ ನಿರ್ದೇಶಕರಾದ ಎಂ.ಕಾರ್ತಿಕ್, ಸಿ.ಎಸ್.ನಿರಂಜನ್, ಕಾಲೇಜು ಬೋಧಕ, ಬೋಧಕೇತರ ಸಿಬ್ಬಂದಿ ಅಭಿನಂದಿಸಿದ್ದಾರೆ.

ಮಹಾಜನ ಕಾಲೇಜಿನಲ್ಲಿ ನಾಳೆ ರಾಜ್ಯ ಮಟ್ಟದ ಸಮ್ಮೇಳನ

ಮೈಸೂರು, ಫೆ.24– ಮೈಸೂರಿನ ಜಯಲಕ್ಷ್ಮೀಪುರಂನ ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ಫೆ.26ರ ಗುರುವಾರದಂದು ವಾಣಿಜ್ಯ ವಿಭಾಗ ಮತ್ತು ವ್ಯಾಪಾರ ಆಡಳಿತ ವಿಭಾಗ, ಐಕ್ಯೂಎಸಿ ಸಹಯೋಗದೊಂದಿಗೆ 'ನಿರ್ವಹಣಾ ವಾಣಿಜ್ಯ ಮತ್ತು ಸುಸ್ಥಿರ ಅಭಿವೃದ್ಧಿಯಲ್ಲಿ ಉದಯೋನ್ಮುಖ ಮಾದರಿಗಳು' ಕುರಿತು ಒಂದು ದಿನದ ರಾಜ್ಯ ಮಟ್ಟದ ಸಮ್ಮೇಳನ ಆಯೋಜಿಸಲಾಗಿದೆ.

ಅಂದು ಬೆಳಿಗ್ಗೆ 10 ಗಂಟೆಗೆ ಎವಿಸಿ–II ಸಭಾಂಗಣದಲ್ಲಿ ನಡೆಯುವ ಉದ್ಘಾಟನಾ ಸಮಾರಂಭದಲ್ಲಿ ಮಹಾಜನ ಎಜುಕೇಷನ್ ಸೊಸೈಟಿಯ ಕಾರ್ಯದರ್ಶಿ ಡಾ.ಟಿ.ವಿಜಯಲಕ್ಷ್ಮೀ ಮುರಳೀಧರ ಅಧ್ಯಕ್ಷತೆ ವಹಿಸಲಿದ್ದಾರೆ. ಮಾನಸ ಗಂಗೋತ್ರಿಯ ಬಿ.ಎನ್.ಬಹದ್ದೂರ್ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ ಸೈನ್ಸ್‌ನ ಪ್ರಾಧ್ಯಾಪಕರ ಡಾ.ಡಿ.ಆನಂದ್ ಮುಖ್ಯ ಭಾಷಣ ಮಾಡಲಿದ್ದಾರೆ. ಕಾಲೇಜು ಪ್ರಾಂಶುಪಾಲೆ ಡಾ.ಬಿ.ಆರ್. ಜಯಕುಮಾರಿ, ಕಾಲೇಜು ಸಿಇಓ ಡಾ.ಎಸ್.ಆರ್.ರಮೇಶ್ ಉಪಸ್ಥಿತರಿರಲಿದ್ದಾರೆ.

ಬೆಳಿಗ್ಗೆ 11.30 ರಿಂದ ಮಧ್ಯಾಹ್ನ 3.30 ವರೆಗೆ ಸಮಗ್ರ ಉಪನ್ಯಾಸಗಳು ನಡೆಯಲಿದ್ದು, ಅದೇ ದಿನ ಸಂಜೆ 4 ಗಂಟೆಗೆ ಸಮಾರೋಪ ಸಮಾರಂಬ ನಡೆಯಲಿದ್ದು, ಮೈಸೂರು ವಿವಿ ರಿಜಿಸ್ಟ್ರಾರ್ (ಪರೀಕ್ಷಾಂಗ) ಪ್ರೊ.ಎನ್,ನಾಗರಾಜ, ಮೈಸೂರು ವಿವಿ ವಾಣಿಜ್ಯ ವಿಭಾಗದ ಡೀನ್ ಪ್ರೊ.ಕೆ.ನಾಗೇಂದ್ರ ಬಾಬು, ಪ್ರಾಂಶುಪಾಲೆ ಡಾ.ಬಿ.ಆರ್.ಜಯಕುಮಾರಿ, ಕಾಲೇಜು ಸಿಇಓ ಡಾ.ಎಸ್.ಆರ್.ರಮೇಶ್ ಇರಲಿದ್ದಾರೆ ಎಂದು ಪ್ರಕಟಣೆಯಲ್ಲಿ ತಿಳಿಸಿದೆ.

ಅಭಿನಂದನೆ



'ಸ್ಟಾರ್ ಆಫ್ ಮೈಸೂರ್' 49ನೇ ವಾರ್ಷಿಕೋತ್ಸವದ ಹಿನ್ನೆಲೆಯಲ್ಲಿ ಪತ್ರಿಕೆಯ ವ್ಯವಸ್ಥಾಪಕ ಸಂಪಾದಕರಾದ ವಿಕ್ರಂ ಮುತ್ತಣ್ಣ ಅವರಿಗೆ ಮೈಸೂರು ನಗರ–ಜಿಲ್ಲಾ ಕನ್ನಡ ಪರ ಸಂಘಟನೆಯ ನಾಗರಿಕ ಹಿತರಕ್ಷಣಾ ವೇದಿಕೆ ವತಿಯಿಂದ 'ಪತ್ರಿಕಾ ರಂಗದ ಯುವಚೇತನ' ಬಿರುದು ನೀಡಿ, ಅಭಿನಂದಿಸಲಾಯಿತು. ಈ ವೇಳೆ ವೇದಿಕೆ ಅಧ್ಯಕ್ಷ ಮಂಜುನಾಥ್(ಮಿಲ್ಕ್ ಮಂಜು), ಡಾ.ರಾಜ್ ಸಂಘದ ಅಧ್ಯಕ್ಷ ಎಂ.ರಾಮೇಗೌಡ, ಪ್ರಧಾನ ಕಾರ್ಯದರ್ಶಿ ಬಾಲಕೃಷ್ಣಗೌಡ, ಉಪಾಧ್ಯಕ್ಷ ಮೆಸ್ ಬಾಬು, ವಿ.ಗಿರಿಧರ್, ಕಾರ್ಯದರ್ಶಿ ಮಂಜುನಾಥ್(ಮುನ್ನಾ), ಸಂತೋಷ್‌ಗೌಡ, ಮಾರ್ಗದರ್ಶಕ ರಂಗಪ್ಪಗೌಡ ಮತ್ತಿತರರು ಉಪಸ್ಥಿತರಿದ್ದರು.

ಶಿವ ದೇವಾಲಯಕ್ಕೆ ಆಯ್ಕೆಯಾದ ನೂತನ ಪದಾಧಿಕಾರಿಗಳು

ಮೈಸೂರು, ಫೆ.24(ಎಸ್‌ಪಿಎನ್)– ಮೈಸೂರು ಎಸ್‌ಬಿಎಂ(ಶ್ರೀರಾಂಪುರ 2ನೇ ಹಂತ) ಕಾಲೋನಿಯಲ್ಲಿನ ಶಿವ ದೇವಾಲಯದ ನೂತನ ಪದಾಧಿಕಾರಿಗಳು 2026–2031ನೇ ಸಾಲಿಗೆ ಆಯ್ಕೆಗೊಂಡಿದ್ದು, ನೂತನ ಅಧ್ಯಕ್ಷರಾಗಿ ಎಸ್.ಎಂ.ಸುರೇಶ್, ಉಪಾಧ್ಯಕ್ಷರಾಗಿ ಕೆ.ಎಸ್.ಪ್ರಕಾಶ್, ಕಾರ್ಯದರ್ಶಿಗಳಾಗಿ ಹೆಚ್.ಟಿ.ರವಿಪ್ರಕಾಶ್ ಆಯ್ಕೆಯಾಗಿದ್ದಾರೆ.

ಕೋಶಾಧ್ಯಕ್ಷರಾಗಿ ಎಂ.ಪ್ರಸಾದಬಾಬು, ಜಂಟಿ ಕಾರ್ಯದರ್ಶಿ ಗುರೂರು ಶ್ರೀಕಂಠಮೂರ್ತಿ, ನಿರ್ದೇಶಕರಾಗಿ ಡಾ.ಟಿ.ತಿಪ್ಪೇಸ್ವಾಮಿ, ಹೆಚ್.ಜಿ.ಪರಶಿವಪ್ಪ, ಜಿ.ಮಹದೇವಪ್ಪ, ಕೆ.ಎಂ.ನಾಗರಾಜು, ಎಂ.ಬಸವಣ್ಣ, ಹೆಚ್.ಎಸ್.ಮಹೇಶ್, ಜೆ.ಪಿ.ನಿಂಗರಾಜು, ಹೆಚ್.ಎಂ. ಗುರುಪಾದಸ್ವಾಮಿ ಆಯ್ಕೆಯಾಗಿದ್ದಾರೆಂದು ವೀರಶೈವ ಸ್ನೇಹ ಬಳಗ ಪ್ರಕಟಣೆಯಲ್ಲಿ ತಿಳಿಸಿದೆ.

ನಿಮ್ಮೊಂದಿಗೆ ನಾವಿದ್ದೇವೆ: ನಿರುದ್ಯೋಗಿಗಳಿಗೆ ಕೇಂದ್ರ ಸಚಿವ ಕುಮಾರಸ್ವಾಮಿ ಅಭಯ

ನಿಮ್ಮ ಪ್ರತಿಭಟನೆ ಶಾಂತಿಯುತವಾಗಿರಲಿ; ಈ ಹೋರಾಟವನ್ನು ಲಘುವಾಗಿ ಪರಿಗಣಿಸಬೇಡಿ



ಮೈಸೂರು, ಫೆ.24– ನಿಮ್ಮ ಪ್ರತಿಭಟನೆ ಶಾಂತಿಯುತವಾಗಿರಲಿ, ನಿಮ್ಮೊಂದಿಗೆ ನಾವಿದ್ದೇವೆ ಎಂದು ಧಾರವಾಡದಲ್ಲಿ ಹೋರಾಟಕ್ಕಿಳಿದಿರುವ ಉದ್ಯೋಗಾಕಾಂಕ್ಷಿಗಳಿಗೆ ಮನವಿ ಮಾಡಿರುವ ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ, ಯುವಜನರ ಪ್ರತಿಭಟನೆಯನ್ನು ಲಘುವಾಗಿ ಪರಿಗಣಿಸಬೇಡಿ ಎಂದು ಸರ್ಕಾರಕ್ಕೆ ಎಚ್ಚರಿಕೆಯನ್ನೂ ಸಹ ನೀಡಿದ್ದಾರೆ.

ಈ ಸಂಬಂಧ ಮಾಧ್ಯಮ ಹೇಳಿಕೆ ನೀಡಿರುವ ಅವರು, ಧಾರವಾಡದಲ್ಲಿ ಅಸಂಖ್ಯಾತ ಉದ್ಯೋಗಾಕಾಂಕ್ಷಿಗಳು ಬೀದಿಗೆ ಇಳಿದಿರುವುದನ್ನು ರಾಜ್ಯ ಸರಕಾರ ಲಘುವಾಗಿ ಪರಿಗಣಿಸಬಾರದು. ಸರ್ಕಾರಿ ಹುದ್ದೆಗಳನ್ನು ಕಾಲ ಕಾಲಕ್ಕೆ ತುಂಬದೇ ನಿರ್ಲಕ್ಷಿಸಿದ ಪರಿಣಾಮವೇ ಯುವಜನರು ಪ್ರತಿಭಟನೆ ದಾರಿ ತುಳಿಯಲು ಕಾರಣ. ಯುವಜನರಿಗೆ ನನ್ನ ಮನವಿ ಇಷ್ಟೇ; ನಿಮ್ಮ ಪ್ರತಿಭಟನೆ ಶಾಂತಿಯುತವಾಗಿರಲಿ, ನಿಮ್ಮೊಂದಿಗೆ ನಾನಿದ್ದೇನೆ ಎಂದು ಅಭಯ ನೀಡಿದ್ದಾರೆ.

ರಾಜ್ಯದಲ್ಲಿ 2.94 ಲಕ್ಷ ಸರಕಾರಿ ಹುದ್ದೆಗಳು ಖಾಲಿ ಬಿದ್ದಿವೆ ಸಂಪುಟ ದರ್ಜೆ ಹುದ್ದೆಗಳು ಮಾತ್ರ ಸೂಪರ್‌ಫಾಸ್ಟ್ ಆಗಿ ಭರ್ತಿ ಆಗುತ್ತಿವೆ. ಕಾಂಗ್ರೆಸ್ ಸರಕಾರದ ಆದ್ಯತೆ ಯಾವ ರೀತಿಯಲ್ಲಿದೆ ಎಂಬುದು ಇದರಿಂದ ಅರ್ಥವಾಗುತ್ತದೆ. ಆರ್.ವಿ.ದೇಶಪಾಂಡೆ ಅವರ ಅಧ್ಯಕ್ಷತೆಯ ಕರ್ನಾಟಕ ಆಡಳಿತ ಸುಧಾರಣೆ ಆಯೋಗದ ವರದಿಯಂತೆ ರಾಜ್ಯದಲ್ಲಿ 7 ಲಕ್ಷ ನಿರುದ್ಯೋಗಿಗಳಿದ್ದಾರೆ. ಇವರೆಲ್ಲರೂ ಸರಕಾರಿ ಹುದ್ದೆಗಳ ನಿರೀಕ್ಷೆಯಲ್ಲಿದ್ದಾರೆ. ಖಾಲಿ ಹುದ್ದೆಗಳನ್ನು ಸರ್ಕಾರ ಹಂತ ಹಂತವಾಗಿ ಭರ್ತಿ ಮಾಡಬೇಕಿತ್ತು. ಆದರೆ, ಕುರ್ಚಿ ತಿಕ್ಕಾಟದಲ್ಲಿ ಅಮೂಲ್ಯವಾದ 3 ವರ್ಷಗಳನ್ನು ಪೋಲು ಮಾಡಿದೆ. ಯುವಜನರತ್ತ ಗಮನ ಹರಿಸಲು ಈ ಸರಕಾರಕ್ಕೆ ಟೈಮಿಲ್ಲ! ಎಂದು ವಾಗ್ದಾಳಿ ನಡೆಸಿದ್ದಾರೆ.

ನಿರುದ್ಯೋಗ ಎನ್ನುವುದು ಸರಳ ಸಮಸ್ಯೆ ಅಲ್ಲ. ಅದು ಸದಾ ಕುದಿಯುವ ಜ್ವಾಲಾಮುಖಿ ಎಂಬುದನ್ನು ಸರ್ಕಾರ ಮರೆಯಬಾರದು. ಈ ಹೊತ್ತಿಗೇ ಆಡಳಿತಗಾರರು ಎಚ್ಚೆತ್ತು ಬಜೆಟ್‌ನಲ್ಲಿ ಪ್ರತ್ಯೇಕ ಹಣ ಇರಿಸಿ, ನೇಮಕಾತಿ ಪ್ರಕ್ರಿಯೆಗೆ ಚಾಲನೆ ನೀಡಬೇಕಿತ್ತು. ಅತೀ ಹೆಚ್ಚು ಹುದ್ದೆಗಳು ಶಿಕ್ಷಣ, ಆರೋಗ್ಯ, ಪೊಲೀಸ್ ಇಲಾಖೆಗಳಲ್ಲಿ ಖಾಲಿ ಇವೆ. ಬೆಂಗಳೂರು ನಗರದ 18 ಆಯಕಟ್ಟಿನ ಪೊಲೀಸ್ ಠಾಣೆಗಳಲ್ಲಿ ಇನ್‌ಸ್ಪೆಕ್ಟರ್‌ಗಳೇ ಇಲ್ಲ! ವರ್ಗಾವಣೆ ದಂಧೆಯಲ್ಲಿ ಸರ್ಕಾರ ಮುಳುಗಿದ್ದರ ಪರಿಣಾಮವಿದು. ಕೂಡಲೇ ಖಾಲಿ ಹುದ್ದೆಗಳ ಭರ್ತಿ ಮಾಡುವ ನಿಟ್ಟಿನಲ್ಲಿ ಸರಕಾರ ತುರ್ತು ಕ್ರಮ ವಹಿಸಬೇಕು. ವಿಧಾನಸೌಧದ 3ನೇ ಮಹಡಿಯಿಂದ ಕೆಳಗಿಳಿದು ಬಂದು ಯುವಜನರ ದನಿ ಆಲಿಸಬೇಕು ಎಂದು ಎಚ್ಚರಿಸಿದ್ದಾರೆ

ಅಲ್ಲಮಪ್ರಭು ವಚನಗಳು ಕೃತಿ ಫೆ.28ಕ್ಕೆ ಬಿಡುಗಡೆ

ಮೈಸೂರು, ಫೆ24– ಜೆಎಸ್‌ಎಸ್ ಮಹಾವಿದ್ಯಾಪೀಠದ ವತಿಯಿಂದ 'ಅಲ್ಲಮಪ್ರಭು ವಚನಗಳು' ವ್ಯಾಖ್ಯಾನ ಸಂಪುಟ 1 ಹಾಗೂ 2ರ ಇಂಗ್ಲಿಷ್ ಅವತರಣಿಕೆ ಕೃತಿ ಬಿಡುಗಡೆ ಸಮಾರಂಭವನ್ನು ಬೆಂಗಳೂರು ಜಯನಗರದ ಜೆಎಸ್‌ಎಸ್ ವೃತ್ತದಲ್ಲಿರುವ ಶಿವರಾತ್ರೀಶ್ವರ ಕೇಂದ್ರದಲ್ಲಿ ಫೆ.28ರಂದು ಬೆಳಗ್ಗೆ 10.30ಕ್ಕೆ ಆಯೋಜಿಸಲಾಗಿದೆ.

ಸುತ್ತೂರು ಮಠದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಸಾನಿಧ್ಯ ಹಾಗೂ ವಿಜಯಪುರ ಜ್ಞಾನಯೋಗಾಶ್ರಮದ ಅಧ್ಯಕ್ಷ ಶ್ರೀ ಬಸವಲಿಂಗ ಸ್ವಾಮಿ ಸಮ್ಮುಖದಲ್ಲಿ ನಡೆಯಲಿರುವ ಕಾರ್ಯಕ್ರಮದಲ್ಲಿ ಒರಿಸ್ಸಾ ಹೈಕೋರ್ಟ್ ನ್ಯಾಯಮೂರ್ತಿಗಳಾದ ದೀಕ್ಷಿತ್ ಕೃಷ್ಣ ಶ್ರೀಪಾದ್ ಅವರು ಕೃತಿ ಲೋಕಾರ್ಪಣೆ ಮಾಡಲಿದ್ದಾರೆ.

ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅಧ್ಯಕ್ಷತೆ ವಹಿಸಲಿದ್ದು, ಬೃಹತ್ ಕೈಗಾರಿಕೆ ಸಚಿವ ಎಂ.ಬಿ.ಪಾಟೀಲ್ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ. ಸಂಸ್ಕೃತ ವಿವಿ ವಿಶ್ರಾಂತ ಕುಲಪತಿ ಪ್ರೊ.ಮಲ್ಲೇಪುರಂ ಜಿ.ವೆಂಕಟೇಶ್ ಕೃತಿ ಪರಿಚಯ ಮಾಡಲಿದ್ದು, ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ ಗೌರವ ಸಲಹೆಗಾರ ಗೊ.ರು.ಚನ್ನಬಸಪ್ಪ, ಅಧ್ಯಕ್ಷ ಡಾ.ಸಿ.ಸೋಮಶೇಖರ್, ಕರ್ನಾಟಕ ರಾಜ್ಯ ವಿಕೇಂದ್ರೀಕರಣ ಯೋಜನೆ ಮತ್ತು ಅಭಿವೃದ್ಧಿ ಸಮಿತಿಯ ಉಪಾಧ್ಯಕ್ಷ ಡಿ.ಆರ್.ಪಾಟೀಲ್, ರಾಜ್ಯ ಸರ್ಕಾರಿ ನೌಕರರ ಸಂಘದ ರಾಜ್ಯಾಧ್ಯಕ್ಷ ಸಿ.ಎಸ್.ಷಡಕ್ಷರಿ ಮತ್ತಿತರ ಗಣ್ಯರು ಪಾಲ್ಗೊಳ್ಳಲಿದ್ದಾರೆ.

ಸನ್ಮಾನ



ಕೆಎಸ್‌ಆರ್‌ಟಿಸಿ ಮೈಸೂರು ನಗರ ವಿಭಾಗ, ಸಾತಗಳ್ಳಿ ಘಟಕದ ಚಾಲಕ ಕಂ ನಿರ್ವಾಹಕ ರಾಜೇಂದ್ರ ಅವರ ಪುತ್ರ ವರುಣ್ ರಾಜ್ 16ನೇ ರ್‍ಯಾಂಕ್‌ನೊಂದಿಗೆ, 25ನೇ ವಯಸ್ಸಿಗೆ ಸಿವಿಲ್ ನ್ಯಾಯಾಧೀಶರಾಗಿ ಆಯ್ಕೆಯಾಗಿರುವ ಹಿನ್ನೆಲೆಯಲ್ಲಿ ಅವರನ್ನು ಕೆಎಸ್‌ಆರ್‌ಟಿಸಿ ಎಂಡಿಎಂಎಸ್ ಸೊಸೈಟಿ ಮಾಸಿಕ ಸಭೆಯಲ್ಲಿ ಅಭಿನಂದಿಸಲಾಯಿತು. ಸೊಸೈಟಿ ಅಧ್ಯಕ್ಷರಾದ ಕೆ.ಲೋಕೇಶ್, ಉಪಾಧ್ಯಕ್ಷರಾದ ಶ್ರೀಮತಿ ನಾಗಲೀಲಾ, ನಿರ್ದೇಶಕರಾದ ಸಿ.ಮಾದೇಶ್, ಆರ್.ಆರ್.ಮಹೇಶ್, ಎಂ.ದೇವರಾಜ್ ಕುಮಾರ್, ಎಂ.ಪಿ.ನಾಗಪ್ರಸಾದ್, ಆರ್.ರಘು, ಕೆ.ಮಾದೇವಸ್ವಾಮಿ, ಎಸ್.ಮಾದೇವಸ್ವಾಮಿ, ಸೋಮಶೇಖರ ಮತ್ತಿತರರು ಚಿತ್ರದಲ್ಲಿದ್ದಾರೆ.

ರೇಷ್ಮೆ ಉದ್ಯಮದ ಆವರಣದಲ್ಲಿ ಕ್ರೀಡಾಂಗಣ ನಿರ್ಮಾಣ ಖಂಡಿಸಿ ಕರ್ನಾಟಕ ಸೇನಾ ಪಡೆ ಪ್ರತಿಭಟನೆ



ಮೈಸೂರಿನ ಹಳೆ ಜಿಲ್ಲಾಧಿಕಾರಿ ಕಚೇರಿ ಬಳಿ ಕರ್ನಾಟಕ ಸೇನಾ ಪಡೆ ವತಿಯಿಂದ ಮಂಗಳವಾರ ಪ್ರತಿಭಟನೆ ನಡೆಸಲಾಯಿತು.

ಮೈಸೂರು, ಫೆ24(ಎಂಕೆ)– ಟಿ.ನರಸಿಪುರದಲ್ಲಿರುವ ಕರ್ನಾಟಕ ರೇಷ್ಮೆ ಉದ್ಯಮಗಳ ನಿಗಮದ (ಕೆಎಸ್‌ಐಸಿ) ರೇಷ್ಮೆ ನೂಲು ಬಿಚ್ಚುವ ಘಟಕದ ಸಮೀಪದಲ್ಲಿ ಕ್ರೀಡಾಂಗಣ ನಿರ್ಮಾಣ ಖಂಡಿಸಿ ಕರ್ನಾಟಕ ಸೇನಾ ಪಡೆ ವತಿಯಿಂದ ಮಂಗಳವಾರ ಪ್ರತಿಭಟನೆ ನಡೆಸಲಾಯಿತು.

ಮೈಸೂರಿನ ಹಳೆ ಜಿಲ್ಲಾಧಿಕಾರಿ ಕಚೇರಿ ಎದುರು ಜಮಾವಣೆಗೊಂಡ ಪ್ರತಿಭಟನಾಕಾರರು ಟಿ.ನರಸೀಪುರ ತಾಲೂಕಿನ ಕೆಎಸ್‌ಐಸಿ ಘಟಕದ ಜಾಗದಲ್ಲಿ ಕ್ರೀಡಾಂಗಣ ನಿರ್ಮಾಣಕ್ಕೆ ಮುಂದಾಗಿರುವ ಕ್ರೀಡಾ ಇಲಾಖೆ ನೂರಾರು ಮರಗಳ ಹನನ ಮಾಡಲು ಮುಂದಾಗಿದೆ. ಪಕ್ಷಿ ಪ್ರಭೇದಗಳಿಗೆ ತೀವ್ರ ಹಾನಿಯಾಗಲಿದ್ದು, ಕೂಡಲೇ ಕ್ರೀಡಾಂಗಣ ನಿರ್ಮಾಣ ಕೈಬಿಡಬೇಕು ಎಂದು ಆಗ್ರಹಿಸಿದರು.

ಮೈಸೂರು ಮಹಾರಾಜರು ಸುಮಾರು 13 ಎಕರೆ ವಿಶಾಲ ಜಾಗದಲ್ಲಿ ಮೈಸೂರು ಸಿಲ್ಕ್ ಫ್ಯಾಕ್ಟರಿ ಸ್ಥಾಪಿಸಿದ್ದರು. ಈ ಕಾರ್ಖಾನೆ ಆವರಣದಲ್ಲಿ 60–70 ವರ್ಷಗಳ ಹಳೆಯ ಬೃಹತ್ ಮರಗಳಿದ್ದು, ಕ್ರೀಡಾಂಗಣ ನಿರ್ಮಾಣಕ್ಕಾಗಿ ಅವುಗಳನ್ನು ಕಡಿಯಬೇಕಾಗುತ್ತದೆ. ಇದರಿಂದ ಪರಿಸರ ನಾಶವಾಗುವುದಲ್ಲದೆ ಪಕ್ಷಿ ಪ್ರಭೇದಕ್ಕೆ ತೀವ್ರ ತೊಂದರೆಯಾಗಲಿದೆ ಎಂದರು.

ಅಲ್ಲದೆ ಕಾರ್ಖಾನೆಯಲ್ಲಿ ರೇಷ್ಮೆ ಗೂಡನ್ನು ಬೇಯಿಸುವುದರಿಂದ ಕೆಟ್ಟ ವಾಸನೆ ಹೊರಹೊಮ್ಮಲಿದ್ದು, ಕ್ರೀಡಾ ಪಟುಗಳ ಆರೋಗ್ಯಕ್ಕೂ ಹಾನಿಯುಂಟಾಗಲಿದೆ. ಮರಗಳು ಇರುವುದರಿಂದ ವಾಸನೆ ನಿಯಂತ್ರಣದಲ್ಲಿದ್ದು, ಇರುವ ಮರಗಳನ್ನು ಕಡಿದರೆ, ಈ ಪ್ರದೇಶದಲ್ಲಿ ಉಸಿರಾಟಕ್ಕೂ ಕಷ್ಟವಾಗಲಿದೆ. ಆದ್ದರಿಂದ ಕ್ರೀಡಾ ಇಲಾಖೆ ತಾಲೂಕು ಕ್ರೀಡಾಂಗಣ ನಿರ್ಮಾಣ ಯೋಜನೆಯನ್ನು ಕೈ ಬಿಡಬೇಕು ಎಂದು ಒತ್ತಾಯಿಸಿದರು.

ಮನವಿ: ಉದ್ದೇಶಿತ ಸ್ಥಳಕ್ಕೆ ಬದಲಾಗಿ ಟಿ.ನರಸೀಪುರದಲ್ಲಿಯೇ ಬೇರೆ ಸೂಕ್ತ ಜಾಗದಲ್ಲಿ ಸುಸಜ್ಜಿತ ಕ್ರೀಡಾಂಗಣ ನಿರ್ಮಿಸಲು ನಮ್ಮ ವಿರೋಧ ಇಲ್ಲ. ಆದರೆ, ಮೈಸೂರು ಸಿಲ್ಕ್ ಫ್ಯಾಕ್ಟರಿ ಆವರಣದಲ್ಲಿ ಕ್ರೀಡಾಂಗಣ ನಿರ್ಮಿಸಿ, ಮರ–ಗಿಡಗಳನ್ನು ಕಡಿಯಬಾರದೆಂದು ಮುಖ್ಯಮಂತ್ರಿಗಳಿಗೆ ಮನವಿ ಮಾಡಲಾಗುವುದು ಎಂದು ಕರ್ನಾಟಕ ಸೇನಾ ಪಡೆ ಜಿಲ್ಲಾಧ್ಯಕ್ಷ ತೇಜೇಶ್ ಲೋಕೇಶ್ ಗೌಡ ತಿಳಿಸಿದರು.

ಪ್ರತಿಭಟನೆಯಲ್ಲಿ ಮುಖಂಡರಾದ ಗೋಲ್ಡನ್ ಸುರೇಶ್, ಕೃಷ್ಣಪ್ಪ, ಸಿಂಧುವಳ್ಳಿ ಶಿವಕುಮಾರ್. ಮಧುವನ ಚಂದ್ರು, ಬೋಗಾದಿ ಸಿದ್ದೇಗೌಡ, ಹೆಚ್.ಗಿರೀಶ್, ವೇಣು ಗೋಪಾಲ್. ಶಿವಲಿಂಗಯ್ಯ ವರಕೂಡು ಕೃಷ್ಣೇಗೌಡ, ಶ್ರೀನಿವಾಸ್, ನೇಹಾ, ಮಂಜುಳಾ, ಭಾಗ್ಯಮ್ಮ, ಡಾ.ಶಾಂತ್ ರಾಜೇಅರಸ್, ಡಾ.ನರಸಿಂಹೇಗೌಡ, ಜ್ಯೋತಿ, ಸುಜಾತ, ಗೀತಾ ಗೌಡ. ವಿಜಯೇಂದ್ರ, ಹನುಮಂತಯ್ಯ, ಬೇಬಿ ರತ್ನ, ವಾಣಿ. ಪುಷ್ಪವತಿ, ತಾಯೂರು ಗಣೇಶ್, ರಾಧಾ ಕೃಷ್ಣ. ನಾರಾಯಣ ಗೌಡ, ಎಳನೀರು ರಾಮಣ್ಣ, ಕುಮಾರ್‌ಗೌಡ, ದರ್ಶನ್ ಗೌಡ, ಪ್ರದೀಪ್, ರಘು ಅರಸ್, ಪರಿಸರ ಚಂದ್ರು, ಅಶೋಕ್, ಪ್ರಭಾಕರ್, ಆನಂದ್ ಗೌಡ, ತ್ಯಾಗರಾಜ್, ಗಣೇಶ್ ಪ್ರಸಾದ್, ಸ್ವಾಮಿ ಗೌಡ, ಚಂದ್ರಶೇಖರ್, ರವೀಶ್ ಉಪಸ್ಥಿತರಿದ್ದರು.

ಫ್ಯಾಷನವ್ಯಾ ಎರಡು ದಿನಗಳ ಎಕ್ಸ್‌ಪೋ ಆರಂಭ



ಮೈಸೂರಿನ ಸದರನ್ ಸ್ಟಾರ್ ಹೋಟೆಲ್‌ನಲ್ಲಿ ಮಂಗಳವಾರ ಫ್ಯಾಷನವ್ಯಾ ಸಂಸ್ಥೆಯ ಎಕ್ಸ್‌ಪೋಗೆ ಗಣ್ಯರು ಚಾಲನೆ ನೀಡಿದರು. (ಎಡದಿಂದ) ಅಂಜಲಿ ಸತೀಶ್, ಮೋನಾ ಭಟೇವ್ರಾ, ಡಿ.ಅನಿತಾ, ನಮ್ರತಾ ಶೆಣೈ, ಡಾ.ಸುಮನ್ ಬಸವರಾಜು, ಪದ್ಮಾವತಿ ಮಹೇಶ್, ಪೃಥ್ವಿ ಸುಧೀನರ್ ಅವರನ್ನು ಚಿತ್ರದಲ್ಲಿ ಕಾಣಬಹುದು.

ಮೈಸೂರು,ಫೆ24(ಪಿಎಂ)– ಫ್ಯಾಷನವ್ಯಾ **(Fashionavya)** ಸಂಸ್ಥೆಯ 8ನೇ ಆವೃತ್ತಿಯ ಎರಡು ದಿನಗಳ ಫ್ಯಾಷನ್ ಮತ್ತು ಲೈಫ್ ಸ್ಟೈಲ್ ವಸ್ತು ಪ್ರದರ್ಶನ ಮತ್ತು ಮಾರಾಟಕ್ಕೆ ಮಂಗಳವಾರ ಚಾಲನೆ ದೊರೆಯಿತು.

ನಗರದ ಸದರನ್ ಸ್ಟಾರ್ ಹೋಟೆಲ್‌ನಲ್ಲಿ ಹಮ್ಮಿಕೊಂಡಿರುವ ಈ ಪ್ರದರ್ಶನವು ಫ್ಯಾಷನ್ ಮತ್ತು ಲೈಫ್‌ಸ್ಟೈಲ್ ಸಂಬಂಧ ವೈವಿಧ್ಯಮಯ ಸಂಗ್ರಹಗಳನ್ನು ಅನಾವರಣಗೊಳಿಸಿದ್ದು, ಗ್ರಾಹಕರನ್ನು ಆಕರ್ಷಿಸುತ್ತಿದೆ.

ದೆಹಲಿ, ಮುಂಬೈ, ಬೆಂಗಳೂರು, ಕೊಯಂಬತ್ತೂರು, ಕೊಲ್ಕತ್ತಾ, ಚೆನ್ನೈ, ಗುರುಗಾಂವ್, ನಾಗಪುರ ಸೇರಿದಂತೆ ದೇಶದ ಪ್ರಮುಖ ನಗರಗಳಿಂದ ಆಗಮಿಸಿದ ವಿನ್ಯಾಸಕಾರರ ಸೃಜನಶೀಲತೆಯನ್ನು ಈ ಪ್ರದರ್ಶನದಲ್ಲಿ ಕಾಣಬಹುದು. ಪ್ರದರ್ಶನಕ್ಕೆ ಗಣ್ಯರು ಚಾಲನೆ ನೀಡಿದರು.

ನಮ್ರತಾ ಶೆಣೈ (ಸಂಸ್ಥಾಪಕಿ ಹಾಗೂ ಟ್ರಸ್ಟಿ–ದಿವ್ಯ ಫೌಂಡೇಶನ್, ರಾಷ್ಟ್ರೀಯ ಅಧ್ಯಕ್ಷೆ 2018–ಲೇಡಿಸ್ ಸರ್ಕಲ್ ಇಂಡಿಯಾ), ಮೋನಾ ಭಟೇವ್ರಾ (ಅಧ್ಯಕ್ಷೆ–ಜಿಟೋ ಲೇಡಿಸ್ ವಿಂಗ್), ಪೃಥ್ವಿ ಸುಧೀಂದರ್ (ಥೆರಪಿಸ್ಟ್, ಹೀಲರ್ ಹಾಗೂ ಮಿತ್ರಿ ಚಾರಿಟಬಲ್ ಟ್ರಸ್ಟ್ ಶಾಲೆಯ ವ್ಯವಸ್ಥಾಪಕ ಟ್ರಸ್ಟಿ), ಅಂಜಲಿ ಸತೀಶ್ (ಟ್ರಸ್ಟಿ–ಮೈತ್ರಿ ಚಾರಿಟಬಲ್ ಟ್ರಸ್ಟ್), ಡಾ.ಸುಮನ್ ಬಸವರಾಜು (ಹೆಲ್ತ್ ಕೇರ್ ವಿಸನರಿ ಹಾಗೂ ವೈಟ್‌ಸ್ವಾನ್ ಎಸ್ಥೆಟಿಕ್ಸ್ ಸಂಸ್ಥಾಪಕಿ), ಆಕಾಂಕ್ಷಾ ಗೌಡ (ಅವಿಕಾ ಸಂಸ್ಥಾಪಕಿ, ಉಪನ್ಯಾಸಕಿ, ಸೆಲೆಬ್ರಿಟಿ ಡಿಸೈನರ್), ಪದ್ಮಾವತಿ ಮಹೇಶ್ (ಶಿಕ್ಷಣ ಮತ್ತು ಉದ್ಯಮ ಕ್ಷೇತ್ರದ ಉದ್ಯಮಿ), ಡಿ.ಅನಿತಾ (ಪ್ರಾಂಶುಪಾಲೆ–ಮಹಾವೀರ ವಿದ್ಯಾಮಂದಿರ) ಮತ್ತು ಮೇಘನಾ ಕಂಡೇರೈ (ಸಿಇಒ–ಅಬಿಲಿಟರ್, ಪ್ರೊಡಕ್ಷನ್ ಹೌಸ್ ಮತ್ತು ಡಿಜಿಟಲ್ ಮಾರ್ಕೆಟಿಂಗ್ ಏಜೆನ್ಸಿ) ಅವರು ಸಂಯುಕ್ತವಾಗಿ ಪ್ರದರ್ಶನ ಉದ್ಘಾಟಿಸಿದರು.

ಪ್ರದರ್ಶನವು ಮೈಸೂರಿನ ಸ್ಟೈಲಿಶ್ ಮಹಿಳೆಯರಿಗಾಗಿ ವಿನ್ಯಾಸಗೊಳಿಸಲಾದ ಡಿಸೈನರ್ ಸೀರೆಗಳು, ಉಡುಪುಗಳು, ಆಭರಣಗಳು, ಆಕ್ಸೆಸರೀಸ್, ಬ್ಯೂಟಿ ಉತ್ಪನ್ನಗಳು, ಗೃಹ ಅಲಂಕಾರ ಮತ್ತು ಫರ್ನಿಷಿಂಗ್, ಉಡುಗೊರೆಗಳು ಸೇರಿದಂತೆ ವೈವಿಧ್ಯಮಯ ಸಂಗ್ರಹಗಳನ್ನು ಹೊಂದಿದೆ. ಫೆ.25ರ ಬೆಳಗ್ಗೆ 11ರಿಂದ ರಾತ್ರಿ 9ರವರೆಗೆ ಪ್ರದರ್ಶನ ಇರಲಿದೆ.

ನಾಲ್ವಡಿಯವರ ಸಿಲ್ಕ್ ಫಿಲೇಚರ್ ಆವರಣದಲ್ಲಿ

ಯಾವುದೇ ಕಾರಣಕ್ಕೂ ಕ್ರೀಡಾಂಗಣ ನಿರ್ಮಿಸಲು ಬಿಡುವುದಿಲ್ಲ

ಸರ್ಕಾರಕ್ಕೆ ಮಾಜಿ ಸಂಸದ ಪ್ರತಾಪ್ ಸಿಂಹ ಸವಾಲು, ಹೋರಾಟಕ್ಕೆ ಸಂಸದ ಯದುವೀರ್ ಬೆಂಬಲ

ತಿ.ನರಸೀಪುರ, ಫೆ.24– ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ನಿರ್ಮಿಸಿರುವ ಸಿಲ್ಕ್ ಫಿಲೇಚರ್ ಆವರಣದಲ್ಲಿ ಕ್ರೀಡಾಂಗಣ ನಿರ್ಮಿಸಲು ಯಾವುದೇ ಕಾರಣಕ್ಕೂ ಬಿಡುವುದಿಲ್ಲ. ಅದ್ಯಾರು ಬಂದು ಕ್ರೀಡಾಂಗಣ ನಿರ್ಮಿಸುತ್ತಾರೋ ನೋಡಿಯೇ ಬಿಡೋಣ ಎಂದು ಮಾಜಿ ಸಂಸದ ಪ್ರತಾಪ್ ಸಿಂಹ ಸರ್ಕಾರಕ್ಕೆ ಸವಾಲೆಸೆದರು.

ಪಟ್ಟಣದ ಸಿಲ್ಕ್ ಫಿಲೇಚರ್ ಆವರಣದಲ್ಲಿ ಕ್ರೀಡಾಂಗಣ ನಿರ್ಮಾಣಕ್ಕೆ ಸ್ವಾಧೀನಪಡಿಸಿಕೊಂಡು ಕ್ರೀಡಾ ಇಲಾಖೆಗೆ ಹಸ್ತಾಂತರಗೊಂಡಿರುವ 5 ಎಕರೆ ಜಾಗವನ್ನು ಬಿಜೆಪಿ ಮುಖಂಡರು, ಕಾರ್ಮಿಕರ ಜೊತೆಗೂಡಿ ಪರಿಶೀಲಿಸಿ ಮಾತನಾಡಿದ ಅವರು, ಸುದೀರ್ಘ ಅವಧಿಗೆ ರಾಜಕೀಯ ಅಧಿಕಾರ ಅನುಭವಿಸುತ್ತಿರುವ ಸಿಎಂ ಸಿದ್ದರಾಮಯ್ಯ ಅವರು ಜಿಲ್ಲೆಗೆ ಯಾವುದೇ ಕೈಗಾರಿಕೆ ತರಲು ಸಾಧ್ಯವಾಗಲಿಲ್ಲ. ಕಾರ್ಮಿಕರ ಕಲ್ಯಾಣಕ್ಕೆ ಯಾವುದೇ ಯೋಜನೆ ರೂಪಿಸಿಲ್ಲ. ಅಂತಹವರಿಗೆ ನಾಲ್ವಡಿ ಕೃಷ್ಣರಾಜ ಒಡೆಯರ್ ಕಟ್ಟಿರುವ ಕಾರ್ಖಾನೆ ಆವರಣದಲ್ಲಿ ಕ್ರೀಡಾಂಗಣ ನಿರ್ಮಿಸುವ ಯಾವುದೇ ನೈತಿಕತೆ ಇಲ್ಲ ಎಂದು ಗುಡುಗಿದರು.

ಬೇಡಿಕೆಗೆ ತಕ್ಕಂತೆ ರೇಷ್ಮೆ ಸೀರೆಗಳ ಉತ್ಪಾದನೆಯಾಗುತ್ತಿಲ್ಲ. ಗ್ರಾಹಕರು ರೇಷ್ಮೆ ಸೀರೆಗಾಗಿ ಟೋಕನ್ ಪಡೆಯುತ್ತಿದ್ದಾರೆ. ನೂಲಿನಂತೆ ಸೀರೆಯೆಂಬ ನಾಣ್ನುಡಿಯಂತೆ ಉತ್ತಮ ಗುಣಮಟ್ಟದ ಸೀರೆಗೆ ತಕ್ಕಂತೆ ಉತ್ಕೃಷ್ಟವಾದ ರೇಷ್ಮೆ ನೂಲನ್ನು ಇಲ್ಲಿನ ಕಾರ್ಖಾನೆಯಲ್ಲಿ ಉತ್ಪಾದಿಸಲಾಗುತ್ತಿದೆ. ಕ್ರೀಡಾಂಗಣ ನಿರ್ಮಿಸುವುದರಿಂದ ಉತ್ಪಾದನೆ ಮೇಲೆ ಅಡ್ಡ ಪರಿಣಾಮವಾಗಿ ಕಾರ್ಖಾನೆ ಮುಚ್ಚಬೇಕಾಗುತ್ತದೆ. ಅದಕ್ಕೆ ಅವಕಾಶ ಕೊಡುವುದಿಲ್ಲ. ನಾನು ಕೂಡ ಕ್ರೀಡಾ ಪ್ರೇಮಿ. ಆದರೆ ಕ್ರೀಡಾಂಗಣ ನಿರ್ಮಾಣಕ್ಕೆ ವಿರೋಧವಿಲ್ಲ. 2 ಅವಧಿಗೆ ಸಂಸದನಾಗಿದ್ದಾಗ ಮೈಸೂರಿನಲ್ಲಿ ಅಂತಾರಾಷ್ಟ್ರೀಯ ಮಟ್ಟದ ಕ್ರೀಡಾಂಗಣ ನಿರ್ಮಿಸಬೇಕೆಂದು ಮೈಸೂರು ಹೊರವಲಯದಲ್ಲಿ ಆಯ್ಕೆ ಮಾಡಿದ ಮೊದಲ ನಿವೇಶನ ಸೂಕ್ತವಾಗಿಲ್ಲವೆಂದು ಮತ್ತೊಂದು ನಿವೇಶನ ಹುಡುಕಾಟ ನಡೆಸಿ ಆಯ್ಕೆ ಮಾಡಿ ಅಗತ್ಯವಿದ್ದ ಅನುದಾನ ಕೂಡ ಮಂಜೂರು ಮಾಡಿಸಿದ್ದೇನೆ. ಹಾಗಾಗಿ ರೇಷ್ಮೆ ಕಾರ್ಖಾನೆ ಆವರಣದಲ್ಲಿ ಕ್ರೀಡಾಂಗಣ ನಿರ್ಮಿಸುವ ನಿರ್ಧಾರವನ್ನು ರಾಜ್ಯ ಸರ್ಕಾರ ಹಿಂಪಡೆಯಬೇಕೆಂದು ಒತ್ತಾಯಿಸಿದರು.



ಸಿಲ್ಕ್ ಫಿಲೇಚರ್ ಆವರಣದಲ್ಲಿ ಕ್ರೀಡಾಂಗಣ ಕಾಮಗಾರಿ ಕೈ ಬಿಡಬೇಕೆಂದು ಕಳೆದ 3 ದಿನಗಳಿಂದ ನಡೆಯುತ್ತಿರುವ ಅಭಿಯಾನಕ್ಕೆ ಸಂಸದ ಯದುವೀರ್ ಹಾಗೂ ಮಾಜಿ ಸಂಸದ ಪ್ರತಾಪ್ ಸಿಂಹ ಬೆಂಬಲ ಸೂಚಿಸಿದರು.

ಗಲ್ಲಿ ಕ್ರಿಕೆಟ್ ಆಡಲು ಯೋಗ್ಯವಲ್ಲ: ಸರ್ಕಾರ ಕ್ರೀಡಾಂಗಣಕ್ಕೆ ಆಯ್ಕೆ ಮಾಡಿಕೊಂಡಿರುವ ಜಾಗದಲ್ಲಿ ಯಾವ ಆಟ ಆಡಲು ಸಾಧ್ಯ. ಅಲ್ಲಿ ಗಲ್ಲಿ ಕ್ರಿಕೆಟ್ ಕೂಡ ಆಡಲು ಸಾಧ್ಯವಿಲ್ಲ. ಪಿಚ್ ಮಧ್ಯೆ ವಿಕೆಟ್ ನೆಟ್ಟು ಬಾಲ್ ಎಲ್ಲಿಗೆ ಹಾಕುತ್ತೀರಾ ಎಂದು ಕ್ರೀಡಾಂಗಣಕ್ಕೆ ಜಾಗ ಆಯ್ಕೆ ಮಾಡಿಕೊಂಡಿರುವ ಸರ್ಕಾರದ ನಿರ್ಧಾರವನ್ನು ವ್ಯಂಗ್ಯವಾಡಿದ ಪ್ರತಾಪ್ ಸಿಂಹ, ಕೆಎಸ್ಐಸಿ ಎಲ್ಲಾ ಜಾತಿ ಜನಾಂಗಕ್ಕೂ ಅನ್ನಕೊಟ್ಟ ಸಂಸ್ಥೆ. ಇದನ್ನು ಕಿತ್ತುಕೊಳ್ಳಲು ಬರ್ತೀರಲ್ಲಾ ಸಿದ್ದರಾಮಯ್ಯನವರೇ, ನೀವಂತೂ ಕಂಪನಿ, ಫ್ಯಾಕ್ಟರಿ ಏನನ್ನೂ ತರಲಿಲ್ಲ. ತಮನ್ನಾ ಭಾಟಿಯಾಗೆ 5.50 ಕೋಟಿ ಕೊಟ್ಟು ಮೈಸೂರು ಸ್ಯಾಂಡಲ್ ಸೋಪ್ ರಾಯಭಾರಿ ಮಾಡಿದ್ದೀರಾ, ಇಲ್ಲಿ ಕಲ್ಲಿದ್ದಲು ಶಾಖದಲ್ಲಿ ಚರ್ಮ ಕಪ್ಪು ಮಾಡಿಕೊಂಡು ಕಷ್ಟಪಟ್ಟು ಕೆಲಸ ಮಾಡುವ ಕಾರ್ಮಿಕರ ಕೆಲಸ ಕಿತ್ತುಕೊಳ್ಳಲು ಹೊರಟ್ಟಿದ್ದೀರಲ್ಲ. ಸಿದ್ದರಾಮನ ಹುಂಡಿಯಲ್ಲಿ ಕುರಿ ಕಾಯ್ತಾ ಇದ್ದೆ ಅಂತ ಹೇಳ್ತಿರಲ್ಲಾ ಸಾರ್, ನಿಮ್ಮ ತಂದೆ ಒಬ್ಬ ಸಾಮಾನ್ಯರಾಗಿದ್ರಲ್ವಾ, ನಿಮ್ಮ ತಂದೆ ನಿಮ್ಮನ್ನು ಕಷ್ಟ ಪಟ್ಟು ಬೆಳೆಸಿದ್ದಾರೆ. ಇಲ್ಲಿರುವ ಮಹಿಳೆಯರು ಅವರ ಮಕ್ಕಳಿಗೆ ಒಳ್ಳೆಯ ಶಿಕ್ಷಣ ಕೊಡಿಸಬೇಕೆಂದು ಕಷ್ಟಪಟ್ಟು ದುಡಿಯುತ್ತಿದ್ದಾರೆ. ಅವರ ಮಕ್ಕಳ ಭವಿಷ್ಯವನ್ನೂ ನೋಡಬೇಕಲ್ಲವೇ ಎಂದರು.

ನಾಲ್ವಡಿ ನಮ್ಮ ಪಾಲಿನ ದೇವರು: ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ, ಆರ್.ಅಶೋಕ್ ಎಲ್ಲರೂ ಮೈಸೂರು ಸಿಲ್ಕ್ ಅನ್ನು ಜಾಗತಿಕ ಮಟ್ಟಕ್ಕೆ ತೆಗೆದುಕೊಂಡು ಹೋಗುವ ಮಾತನಾಡಿದ್ದಾರೆ. ಇಂತಹ ವಾತಾವರಣವಿರುವ ಸಂದರ್ಭ ನೂಲು ತಯಾರಿಸುವವರ ಬದುಕನ್ನು ಕಿತ್ತುಕೊಳ್ಳಲು ಹೊರಟಿರುವುದು ಖಂಡನೀಯ. ಇದಕ್ಕೆ ನಾವು ಎಂದಿಗೂ ಅವಕಾಶ ಕೊಡುವುದಿಲ್ಲ. ಇಲ್ಲಿನ ನೌಕರರ ಪರವಾಗಿ ನಾನು ಚಾಲೆಂಜ್ ಮಾಡುತ್ತೇನೆ. ಈ ಜಾಗದಲ್ಲಿ ಅದ್ಯಾರು ಬಂದು ಕ್ರೀಡಾಂಗಣ ನಿರ್ಮಿಸುತ್ತಾರೋ ನೋಡ್ತೀನಿ. ಮುಂದೆ ಯಾರಾದರೂ ಕ್ರೀಡಾ ಇಲಾಖೆಯವರು ಪೊಲೀಸ್ ಬಂದೋಬಸ್ತ್‌ನಲ್ಲಿ ಕಾಮಗಾರಿ ಮಾಡಲು ಬಂದರೆ ಒಂದೇ ಒಂದು ಫೋನ್ ಮಾಡಿ ಮೈಸೂರಿನಿಂದ ಇಲ್ಲಿಗೆ ಬರಲು ಕೇವಲ 30 ನಿಮಿಷ ಸಾಕು. ನಾವೂ ಕೂಡ ದಂಡು ಕಟ್ಟಿಕೊಂಡು ಬರುತ್ತೇವೆ. ನಾನೇನು ಇಲ್ಲಿ ಓಟಿಗಾಗಿ, ಪ್ರಚಾರಕ್ಕಾಗಿ ಬರುತ್ತಿಲ್ಲ. ನಾಲ್ವಡಿ ಕೃಷ್ಣರಾಜ ಒಡೆಯರ್ ಮತ್ತು ಮೈಸೂರು ಸಂಸ್ಥಾನ ನಮ್ಮ ಪಾಲಿನ ದೇವರು ಮಾಡಿರುವ ಸಂಸ್ಥೆ ರಕ್ಷಣೆಗಾಗಿ ನಿಮ್ಮ ಬದುಕಿನ ಉಳಿವಿಗಾಗಿ ಬರುತ್ತೇವೆ. ಕಾರ್ಮಿಕರೂ ಕೂಡ ಪಕ್ಷ ಭೇದ, ಜಾತಿ ಭೇದ ಹಾಗೂ ಧರ್ಮ ಭೇದ ಮರೆತು ಎಲ್ಲರೂ ಒಟ್ಟಾಗಿ ಈ ಫ್ಯಾಕ್ಟರಿ ಉಳಿಸಿಕೊಳ್ಳಬೇಕು. ಇದನ್ನು ಉಳಿಸಿಕೊಳ್ಳುವುದರಲ್ಲಿ ನಿಮ್ಮ ಭವಿಷ್ಯ ಅಡಗಿದೆ. ಈ ಹೋರಾಟದಲ್ಲಿ ನೀವೆಲ್ಲರೂ ನಮ್ಮ ಜೊತೆಯಲ್ಲಿರಬೇಕು ಎಂದು ಕಾರ್ಮಿಕರಿಗೆ ತಿಳಿಸಿದರು.

2028ಕ್ಕೆ ಬಿಜೆಪಿಯದ್ದೇ ಸರ್ಕಾರ: ಮುಂಬರುವ 2028ರ ಚುನಾವಣೆಯಲ್ಲಿ ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬರಲಿದ್ದು, ಆಗ ಮತ್ತೆ ಇಲ್ಲಿಗೆ ಬರುತ್ತೇನೆ. ಇದೇ ಫ್ಯಾಕ್ಟರಿಯನ್ನು ನ್ಯೂ ಬ್ರಾಂಡ್ ಫ್ಯಾಕ್ಟರಿ ಮಾಡುತ್ತೇನೆ. ಅಲ್ಲಿವರೆಗೆ ನೀವೆಲ್ಲರೂ ಒಗ್ಗಟ್ಟಾಗಿರಿ. ಇದು ನಿಮ್ಮ ಬದುಕಿನ ಪ್ರಶ್ನೆ. ಇಲ್ಲಿ ಯಾವುದೇ ರಾಜಕಾರಣಿ ಅವರ ಮಕ್ಕಳ ಭವಿಷ್ಯ ನೋಡುತ್ತಾನೇ ಹೊರತು ಬೇರೆಯವರ ಮಕ್ಕಳ ಭವಿಷ್ಯವನ್ನಲ್ಲ. ನಿಮ್ಮನ್ನು ಕಾಪಾಡಲು ಯಾರು ಬರುತ್ತಾರೋ ಅವರಿಗೆ ಪ್ರೋತ್ಸಾಹ ನೀಡಿ. ಈ ಜಾಗದಲ್ಲಿ ಕ್ರೀಡಾಂಗಣ ನಿರ್ಮಾಣಕ್ಕೆ ಅವಕಾಶ ನೀಡುವುದಿಲ್ಲ. ಎಲ್ಲರೂ ಧೈರ್ಯದಿಂದಿರಿ ಎಂದು ನೈತಿಕ ಸ್ಥೈರ್ಯ ತುಂಬಿದರು.

ಪುರಸಭೆ ಮಾಜಿ ಸದಸ್ಯ ಹಾಗೂ ಬಿಜೆಪಿ ಜಿಲ್ಲಾ ಉಪಾಧ್ಯಕ್ಷ ಆರ್.ಅರ್ಜುನ್, ಹಿರಿಯ ವಕೀಲ ಎಸ್.ಅರುಣ್ ಕುಮಾರ್ ಮಾತನಾಡಿದರು. ಮುಖಂಡ ತೋಟದಪ್ಪ ಬಸವರಾಜು, ಹಿರಿಯ ಶಸ್ತ್ರ ಚಿಕಿತ್ಸಕ ಡಾ.ಎಂ.ರೇವಣ್ಣ, ವೀರಶೈವ ಲಿಂಗಾಯತ ಮಹಾಸಭಾ ಅಧ್ಯಕ್ಷ ಸಿ.ಎಂ.ಪ್ರಕಾಶ್, ನಿರ್ದೇಶಕ ಕುಮಾರ್, ಪುರಸಭೆ ಮಾಜಿ ಸದಸ್ಯ ಎಸ್.ಕೆ.ಕಿರಣ್, ಬಿಜೆಪಿ ಕ್ಷೇತ್ರಾಧ್ಯಕ್ಷ ಹಿರಿಯೂರು ಶಿವಕುಮಾರ್, ಪ್ರಧಾನ ಕಾರ್ಯದರ್ಶಿ ಡಾ.ಟಿ.ಎಸ್.ಮಲ್ಲಿಕಾರ್ಜುನಸ್ವಾಮಿ, ಜಿಲ್ಲಾ ಎಸ್ಸಿ ಮೋರ್ಚಾ ಪ್ರಧಾನ ಕಾರ್ಯದರ್ಶಿ ಆಲಗೂಡು ಮಂಜು, ಅಧ್ಯಕ್ಷ ಚೌಹಳ್ಳಿ ಎಸ್.ಸಿದ್ದರಾಜು, ರೈತ ಮೋರ್ಚಾ ಅಧ್ಯಕ್ಷ ಸೋಮಶೇಖರಪ್ಪ, ಗ್ರಾಪಂ ಸದಸ್ಯ ಕಿರಗಸೂರು ಮಹದೇವಸ್ವಾಮಿ, ಯುವ ಮೋರ್ಚಾ ಅಧ್ಯಕ್ಷ, ಜಯಕುಮಾರ್, ಮುಖಂಡರಾದ ತಿರುಮಕೂಡಲು ಸುನೀಲ್ ಇತರರಿದ್ದರು.

ಶ್ರಮಿಕರ ಬೇಡಿಕೆಗಳು ಈಡೇರಬೇಕು

ಮೈಸೂರು ರೇಷ್ಮೆ ಸೀರೆ ರಾಜ್ಯದಲ್ಲಿ ಬೇಡಿಕೆಯುಳ್ಳ ಉತ್ಪನ್ನವಾಗಿದ್ದು, ರಾಜಕಾರಣಿ, ಗಣ್ಯರು ಹಾಗೂ ಅಧಿಕಾರಿಗಳ ಕೈಗಷ್ಟೇ ಸಿಗುತ್ತಿದೆ. ಇಂತಹ ಸನ್ನಿವೇಶದಲ್ಲಿ ಸೀರೆಗೆ ರೇಷ್ಮೆ ನೂಲು ಪೂರೈಸುವ ಕಾರ್ಖಾನೆ ಪಕ್ಕದಲ್ಲಿ ಕ್ರೀಡಾಂಗಣ ನಿರ್ಮಾಣ ಮಾಡುವುದು ಸೂಕ್ತವಲ್ಲ. ಕಾರ್ಮಿಕರ ಪ್ರತಿರೋಧ ಈಗಾಗಲೇ ರಾಜ್ಯ ಸರ್ಕಾರದ ಗಮನಕ್ಕೂ ಹೋಗಿದೆ. ಕಾರ್ಖಾನೆ ಉಳಿಸಿಕೊಂಡು, ಇಲ್ಲಿನ ಕಾರ್ಮಿಕರಿಗೆ ಹೆಚ್ಚಿನ ಮೂಲ ಸೌಕರ್ಯ ಕಲ್ಪಿಸಿ ಕೊಡಬೇಕಿರುವ ಬಗ್ಗೆ ಮುಖ್ಯಮಂತ್ರಿಗಳಿಗೆ ಪತ್ರ ಬರೆದಿದ್ದೇನೆ. ರಾಜ್ಯ ಸರ್ಕಾರ ಕಾರ್ಮಿಕರಿಗೆ ಅನುಕೂಲ ಕಲ್ಪಿಸಿಕೊಡುತ್ತದೆ ಎಂಬ ಭರವಸೆ ಇದೆ. ಕ್ರೀಡಾಂಗಣ ನಿರ್ಮಿಸುವ ಯೋಜನೆಯನ್ನು ಕೈ ಬಿಡುವವರೆಗೂ ಹೋರಾಟ ಮುಂದುವರೆಯಲಿ. ಶ್ರಮಿಕ ವರ್ಗದ ನ್ಯಾಯಯುತ ಬೇಡಿಕೆಗಳು ಈಡೇರಲಿ. ನಮ್ಮ ಬೆಂಬಲವು ನಿಮಗೆ ಎಂದೆಂದಿಗೂ ಇರುತ್ತದೆ. – ಯದುವೀರ್, ಸಂಸದ.

ಕ್ರೀಡಾಂಗಣ ಅಭಿವೃದ್ಧಿಗೆ ಶಾಸಕ ಅನಿಲ್ ಭೂಮಿ ಪೂಜೆ

ಹೆಚ್.ಡಿ.ಕೋಟೆ, ಫೆ.24– ಕ್ರೀಡಾಪಟುಗಳ ಅನುಕೂಲಕ್ಕಾಗಿ ಪಟ್ಟಣದಲ್ಲಿ 5.5 ಕೋಟಿ ರೂ. ವೆಚ್ಚದಲ್ಲಿ ಕ್ರೀಡಾಂಗಣ ಅಭಿವೃದ್ಧಿಪಡಿಸಲಾಗುವುದು ಎಂದು ಶಾಸಕ ಅನಿಲ್ ಚಿಕ್ಕಮಾದು ತಿಳಿಸಿದರು.

ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯಿಂದ 5.5 ಕೋಟಿ ರೂ. ವೆಚ್ಚದಲ್ಲಿ ಕೈಗೊಂಡಿರುವ ಪಟ್ಟಣದ ತಾಲೂಕು ಕ್ರೀಡಾಂಗಣದ ಅಭಿವೃದ್ಧಿಗೆ ಭೂಮಿ ಪೂಜೆ ನೆರವೇರಿಸಿ ಮಾತನಾಡಿದ ಅವರು, ತಾಲೂಕಿನಲ್ಲಿ ಕ್ರೀಡಾ ಕ್ಷೇತ್ರದಲ್ಲಿ ಸಾಧನೆ ಮಾಡಿದ ಯುವಕರಿದ್ದು, ಅವರ ತರಬೇತಿಗೆ ತಕ್ಕ ಕ್ರೀಡಾಂಗಣ ಇಲ್ಲದಿರುವುದನ್ನು ಗಮನಿಸಿ ಕ್ರೀಡಾಂಗಣ ಅಭಿವೃದ್ಧಿಗೆ ಚಾಲನೆ ನೀಡಲಾಗಿದೆ. ಕ್ಷೇತ್ರದಲ್ಲಿ ಸಾಕಷ್ಟು ಕಾಮಗಾರಿಗಳನ್ನು ಮಾಡುತ್ತಾ ಬಂದಿದ್ದೇನೆ. ಇದೀಗ ಯುವ ಪೀಳಿಗೆಗೆ ಅನುಕೂಲವಾಗುವ ನಿಟ್ಟಿನಲ್ಲಿ ಅವರು ಸಮರ್ಪಕವಾಗಿ ಕ್ರೀಡಾ ಚಟುವಟಿಕೆಯಲ್ಲಿ ತಮ್ಮನ್ನು ತೊಡಗಿಸಿಕೊ ಳ್ಳಲು ಅನುಕೂಲವಾಗಲೆಂದು ಕ್ರೀಡಾಂಗಣ ಅಭಿವೃದ್ಧಿಪಡಿಸಲಾಗುತ್ತಿದೆ. ಕ್ರೀಡಾಪಟು ಗಳು ಕ್ರೀಡೆಯಲ್ಲಿ ಹೆಚ್ಚಿನ ಸಾಧನೆ ಮಾಡಿ ತಾಲೂಕಿಗೆ ಕೀರ್ತಿ ತರಬೇಕು ಎಂದು ತಿಳಿಸಿದರು.



ಕ್ರೀಡಾಂಗಣದ ಅಭಿವೃದ್ಧಿಗೆ ಶಾಸಕ ಅನಿಲ್ ಚಿಕ್ಕಮಾದು ಭೂಮಿ ಪೂಜೆ ನೆರವೇರಿಸಿದರು.

> ಕ್ರೀಡಾಂಗಣ ಚರಂಡಿ, ಸುತ್ತ ರಸ್ತೆ, ಇಂಡೋರ್ ಹಾಲ್, ಜಿಮ್, ವಾಶ್ ರೂ, ಕ್ರಿಕೆಟ್ ತರಬೇತಿಗೆ ನೆಟ್ ಟ್ರೈನರ್, 190 ಮೀಟರ್ ಸಿಸಿ ರಸ್ತೆ, ವಾಕಿಂಗ್ ಪಾಥ್ ಒಳಗೊಂಡಿದೆ. ಮುಂದಿನ ಬಜೆಟ್‌ನಲ್ಲಿ ಕ್ರೀಡಾಂಗಣದಲ್ಲಿ ಈಜುಕೊಳ ನಿರ್ಮಿಸಲು 3 ಕೋಟಿ ಹಣ ಮಂಜೂರು ಮಾಡಿಸಲು ಪ್ರಾಮಾಣಿಕ ಪ್ರಯತ್ನ ಮಾಡಲಾಗುವುದು. – ಅನಿಲ್ ಚಿಕ್ಕಮಾದು, ಶಾಸಕ.

ತಾಲೂಕು ಕ್ರೀಡಾಂಗಣದ ಅಭಿವೃದ್ಧಿಗೆ ಅನುದಾನ ನೀಡುವಂತೆ ಸಿಎಂ ಮನವಿ ಸಲ್ಲಿಸಿದ್ದೆ. ನನ್ನ ಮನವಿಗೆ ಸ್ಪಂದಿಸಿದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು 5.5 ಕೋಟಿ ಅನುದಾನ ನೀಡಿದ್ದರು. ಅದರಂತೆ ಗುದ್ದಲಿ ಪೂಜೆ ನೆರವೇರಿಸಲಾಗಿದೆ. ಗುತ್ತಿಗೆದಾರರು ಗುಣಮಟ್ಟದ ಕಾಮಗಾರಿ ಕೈಗೊಳ್ಳಬೇಕು ಎಂದು ಸೂಚಿಸಿದ ಶಾಸಕರು, ಮುಂದಿನ ದಿನಗಳಲ್ಲೂ ಕ್ರೀಡಾಪಟುಗಳಿಗೆ ಯಾವುದೇ ತೊಂದರೆಯಾಗದಂತೆ ಎಲ್ಲಾ ರೀತಿಯ ಅಗತ್ಯ ಮುಂಜಾಗ್ರತಾ ಕ್ರಮ ಕೈಗೊಳ್ಳಲಾಗುವುದು ಎಂದರು.

ಈ ವೇಳೆ ಕಾಂಗ್ರೆಸ್ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಏಜಾಜ್ ಪಾಷ, ಜಿಪಂ ಮಾಜಿ ಸದಸ್ಯ ಎಚ್.ಸಿ.ಮಂಜುನಾಥ್, ಪುರಸಭಾ ಮಾಜಿ ಸದಸ್ಯರಾದ ಹೆಚ್.ಸಿ.ನರಸಿಂಹಮೂರ್ತಿ, ರಾಜು ವಿಶ್ವಕರ್ಮ, ಮಧುಕುಮಾರ್, ಅಧಿಕಾರಿಗಳಾದ ಭಾಸ್ಕರ್, ಜಯಪ್ರಕಾಶ್, ಡಾ.ರವಿಕುಮಾರ್, ಪುರಸಭೆ ಮುಖ್ಯಾಧಿಕಾರಿ ಸುರೇಶ್, ಮುಖಂಡರಾದ ಸೌಮ್ಯ, ಪರಶಿವಮೂರ್ತಿ, ಅನ್ಸರ್, ಅನಿಲ್, ಜಿನ್ನಹಳ್ಳಿ ರಾಜನಾಯಕ, ಚಾಮರಾಜು, ಚಂದ್ರು, ಚಿಕ್ಕಣ್ಣ, ಅಶೋಕ್, ಉಮೇಶ್, ವೆಂಕಿ, ಪ್ರಕಾಶ್, ಬಾಲಯ್ಯ, ಅಭಿ, ಮಂಜುಶೆಟ್ಟಿ, ಸಿದ್ದರಾಜು, ಶಿವರಾಜು, ಜಯಪ್ರಕಾಶ್ ಇತರರಿದ್ದರು.

ಧರ್ಮಸ್ಥಳ ಸಂಸ್ಥೆಯಿಂದ ಹಲವು ಜನಪರ ಯೋಜನೆ ಜಾರಿ

ಕಂಪಲಾಪುರ, ಫೆ.24– ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಕೇವಲ ಮಹಿಳಾ ಸ್ವಸಹಾಯ ಸಂಘಗಳಿಗೆ ಮಾತ್ರ ಸೀಮಿತವಾಗಿಲ್ಲ. ಬದಲಿಗೆ ಹಲವು ಜನಪರ ಯೋಜನೆಗಳನ್ನು ಜಾರಿಗೆ ತಂದಿದೆ ಎಂದು ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಉಡುಪಿ ಜಿಲ್ಲೆ ಬಿಸಿ ಟ್ರಸ್ಟ್ ಪ್ರಾದೇಶಿಕ ನಿರ್ದೇಶಕ ಆನಂದ ಸುವರ್ಣ ಅಭಿಪ್ರಾಯಪಟ್ಟರು.

ಇಲ್ಲಿನ ಎಸ್ಎಂಎಸ್ ಕಲ್ಯಾಣ ಮಂಟಪದಲ್ಲಿ ಕಂಪ್ಲಾಪುರ ವಲಯದ ಸಾಮೂಹಿಕ ಸತ್ಯನಾರಾಯಣಸ್ವಾಮಿ ಪೂಜೆ ಹಾಗೂ ಧಾರ್ಮಿಕ ಸಭೆಯಲ್ಲಿ ಮಾತನಾಡಿದ ಅವರು, ಗ್ರಾಮೀಣ ಜನರ ಬದುಕು ದುಸ್ತರವಾಗಿದೆ. ಆ ನಿಟ್ಟಿನಲ್ಲಿ ಡಾ.ಡಿ.ವೀರೇಂದ್ರ ಹೆಗ್ಗಡೆಯವರು ಹಲವು ಜನಪರ ಯೋಜನೆಗಳನ್ನು ಜಾರಿಗೊಳಿಸಿದ್ದಾರೆ. ಅವುಗಳನ್ನು ಸದುಪಯೋಗಪಡಿಸಿಕೊಂಡಾಗ ಮಾತ್ರ ಅದು ಸಾಕಾರಗೊಳ್ಳುತ್ತದೆ. ಈಗಾಗಲೇ 930 ಕೆರೆಗಳನ್ನು ಪುನಶ್ಚೇತನಗೊಳಿಸಲಾಗಿದ್ದು, ಬಡ ಮಕ್ಕಳ ವಿದ್ಯಾಭ್ಯಾಸದ ದೃಷ್ಟಿಯಿಂದ ಸರ್ಕಾರಿ ಶಾಲೆಗಳಿಗೆ ಒಂದು ಸಾವಿರ ಶಿಕ್ಷಕರನ್ನು ನೇಮಕ ಮಾಡಿ ಸಂಬಳವನ್ನು ನೀಡುತ್ತಿದೆ. 780 ಹಿಂದೂ ರುದ್ರಭೂಮಿಗಳನ್ನು ಅಭಿವೃದ್ಧಿಪಡಿಸಲಾಗಿದೆ. ತಾಯಂದಿರ ಪ್ರಬುದ್ಧತೆಗಾಗಿ ಜ್ಞಾನವಿಕಾಸ ಕಾರ್ಯಕ್ರಮ ಆಯೋಜಿಸಲಾಗುತ್ತಿದೆ. ಮದ್ಯಪಾನದಿಂದ ಕೆಲ ಸಂಸಾರಗಳು ಬೀದಿ ಪಾಲಾಗುವುದನ್ನು ತಪ್ಪಿಸಲು ಮದ್ಯವರ್ಜನ ಶಿಬಿರ ಆಯೋಜಿಸಿ ಒಂದೂವರೆ ಲಕ್ಷ ಜನರನ್ನು ಪಾನಮುಕ್ತರನ್ನಾಗಿಸಲಾಗಿದೆ. 17000 ದೇವಸ್ಥಾನಗಳಿಗೆ ಆರ್ಥಿಕ ಸಹಾಯ, 5,500 ಹಾಲಿನ ಡೈರಿಗಳಿಗೆ ಸಹಾಯ, 4700 ಸಮುದಾಯ ಭವನಗಳಿಗೆ ದೊಡ್ಡಮಟ್ಟದಲ್ಲಿ ಸಹಾಯ, ಹೀಗೆ ಹತ್ತಾರು ಜನಪರ ಕಾರ್ಯಗಳನ್ನು ಧರ್ಮಸ್ಥಳ ಸಂಸ್ಥೆ ಮಾಡುತ್ತಿದೆ ಎಂದರು.



ಕಾರ್ಯಕ್ರಮವನ್ನು ಗಣ್ಯರು ಉದ್ಘಾಟಿಸಿದರು.

ಸ್ಫೂರ್ತಿ ಸ್ವಾವಲಂಬಿ ಟ್ರಸ್ಟ್ ಅಧ್ಯಕ್ಷೆ ಆಶಾ ಮಹದೇವರಾವ್, ಕೊಡಗು ಜಿಲ್ಲೆ ಬಿಸಿ ಟ್ರಸ್ಟ್ ನಿರ್ದೇಶಕಿ ಲೀಲಾವತಿ, ಜನಜಾಗೃತಿ ವೇದಿಕೆ ಅಧ್ಯಕ್ಷ ಎ.ಟಿ.ರಂಗಸ್ವಾಮಿ ಮಾತನಾಡಿದರು. ಡಾ.ಮಹೇಂದ್ರ ಸ್ವಾಮಿ ಗುರೂಜಿ ನೇತೃತ್ವದಲ್ಲಿ ಧಾರ್ಮಿಕ ಪ್ರವಚನ, ಸತ್ಯನಾರಾಯಣ ಸ್ವಾಮಿ ಪೂಜೆ ವಿಧಿ ವಿಧಾನ ನೆರವೇರಿತು.

ಪಿರಿಯಾಪಟ್ಟಣ ಪುರಸಭೆ ಮಾಜಿ ಸದಸ್ಯೆ ಮಂಜುಳಾ, ಷಣ್ಮುಖರಾವ್, ರಾಜೇಂದ್ರಪ್ಪ, ಅರಕಲಗೂಡು ತಾಲೂಕು ಆಸ್ಪತ್ರೆ ಹಿರಿಯ ಶುಶ್ರೂಷಕಿ ಪೂರ್ಣಿಮಾ, ನಿವೃತ್ತ ಮುಖ್ಯ ಶಿಕ್ಷಕ ಎಂ.ನಾಗಪ್ಪ, ಪೂಜಾ ಸಮಿತಿ ಅಧ್ಯಕ್ಷೆ ರಾಣಿ, ಉಪಾಧ್ಯಕ್ಷ ಸದಾಶಿವ, ನಾಗರಾಜು, ಡೈರಿ ಮಾಜಿ ನಿರ್ದೇಶಕ ಸಿ.ಎಲ್.ರಾಜೇಗೌಡ, ತಾಲೂಕು ಯೋಜನಾಧಿಕಾರಿ ರವಿ, ಮೇಲ್ವಿಚಾರಕಿ ರವಿಕಲಾ ಶೆಟ್ಟಿ, ಸಹಕಾರ ಸಂಘದ ನಿರ್ದೇಶಕ ಲಕ್ಷ್ಮಣ್, ಮಾಜಿ ನಿರ್ದೇಶಕ ಲೋಕೇಶ್, ಗೋಪಾಲ್, ಕುಮಾರ್, ಸೇರಿದಂತೆ ಸೇವಾ ಪ್ರತಿನಿಧಿಗಳು ಇತರರಿದ್ದರು.

ಕಬಡ್ಡಿ ಪಂದ್ಯಾವಳಿ ಪೋಸ್ಟರ್ ಬಿಡುಗಡೆ



ತಿ.ನರಸೀಪುರ ತಾಲೂಕಿನ ಗೊರವನಹಳ್ಳಿಯಲ್ಲಿ ಮಾ.1ರಂದು ನಡೆಯುವ ರಾಜ್ಯಮಟ್ಟದ ಕಬಡ್ಡಿ ಪಂದ್ಯಾವಳಿಯ ಪೋಸ್ಟರ್ ಅನ್ನು ಸಂಸದ ಸುನೀಲ್ ಬೋಸ್ ಬಿಡುಗಡೆಗೊಳಿಸಿದರು. ಈ ವೇಳೆ ಮೈಮುಲ್ ಮಾಜಿ ಅಧ್ಯಕ್ಷ ಆರ್.ಚೆಲುವರಾಜು, ತುರಗನೂರು ಗ್ರಾಪಂ ಮಾಜಿ ಅಧ್ಯಕ್ಷ ದೇವರಾಜು, ಅಶೋಕ್, ಗುತ್ತಿಗೆದಾರ ಕೆ.ಎಂ.ಮಧುಕುಮಾರ್, ಗ್ರಾಪಂ ಮಾಜಿ ಅಧ್ಯಕ್ಷ ಸುನೀಲ್, ಮಹೇಶ್ ಇತರರಿದ್ದರು

ಫಲಾನುಭವಿಗಳಿಗೆ ಹೊಲಿಗೆ ಯಂತ್ರ ವಿತರಣೆ

ನಂಜನಗೂಡು, ಫೆ.24– ಮಹಿಳೆಯರನ್ನು ಆರ್ಥಿಕವಾಗಿ ಸಬಲೀಕರಣಗೊಳಿಸುವ ಸಲುವಾಗಿ ಕಾಂಗ್ರೆಸ್ ಸರ್ಕಾರ ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಗೆ ಹೆಚ್ಚಿನ ಅನುದಾನ ನೀಡಿದ್ದು, ಹೊಲಿಗೆ ಯಂತ್ರಗಳನ್ನು ವಿತರಿಸಲಾಗುತ್ತಿದೆ. ಫಲಾನುಭವಿಗಳು ಇದರ ಸದುಪಯೋಗಪಡಿಸಿಕೊಳ್ಳಬೇಕು ಎಂದು ಶಾಸಕ ದರ್ಶನ್ ಧ್ರುವನಾರಾಯಣ್ ತಿಳಿಸಿದರು.

ನಗರದ ಎಪಿಎಂಸಿ ಸಭಾಂಗಣದಲ್ಲಿ ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಿಂದ ಫಲಾನುಭವಿಗಳಿಗೆ ಹೊಲಿಗೆ ಯಂತ್ರಗಳನ್ನು ವಿತರಿಸಿ ಅವರು ಮಾತನಾಡಿದರು.


ಈ ಹಿಂದೆ ಪ್ರತಿ ಮನೆಯಲ್ಲೂ ಕೂಡ ಹೊಲಿಗೆ ಯಂತ್ರಗಳು ಇದ್ದವು. ಇದರಿಂದ ಕುಟುಂಬದ ಆರ್ಥಿಕ ನಿರ್ವಹಣೆಗೆ ಸಹಕಾರಿಯಾಗುತ್ತಿತ್ತು. ಮುಖ್ಯಮಂತ್ರಿ ಸಿದ್ದರಾಮಯ್ಯನವರು ಬಡತನದ ಹಿನ್ನೆಲೆಯಿಂದ ಬಂದವರಾದ ಕಾರಣ ಬಡ ವರ್ಗದ ಜನರಿಗೆ ಆರ್ಥಿಕ ಶಕ್ತಿ ತುಂಬುವ ಸಲುವಾಗಿ ಅನೇಕ ಜನಪರ ಯೋಜನೆಗಳನ್ನು ಜಾರಿಗೊಳಿಸಿದ್ದಾರೆ ಎಂದರು.

ತಾಲೂಕಿನಲ್ಲಿ 22 ಮಂದಿಗೆ ಹೊಲಿಗೆ ಯಂತ್ರ ವಿತರಿಸುವ ಅವಕಾಶವಿದೆ. ಆದರೆ 17 ಮಂದಿ ಅರ್ಜಿ ಸಲ್ಲಿಸಿದ್ದಾರೆ. ಅರ್ಜಿ ಸಲ್ಲಿಸಿದ ಎಲ್ಲರಿಗೂ 2.75 ಲಕ್ಷ ರೂ. ವೆಚ್ಚದಲ್ಲಿ ಹೊಲಿಗೆ ಯಂತ್ರ ವಿತರಿಸಲಾಗುತ್ತಿದೆ ಎಂದರು.



ಈ ವೇಳೆ ಮಾಜಿ ಶಾಸಕ ಕೇಶವಮೂರ್ತಿ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಸಿ.ಎಂ.ಶಂಕರ್, ನಗರಸಭಾ ಮಾಜಿ ಅಧ್ಯಕ್ಷ ಶ್ರೀಕಂಠಸ್ವಾಮಿ, ಮಾಜಿ ಸದಸ್ಯ ಗಾಯತ್ರಿ, ಮುಖಂಡರಾದ ಶ್ರೀಧರ್, ಎಂ.ಮಾದಪ್ಪ, ರವಿಪ್ರಕಾಶ್, ಹುಣಸನಾಳು ಸಿದ್ದರಾಜು, ಸತೀಶ್‌ಗೌಡ, ಚಂದನ್ ಗೌಡ ಸೇರಿದಂತೆ ಇತರರಿದ್ದರು.

ಸಹಾಯಧನ ವಿತರಣೆ



ಕರುನಾಡು ಟೈಲರ್ ನೆರವು ನಿಧಿ ರಾಜ್ಯ ಸಮಿತಿಯಿಂದ ಇತ್ತೀಚೆಗೆ ಬೈಕ್ ಅಪಘಾತದಲ್ಲಿ ಸಾವನ್ನಪ್ಪಿದ ಹೆಚ್.ಡಿ.ಕೋಟೆ ತಾಲೂಕಿನ ಹೊಸ ಹೊಳಲು ಗ್ರಾಮದ ಟೈಲರ್ ರಾಜೇಶ್ ಅವರ ಕುಟುಂಬಕ್ಕೆ 50,500 ರೂ.ಗಳ ಸಹಾಯಧನ ವಿತರಿಸಲಾಯಿತು. ಈ ವೇಳೆ ಸಮಿತಿ ರಾಜ್ಯಾಧ್ಯಕ್ಷ ಚೆನ್ನಪ್ಪ ನಾಯಕ, ಕೋಟೆ, ಸರಗೂರು ತಾಲೂಕು ಸಮಿತಿ ಅಧ್ಯಕ್ಷರಾದ ರಂಗಸ್ವಾಮಿ, ಪ್ರಕಾಶ್, ಪದಾಧಿಕಾರಿಗಳಾದ ಪ್ರಸನ್ನಕುಮಾರ್, ಕಮಲ, ಪಲ್ಲವಿ, ಸುರೇಶ್, ಬಾಬು, ರಾಜು, ನರಸಿಂಹಾಚಾರ್, ಜಗದೀಶ್, ನಟರಾಜ್, ದೇಶಲಿಂಗಯ್ಯ, ಶಶಿಕುಮಾರ, ಶ್ರೀನಿವಾಸ್, ನೀಲಕಂಠಯ್ಯ ಮಂಚ, ಸದಾಶಿವಮೂರ್ತಿ, ಪುಟ್ಟಮಾದು, ಲಲಿತ, ರತ್ನಮ್ಮ, ಲೋಕೇಶ್, ನಾಗರಾಜು, ಜವರನಾಯಕ ಇತರರಿದ್ದರು

ಮನರೇಗಾ ಮರು ಜಾರಿಗೆ ಆಗ್ರಹಿಸಿ ಬೃಹತ್ ಪಾದಯಾತ್ರೆ

ನಂಜನಗೂಡು, ಫೆ.24– ಮಹಾತ್ಮ ಗಾಂಧಿ ಉದ್ಯೋಗ ಖಾತ್ರಿ ಯೋಜನೆಯನ್ನು ಯಥಾವತ್ತಾಗಿ ಮರು ಜಾರಿಗೊಳಿಸುವಂತೆ ಆಗ್ರಹಿಸಿ ಕಾಂಗ್ರೆಸ್ ಪಕ್ಷದಿಂದ ಬೃಹತ್ ಪಾದಯಾತ್ರೆ ನಡೆಸಲಾಯಿತು.

ನಗರದ ನಗರಸಭಾ ಕಚೇರಿ ಎದುರು ಜಮಾಯಿಸಿದ ಸಾವಿರಾರು ಕಾಂಗ್ರೆಸ್ ಕಾರ್ಯಕರ್ತರು ಮಹಾತ್ಮ ಗಾಂಧಿ ಭಾವಚಿತ್ರಕ್ಕೆ ಮಾಲಾರ್ಪಣೆ ಮಾಡಿ, ಬಳಿಕ ಎಂಜಿಎಸ್ ರಸ್ತೆ ಮೂಲಕ ಪ್ರತಿಭಟನಾ ಮೆರವಣಿಗೆಯಲ್ಲಿ ಸಾಗಿ ಹುಲ್ಲಹಳ್ಳಿ ವೃತ್ತದಲ್ಲಿ ರಸ್ತೆ ತಡೆ ನಡೆಸಿ ಬೀದಿ ನಾಟಕ ಆಡುವ ಮೂಲಕ ಕೇಂದ್ರ ಸರ್ಕಾರದ ವಿಬಿ ಜಿ ರಾಮ್ ಜಿ ಕಾಯ್ದೆ ವಿರೋಧಿಸಿ ಆಕ್ರೋಶ ವ್ಯಕ್ತಪಡಿಸಿದರು.

ನಂತರ ತಾಲೂಕು ಕಚೇರಿವರೆಗೆ ಪಾದಯಾತ್ರೆ ನಡೆಸಿ ತಾಲೂಕು ಕಚೇರಿ ಮುಂಭಾಗ ಕೇಂದ್ರ ಸರ್ಕಾರದ ವಿರುದ್ಧ ಘೋಷಣೆ ಕೂಗಿ ಬೃಹತ್ ಧರಣಿ ನಡೆಸಿದರು.

ಶಾಸಕ ದರ್ಶನ್ ಧ್ರುವನಾರಾಯಣ್ ಮಾತನಾಡಿ, ಡಾ.ಮನಮೋಹನ್ ಸಿಂಗ್ ಪ್ರಧಾನಿಯಾಗಿದ್ದಾಗ ನರೇಗಾ ಯೋಜನೆ ಜಾರಿಗೊಳಿಸಿ ಗ್ರಾಮೀಣ ಜನರಿಗೆ ವರ್ಷಕ್ಕೆ 100 ದಿನಗಳ ಕಾಲ ಉದ್ಯೋಗ ಖಾತ್ರಿ ನೀಡುವ ಮೂಲಕ ಅವರ ಬದುಕಿಗೆ ಆಸರೆಯಾಗಿದ್ದರು. ಪ್ರಮುಖವಾಗಿ ನರೇಗಾ ಯೋಜನೆಯಲ್ಲಿ ಎಸ್ಸಿ, ಎಸ್ಟಿಗಳು, ಕೂಲಿ ಕಾರ್ಮಿಕರು, ಆರ್ಥಿಕವಾಗಿ ಹಿಂದುಳಿದವರು ಮತ್ತು ಮಹಿಳೆಯರೇ ಹೆಚ್ಚಾಗಿ ಕೆಲಸ ಮಾಡುತ್ತಿದ್ದರು. ಆದರೆ ಮೋದಿ ನೇತೃತ್ವದ ಕೇಂದ್ರ ಸರ್ಕಾರ ಯಾವುದೇ ರಾಜ್ಯಗಳ ಅಭಿಪ್ರಾಯ ಪಡೆಯದೆ ಏಕಾಏಕಿ ನರೇಗಾ ಯೋಜನೆ ಬದಲಾಯಿಸಿ ಗ್ರಾಮೀಣ ಜನರಿಗೆ ಉದ್ಯೋಗ ಹಾಗೂ ಸಾಮಾಜಿಕ ಭದ್ರತೆಯ ಹಕ್ಕುಗಳಿಗೆ ಆಸರೆಯಾಗಿದ್ದ ನರೇಗಾ ಯೋಜನೆಯನ್ನು ಕೇಂದ್ರ ಸರ್ಕಾರ ವಿಬಿ ಜಿ ರಾಮ್ ಜಿ ಎಂದು ಬದಲಾಯಿಸಿ ಗ್ರಾಮೀಣ ಜನರ ದುಡಿಯುವ ಅವಕಾಶ ಕಿತ್ತುಕೊಂಡಿದೆ ಎಂದರು.




ನರೇಗಾ ಯೋಜನೆ ಮರು ಜಾರಿಗೆ ಆಗ್ರಹಿಸಿ ಪಾದಯಾತ್ರೆ ನಡೆಸಿ ಪ್ರತಿಭಟಿಸಲಾಯಿತು.

ನರೇಗಾ ಮತ್ತು ವಿಬಿ ಜಿ ರಾಮ್ ಜಿ 2 ಕಾಯ್ದೆಗಳ ನಡುವೆ ಸಂಪೂರ್ಣ ವ್ಯತ್ಯಾಸಗಳಿವೆ. ನರೇಗಾ ಯೋಜನೆಯಡಿ ಗ್ರಾಪಂಗಳ ನಿರ್ಣಯದಂತೆ ಕಾಮಗಾರಿ ನಡೆಸಿ ಗ್ರಾಮಗಳಿಗೆ ಮೂಲ ಸೌಲಭ್ಯ ಕಲ್ಪಿಸುತ್ತಿದ್ದ ಯೋಜನೆಗೆ ಎಳ್ಳು ನೀರು ಬಿಡುವ ಮೂಲಕ ಬಡವರ ದುಡಿಯುವ ಹಕ್ಕನ್ನು ಕಸಿದುಕೊಂಡಿದೆ. ಹೊಸ ಯೋಜನೆಯಿಂದ ಕೇಂದ್ರ ಸರ್ಕಾರದ ಅಧೀನದಲ್ಲಿರುವ ಸಮಿತಿ ಸೂಚಿಸುವ ನಿರ್ದಿಷ್ಟ ಕಾಮಗಾರಿಗಳನ್ನು ಮಾತ್ರ ಮಾಡಬೇಕಾಗಿರುವುದರಿಂದ ಗ್ರಾಮಗಳ ಅಭಿವೃದ್ಧಿಗೆ ಹಿನ್ನಡೆಯಾಗಲಿದೆ. ಹೀಗಾಗಿ ಕೂಲಿ ಕಾರ್ಮಿಕರ, ಗ್ರಾಮೀಣ ಕೃಷಿ ಕಾರ್ಮಿಕರ ವಿರುದ್ಧವಾಗಿ ಬಂಡವಾಳ ಶಾಹಿ ಶ್ರೀಮಂತರ ಪರ ವಾಗಿರುವ ಕೇಂದ್ರ ಸರ್ಕಾರದ ವಿರುದ್ಧ ಹಾಗೂ ನರೇಗಾ ಯೋಜನೆಯನ್ನು ಮರು ಜಾರಿ ಮಾಡುವಂತೆ ಒತ್ತಾಯಿಸಿ ರಾಜ್ಯಾದ್ಯಂತ ಹೋರಾಟ ನಡೆಸಲಾಗುತ್ತಿದೆ. ಕೇಂದ್ರ ಸರ್ಕಾರ ಗ್ರಾಮ ಸ್ವರಾಜ್ಯ ಕಲ್ಪನೆಯ ನರೇಗಾ ಯೋಜನೆಯನ್ನು ಯಾವ ಬದಲಾವಣೆಗಳನ್ನು ಮಾಡದೆ ಮತ್ತೆ ಜಾರಿಗೆ ತರಬೇಕು ಎಂದು ಆಗ್ರಹಿಸಿದರು.

ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಬಿ.ಜೆ.ವಿಜಯ್ ಕುಮಾರ್ ಮಾತನಾಡಿದರು. ಪ್ರತಿಭಟನೆಯಲ್ಲಿ ಮಾಜಿ ಶಾಸಕ ಕೇಶವಮೂರ್ತಿ, ತಾಲೂಕು ಕಾಂಗ್ರೆಸ್ ಅಧ್ಯಕ್ಷ ಮಹೇಶ್, ನಗರ ಕಾಂಗ್ರೆಸ್ ಅಧ್ಯಕ್ಷ ಸಿ.ಎಂ.ಶಂಕರ್, ಹುಲ್ಲಹಳ್ಳಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಶ್ರೀಕಂಠ ನಾಯಕ, ನಗರಸಭಾ ಮಾಜಿ ಅಧ್ಯಕ್ಷ ಶ್ರೀಕಂಠಸ್ವಾಮಿ, ತಾಲೂಕು ಗ್ಯಾರಂಟಿ ಅನುಷ್ಠಾನ ಸಮಿತಿ ಅಧ್ಯಕ್ಷ ಕೆ.ಮಾರುತಿ, ವಿಧಾನಸಭಾ ಉಸ್ತುವಾರಿ ಸೋಮೇಶ್, ರಾಜ್ಯ ಕೆಪಿಸಿಸಿ ಅಲ್ಪಸಂಖ್ಯಾತ ವಿಭಾಗದ ಪ್ರಧಾನ ಕಾರ್ಯದರ್ಶಿ ಅನ್ಸರ್ ಅಹಮದ್, ಮೈಸೂರು ಜಿಲ್ಲಾ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಪ್ರದೀಪ್ ಕುಮಾರ್, ಮುಖಂಡರಾದ ಇಂಧನ್ ಬಾಬು, ಬುಲೆಟ್ ಮಹದೇವಪ್ಪ, ದೊರೆಸ್ವಾಮಿ ನಾಯಕ, ನಾಗರಾಜು, ರಾಜೇಶ್, ಎನ್.ಟಿ.ಗಿರೀಶ್, ಪ್ರಸನ್ನ ಕುಮಾರ್, ಅಶೋಕ, ಎನ್.ಎಂ.ಮಂಜುನಾಥ್, ಶ್ರೀನಿವಾಸಮೂರ್ತಿ, ರವಿ ಪ್ರಕಾಶ್, ಮುರುಗೇಶ್, ಕೆ.ಎಂ.ಬಸವರಾಜು, ಅಬ್ದುಲ್ ಖಾದರ್, ಕೆಪಿಸಿಸಿ ಸದಸ್ಯ ಅಕ್ಬರ್ ಅಲೀಂ, ಯುವ ಕಾಂಗ್ರೆಸ್ ಅಧ್ಯಕ್ಷ ವಿಜಯ್ ಕುಮಾರ್, ತಾಲೂಕು ರೈತ ಸಂಘದ ಅಧ್ಯಕ್ಷ ಸತೀಶ್ ರಾವ್, ಹಾಡ್ಯ ಗ್ರಾಪಂ ಅಧ್ಯಕ್ಷ ಹರೀಶ್ ಸೇರಿದಂತೆ ಇತರರಿದ್ದರು.

ಇಂದು ಹುಣಸೂರಲ್ಲಿ ಜನರೊಂದಿಗೆ ಜನತಾದಳ



ಹುಣಸೂರು, ಫೆ.24– ಮುಂಬರುವ ಸ್ಥಳೀಯ ಸಂಸ್ಥೆ ಚುನಾವಣೆ ಎದುರಿಸುವ ಜೊತೆಗೆ ತಳಮಟ್ಟದಿಂದ ಪಕ್ಷ ಸಂಘಟಿಸಲು ಜೆಡಿಎಸ್ ಯುವ ಘಟಕದ ರಾಜ್ಯಾಧ್ಯಕ್ಷ ನಿಖಿಲ್ ಕುಮಾರಸ್ವಾಮಿ ರಾಜ್ಯಾದ್ಯಂತ ಜನರೊಂದಿಗೆ ಜನತಾದಳ ಕಾರ್ಯಕ್ರಮ ಹಮ್ಮಿಕೊಂಡಿದ್ದು, ಅದರಂತೆ ಫೆ.25ರಂದು ನಗರದಲ್ಲಿ ನಡೆಯುವ ಕಾರ್ಯಕ್ರಮಕ್ಕೆ ಸಕಲ ಸಿದ್ಧತೆ ಕೈಗೊಳ್ಳಲಾಗಿದೆ ಎಂದು ಜೆಡಿಎಸ್ ನಗರಾಧ್ಯಕ್ಷ ಹೆಚ್.ಎಂ.ಫಜಲುಲ್ಲಾ ತಿಳಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಾರ್ಯಕ್ರಮದಲ್ಲಿ ಸುಮಾರು 25 ಸಾವಿರಕ್ಕೂ ಹೆಚ್ಚು ಮಂದಿ ಸೇರುವ ನಿರೀಕ್ಷೆ ಇದೆ. ಬೆಳಗ್ಗೆ 10 ಗಂಟೆಗೆ ಬಿಳಿಕೆರೆ ವೃತ್ತದ ಹೊಸಲು ಮಾರಮ್ಮ ದೇವಸ್ಥಾನದಲ್ಲಿ ಪೂಜೆ ಸಲ್ಲಿಸುವ ಸಾವಿರಕ್ಕೂ ಹೆಚ್ಚು ಕಾರ್ಯಕರ್ತರು ಬೈಕ್ ರ್‍ಯಾಲಿ ಮೂಲಕ ಆಗಮಿಸಿ ನಗರದ ಮಾಜಿ ಸಿಎಂ ಡಿ.ದೇವರಾಜ ಅರಸು ಪ್ರತಿಮೆಗೆ ಮಾಲಾರ್ಪಣೆ ಮಾಡಲಿದ್ದಾರೆ. ಬಳಿಕ ಸಾವಿರಕ್ಕೂ ಹೆಚ್ಚು ಮಹಿಳೆಯರು ಪೂರ್ಣ ಕುಂಭ ಕಳಸದೊಂದಿಗೆ, ಡೊಳ್ಳು ಕುಣಿತ, ಕಂಸಾಳೆ, ಗೊರವರ ಕುಣಿತ, ನಗಾರಿ, ಬ್ಯಾಂಡ್ ಸೆಟ್, ವೀರಗಾಸೆ, ವೀರಭದ್ರನ ಕುಣಿತ ಸೇರಿದಂತೆ 20ಕ್ಕೂ ಹೆಚ್ಚು ಜಾನಪದ ಕಲಾತಂಡಗಳೊಂದಿಗೆ ತೆರೆದ ವಾಹನದಲ್ಲಿ ಜೆಡಿಎಸ್ ಯುವ ಘಟಕದ ರಾಜ್ಯಾಧ್ಯಕ್ಷ ನಿಖಿಲ್ ಕುಮಾರಸ್ವಾಮಿ, ಮಾಜಿ ಸಚಿವ ಸಾ.ರಾ.ಮಹೇಶ್, ಶಾಸಕ ಜಿ.ಡಿ.ಹರೀಶ್‌ಗೌಡ, ಜೆಡಿಎಸ್ ಜಿಲ್ಲಾಧ್ಯಕ್ಷ ಅಶ್ವಿನ್ ಕುಮಾರ್, ಮುಖಂಡ ಕೃಷ್ಣನಾಯಕ ಸೇರಿದಂತೆ ಮತ್ತಿತರರನ್ನು ಮೆರವಣಿಗೆಯಲ್ಲಿ ನಗರದ ಮುನೇಶ್ವರ ಕಾವಲ್ ಮೈದಾನಕ್ಕೆ ಕರೆದೊಯ್ಯಲಾಗುವುದು. ನಂತರ ವೇದಿಕೆ ಕಾರ್ಯಕ್ರಮ ನಡೆಯಲಿದೆ ಎಂದರು.

ಇದಕ್ಕಾಗಿ ಎಲ್ಲಾ ಸಿದ್ಧತೆಗಳನ್ನು ಕೈಗೊಳ್ಳಲಾಗಿದ್ದು, ಹೆಚ್ಚಿನ ಸಂಖ್ಯೆಯಲ್ಲಿ ಕಾಂಗ್ರೆಸ್ ಕಾರ್ಯಕರ್ತರು, ಮುಖಂಡರು ಹಾಗೂ ಸಾರ್ವಜನಿಕರು ಹೆಚ್ಚಿನ ಆಗಮಿಸಿ ಕಾರ್ಯಕ್ರಮ ಯಶಸ್ವಿಗೊಳಿಸಬೇಕು ಎಂದರು.

ಸುದ್ದಿಗೋಷ್ಠಿಯಲ್ಲಿ ಟಿಎಪಿಸಿಎಂಎಸ್ ಮಾಜಿ ಅಧ್ಯಕ್ಷ ಬಸವಲಿಂಗಯ್ಯ, ಉದ್ಯಮಿ ಹರವೇ ಶ್ರೀಧರ್, ಕೆಂಪೇಗೌಡ ಇತರರಿದ್ದರು.

ಶುದ್ಧ ಸಸ್ಯಹಾರಿಗಳಿಗೆ ಮಾತ್ರವೇ ಮನೆ ಬಾಡಿಗೆಗೆ; ಇದೊಂದು ರೀತಿ ಅಸ್ಪೃಶ್ಯತೆಯ ಘೋರ ಆಚರಣೆ

ನಿವೃತ್ತ ಪ್ರಾಧ್ಯಾಪಕ ಪ್ರೊ.ರಾಜಪ್ಪ ದಳವಾಯಿ ಬೇಸರ

- ಬ್ರಾಹ್ಮಣರ ಮಾತು ಕೇಳುವವರು ಇನ್ನೂ ಇದ್ದಾರೆ
- ಒಂದೇ ವರ್ಗದ 70 ಶಾಸಕರಿದ್ದಾರೆ
- ಸುಳ್ಳು ಜಾತಿ ಪ್ರಮಾಣ ಪತ್ರ ಪಡೆದಿರುವವರು ಬಹಳಷ್ಟಿದ್ದಾರೆ
- ಮತ ಮಾರಿಕೊಂಡರೆ ಅದೇ ನಮಗೆ ಕಂಟಕವಾಗುತ್ತದೆ



ಮೈಸೂರಿನ ಜೆಎಲ್‌ಬಿ ರಸ್ತೆಯ ಇನ್ಸ್ಟಿಟ್ಯೂಟ್ ಆಫ್ ಇಂಜಿನಿಯರ್ಸ್ ಸಭಾಂಗಣದಲ್ಲಿ ಮಂಗಳವಾರ ಜನ ಸ್ಪಂದನಾ ಟ್ರಸ್ಟ್ ಆಯೋಜಿಸಿದ್ದ 'ಪ್ರಸ್ತುತ ರಾಜಕಾರಣ ಪ್ರಜಾಪ್ರಭುತ್ವದ ವ್ಯವಸ್ಥೆಗೆ ಎಷ್ಟು ಮಾರಕ, ಎಷ್ಟು ಪೂರಕ' ವಿಚಾರ ಮಂಡನೆ ಕಾರ್ಯಕ್ರಮವನ್ನು ವಿಶ್ರಾಂತ ಪ್ರಾಧ್ಯಾಪಕ ಪ್ರೊ.ರಾಜಪ್ಪ ದಳವಾಯಿ ಉದ್ಘಾಟಿಸಿದರು.

ಮೈಸೂರು, ಫೆ.24(ಬಿಎಲ್‌ಯು)– ಶುದ್ಧ ಸಸ್ಯಹಾರಿಗಳಿಗೆ ಮಾತ್ರ ಮನೆ ಬಾಡಿಗೆಗೆ ನೀಡುತ್ತೇವೆ ಎಂಬುದು ಅಸ್ಪೃಶ್ಯತೆಯ ಮತ್ತೊಂದು ಘೋರ ಆಚರಣೆ ಎಂದು ಬೆಂಗಳೂರು ವಿಶ್ವವಿದ್ಯಾನಿಲಯದ ವಿಶ್ರಾಂತ ಪ್ರಾಧ್ಯಾಪಕ ಡಾ.ರಾಜಪ್ಪ ದಳವಾಯಿ ಬೇಸರ ವ್ಯಕ್ತಪಡಿಸಿದರು.

ಮೈಸೂರಿನ ಜೆಎಲ್ ಬಿ ರಸ್ತೆಯ ಇನ್ಸ್ಟಿಟ್ಯೂಟ್ ಆಫ್ ಇಂಜಿನಿಯರ್ಸ್ ಸಭಾಂಗಣದಲ್ಲಿ ಇಂದು ಜನ ಸ್ಪಂದನ ಟ್ರಸ್ಟ್ ಆಯೋಜಿಸಿದ್ದ "ಪ್ರಸ್ತುತ ರಾಜಕಾರಣ ಪ್ರಜಾಪ್ರಭುತ್ವದ ವ್ಯವಸ್ಥೆಗೆ ಎಷ್ಟು ಮಾರಕ, ಎಷ್ಟು ಪೂರಕ" ವಿಚಾರ ಮಂಡನೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಇಂತಹ ಅಸ್ಪೃಶ್ಯತೆ ಆಚರಣೆಯಿಂದ ಮಾಂಸಹಾರಿಗಳಿಗೆ ಬಾಡಿಗೆಮನೆ ಸಿಗದ ಪರಿಸ್ಥಿತಿ ನಿರ್ಮಾಣವಾಗಿದೆ ಎಂದು ಹೇಳಿದರು.

ಸ್ವಾತಂತ್ರ್ಯ ಬಂದು ಇಷ್ಟು ವರ್ಷವಾದರೂ ಇನ್ನೂ ಜಾತೀಯತೆ, ಅಸ್ಪೃಶ್ಯತೆ ತಾಂಡವಾಡುತ್ತಿದ್ದು, ಶೋಷಿತರನ್ನು ಅಮಾನವೀಯವಾಗಿ ನೋಡಲಾಗುತ್ತಿದೆ. ಬ್ರಾಹ್ಮಣರ ಮಾತನ್ನು ಕೇಳುವವರು ಇನ್ನೂ ಇದ್ದಾರೆ ಎಂದರು.

ಈ ಹಿನ್ನೆಲೆಯಲ್ಲೆ ಪ್ರಜಾಪ್ರಭುತ್ವದಲ್ಲಿ ಸಂವಿಧಾನ ಸಮಾನತೆಯನ್ನು ಹಂಚಿಕೆ ಮಾಡಿದೆ. ಈ ಮೂಲಕ ಹಲವು ಹಕ್ಕುಗಳನ್ನು ನೀಡಿ ಅಲಕ್ಷಿತರ ನೆರವಿಗೆ ಧಾವಿಸಿದೆ ಎಂದು ಪ್ರೊ.ರಾಜಪ್ಪ ದಳವಾಯಿ ಅಭಿಪ್ರಾಯಪಟ್ಟರು.

ಸುಳ್ಳು ಜಾತಿ ಪ್ರಮಾಣಪತ್ರ ಪಡೆದಿರುವ ಅದೆಷ್ಟೊ ಜನರು ಅಲಕ್ಷಿತರಿಗೆ ಕಂಟಕರಾಗಿದ್ದಾರೆ. ಈ ಹಿನ್ನೆಲೆಯಲ್ಲಿ ಜಾತಿ ಆಧಾರಿತ ಸಮೀಕ್ಷೆ ಅತ್ಯಗತ್ಯವಾಗಿದೆ ಎಂದು ಅಭಿಪ್ರಾಯಪಟ್ಟರು.

ಒಂದೇ ವರ್ಗದ 70 ಶಾಸಕರು: ಒಂದೇ ವರ್ಗದ 70 ಶಾಸಕರು ಆಯ್ಕೆಗೊಂಡಿದ್ದಾರೆ. ಪ್ರಜಾಪ್ರಭುತ್ವದಲ್ಲಿ ಇನ್ನೂ ಮೇಲ್ಜಾತಿಯ ಆಟ ನಡೆಯುತ್ತಿದೆ. ಇದರಿಂದ ಜಾತಿ ಆಧಾರಿತ ರಾಜಕಾರಣ ಗಟ್ಟಿಯಾಗಿದೆ. ಇದರ ಪರಿಣಾಮವನ್ನು ಅರಿತು ಸೂಕ್ತ ಜನಪ್ರತಿನಿಧಿಗಳನ್ನು ಆಯ್ಕೆ ಮಾಡಬೇಕು ಎಂದು ಸಲಹೆ ನೀಡಿದರು.

ಎಂದಿಗೂ ನಮ್ಮ ಮತಗಳನ್ನು ಮಾರಿಕೊಳ್ಳಬಾರದು. ಹೀಗೆ ಮಾರಿಕೊಂಡ ಮತದಾನ ವ್ಯವಸ್ಥೆ ನಮ್ಮ ಬದುಕಿಗೆ ವಿರೋಧಿಯಾಗಿ ನಿಲ್ಲುತ್ತದೆ ಇದರಿಂದ ನಾವೇ ಸಂಕಷ್ಟಗಳನ್ನು ಎದುರಿಸಬೇಕಾಗುತ್ತದೆ ಎಂದು ಪ್ರೊ.ರಾಜಪ್ಪ ದಳವಾಯಿ ಎಚ್ಚರಿಸಿದರು.

ಹಸಿವು ಮುಕ್ತವಾಗಿರುವ, ಹಸಿವು ಸೂಚ್ಯಂಕ ಕಡಿಮೆ ಇರುವ ಹಾಗೂ ವಿದ್ಯೆ ಪ್ರಮಾಣ ಹೆಚ್ಚಿರುವುದು ಆ ದೇಶದ ಅಭಿವೃದ್ಧಿಯನ್ನು ನಿರ್ಧರಿಸುತ್ತದೆ. ವಿಶ್ವದ 127 ದೇಶಗಳ ಹಸಿವು ಸೂಚ್ಯಂಕದಲ್ಲಿ ಭಾರತ 111 ಸ್ಥಾನದಲ್ಲಿದೆ. ಆದರೆ ಕರ್ನಾಟಕದಲ್ಲಿ ಆಹಾರ ಭದ್ರತೆ ಇದೆ. ಈ ಮೂಲಕ ಕರ್ನಾಟಕದ ಆಹಾರ ವಿತರಣೆಯನ್ನು ವಿಶ್ವದ ಹಲವು ದೇಶಗಳು ಪ್ರಶಂಸಿಸಿವೆ ಎಂದು ಹೇಳಿದರು.

ಪ್ರತಿ ವಿಧಾನಸಭಾ ಕ್ಷೇತ್ರದಲ್ಲಿ ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ಅವರಂತೆ ಇಂತಹ ವಿಚಾರ ಸಂಕಿರಣಗಳನ್ನು ಆಯೋಜಿಸಬೇಕು. ಈ ಮೂಲಕ ಜ್ಞಾನದ ಬೆಳಕನ್ನು ಪಸರಿಸಬೇಕು ಎಂದು ಪ್ರೊ.ರಾಜಪ್ಪ ದಳವಾಯಿ ಸಲಹೆ ನೀಡಿದರು.

ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಾಧ್ಯಾಪಕಿ ಡಾ.ತ್ರಿವೇಣಿ, ಯುವರಾಜ ಕಾಲೇಜಿನ ಪ್ರಾಧ್ಯಾಪಕ ಡಾ.ಸಿ.ಡಿ. ಪರುಶುರಾಮ್, ಮಹೇಶ್, ವಸಂತ್ ಕುಮಾರ್, ಚಂದ್ರಶೇಖರ್ ಅವರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ಸರ್ವರನ್ನು ಸಮಾನರಾಗಿ ಕಾಣುವ ಪಕ್ಷ ಅಧಿಕಾರಕ್ಕೆ ಬರಬೇಕು

ಇದೇ ವೇಳೆ ಮಾತನಾಡಿದ ಮಾಜಿ ಶಾಸಕ ಎಂ.ಕೆ.ಸೋಮಶೇಖರ್, ರಾಜಕಾರಣದಲ್ಲಿ ಜಾತಿ, ಧರ್ಮ ಆಧಾರಿತ ಪಕ್ಷಗಳು ಅಭಿವೃದ್ಧಿಗೆ ಮಾರಕವಾಗಿವೆ. ಈ ಹಿನ್ನೆಲೆಯಲ್ಲಿ ಸರ್ವರನ್ನು ಸಮಾನರಾಗಿ ಕಾಣುವ ಪಕ್ಷಗಳು ಅಧಿಕಾರಕ್ಕೆ ಬರಬೇಕು ಎಂದು ಅಭಿಪ್ರಾಯಪಟ್ಟರು.

ಇಂದು ಗ್ಯಾರಂಟಿ ಯೋಜನೆ ಮೂಲಕ ಬಡ ವರ್ಗವನ್ನು ಮೇಲೆತ್ತುವ ಕೆಲಸ ಆಗುತ್ತಿದೆ. ಅಂದು ದೇವರಾಜ ಅರಸ್ ಅವರು ಜೀತ ಪದ್ಧತಿ ನಿರ್ಮೂಲನೆ ಮಾಡಿ, ಉಳುವವನೆ ಭೂಮಿಯ ಒಡೆಯ ಎಂಬ ಕಾನೂನು ಜಾರಿ ಮಾಡಿ ಹಿಂದುಳಿದವರಿಗೆ ಮೀಸಲಾತಿ ಕೂಡ ನೀಡಿದರು ಎಂದರು.

ಚುನಾವಣೆಯಲ್ಲಿ ಸೋಲು–ಗೆಲುವು ಸಹಜ. ಆದರೆ ಸಮಾಜದ ಸತ್ಯವನ್ನು ಜನರಿಗೆ ತಿಳಿಸುವ ಕಾರಣದಿಂದ ಇಂತಹ ಕಾರ್ಯಕ್ರಮ ರೂಪಿಸಿದ್ದೇನೆ ಎಂದು ಸೋಮಶೇಖರ್ ತಿಳಿಸಿದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ	(ದೂ: 2521923)
ಭಾರತಿ ಟೀಚರ್ –1 ಪ್ರದರ್ಶನ (ಕ), ಗಿಲ್ಲಿ –3 ಪ್ರದರ್ಶನ (ತಮಿಳು)	
ವುಡ್‌ಲ್ಯಾಂಡ್ಸ್	(ದೂ: 2422871)
ರಕ್ಕಸ ಪುರದೋಳ್ (ಕ)	4 ಪ್ರದರ್ಶನಗಳು
ಬಾಲಾಜಿ	(ದೂ: 2497199)
ಓ ರೋಮಿಯೋ (ಹಿ)	3 ಪ್ರದರ್ಶನಗಳು
ಮಹದೇಶ್ವರ	(ಮೊ:9900820093)
45 ಫೇಸ್ ದಿ ಇಯರ್ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಲ್ಯಾಂಡ್ ಲಾರ್ಡ್ (ಕ)	4 ಪ್ರದರ್ಶನಗಳು
ರಾಜಕಮಲ್	
ಭಗವತಿ (ತ)	4 ಪ್ರದರ್ಶನಗಳು
ಸಂಗಂ	
ಸೆಕೆಂಡ್ ಕೇಸ್ ಆಫ್ ಸೀತಾರಾಂ (ಕ) + ಆಲ್ಫಾ (ಕ)	2+2 ಪ್ರದರ್ಶನಗಳು
ಲಿಡೋ	
ಲ್ಯಾಂಡ್‌ಲಾರ್ಡ್ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
–	–
ಪ್ರಭಾ	
ಧರ್ಮಿಷ್ಠ (ಕ)	4 ಪ್ರದರ್ಶನಗಳು

ಮೈಸೂರಿನ ಎನ್‌ಹೆಚ್‌ಐಎ ವಿಶೇಷ ಭೂಸ್ವಾಧೀನಾಧಿಕಾರಿಗಳಿಗೆ

ಲೋಕಾಯುಕ್ತ ಡ್ರಿಲ್

ಕ್ರಿಮಿನಲ್ ಮಿಸ್ ಕಂಡಕ್ಟ್ ಆರೋಪದ ಮೇರೆಗೆ ಸುದೀರ್ಘ ವಿಚಾರಣೆ



ಮೈಸೂರಿನ ಚಾಮರಾಜಪುರಂ ಗೀತಾ ರಸ್ತೆಯಲ್ಲಿರುವ ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ವಿಶೇಷ ಭೂಸ್ವಾಧೀನಾಧಿಕಾರಿ ಮತ್ತು ಸಕ್ಷಮ ಪ್ರಾಧಿಕಾರದ ಕಚೇರಿ

ಮೈಸೂರು, ಫೆ.24(ಬಿಎಲ್ ಯು)– ಕಳೆದ ನಾಲ್ಕು ವರ್ಷಗಳ ಪ್ರಕರಣವೊಂದರ ಸಂಬಂಧ ಮೈಸೂರಿನ ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ವಿಶೇಷ ಭೂಸ್ವಾಧೀನಾಧಿಕಾರಿ ಮತ್ತು ಸಕ್ಷಮ ಪ್ರಾಧಿಕಾರದ ಕಚೇರಿಯ ಅಧಿಕಾರಿಗಳನ್ನು ಲೋಕಾಯುಕ್ತರು ಇಂದು ವಿಚಾರಣೆಗೊಳಪಡಿಸಿದರು.

ಮೈಸೂರಿನ ಚಾಮರಾಜಪುರಂನ ಗೀತಾ ರಸ್ತೆಯಲ್ಲಿರುವ ಪ್ರಾಧಿಕಾರದ ಕಚೇರಿಯಲ್ಲಿ ಇಂದು ಲೋಕಾಯುಕ್ತ ಪೊಲೀಸರ ಆರು ಅಧಿಕಾರಿಗಳು ವಿಚಾರಣೆ ನಡೆಸಿದರು.

ಶ್ರೀರಂಗಪಟ್ಟಣದ ಕುಮಾರ್ ಎಂಬುವರು ವಿಶೇಷ ಭೂಸ್ವಾಧೀನಾಧಿಕಾರಿ ಹಾಗೂ ಸಕ್ಷಮ ಪ್ರಾಧಿಕಾರದ ಅಧಿಕಾರಿಗಳ ವಿರುದ್ಧ ದೂರು ನೀಡಿದ್ದರು.

ಈ ಸಂಬಂಧ ಕ್ರಿಮಿನಲ್ ಮಿಸ್ ಕಂಡಕ್ಟ್ (ಅಪರಾಧ ದುರ್ನಡತೆ ಅಥವಾ ದಂಡಾರ್ಹ ದುಷ್ಕೃತ್ಯ) ಎಸಗಿದ್ದಾರೆಂಬ ಆರೋಪದ ಮೇರೆಗೆ ಲೋಕಾಯುಕ್ತರು ತನಿಖೆ ಕೈಗೊಂಡಿದ್ದಾರೆ.

ಹತ್ತಾರು ಕಡತ ಹಾಗೂ ದಾಖಲಾತಿಗಳನ್ನು ಮುಂದಿಟ್ಟುಕೊಂಡು ಲೋಕಾಯುಕ್ತರು ಪ್ರಾಧಿಕಾರಿಗಳ ಅಧಿಕಾರಿಗಳಿಗೆ ಪ್ರಶ್ನೆಗಳ ಸುರಿಮಳೆಗೈಯ್ದರು.

ಇಂದು ನಡೆದ ಇಡೀ ಪ್ರಕರಣದ ವಿಚಾರಣೆಯನ್ನು ವಿಡಿಯೋ ಮೂಲಕ ಚಿತ್ರೀಕರಿಸಲಾಯಿತು. ಇಂದು ಬೆಳಿಗ್ಗೆಯಿಂದ ಮಧ್ಯಾಹ್ನದವರೆಗೆ ನಿರಂತರ ವಿಚಾರಣೆ ನಡೆಸಿದರು. ಇದು ಲೋಕಾಯುಕ್ತ ಪೊಲೀಸರ ಇನ್ ಹೌಸ್ (ರಹಸ್ಯ) ವಿಚಾರಣೆಯಾದ ಕಾರಣ ಹೆಚ್ಚಿನ ಮಾಹಿತಿ ಲಭ್ಯವಾಗಲಿಲ್ಲ.

ಒಳಮೀಸಲಾತಿ ವಿಚಾರವಾಗಿ

ಬಲಗೈ ಸಮುದಾಯದಲ್ಲಿ ಒಡಕು ಮೂಡಿಸುವ ಯತ್ನ

ಮಾಜಿ ಸಚಿವ ಎನ್.ಮಹೇಶ್, ಛಲವಾದಿ ನಾರಾಯಣ ಸ್ವಾಮಿ ವಿರುದ್ಧ ಮಾಜಿ ಮೇಯರ್ ಪುರುಷೋತ್ತಮ್ ಆರೋಪ

ಮೈಸೂರು,ಫೆ.24(ಜಿಎ)–ಒಳಮೀಸಲಾತಿ ವಿಚಾರ ಮುಂದಿಟ್ಟು ಬಲಗೈ ಸಮುದಾಯದಲ್ಲಿ ಒಡಕು ಮೂಡಿಸಲು ಬಿಜೆಪಿಯ ಎನ್.ಮಹೇಶ್ ಹಾಗೂ ಛಲವಾದಿ ನಾರಾಯಣಸ್ವಾಮಿ ಮೂಲಕ ಆರ್‌ಎಸ್‌ಎಸ್ ಪ್ರಯತ್ನಿಸುತ್ತಿದೆ ಎಂದು ಮಾಜಿ ಮೇಯರ್ ಪುರುಷೋತ್ತಮ ದೂರಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಎಸ್‌ಸಿ ಸಮುದಾಯದ ಒಳಮೀಸಲಾತಿ ಜಾರಿಯಲ್ಲಿ ಕಾಂಗ್ರೆಸ್ ಸರ್ಕಾರ ಎಲ್ಲ ಸಲಹೆಗಳಿಗೆ ಸ್ಪಂದಿಸುತ್ತಿದೆ. ಇದಕ್ಕೆ ಸಂಬಂಧಿಸಿದಂತೆ ನ್ಯಾಯಾಲಯದ ತೀರ್ಪು ಬಾಕಿಯಿದೆ. ಈ ಹಂತದಲ್ಲಿ ಸಮುದಾಯದ ದಿಕ್ಕು ತಪ್ಪಿಸುವುದು ಸರಿಯಲ್ಲ ಎಂದರು.

ಸಮಸ್ಯೆಯಿದ್ದರೆ ಸಮುದಾಯದ ಎಲ್ಲರೂ ಚರ್ಚಿಸಿ ಒಮ್ಮತದ ಪರಿಹಾರ ಕಂಡುಕೊಳ್ಳೋಣ. ಅದನ್ನು ಬಿಟ್ಟು ರಾಜಕೀಯ ಉದ್ದೇಶದಿಂದ ಒಡಕಿನ ಮಾತಾಡಬಾರದು. ಎಡಗೈ ಸಮುದಾಯದ ಹಕ್ಕುಗಳ ಬಗ್ಗೆ ನಮಗೆ ಯಾವುದೇ ತಕರಾರು ಇಲ್ಲ. ಅಲೆಮಾರಿ ಸಮುದಾಯಕ್ಕೂ ನ್ಯಾಯ ದೊರಕಬೇಕಿದೆ. ನಮ್ಮ ಯುವಜನರು ಈ ಬಗ್ಗೆ ಅರಿವು ಹೊಂದ ಬೇಕು. ಆರ್‌ಎಸ್‌ಎಸ್ ಕುತಂತ್ರಕ್ಕೆ ಸಿಲುಕಬಾರದು ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಕಾಂಗ್ರೆಸ್ ವಕ್ತಾರ ಎಸ್.ರಾಜೇಶ್, ಪ್ರೊ.ಟಿ.ಎಂ.ಮಹೇಶ್, ಸಮುದಾಯದ ಪ್ರಮುಖರಾದ ಚಿಕ್ಕಂದಾನಿ, ಪುಟ್ಟರಾಜು, ಸುನೀಲ್, ನಾರಾಯಣ, ಮುರುಡಹಳ್ಳಿ ಮಂಜು, ಮಹೇಶ್, ಶಿವಶಂಕರ್, ರಾಮು ಉಪಸ್ಥಿತರಿದ್ದರು.

ಶಾಸಕರ ಭೇಟಿ



ಮೈಸೂರು ಜಿಲ್ಲಾ ಹಾಪ್‌ಕಾಮ್ಸ್‌ನ ನೂತನ ಉಪಾಧ್ಯಕ್ಷ ವೈಜಿ.ಮಹೇಂದ್ರ ಅವರು ಚಾಮರಾಜ ಕ್ಷೇತ್ರದ ಶಾಸಕ ಕೆ.ಹರೀಶ್‌ಗೌಡರನ್ನು ಭೇಟಿ ಮಾಡಿ, ಅವರನ್ನು ಅಭಿನಂದಿಸಿ ಆಶೀರ್ವಾದ ಪಡೆದರು. ಈ ವೇಳೆ ಯರಗನಹಳ್ಳಿ ಸಿ.ಮಹೇಶ್, ಕುಮಾರ್, ಪ್ರಕಾಶ್ ಮತ್ತಿತರರಿದ್ದರು.

ಪ್ರತಿಕ್ಷಣ ಅಪ್‌ಡೇಟ್ ಆಗದೇ ಹೋದರೆ ಎಐ ತಂತ್ರಜ್ಞಾನ ಕಾಲದಲ್ಲಿ ಉಳಿಗಾಲವಿಲ್ಲ



ಮೈಸೂರಿನ ಸರಸ್ವತಿಪುರಂನಲ್ಲಿರುವ ಜೆಎಸ್‌ಎಸ್ ಮಹಿಳಾ ಕಾಲೇಜು ಸಭಾಂಗಣದಲ್ಲಿ ಆಯೋಜಿಸಿದ್ದ 2 ದಿನಗಳ ರಾಜ್ಯಮಟ್ಟದ ವಿಜ್ಞಾನ ವಸ್ತುಪ್ರದರ್ಶನ(ವಿಸ್ತಾರ–2026)ವನ್ನು ಜೆಎಸ್‌ಎಸ್ ಮಹಾವಿದ್ಯಾಪೀಠದ ಕಾರ್ಯನಿರ್ವಾಹಕ ಕಾರ್ಯದರ್ಶಿ ಡಾ.ಸಿ.ಜಿ.ಬೆಟಸೂರ್‌ಮಠ ಉದ್ಘಾಟಿಸಿದರು. ಎಸ್‌ಪಿ ಮಲ್ಲಿಕಾರ್ಜುನ ಬಾಲದಂಡಿ, ಕಾಲೇಜು ಶಿಕ್ಷಣ ಇಲಾಖೆ ಜಂಟಿ ನಿರ್ದೇಶಕಿ ಡಾ.ಡಿ.ಎಸ್.ಪ್ರತಿಮಾ ಮತ್ತಿತರರಿದ್ದರು.

ಮೈಸೂರು, ಫೆ.24(ಎಂಕೆ)– ಎಐ (ಕೃತಕ ಬುದ್ಧಿಮತ್ತೆ) ತಂತ್ರಜ್ಞಾನ ಯುಗದಲ್ಲಿ ನಾವು ಅಪ್‌ಡೇಟ್ ಆಗದಿದ್ದರೆ ಔಟ್ ಡೇಟ್ ಆಗುತ್ತೇವೆ ಎಂದು ಮೈಸೂರು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮಲ್ಲಿಕಾರ್ಜುನ ಬಾಲದಂಡಿ ಎಚ್ಚರಿಸಿದರು.

ಮೈಸೂರಿನ ಸರಸ್ವತಿಪುರಂನಲ್ಲಿರುವ ಜೆಎಸ್‌ಎಸ್ ಮಹಿಳಾ ಕಾಲೇಜು ಸಭಾಂಗಣದಲ್ಲಿ ಆಯೋಜಿಸಿದ್ದ 2 ದಿನಗಳ ರಾಜ್ಯಮಟ್ಟದ ವಿಜ್ಞಾನ ವಸ್ತುಪ್ರದರ್ಶನ(ವಿಸ್ತಾರ–2026) ಉದ್ಘಾಟನಾ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ವಿದ್ಯಾರ್ಥಿಗಳು ವಿದ್ಯಾಭ್ಯಾಸದ ಸಮಯದಲ್ಲೇ ಕಾಲಘಟ್ಟಕ್ಕೆ ಅನುಗುಣವಾಗಿ ಅಪ್‌ಡೇಟ್ ಆಗಬೇಕು. ಇಲ್ಲವಾದರೆ ಸ್ಪರ್ಧಾತ್ಮಕ ಯುಗದಲ್ಲಿ ಕನಿಷ್ಠ ಸ್ಪರ್ಧಿಸಲು ಸಾಧ್ಯವಾಗುವುದಿಲ್ಲ ಎಂದು ತಿಳಿಸಿದರು.

ದೈನಂದಿನ ಪ್ರತಿಯೊಂದು ಚಟುವಟಿಕೆಯೂ ವಿಜ್ಞಾನದಿಂದ ಕೂಡಿದ್ದು, ಆಚರಣೆಗಳ ಹಿಂದೆಯೂ ವೈಜ್ಞಾನಿಕ ವಿಚಾರಗಳಿವೆ. ಈ ನಿಟ್ಟಿನಲ್ಲಿ ವಿಜ್ಞಾನ ವಸ್ತುಪ್ರದರ್ಶನ ಕಲಿಕಾ ದೃಷ್ಟಿಯಿಂದ ಅವಶ್ಯವಾಗಿದೆ ಹಾಗೆಯೆ ಬದಲಾಗುತ್ತಿರುವ ಜಗತ್ತಿನಲ್ಲಿ ನಾವುಗಳ ಬದಲಾಗದಿದ್ದರೆ, ತಂತ್ರಜ್ಞಾನಕ್ಕೆ ಸಮನಾಗಿ ನಿಲ್ಲದಿದ್ದರೆ ಯಾವ ಸಾಧನೆಯನ್ನೂ ಮಾಡಲಾಗದು. ಎಐ(ಕೃತಕ ಬುದ್ಧಿಮತ್ತೆ) ಬಂದ ಮೇಲಂತು ಉದ್ಯೋಗ ಕಡಿಮೆಯಾಗುತ್ತಿದೆ. ಹಾಗಾಗಿ ಮುಂದಿನ ಜನಾಂಗದೊಳಗೆ ಬದುಕಬೇಕಾದರೆ ಅಪ್‌ಡೇಟ್ ಆಗಲೇಬೇಕು ಎಂದು ತಿಳಿಹೇಳಿದರು.

ವಿದ್ಯಾರ್ಥಿ ಸಂದರ್ಭದಲ್ಲಿ ಸಮಯ ಪ್ರಜ್ಞೆ ಮತ್ತು ಮಾಡುವ ಎಲ್ಲಾ ಚಟುವಟಿಕೆಗಳಲ್ಲಿಯೂ ಶಿಸ್ತು ಪಾಲನೆ ಇರಬೇಕು. ಪ್ರತಿಯೊಬ್ಬರಲ್ಲೂ ಒಂದಲ್ಲಾ ಒಂದು ಸಾಮರ್ಥ್ಯವಿದ್ದು, ಅದನ್ನು ಗುರ್ತಿಸಿ ಸದುಪಯೋಗ ಪಡೆದುಕೊಳ್ಳಿ, ಕಲಿಕೆಯಲ್ಲಿ ನಡೆನುಡಿಯಲ್ಲಿ ಆತ್ಮ ವಿಶ್ವಾಸವಿರಲಿ. ಸಾಮಾಜಿಕ ಜಾಲತಾಣಗಳಿಂದ ದೂರವಿದ್ದರೆ ಯಾವುದಾದರೂ ಒಂದು ಕ್ಷೇತ್ರದಲ್ಲಿ ಸಾಧನೆ ಮಾಡಬಹುದು ಎಂದು ಸಲಹೆ ನೀಡಿದರು.

ಇದಕ್ಕೂ ಮುನ್ನ ಕಾರ್ಯಕ್ರಮ ಉದ್ಘಾಟಿಸಿದ ಜೆಎಸ್‌ಎಸ್ ಮಹಾವಿದ್ಯಾ ಪೀಠದ ಕಾರ್ಯನಿರ್ವಾಹಕ ಕಾರ್ಯದರ್ಶಿ ಡಾ.ಸಿ.ಜಿ.ಬೆಟಸೂರ್‌ಮಠ ಮಾತನಾಡಿ, ವಿಜ್ಞಾನದ ವಸ್ತುಪ್ರದರ್ಶನದ ಮೂಲಕ ಹೊಸ ಹೊಸ ಆವಿಷ್ಕಾರಗಳು ಹೊರಬರಲಿ ಎಂದು ವಿದ್ಯಾರ್ಥಿನಿಯರಿಗೆ ಶುಭ ಹಾರೈಸಿದರು. ಕಾಲೇಜು ಶಿಕ್ಷಣ ಇಲಾಖೆ ಜಂಟಿ ನಿರ್ದೇಶಕಿ ಡಾ.ಡಿ.ಎಸ್.ಪ್ರತಿಮಾ, ಪ್ರಾಂಶುಪಾಲ ಡಾ.ರೇಚಣ್ಣ, ಸಂಚಾಲಕ ಡಿ.ಬಿ.ಯಶವಂತ್ ಮತ್ತಿತರರಿದ್ದರು.

ಗೌರವಾರ್ಪಣೆ



ಮೈಸೂರಿನ ವೀಣೆಶೇಷಣ್ಣ ಭವನದಲ್ಲಿ ನಡೆದ ಗಾನಭಾರತಿ ಸಂಗೀತ ಶಾಲೆ ವಾರ್ಷಿಕೋತ್ಸವದಲ್ಲಿ ಒಂದೂವರೆ ದಶಕಗಳಿಂದ ಸಂಗೀತ ಶಿಕ್ಷಕಿಯಾಗಿ ಸೇವೆ ಸಲ್ಲಿಸುತ್ತಿರುವ ವಿದುಷಿ ಕೆ.ಭಾಗ್ಯಲಕ್ಷ್ಮೀ ಅವರನ್ನು ಗೌರವಿಸಲಾಯಿತು.

ಬುಡಕಟ್ಟು ಮಹಿಳೆಯರ ಕುರಿತಾದ ರಾಷ್ಟ್ರೀಯ ವಿಚಾರ ಸಂಕಿರಣಕ್ಕೆ ತೆರೆ



ಆರ್ಥಿಕ ಚಟುವಟಿಕೆ ಮತ್ತು ಸಾಂಸ್ಕೃತಿಕ ಅಭಿವೃದ್ಧಿಯಲ್ಲಿ ಬುಡಕಟ್ಟು ಮಹಿಳೆಯರ ಪಾತ್ರ ಕುರಿತ ಎರಡು ದಿನಗಳ ರಾಷ್ಟ್ರೀಯ ವಿಚಾರ ಸಂಕಿರಣದಲ್ಲಿ ಪಾಲ್ಗೊಂಡ ಶಿಬಿರಾರ್ಥಿಗಳಿಗೆ ಪ್ರಮಾಣ ಪತ್ರ ವಿತರಿಸಲಾಯಿತು.

ಮೈಸೂರು,ಫೆ.24(ಎಂಟಿವೈ)– ಆರ್ಥಿಕ ಚಟುವಟಿಕೆ ಮತ್ತು ಸಾಂಸ್ಕೃತಿಕ ಅಭಿವೃದ್ಧಿಯಲ್ಲಿ ಬುಡಕಟ್ಟು ಮಹಿಳೆಯರ ಪಾತ್ರ ಕುರಿತ ಎರಡು ದಿನಗಳ ರಾಷ್ಟ್ರೀಯ ವಿಚಾರ ಸಂಕಿರಣ ಯಶಸ್ವಿಯಾಗಿ ನೆರವೇರಿದ್ದು, ಇಲ್ಲಿ ಮಂಡನೆಯಾದ ಪ್ರಬಂಧಗಳ ಪುಸ್ತಕದ ರೂಪದಲ್ಲಿ ಪ್ರಕಟಿಸಲಾಗುವುದು ಎಂದು ಕರ್ನಾಟಕ ರಾಜ್ಯ ಬುಡಕಟ್ಟು ಸಂಶೋಧನಾ ಸಂಸ್ಥೆಯ ಉಪನಿರ್ದೇಶಕಿ ಹೆಚ್.ಎಸ್.ಗಿರಿಜಾಂಬ ತಿಳಿಸಿದ್ದಾರೆ.

ಕರ್ನಾಟಕ ರಾಜ್ಯ ಬುಡಕಟ್ಟು ಸಂಶೋಧನಾ ಸಂಸ್ಥೆಯಲ್ಲಿ ಕೇಂದ್ರ ಬುಡಕಟ್ಟು ವ್ಯವಹಾರಗಳ ಮಂತ್ರಾಲಯ ಹಾಗೂ ಕರ್ನಾಟಕ ರಾಜ್ಯ ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ ವತಿಯಿಂದ ನಡೆದ ರಾಷ್ಟ್ರೀಯ ವಿಚಾರ ಸಂಕಿರಣದ ಸಮಾರೋಪ ಸಮಾರಂಭದಲ್ಲಿ ಪ್ರಬಂಧ ಮಂಡಿಸಿದ 20 ಜನ ಶಿಬಿರಾರ್ಥಿಗಳಿಗೆ ಪ್ರಮಾಣಪತ್ರ ವಿತರಿಸಿ ಮಾತನಾಡಿದ ಅವರು, ನಮ್ಮ ಸಂಶೋಧನಾ ತಂಡ ಡಾ.ಕಲಾವತಿಯವರ ನೇತೃತ್ವದಲ್ಲಿ 2 ದಿನದ ಕಾರ್ಯಾಗಾರದ ಯಶಸ್ವಿಗೆ ಕಾರಣವಾಗಿದೆ, ನೀವು ಮಂಡಿಸಿರುವ ಪ್ರಬಂಧಗಳನ್ನು ಪುಸ್ತಕ ರೂಪದಲ್ಲಿ ಹೊರ ತರುತ್ತೇವೆ. ನಮ್ಮ ಇಲಾಖೆಯ ಕಾರ್ಯದರ್ಶಿಗಳಾದ ಎಂ.ಕನಗವಲ್ಲಿ, ನಿರ್ದೇಶಕ ಟಿ.ಯೋಗೀಶ್ ಬುಡಕಟ್ಟು ಸಮುದಾಯದ ಅಭಿವೃದ್ಧಿಗೆ ಯಾವುದೇ ಕಾರ್ಯಕ್ರಮ ಮಾಡಿದರೂ ಸಹಕಾರ ನೀಡುತ್ತಿದ್ದಾರೆ. ಬುಡಕಟ್ಟು ಮುಖಂಡರು ಸಹ ಸಹಕಾರ ನೀಡುತ್ತಿದ್ದಾರೆ. ಮುಂದಿನ ದಿನಗಳಲ್ಲಿ ಬುಡಕಟ್ಟು ಜನರು ಆರ್ಥಿಕವಾಗಿ ಸಬಲರಾಗಿ ಸ್ವಾವಲಂಬಿಗಳಾಗಲು ತರಬೇತಿಯನ್ನು ನೀಡಿ ಉದ್ಯೋಗವನ್ನು ಕೊಡಿಸುವ ನಿಟ್ಟಿನಲ್ಲಿ ಕಾರ್ಯಕ್ರಮಗಳನ್ನು ರೂಪಿಸಲಾಗುವುದು. ಮುಂದಿನ 15 ದಿನಗಳಲ್ಲಿ ಬುಡಕಟ್ಟು ಮುಖಂಡರ ಸಭೆ ಕರೆದು ಸಲಹೆ ಸೂಚನೆ ಪಡೆದು ಕಾರ್ಯಕ್ರಮಗಳನ್ನು ರೂಪಿಸಲಾಗುವುದು ಎಂದರು.

ಕರ್ನಾಟಕ ರಾಜ್ಯ ಬುಡಕಟ್ಟು ಸಂಶೋಧನಾ ಸಂಸ್ಥೆಯ ಸಂಶೋಧನಾಧಿಕಾರಿ ಸಿ.ಶಿವಕುಮಾರ್ ಮಾತನಾಡಿ, ರಾಜ್ಯದಲ್ಲಿ ಪರಿಶಿಷ್ಟ ಪಂಗಡದ ಮಹಿಳೆಯರು ಅರಣ್ಯಾಧಾರಿತ ಜೀವನೋಪಾಯ, ಕೃಷಿ ಕೈಗಾರಿಕೆ, ಅರಣ್ಯ ಉತ್ಪನ್ನ ಸಂಗ್ರಹಣೆ ಮತ್ತು ಮೌಲ್ಯವರ್ಧನೆ ಕ್ಷೇತ್ರಗಳಲ್ಲಿ ಮಹತ್ವದ ಪಾತ್ರ ವಹಿಸುತ್ತಿದ್ದಾರೆ ಎಂದರು.

ಸಮಾರಂಭದಲ್ಲಿ ಬೆಂಗಳೂರು ವಿವಿಯ ಪ್ರೊ.ಸಮತಾ ದೇಶಮಾನೆ, ಹಂಪಿ ವಿವಿ ಡಾ.ಯರ್ರಿಸ್ವಾಮಿ ಇ, ಮಂಗಳೂರು ವಿವಿಯ ಡಾ.ಸಬೀತಾ, ಲೆಕ್ಕಾಧಿಕಾರಿ ಬಿ.ಆರ್.ಭವ್ಯ, ಅಧೀಕ್ಷಕಿ ಎಂ.ವಿ.ನಾಗರತ್ನ, ಸಂಶೋಧಕರಾದ ಡಾ.ಕಲಾವತಿ, ಮೋಹನ್ ಕುಮಾರ್, ಕೆ.ಡಿ.ದಿನೇಶ್, ರವಿಕುಮಾರ್, ಎಂ.ಸಿ.ವೇಣುಕಾಂತ್, ಬಿ.ಆರ್.ಪ್ರಸನ್ನ ಕುಮಾರ್, ಮಂಜುನಾಥ್, ಕೆ.ರಮೇಶ್, ಭರತ್‌ಕುಮಾರ್ ಇತರರು ಹಾಜರಿದ್ದರು.

ಅಧೋಗತಿಗಿಳಿದ ಮೈಸೂರು ವಿವಿ ರಕ್ಷಣೆಗೆ ಧಾವಿಸುವಂತೆ ಸಿಎಂ ಸಿದ್ದರಾಮಯ್ಯರಿಗೆ ಮರಿತಿಬ್ಬೇಗೌಡ ಆಗ್ರಹ

● ಮಂಡ್ಯ ಸ್ನಾತಕೋತ್ತರ ಕೇಂದ್ರ 11 ಪ್ರಾಧ್ಯಾಪಕರು ಮಾಡುವುದು ಒಂದು ಗಂಟೆ ಪಾಠ ಅಷ್ಟೇ ● ಸ್ವಾಯತ್ತತೆ ಬಿಟ್ಟುಕೊಡುತ್ತಿರುವ ಯುವರಾಜ ಕಾಲೇಜು!?

ಮೈಸೂರು,ಫೆ.24(ಜಿಎ)–ಮೈಸೂರಿನ ವಿಶ್ವವಿದ್ಯಾನಿಲಯ ಅಧೋಗತಿಯತ್ತ ಸಾಗುತ್ತಿದ್ದು, ಕೂಡಲೇ ಮುಖ್ಯಮಂತ್ರಿಗಳು ಮಧ್ಯ ಪ್ರವೇಶಿಸಿ ವಿವಿಯನ್ನು ಪುನಶ್ಚೇತನಗೊಳಿಸಲು ಅಗತ್ಯ ಕ್ರಮ ತೆಗೆದುಕೊಳ್ಳುವಂತೆ ವಿಧಾನ ಪರಿಷತ್ ಸದಸ್ಯ ಮರಿತಿಬ್ಬೇಗೌಡ ಆಗ್ರಹಿಸಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮೈಸೂರು ವಿಶ್ವವಿದ್ಯಾನಿಲಯ ಯಾವುದೇ ಮೂಲ ಸೌಕರ್ಯ ಹಾಗೂ ಆರ್ಥಿಕ ಕೊರತೆ ಇಲ್ಲದೇ ಶತಮಾನ ಪೂರೈಸುವ ಅಂಚಿನಲಿದ್ದು, ಈ ಸಂದರ್ಭದಲ್ಲಿ ಇದೇ ವಿವಿ ವ್ಯಾಪ್ತಿಯ ಕಾಲೇಜಿನ ಪ್ರಾಂಶುಪಾಲರು, ಕೆಲವು ಪ್ರಾಧ್ಯಾಪಕರು 2025–26ನೇ ಸಾಲಿನಿಂದಲೇ ಸ್ವಾಯತ್ತತೆಯನ್ನು ಬೇಡವೆಂದು ಸಂಸ್ಥೆಯ ಆಡಳಿತ ಮಂಡಳಿಯ ಅಧ್ಯಕ್ಷರಾದ ವಿವಿ ಕುಲಪತಿಗಳಿಗೆ ಪತ್ರ ಬರೆದಿದ್ದಾರೆ ಎಂದರು.

ಈ ಪತ್ರದ ಹಿನ್ನೆಲೆಯಲ್ಲಿ ಜಿಸಿ ಸಭೆ ಕರೆದು ಸಭೆಯಲ್ಲಿ ಕೂಲಂಕುಷವಾಗಿ ಚರ್ಚೆ ಮಾಡದೆ ಫೆ.5ರಂದು ಸಿಂಡಿಕೇಟ್ ಸಭೆಯಲ್ಲಿ ತೀರ್ವಾನಿಸಿ, ಫೆ.16ರಂದು ಸ್ವಾಯತ್ತತೆಯನ್ನು ಹಿಂಪಡೆದು ಮೈಸೂರು ವಿವಿಯ ಘಟಕ ಕಾಲೇಜಾಗಿ 2025–26ನೇ ಸಾಲಿನಿಂದಲೇ ಅನ್ವಯವಾಗುವಂತೆ ಆದೇಶ ಹೊರಡಿಸಿರುವುದು ವಿದ್ಯಾರ್ಥಿಗಳ ಪಾಲಿಗೆ ದುರಂತ ಸಂಗತಿ ಎಂದು ಬೇಸರಿಸಿದರು.



ಮರಿತಿಬ್ಬೇಗೌಡ

ಈಗಾಗಲೇ ಯುವರಾಜ ಕಾಲೇಜಿನಲ್ಲಿ ವಿದ್ಯಾರ್ಥಿಗಳ ಪ್ರವೇಶಾತಿ ಕಡಿಮೆಯಾಗಿದೆ ಎಂಬ ಕಾರಣಕ್ಕೆ ಕಳೆದ ಒಂದು ವರ್ಷದಿಂದ ಸದರಿ ಕಾಲೇಜಿನಲ್ಲಿದ್ದ 9 ಸ್ನಾತಕೋತ್ತರ ಪದವಿ ಕೋರ್ಸ್‌ಗಳನ್ನು ಮುಚ್ಚಲಾಗಿದೆ. ಪದವಿ ತರಗತಿಯಲ್ಲಿ ಈಗಲೂ ಎರಡು ಸಾವಿರಕ್ಕೂ ಹೆಚ್ಚು ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದಾರೆ. ಯುವರಾಜ ಕಾಲೇಜಿನ ಸ್ವಾಯತ್ತತೆಯ ಶೈಕ್ಷಣಿಕ ಪ್ರಗತಿಗೆ ಅಡ್ಡಿ ಮಾಡುವವರ ವಿರುದ್ಧ ವಿಚಾರಣೆ ನಡೆಸಿ ಕಾನೂನು ಕ್ರಮ ಜರುಗಿಸಬೇಕು ಹಾಗೂ ಕಾಲೇಜಿನ ಸ್ವಾಯತ್ತತೆ ಸ್ಥಾನಮಾನವನ್ನು ಮುಂದುವರೆಸಿ ವಿದ್ಯಾರ್ಥಿಗಳ ಮತ್ತು ಕಾಲೇಜಿನ ಭವಿಷ್ಯವನ್ನು ಉಜ್ವಲಗೊಳಿಸಬೇಕೆಂದು ಉನ್ನತ ಶಿಕ್ಷಣ ಸಚಿವರಲ್ಲಿ ಮನವಿ ಮಾಡಿದರು.

ಮೈಸೂರು ವಿವಿ ಹೊರತುಪಡಿಸಿ ಬೇರೆ ಜಿಲ್ಲೆಗಳಲ್ಲಿ ವಿವಿಯನ್ನು ಆರಂಭಿಸುವುದಕ್ಕೆ ಶಿಕ್ಷಣ ತಜ್ಞರು ಸೇರಿದಂತೆ ನಾವೆಲ್ಲರೂ ವಿರೋಧ ವ್ಯಕ್ತಪಡಿಸಿದ್ದೆವು. ಅದಕ್ಕೆ ಕೆಲವರು ಬೇಸರ ಹೊರಹಾಕಿದರು. ಆದರೆ, ಈಗ ಮಂಡ್ಯ ವಿವಿಯ ವಿಶ್ವೇಶ್ವರಯ್ಯ ಸ್ನಾತಕೋತ್ತರ ಕೇಂದ್ರದಲ್ಲಿ 12 ಸ್ನಾತಕೋತ್ತರ ಪದವಿಗಳಲ್ಲಿ ಎರಡು ವರ್ಷಗಳಿಂದ ವಿದ್ಯಾರ್ಥಿಗಳ ಕೊರತೆಯಿದೆ. ಹಾಗಾಗಿ 10 ವಿಭಾಗಗಳನ್ನು ಮುಚ್ಚಲಾಗಿದೆ. ಇಲ್ಲಿರುವ ಪ್ರಾಧ್ಯಾಪಕರು ಮೈಸೂರು ವಿವಿಯಲ್ಲಿ ಖಾಯಂ ನೇಮಕಾತಿ ಹೊಂದಿ ಇಲ್ಲಿಗೆ ನಿಯೋಜನೆ ಮೇಲೆ ಕಾರ್ಯನಿರ್ವಹಿಸುತ್ತಿರುವ 11 ಪ್ರಾಧ್ಯಾಪಕರಿಗೆ ಎರಡು ವರ್ಷಗಳಿಂದ ಒಂದು ಘಂಟೆಯು ಕಾರ್ಯಭಾರವೂ ಇಲ್ಲ. ಇವರನ್ನು ಮೂಲ ಸ್ಥಾನಕ್ಕೆ ವಾಪಾಸ್ಸು ಕಳುಹಿಸುವಂತೆ ಉನ್ನತ ಶಿಕ್ಷಣ ಇಲಾಖೆಯ ಕಾರ್ಯದರ್ಶಿಗೆ ನಾಲ್ಕು ಬಾರಿ ಪತ್ರ ಬರೆದರೂ ಯಾವುದೇ ಪ್ರಯೋಜನವಾಗಿಲ್ಲ. ಈ ಹಿನ್ನೆಲೆಯಲ್ಲಿ ಉನ್ನತ ಶಿಕ್ಷಣ ಸಚಿವರು ಅವರನ್ನು ವಾಪಾಸ್ಸು ಮೈಸೂರು ವಿವಿಗೆ ಕರ್ತವ್ಯ ನಿರ್ವಹಿಸಲು ಆದೇಶಿಸಬೇಕೆಂದು ಒತ್ತಾಯಿಸಿದರು.

ಮಂಡ್ಯ ವಿವಿ ಪ್ರಭಾರ ಕುಲಪತಿ ನೇಮಕಾತಿಯಲ್ಲಿಯೂ ಹಗರಣವಾಗಿದೆ. ಪ್ರಾಧ್ಯಾಪಕರ ಜೇಷ್ಠತೆಯನ್ನು ಕಡೆಗಣಿಸಿ, ವಿವಿ ಕಾಯ್ದೆಗೆ ವಿರುದ್ಧವಾಗಿ ನೇಮಕ ಮಾಡಲಾಗಿದೆ. ಈ ಸಂಬಂಧವೂ ಕಾರ್ಯದರ್ಶಿಗಳಿಗೆ ಪತ್ರ ಬರೆದಿದ್ದೇನೆ. ಕ್ರಮವಹಿಸಿಲ್ಲ. ಮೈಸೂರು ವಿವಿಯಲ್ಲಿ ಹಳೆಯ ಪಿಂಚಣಿ ನೀತಿಯಂತೆ ಖಾಯಂ ನೇಮಕಾತಿ ಹೊಂದಿ ನಿವೃತ್ತರಾದವರಿಗೆ ನಿವೃತ್ತ ವೇತನ ಕಾಲಮಾನಕ್ಕೆ ಸರಿಯಾಗಿ ಸಿಗುತ್ತಿಲ್ಲ ಮುಖ್ಯಮಂತ್ರಿಗಳು ಕೂಡಲೇ ಪರಿಶೀಲಿಸಿ ಸೂಕ್ತ ಕ್ರಮ ತೆಗೆದುಕೊಳ್ಳಬೇಕಿದೆ ಎಂದು ಮನವಿ ಮಾಡಿದರು.

ಶಿವಮೊಗ್ಗದಲ್ಲಿ ಶಾಲಾ ಬಾಲಕನ ಹತ್ಯೆ: 7 ಅಪ್ರಾಪ್ತರ ಬಂಧನ

15 ಲಕ್ಷ ರೂ. ಪರಿಹಾರ ಘೋಷಣೆ



ಶಿವಮೊಗ್ಗ: ನಗರದಲ್ಲಿ ಅಪ್ರಾಪ್ತ ಬಾಲಕನ ಕೊಲೆಯಾಗಿದ್ದು, ಆ ಪ್ರದೇಶದಲ್ಲಿ ಉದ್ವಿಗ್ನತೆ ಪರಿಸ್ಥಿತಿ ಉಂಟಾಗಿದೆ. ಹೀಗಾಗಿ ಘಟನೆ ನಂತರ, ನಗರದಲ್ಲಿ ಭಾರೀ ಪೊಲೀಸ್ ಬಂದೋಬಸ್ತ್ ಮಾಡಲಾಗಿತ್ತು.

ಉರಗಡೂರು ಪಕ್ಕದ ಸೂಳೆಬೈಲಿನ ದುರ್ಗಮ್ಮನ ಬೀದಿ ನಿವಾಸಿ, ಸರ್ಕಾರಿ ಪ್ರೌಢಶಾಲೆ ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿ ಸಂಕೇತ್ (16) ಕೊಲೆಯಾದ ಬಾಲಕ. ಈತ ವಿಶೇಷ ತರಗತಿ ನಂತರ ಹೊರ ಹೋಗಿದ್ದಾಗ ಆತನನ್ನು ಹತ್ಯೆ ಮಾಡಲಾಗಿದೆ ಎಂದು ತಿಳಿದು ಬಂದಿದೆ.

ಸಂಕೇತ್ ತನ್ನ ಶಾಲೆ ಹೊರಗೆ ಹುಡುಗರ ಗುಂಪಿನ ನಡುವೆ ನಡೆದ ವಾಗ್ವಾದದಲ್ಲಿ ಮಧ್ಯ ಪ್ರವೇಶಿಸಿದ್ದರು. ಈ ವೇಳೆ ವಾಗ್ವಾದ ನಡೆದು ವಿಕೋಪಕ್ಕೆ ತಿರುಗಿ, ಈ ಘಟನೆ ನಡೆದಿದೆ ಎಂದು ಪೊಲೀಸ್ ವರಿಷ್ಠಾಧಿಕಾರಿ ನಿಖಿಲ್ ಸುದ್ದಿಗಾರರಿಗೆ ತಿಳಿಸಿದರು.

ಸಂಕೇತ್ ಓದುತ್ತಿದ್ದ ಶಾಲೆಯ ಹಳೆಯ ವಿದ್ಯಾರ್ಥಿಗಳೇ ಕೊಲೆ ಮಾಡಿದ್ದಾರೆ. ಕೊಲೆ ನಡೆದ ಸ್ಥಳದಲ್ಲಿದ್ದ ಮತ್ತೊಬ್ಬ ವಿದ್ಯಾರ್ಥಿಯಿಂದ ನಿನ್ನೆ ರಾತ್ರಿಯೇ ಎಸ್ಪಿ ನಿಖಿಲ್ ಘಟನೆ ಮಾಹಿತಿ ಪಡೆದಿದ್ದಾರೆ. ಘಟನೆಯಲ್ಲಿ ಭಾಗಿಯಾಗಿರುವ ಎಲ್ಲಾ ಏಳು ಅಪ್ರಾಪ್ತರನ್ನು ವಶಕ್ಕೆ ಪಡೆಯಲಾಗಿದೆ ಎಂದು ಅವರು ತಿಳಿಸಿದ್ದಾರೆ.

ಕ್ರಿಕೆಟ್ ಮ್ಯಾಚ್ ವಾಗ್ವಾದದಿಂದ ಕೊಲೆ: ಸಂಕೇತ್ ಹತ್ಯೆಯ ಬಗ್ಗೆ ಶಿವಮೊಗ್ಗ ಎಸ್ಪಿ ನಿಖಿಲ್ ಪ್ರತಿಕ್ರಿಯಿಸಿದ್ದು, ಕ್ರಿಕೆಟ್ ಮ್ಯಾಚ್ ವಾಗ್ವಾದದಿಂದ ಕೊಲೆ ನಡೆದಿದೆ. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಏಳು ಜನರನ್ನು ವಶಕ್ಕೆ ಪಡೆದಿದ್ದೇವೆ. ತನಿಖೆಗೆ ಒಂದು ವಿಶೇಷ ತನಿಖಾ ತಂಡ ರಚಿಸಿದ್ದೇವೆ. ಗಾಂಜಾ ಹಾವಳಿ ಬಗ್ಗೆಯೂ ತನಿಖೆ ಮಾಡುತ್ತೇವೆ. ಇಲ್ಲಿ ಒಂದು ಪೊಲೀಸ್ ಉಪ ಠಾಣೆಯನ್ನು ತೆರೆಯಲು ಕ್ರಮ ಕೈಗೊಳ್ಳುತ್ತೇವೆ. ಆರೋಪಿಗಳನ್ನು ಗಾಂಜಾ ಟೆಸ್ಟ್‌ಗೆ ಒಳಪಡಿಸುತ್ತೇವೆ ಎಂದು ಎಸ್ಪಿ ನಿಖಿಲ್ ಹೇಳಿದ್ದಾರೆ.

ಬಿಗಿ ಪೊಲೀಸ್ ಬಂದೋಬಸ್ತ್: ಸಂಕೇತ್ ಹತ್ಯೆಯ ಹಿನ್ನಲೆಯಲ್ಲಿ ಶಿವಮೊಗ್ಗದಲ್ಲಿ ಬಿಗಿ ಪೊಲೀಸ್ ಬಂದೋಬಸ್ತ್ ಮಾಡಲಾಗಿದೆ. ಶಿವಮೊಗ್ಗ ನಗರದಲ್ಲಿ ಪೊಲೀಸರು ಕಟ್ಟೆಚ್ಚರ ವಹಿಸಿದ್ದಾರೆ. ಊರುಗಡೂರಿನಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಪೊಲೀಸರ ನಿಯೋಜನೆ ಮಾಡಲಾಗಿದೆ. ಗಾಂಜಾ ಹಾವಳಿಯೇ ಘಟನೆಗೆ ಕಾರಣ ಎಂದು ಸ್ಥಳೀಯರು ಆರೋಪಿಸುತ್ತಿದ್ದಾರೆ.

ಊರುಗಡೂರಿನಲ್ಲಿ ಪೊಲೀಸ್ ಠಾಣೆ ತೆರೆಯುವಂತೆ ಸ್ಥಳೀಯರು ಆಗ್ರಹಿಸಿದ್ದಾರೆ. ಸಂಕೇತ್‌ನನ್ನು ಅಪ್ರಾಪ್ತ ಬಾಲಕರೇ ಹತ್ಯೆ ಮಾಡಿದ್ದಾರೆ ಎಂಬುದು ಆಘಾತಕಾರಿ ಸಂಗತಿ. ಸಂಕೇತ್ ಓದುತ್ತಿದ್ದ ಶಾಲೆಯ ಹಳೆಯ ವಿದ್ಯಾರ್ಥಿಗಳೇ ಸೇರಿಕೊಂಡು ಸಂಕೇತ್‌ನನ್ನು ಹತ್ಯೆ ಮಾಡಿದ್ದಾಗಿ ಪ್ರತ್ಯಕ್ಷದರ್ಶಿಗಳು ಪೊಲೀಸರಿಗೆ ತಿಳಿಸಿದ್ದಾರೆ.

15 ಲಕ್ಷ ಪರಿಹಾರ ಘೋಷಣೆ: ಇನ್ನು ಮೃತ ಬಾಲಕನ ಕುಟುಂಬಕ್ಕೆ ರಾಜ್ಯ ಸರ್ಕಾರ ಒಟ್ಟಾರೆ 15 ಲಕ್ಷ ರೂಪಾಯಿ ಪರಿಹಾರ ಘೋಷಿಸಿದೆ. ಹತ್ಯೆಯಾದ ಸಂಕೇತ್ ಕುಟುಂಬಕ್ಕೆ ಮುಖ್ಯಮಂತ್ರಿ ಪರಿಹಾರ ನಿಧಿಯಿಂದ 10 ಲಕ್ಷ ಹಾಗೂ ಶಿಕ್ಷಣ ಇಲಾಖೆಯಿಂದ 5 ಲಕ್ಷ ರೂಪಾಯಿ ಪರಿಹಾರ ಘೋಷಣೆ ಮಾಡಲಾಗಿದೆ. ಸರ್ಕಾರದ ಪರವಾಗಿ ಡಿಸಿ ಪ್ರಭುಲಿಂಗ ಕವಳಿಕಟ್ಟಿ ಪರಿಹಾರದ ಹಣದ ಬಗ್ಗೆ ಘೋಷಣೆ ಮಾಡಿದ್ದಾರೆ.

ಈ ಪ್ರಕರಣದಲ್ಲಿ ಈಗಾಗಲೇ ಏಳು ಮಂದಿ ಆರೋಪಿಗಳನ್ನು ಬಂಧಿಸಲಾಗಿದೆ. ಅಟ್ರಾಸಿಟಿ ಕೇಸ್ ಕೂಡ ದಾಖಲಾಗಿದೆ. ಮೃತ ಸಂಕೇತ ಜೊತೆಗೆ ಗಾಯಾಳು ಆಗಿರುವ ಗಿರೀಶ್‌ಗೆ ಪರಿಹಾರ ನೀಡಲಾಗುವುದು. ಮಾದಕ ವಸ್ತುಗಳ ಬಗ್ಗೆ ಜಿಲ್ಲಾಡಳಿತದಿಂದ ಜಾಗೃತಿ ಕಾರ್ಯಕ್ರಮ ನಡೆಸಲಾಗುತ್ತಿದೆ.

ಬಡಾವಣೆಯಲ್ಲಿ ಉಪ ಪೊಲೀಸ್ ಠಾಣೆ ತೆರೆಯುವ ಬಗ್ಗೆ ಸ್ಥಳೀಯರು ಒತ್ತಾಯಿಸಿದ್ದಾರೆ. ಈ ಬಗ್ಗೆ ಪರಿಶೀಲನೆ ನಡೆಸುವುದಾಗಿ ಜಿಲ್ಲಾಧಿಕಾರಿ ಪ್ರಭುಲಿಂಗ ಕವಳಕಟ್ಟಿ ಹೇಳಿದ್ದಾರೆ.

ಶಿವಮೊಗ್ಗದ ಬಿಜೆಪಿ ಶಾಸಕ ಎಸ್.ಎನ್. ಚನ್ನಬಸಪ್ಪ ಕೂಡ ಆಸ್ಪತ್ರೆಗೆ ಭೇಟಿ ನೀಡಿದ್ದರು.

22ನೇ ವರ್ಷದ ಸವಿನೆನಪು



ಕರಿಯಪ್ಪ ದುದ್ದಗೆರೆ
ಹಿಂದುಳಿದ ವರ್ಗಗಳ ಅಧ್ಯಕ್ಷರು

ನೀವು ನಮ್ಮನ್ನಗಲಿ ಇಂದಿಗೆ 22 ವರ್ಷ ಕಳೆದರೂ ನೀವು ತೋರಿಸಿಕೊಟ್ಟ ಮಾರ್ಗವೇ ನಮಗೆ ದಾರಿ ದೀಪವಾಗಿದೆ. ಸದಾ ನಿಮ್ಮ ನೆನಪಿನಲ್ಲಿರುವ

ಇಂತಿ ದುಃಖತಪ್ತರು
ಶ್ರೀಮತಿ ಗಾಯತ್ರಿ ಕರಿಯಪ್ಪ, ಮಕ್ಕಳಾದ ನಾಗೇಶ್ ಕರಿಯಪ್ಪ, ಸೊಸೆ, ಲತ್, ಅಭಿಷೇಕ್, ಅಶೋಕ್ ಮತ್ತು ಕುಟುಂಬ ವರ್ಗದವರು.

Aishwarya
ಐಶ್ವರ್ಯ ಗೋಲ್ಡ್ ಕಂಪನಿ
"ಫ್ರಾಂಚೈಸಿ"
ಕೊಡಲಾಗುವುದು.
ಕಡಿಮೆ ಹೂಡಿಕೆ ಹೆಚ್ಚು ಆದಾಯ
ಸಂಪರ್ಕಿಸಿ
96860-12666

69 projects
Designing your Dreams
Vee2 Developers
Poorva Shelters Phase - I
20x30 | 30x40 & 20x40 | 30x50
CLEARENCE OFFER
₹4,000/sq.ft
₹3,799/ sq.ft
80550-04400

ಶ್ರದ್ಧಾಂಜಲಿ ಸಭೆ
ಡಾ. ಜೆ.ಜಿ. ವಿಶ್ವನಾಥಯ್ಯ
ನಿವೃತ್ತ ಪ್ರಾಧ್ಯಾಪಕರು, ಸರ್ಕಾರಿ ಆಯುರ್ವೇದ ವೈದ್ಯಕೀಯ ಕಾಲೇಜು, ಮೈಸೂರು
ಸಂಸ್ಥಾಪಕ ಅಧ್ಯಕ್ಷರು, ಆದ್ಯ ಸೌಹಾರ್ದ ಸಹಕಾರಿ ಸಂಘ ನಿಯಮಿತ, ರಾಮಕೃಷ್ಣನಗರ, ಮೈಸೂರು



ಜುಲೈ 8, 1945 - ಫೆಬ್ರವರಿ 16, 2026
ದಿನಾಂಕ : ಫೆ.26 | ಮಧ್ಯಾಹ್ನ : 12 ರಿಂದ
ಸ್ಥಳ: ಬ್ರಹ್ಮಸ್ಥಾನ ಕನ್ವೆನ್ಷನ್ ಹಾಲ್, ಸಾಹುಕಾರ್ ಚೆನ್ನಯ್ಯ ರಸ್ತೆ, ಟಿ.ಕೆ. ಲೇಔಟ್, ಮೈಸೂರು
RSVP: 99019 23024

LAUNDRY VASTRA
804, C.K. Complex, 8th Main, Sangam Circle, Vijayanagar 3rd Stage, Mysuru
• Wash & Steam Iron @ ₹ 120/kg
• Wash & Fold @ ₹ 80/kg
▸ Cuff & Collar Cleaning
▸ Crisp Wrinkle Free Steam Iron
Other Washing Services
Order Via WhatsApp: 9108454720
Free Doorstep Pickup & Delivery

WANTED
Experienced
Sale Girls - 10
Sales Boys - 10
Accountant - 1
For a saree and ready made garments near Olympia talkies, Mysore. Contact:
90368 45117 / 93410 50500

LOANS HUB
ALL LOANS UNDER ONE ROOF
• Business Loans
• Housing Loans
• Mortgage Loans
• Balance Transfer & Top up
TRUSTED SERVICE
NO SERVICE CHARGES
SRI SAI FINANCIAL SERVICES
Railway Gate Road KG Koppal Mysore
Contact:
88844 47314 / 88844 47318



JOCKEY
FACTORY SECONDS
UPTO 50% OFF*
*T&C apply
10 am to 8 pm - Open All Days - Master / Visa Card Accepted
INNERWEAR * LEISUREWEAR * ACTIVEWEAR * KIDSWEAR * SOCKS
Venue In Mysore
JLB Road
The Institution Of Engineers
Jhansi Lakshmibai Road - 5

SITE FOR SALE
60x92 N/E
UNNATHI NAGAR
RING ROAD
NEAR TO MANIPAL HOSPITAL, MYSORE.
9964196160

FOR SALE
Ready for Registration
Prime Location Site
43x93
East Facing Ashokapuram Railway Station 100 Mtr
Near Bedarakanappa Temple
40x60
Commercial Property
East Facing
Ramakrishna Nagar 'H' Block
42.5x100
Commercial Property,
80 Feet Road
Near NIE College Road
Commercial Site in Dattagalli
42x43
South/East Corner
50x80
Srirampura Commercial Property for Sale
(Brokers Excuse)
9008111454

ಅಂತಿಮ ಮರುಕರೆ ನೋಟೀಸ್

ಶ್ರೀ ಅನಂತ.ಎಂ. ಪವರ್ ಮ್ಯಾನ್, ನಂಜನಗೂಡು ಪಟ್ಟಣ ಶಾಖೆ, ನಂಜನಗೂಡು ಉಪವಿಭಾಗ–1 ಚಾ.ವಿ.ಸ.ನಿ.ನಿ., ನಂಜನಗೂಡು ರವರು ನಿಗಮದ ಕೆಲಸಕ್ಕೆ ದಿನಾಂಕ **01.04.2024** ರಿಂದ ನಿಗಮದ ಕರ್ತವ್ಯಕ್ಕೆ ಅನಧಿಕೃತ ಗೈರು ಹಾಜರಾಗಿರುತ್ತಾರೆ. ಈ ನಿಮ್ಮ ಗೈರು ಹಾಜರಾತಿಯಿಂದ ನಿಗಮದ ಕೆಲಸಕ್ಕೆ ತೊಂದರೆಯಾಗಿರುತ್ತದೆ. ಅಲ್ಲದೆ, ಈ ನಿಮ್ಮ ಅನಧಿಕೃತ ಗೈರು ಹಾಜರಾತಿಯು ಅಶಿಸ್ತಿನ ನಡವಳಿಯಾಗಿರುತ್ತದೆ. ಈ ಸಂಬಂಧವಾಗಿ ನಿಮ್ಮ ಸೇವಾಪುಸ್ತಕದಲ್ಲಿ ನಮೂದಿಸಲಾಗಿರುವ ವಿಳಾಸ ಶ್ರೀ ಅನಂತ ಎಂ S/O ಲೇಟ್ ಮುದ್ದು, ಹೆಳವರಹುಂಡಿ ಗ್ರಾಮ ತಿ.ನರಸೀಪುರ ತಾಲ್ಲೂಕು ತಿ.ನರಸೀಪುರ ಇಲ್ಲಿಗೆ ಈ ಕಛೇರಿ ಪತ್ರ ಸಂಖ್ಯೆ: ಕಾನಿಇಂ(ವಿ)/ಲೆಅ/ಸಲೆಅ/ಹಿಸ(ಸಿ) ನಂಜನಗೂಡು–**2025–26–/3210–3215** ದಿನಾಂಕ **05.08.2025** ರಲ್ಲಿ ಕೆಲಸಕ್ಕೆ ಹಾಜರಾಗಲು ಸೂಚಿಸಿ ಅಂತಿಮ ಕರೆ ಪತ್ರವನ್ನು ನೀಡಲಾಗಿರುತ್ತದೆ. ಸದರಿ ಪತ್ರದಲ್ಲಿನ ಸೂಚನೆಯನ್ವಯ 7 ದಿನಗಳ ಒಳಗಾಗಿ ಲಿಖಿತ ಸಮಜಾಯಿಷಿಯೊಡನೆ ಈ ಕೆಳಗೆ ಸಹಿ ಮಾಡಿರುವವರ ಕಛೇರಿಯಲ್ಲಿ ಹಾಜರಾಗಲು ನೀವು ವಿಫಲರಾಗಿರುತ್ತೀರಿ. ನಿಮ್ಮ ನಡವಳಿಕೆಯು ನಿಗಮದ ಸೇವೆಯಲ್ಲಿ ನೀವು ಮುಂದುವರೆಯಲು ಆಸಕ್ತಿ ಇಲ್ಲವೆಂಬುದು ಸ್ಪಷ್ಟವಾಗಿರುತ್ತದೆ.

ನಿಗಮದ ನಿಯಮಾನುಸಾರ ನಿಮಗೆ ಅಂತಿಮವಾಗಿ ಈ ಪತ್ರಿಕಾ ಪ್ರಕಟಣೆ ದಿನಾಂಕದಿಂದ 15 ದಿನಗಳ ಒಳಗಾಗಿ ಈ ಕೆಳಗೆ ಸಹಿ ಮಾಡಿರುವವರ ಕಛೇರಿಯಲ್ಲಿ ನಿಮ್ಮ ಗೈರುಹಾಜರಿಗೆ ಸೂಕ್ತ ಲಿಖಿತ ಸಮಜಾಯಿಷಿ ಉತ್ತರದೊಂದಿಗೆ ಹಾಜರಾಗುವುದು. ಇಲ್ಲವಾದಲ್ಲಿ, ನಿಮಗೆ ನಿಗಮದ ಸೇವೆಯಲ್ಲಿ ಮುಂದುವರೆಯುವ ಯಾವುದೇ ಇಚ್ಛೆ ಹಾಗೂ ಆಸಕ್ತಿ ಇಲ್ಲವೆಂದು ಪರಿಗಣಿಸಿ ನಿಗಮದಲ್ಲಿ ಚಾಲ್ತಿಯಲ್ಲಿರುವ ಸಿಬ್ಬಂದಿ **ಸೇವಾ(ನಡತೆ)** ನಿಯಮಗಳು–1988ರ **ನಿಯಮ 33(ಅನುಬಂಧ–ಬಿ)**ರಡಿ ಉಲ್ಲೇಖಿಸಲಾದ **(IV)** ರಲ್ಲಿನ ನಿಯಮದನ್ವಯ ದುರ್ನಡತೆ ಹಾಗೂ ನಿಗಮದ ನೌಕರರ ಸಿ.ಡಿ.ಸಿ.ಎ. ನಿಯಮಾವಳಿಗಳನ್ವಯ ಯಾವುದೇ ಮುನ್ಸೂಚನೆ ಇಲ್ಲದೆ ನಿಮ್ಮನ್ನು ನಿಗಮದ ಸೇವೆಯಿಂದ ವಜಾಗೊಳಿಸಲು ಕ್ರಮ ವಹಿಸಲಾಗುವುದು ಎಂದು ಈ ಮೂಲಕ ತಮಗೆ ತಿಳಿಸಲಾಗಿದೆ.

ಸಹಿ/– ಕಾರ್ಯನಿರ್ವಾಹಕ ಇಂಜಿನಿಯರ್(ವಿ)
ಚಾವಿವಿಸನಿನಿ., ಕಾ ಮತ್ತು ಪಾ ವಿಭಾಗ, ನಂಜನಗೂಡು

VIDYAVARDHAKA SANGHA (R), Mysuru
K. PUTTASWAMY P.U. COLLEGE
Gokulam 3rd Stage, Mysuru-02, Phone: 0821 241 9191
WANTED LECTURERS

Sl.No	Subject	Type of Vacancy	Post Required
1	Physics	Full Time	01 Post
2	Mathematics	Full Time	01 Post
3	Computer Science	Full Time	01 Post
4	English	Full Time	01 Post

Eligibility Criteria
• Minimum 55% or higher class in Master's degree in respective subject with B.Ed.
• Preference will be given to candidate with one or more years' experience with salary weightage.
• Apply with all Photo copies of SSLC, Degree, Master Degree and B.Ed. marks cards and experience certificate to K Puttaswamy PU College, VVCE Campus, Gokulam 3rd stage, Mysore-570002 by hand or by post within 7 days from the date of notification of the advertisement.
Sd/- Hon.President Sd/- Hon. Secretary

ಮೈಸೂರು ಮಿತ್ರ 46
ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವು ಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

-ಜಾಹೀರಾತು ವ್ಯವಸ್ಥಾಪಕರು

ಇಂಪೀರಿಯಲ್ ಸಿಟಿ
ಮೆಗಾ ರೆಸಿಡೆನ್ಷಿಯಲ್ ವಿಲ್ಲಾ ಟೌನ್‌ಶಿಪ್
ಮೈಸೂರು - ಹುಣಸೂರು ಮುಖ್ಯರಸ್ತೆ, ಮೈಸೂರು
ಕೇವಲ ₹749/ ಪ್ರತಿ ಚದರ ಅಡಿ
ಬುಕಿಂಗ್ ಪ್ರಾರಂಭವಾಗಿದೆ
ಇಲವಾಲ ಸ್ಯಾಟ್‌ಲೈಟ್ ಬಸ್ ನಿಲ್ದಾಣದಿಂದ ಕೇವಲ 4 ಕಿ.ಮೀ
MUDA LIMITS
ಸುಲಭ 4 ಕಂತುಗಳ ಸೌಲಭ್ಯವಿದೆ
30x40 | 30x50
40x60 | 50x80
ಅಳತೆಯ ಎಲ್ಲಾ ಸೌಲಭ್ಯಗಳನ್ನು ಒಳಗೊಳ್ಳುವ ನಿವೇಶನಗಳು
ಹೈಲ್ಯಾಂಡ್ ಪ್ರಾಪರ್ಟೀಸ್
90713 86615
95133 01854

NYPUNYA SCHOOL OF EXCELLENCE
Ca-11b, Kanakadasanagar, Dattagalli, 3rd Stage, Mysuru - 570022
WALK – IN INTERVIEW FOR NYPUNYA PRE-UNIVERSITY COLLEGE

Applications are invited from duly qualified and experienced candidates for our new Initiative–Nypunya Pre-University (PU) College for the following positions. Candidates with relevant experience may walk in with their resume, photocopies of marks cards, and a recent photograph. Email your resume to: hrpuc@nypunyaschool.education

Date: 26.02.2026 Time: 10:30 AM to 3:00 PM

Sl.No	Subject	Qualification	Experience	Remarks
1	Chemistry	M.Sc., B.Ed.	Min. 5 Years in a PU College	Should teach JEE/KCET
2	Mathematics	M.Sc., B.Ed.	Min. 5 Years in a PU College	Should teach JEE/KCET
3	Biology	M.Sc., B.Ed.	Min. 5 Years in a PU College	Should teach NEET/KCET
4	Computer Science	M.Sc. / MCA	Min. 5 Years in a PU College	Higher programming languages
5	Economics	M.A., B.Ed.	Min. 5 Years in a PU College	To train for competitive examination
6	Accountancy & Business Studies	M.Com., B.Ed.	Min. 5 Years in a PU College	To train for CA/ CMS
7	English	M.A., B.Ed.	Min. 5 Years in a PU College	Good in communication/ take up magazine publication
8	Kannada	M.A., B.Ed.	Min. 5 Years in a PU College	Good in communication/ take up magazine publication
9	Hindi	M.A., B.Ed.	Min. 5 Years in a PU College	Good in communication/ take up magazine publication
10	Sanskrit	M.A., B.Ed.	Min. 5 Years in a PU College	Good in communication/ take up magazine publication

Sd/- Secretary
Nypunya School of Excellence

ಸಾರ್ವಜನಿಕ ಪ್ರಕಟಣೆ

ಈ ಮೂಲಕ ಸಾರ್ವಜನಿಕರಿಗೆ ಸೂಚಿಸುವುದೇನೆಂದರೆ, ನಮ್ಮ ಕಕ್ಷಿದಾರರು ಈ ಕೆಳಗಿನ ಷೆಡ್ಯೂಲ್‌ನಲ್ಲಿ ವಿವರಿಸಿರುವ ಜಮೀನುಗಳನ್ನು, ಅದರ ಮಾಲೀಕರುಗಳಿಂದ ಎಲ್ಲಾ ಹೊರೆಗಳಿಂದ ಮುಕ್ತವಾಗಿದೆ ಎಂದು ಖರೀದಿಸಲು/ ಸ್ವಾಧೀನಪಡಿಸಿಕೊಳ್ಳಲು ಇಚ್ಛಿಸಿರುತ್ತಾರೆ,

ಯಾವುದೇ ವ್ಯಕ್ತಿ/ಗಳು, ಒಪ್ಪಂದ, ಹಂಚಿಕೆ, ಆನುವಂಶಿಕತೆ, ಅಭಿವೃದ್ಧಿ ಹಕ್ಕುಗಳು, ಪಾಲು, ಮಾರಾಟ, ವರ್ಗಾವಣೆ, ವಿನಿಮಯ, ಅಡಮಾನ, ಗುತ್ತಿಗೆ, ಅಂಡರ್–ಲೀಸ್, ನಿಯೋಜನೆ, ಕುಟುಂಬ ಅಶ್ವರ್ಥ, ಕುಟುಂಬ ವ್ಯವಸ್ಥೆ, ಬಾಕಿ ಇರುವ ತೆರಿಗೆಗಳು ಮತ್ತು/ಅಥವಾ ಸುಂಕಗಳು, ಹೊರಹೋಗುವಿಕೆಗಳು ಮತ್ತು ನಿರ್ವಹಣೆ, ಧಾರಣೆ, ಪರವಾನಗಿ, ಉಡುಗೊರೆ, ಸ್ವಾಧೀನ, ಬಾಡಿಗೆ, ಉಪ–ಬಾಡಿಗೆ, ಉಯಿಲು, ಟ್ರಸ್ಟ್, ಶುಲ್ಕ, ಪ್ರತಿಜ್ಞೆ, ಗ್ಯಾರಂಟಿ, ಉಪಯೋಗಿಸುವ ಹಕ್ಕುಗಳು, ಸುಲಭಗೊಳಿಸುವಿಕೆ, ಸಾಲಗಳು, ಮುಂಗಡಗಳು, ಲಿಸ್–ಪೆಂಡೆನ್ಸ್‌ಗಳು, ಮೊಕದ್ದಮೆ, ಮುಟ್ಟುಗೋಲು, ತಡೆಯಾಜ್ಞೆ ಅಥವಾ ಯಾವುದೇ ಇತರ ಲಗತ್ತು, ಅಥವಾ ಯಾವುದೇ ನ್ಯಾಯಾಲಯ, ನ್ಯಾಯಮಂಡಳಿ, ಕಂದಾಯ ಅಥವಾ ಶಾಸನಬದ್ಧ ಪ್ರಾಧಿಕಾರ ಅಥವಾ ಮಧ್ಯಸ್ಥಿಕೆ, ಸ್ಟ್ರಿಷ್ಟನ್ ಹಕ್ಕು ಅಥವಾ ಪೂರ್ವ–ಎಂಪ್ಷನ್ ಅಥವಾ ಹೋರೆಯ ಹಕ್ಕು ಯಾವುದೇ ರೀತಿಯಲ್ಲಿ ಅಥವಾ ಇಲ್ಲದಿದ್ದರೆ ಅಂಗೀಕರಿಸಿದ ಯಾವುದೇ ತೀರ್ಪು, ಆದೇಶ ಅಥವಾ ತೀರ್ಪಿನ ಅಡಿಯಲ್ಲಿ, ಅನುಮೋದನಾ ಹಕ್ಕು ಅಥವಾ ಪೂರ್ವಭಾವಿ ಅಥವಾ ಹೊರೆಯಾಗುವಿಕೆ ಅಥವಾ ಯಾವುದೇ ಇತರ ರೀತಿಯಲ್ಲಿ, ಅನುಮೋದನಾ ಹಕ್ಕು, ಷೇರು, ಲಾಭ, ಬೇಡಿಕೆ, ಹಕ್ಕು, ಹಕ್ಕು, ಹಕ್ಕು, ಶೀರ್ಷಿಕೆ ಮತ್ತು/ಅಥವಾ ಆಸಕ್ತಿಯನ್ನು ಹೊಂದಿರುವ ಯಾವುದೇ ಸಾಲದಾತ/ಬ್ಯಾಂಕ್/ಹಣಕಾಸು ಸಂಸ್ಥೆ ಸೇರಿದಂತೆ ಯಾವುದೇ ವ್ಯಕ್ತಿ ಅಥವಾ ಘಟಕವು ಕೆಳಗೆ ಸಹಿ ಮಾಡಿದವರಿಗೆ ಲಿಖಿತವಾಗಿ ಈ ಸೂಚನೆ ಪ್ರಕಟವಾದ **15 (ಹದಿನೈದು)** ದಿನಗಳ ಒಳಗೆ ತಿಳಿಸಬೇಕಾಗಿ ಸೂಚಿಸಲಾಗಿದೆ. ತದನಂತರ ಬರುವ ಯಾವುದೇ ಹಕ್ಕುಗಳು ಅಥವಾ ಹೇಳಲಾದ ಆಸಕ್ತಿಗಳು ಸ್ವೀಕೃತವಾಗದಿದ್ದರೆ, ಅವುಗಳನ್ನು ಉದ್ದೇಶಪೂರ್ವಕವಾಗಿ ಮನ್ನಾ ಮಾಡಲಾಗಿದೆ ಮತ್ತು ನಿರ್ಲಕ್ಷಿಸಲಾಗಿದೆ ಎಂದು ಪರಿಗಣಿಸಲಾಗುತ್ತದೆ ಮತ್ತು ಅಂತಹ ಹಕ್ಕು ಮತ್ತು ಆಸಕ್ತಿಗಳು ನಮ್ಮ ಕಕ್ಷಿದಾರರಿಗೆ ಬದ್ಧವಾಗಿರುವುದಿಲ್ಲ.

ಷೆಡ್ಯೂಲ್ (ಅನುಸೂಚಿ ಸ್ವತ್ತಿನ ವಿವರ)

ಮೈಸೂರು ಜಿಲ್ಲೆ ಮತ್ತು ತಾಲ್ಲೂಕು, ಇಲವಾಲ ಹೋಬಳಿ, ಯಲಚಹಳ್ಳಿ ಗ್ರಾಮದಲ್ಲಿರುವ ಜಮೀನುಗಳ ಒಟ್ಟಾರೆ ವಿಸ್ತೀರ್ಣ 46 ಎಕರೆ 09 ½ ಗುಂಟೆಗಳು ಮತ್ತು ಈ ಜಮೀನುಗಳ ಸರ್ವೇ ನಂಬರುಗಳು ಹಾಗೂ ಗಡಿಗಳ ವಿವರಗಳನ್ನು ಈ ಕೆಳಕಂಡ ಟೇಬಲ್‌ನಲ್ಲಿ ಸಂಪೂರ್ಣವಾಗಿ ತಿಳಿಸಲಾಗಿದೆ.

ಸರ್ವೆ ನಂ./ಗಳು	ವಿಸ್ತೀರ್ಣ ಎಕರೆ/ಗಳು	ವಿಸ್ತೀರ್ಣ ಗುಂಟೆ/ಗಳು	ಖರಾಬು ಎಕರೆ/ಗಳು	ಖರಾಬು ಗುಂಟೆ/ಗಳು	ಮಾಲೀಕರುಗಳು	ಪೂರ್ವಕ್ಕೆ	ಪಶ್ಚಿಮಕ್ಕೆ	ಉತ್ತರಕ್ಕೆ	ದಕ್ಷಿಣಕ್ಕೆ
ವಸತಿ ಉದ್ದೇಶಕ್ಕಾಗಿ ಪರಿವರ್ತಿಸಲಾಗಿದೆ:									
4/2	-	27	-	½	ಮೆ॥ ವಿಂಡ್‌ಸನ್ ಟೆರ್ರಾ	ವಿನೋದ್ ರವರ ಜಮೀನು	ಕುಲಕರ್ಣಿ ರವರ ಜಮೀನು	ಚಾಟಮ್ಮ ರವರ ಜಮೀನು	ಗೋವಿಂದೇಗೌಡ ರವರ ಜಮೀನು
5	7	1	-	10		ಸರ್ವೆ ನಂ. 99 ಮತ್ತು 6	ಸರ್ವೆ ನಂ.102 ಮತ್ತು ಸರ್ಕಾರಿ ರಸ್ತೆ	ಸರ್ವೆ ನಂ.117 ಮತ್ತು ಸರ್ಕಾರಿ ರಸ್ತೆ	ಸರ್ವೆ ನಂ.2 ಮತ್ತು ಸಿದ್ದರಾಮೇಗೌಡ ರವರ ಜಮೀನು
92/1	-	30½	-	¼		ಸರ್ವೆ ನಂ. 100	ಸರ್ವೆ ನಂ. 97	ಸರ್ವೆ ನಂ. 99	ಸರ್ವೆ ನಂ. 92/2 ಮತ್ತು 100
92/3	2	10	-	1		ಸರ್ವೆ ನಂ. 100, 101 ಮತ್ತು 92/4	ಸರ್ವೆ ನಂ. 96,93 ಮತ್ತು 94	ಸರ್ವೆ ನಂ.92/2	ಸರ್ವೆ ನಂ.92/4
92/4	1	34½	-	1		ರಸ್ತೆ	ಸರ್ವೆ ನಂ.94	ಸರ್ವೆ ನಂ.92/3 ಮತ್ತು 101	ಸರ್ವೆ ನಂ.92/5 ಮತ್ತು 91
93/1	1	-	-	-		ಸರ್ವೆ ನಂ. 92 ಮತ್ತು 93/2	ಸರ್ವೆ ನಂ.96/1	ಸರ್ವೆ ನಂ.96/1	ಸರ್ವೆ ನಂ.93/2 ಮತ್ತು 92/3
96/3	1	32½	-	4		ಸರ್ವೆ ನಂ.96/1	ಸರ್ವೆ ನಂ.96/4	ಕಲ್ಲೂರಿನ ನಾಗನಹಳ್ಳಿ ಕಾವಲ್ ಸರ್ವೆ ನಂ.54 ಮತ್ತು ಯಲಚಹಳ್ಳಿ ಗ್ರಾಮದ ಸರ್ವೆ ನಂ.97/2	ಸರ್ವೆ ನಂ.95/2 ಮತ್ತು 96/2
96/4	-	31	-	2		ಸರ್ವೆ ನಂ.96/3	ಸರ್ವೆ ನಂ.96/5	ಕಲ್ಲೂರು ನಾಗನಹಳ್ಳಿ ಕಾವಲ್ ಸರ್ವೆ ನಂ.54	ಸರ್ವೆ ನಂ.95/2
96/5	1	39	-	3		ಸರ್ವೆ ನಂ.96/4	ಸರ್ವೆ ನಂ.96/6	ಕಲ್ಲೂರು ನಾಗನಹಳ್ಳಿ ಕಾವಲ್ ಗ್ರಾಮದ ಗಡಿ	ಸರ್ವೆ ನಂ.95/1 ಮತ್ತು 95/2
97/2	-	29	-	1		ಸರ್ವೆ ನಂ.97/1	ಕಲ್ಲೂರುನಾಗನಹಳ್ಳಿ ಕಾವಲು ಗಡಿ ಮತ್ತು ಸರ್ವೆ ನಂ.54	ಸರ್ವೆ ನಂ.98 (ಸರ್ವೆ ನಂ.98/4	ಸರ್ವೆ ನಂ.96 (ಸರ್ವೆ ನಂ.96/3 ಮತ್ತು 96/1
97/3	-	9	-	2		ಸರ್ವೆ ನಂ.92	ಸರ್ವೆ ನಂ.97/2	ಬ್ಲಾಕ್ ನಂ–1	ಸರ್ವೆ ನಂ.96 ಮತ್ತು 92
100/1	2	17	-	2		ಸರ್ವೆ ನಂ.117 ಮತ್ತು 118	ಸರ್ವೆ ನಂ.92	ಸರ್ವೆ ನಂ.99	ಸರ್ವೆ ನಂ.101
100/2	2	17	-	2		ಸರ್ವೆ ನಂ.99, ಮತ್ತು 101	ಸರ್ವೆ ನಂ.92	ಸರ್ವೆ ನಂ.100/1	ಸರ್ವೆ ನಂ.101
101/1	1	12	-	3½		ರಸ್ತೆ	ಸರ್ವೆ ನಂ.92	ಸರ್ವೆ ನಂ.100	ಸರ್ವೆ ನಂ.92
101/2	1	12	-	3½		ಸರ್ವೆ ನಂ.99	ಸರ್ವೆ ನಂ.100 ಮತ್ತು 101/1	ಸರ್ವೆ ನಂ.100	ಸರ್ವೆ ನಂ.101/1
102/5	1	14	-	-		ಸರ್ವೆ ನಂ.102/6	ಸರ್ವೆ ನಂ.5	ರಸ್ತೆ	ಸರ್ವೆ ನಂ.102/1
117/1	1	-	-	-		ಸರ್ವೆ ನಂ.117/3	ಸರ್ವೆ ನಂ.100 ಮತ್ತು 101	ಸರ್ವೆ ನಂ.118	ರಸ್ತೆ
117/2	1	-	-	-		ಸರ್ವೆ ನಂ.99	ಸರ್ವೆ ನಂ.117/3	ಸರ್ವೆ ನಂ.118	ರಸ್ತೆ
117/3	2	-	-	-		ಸರ್ವೆ ನಂ.117/2	ಸರ್ವೆ ನಂ.117/1	ಸರ್ವೆ ನಂ.118	ರಸ್ತೆ
179	3	20	-	10		ಸಿದ್ದೇಗೌಡ ಮತ್ತು ಶಿವಲಿಂಗಯ್ಯರವರ ಜಮೀನು	ದೊಡ್ಡ ತಮ್ಮೇಗೌಡರ ಜಮೀನು	ಸಿದ್ದೇಗೌಡ ಮತ್ತು ಶಿವಲಿಂಗಯ್ಯರವರ ಜಮೀನು	ಬೋರೇಗೌಡ ರವರ ಜಮೀನು
ಕೃಷಿ ಜಮೀನು									
4/1	1	14	-	1½	ಮೆ॥ ವಿಂಡ್‌ಸನ್ ಟೆರ್ರಾ	ಸರ್ವೆ ನಂ.6 ಅಂದರೆ ಗೋವಿಂದೇಗೌಡರ ಜಮೀನು	ಸರ್ವೆ ನಂ.5 ಅಂದರೆ ಕಮಲಮ್ಮ ಮತ್ತು ಇತರರ ಜಮೀನು	ಸರ್ವೆ ನಂ.6 ಅಂದರೆ ಗೋವಿಂದೇಗೌಡರ ಜಮೀನು	ಸರ್ವೆ ನಂ.2 ಅಂದರೆ ಕುಲಕರ್ಣಿ ಯವರ ಜಮೀನು
99 (ಭಾಗ) (ಹಿಂದೆ 99/47)	4	-	-	-	ರಾಣಿ ಜೆ.ಎಂ. (ಜಿ.ಪಿ.ಎ. ಹೋಲ್ಡರ್/ ಅಗ್ರಿಮೆಂಟ್) ಕೆಳಕಂಡ ಮಾಲೀಕರುಗಳ ಪರವಾಗಿ ಜವರನಾಯಕ, ಪ್ರಮೀಳಮ್ಮ, ಚಿನ್ನಮ್ಮ, ಶಂಕರನಾಯಕ, ಭಾಗ್ಯ, ಪುಟ್ಟನಾಯಕ ಮತ್ತು ಹೇಮ	ದೊಡ್ಡ ತಮ್ಮೇಗೌಡರ ಜಮೀನು	ಸಿದ್ದಮ್ಮನವರ ಜಮೀನು	ರಸ್ತೆ	ಜವರನಾಯಕ್‌ರವರ ಉಳಿಕೆ ಜಮೀನು
99 (ಭಾಗ) (ಹಿಂದೆ 99/ 21-P1)	4	-	-	-	ರಾಣಿ ಜೆ.ಎಂ. (ಜಿ.ಪಿ.ಎ. ಹೋಲ್ಡರ್/ ಅಗ್ರಿಮೆಂಟ್) ಕೆಳಕಂಡ ಮಾಲೀಕರುಗಳ ಪರವಾಗಿ ಜವರನಾಯಕ, ಪ್ರಮೀಳಮ್ಮ, ಚಿನ್ನಮ್ಮ, ಶಂಕರನಾಯಕ, ಭಾಗ್ಯ, ಪುಟ್ಟನಾಯಕ ಮತ್ತು ಹೇಮ	ದೊಡ್ಡ ತಮ್ಮೇಗೌಡರ ಜಮೀನು	ಸಿದ್ದಮ್ಮನವರ ಜಮೀನು	ಜವರನಾಯಕ್‌ರವರ ಅದೇ ಸರ್ವೆ ನಂಬರಿಗೆ ಸೇರಿದ ಉಳಿಕೆ ಜಮೀನು	ನೀರು ಹರಿಯುವ ಹಳ್ಳ
178 (ಹಿಂದೆ ಸರ್ವೆ ನಂ. 6 ಭಾಗವಾಗಿತ್ತು)	1	20	-	05	ನಾಗವೇಣಿ ಸಿದ್ದರಾಮೇಗೌಡ ಮತ್ತು ರೂಪ ಸಿದ್ದರಾಮೇಗೌಡ	ಗೋವಿಂದೇಗೌಡರ ಜಮೀನು	ದೊಡ್ಡ ತಮ್ಮೇಗೌಡರ ಜಮೀನು	ದೊಡ್ಡ ತಮ್ಮೇಗೌಡರ ಜಮೀನು	ಶಿವರಾಜೇಗೌಡರ ಜಮೀನು

ಸಹಿ/–
ಎಸ್. ಟಿ. ಪ್ರಶಾಂತ ಕುಮಾರ್,
ಹಿರಿಯ ಪಾಲುದಾರರು
ಫಾಕ್ಸ್ ಮಂಡಲ್ & ಅಸೋಸಿಯೇಟ್ಸ್
6/12, ಗುರಪ್ಪ ಅವೆನ್ಯೂ,
ಪ್ರಿಮ್ರೋಸ್ ರಸ್ತೆ, ಬೆಂಗಳೂರು – 560 025
ದೂರವಾಣಿ : + 91 80 2559 5911,
ಇ–ಮೇಲ್ : prashantha.kumar@foxmandal.in

ದಿನಾಂಕ: 25–02–2026
ಸ್ಥಳ: ಮೈಸೂರು